Reg No B. 1270.

Thursday, 5th January 1922

ವರ್ಷ ೬.

ಕಾನಡಾವೃತ್ತ.

ಸಂಚಿಕೆ ೧೨.

THE KANARA NEWS.

ಪತ್ರದ ವರ್ಗಣೀ:-

ಕುಮಟೆಯಲ್ಲಿ ಅಗಾವು ರೂಪಾಯಿ 2-4-0.

ಮನಿಯಾರ್ಡರಿಯಿಂದ ರೂ. 3-0-0.

ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 3-2-0.

ಬಿಡಿ ಸಂಚಿಕೆಗೆ 0-1-0.

नरपतिहितकर्ता द्वेष्यतां याति लोके जनपदहितकर्ता ॥
इति महति विरोधे वर्तमाने समाने नृपतिजनपद।... [illegible] ।।

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು

ಜಾಹಿರಾತುಗಳ ದರ:-

ಕನ್ನಡ, ಇಂಗ್ಲಿಷ ಪ್ರಾ. ಕ್ಯಾಪಿನ(೧೫ ಎಮ್ ಅಗಲ) ೮ ಸಾಲುಗಳ ವರೆಗೆ ರೂ. 1-0-0 ಆನಂತ ಪ್ರತಿ ಸಾಲಿಗೆ 0-2-0.

ಅಗಲ ಎಷ್ಟು ಹೆಚ್ಚಿರುವದೋ ಆ ಪ್ರಮಾಣದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.

ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವವು

[ಕುಮಟಾ— ಕಾನಡಾವೃತ್ತ ಗುರುವಾರ, ತಾರೀಖ ೫ ಮಾಹೆ ಜನವರಿ ಸನ್ ೧೯೨೨ ನೇ ಇಸವಿ]

ಲ್ಲಿನ ಡಾಕ್ಟರ ಕೃಷ್ಣರಾವ ಮುಜುಮತ.



ಬಿನ್ನದ ರಾಜಮುಕುಟದ ಘಟ್ಟಿ ಮತ್ತು ಸಂಕಟದ ಕೆ ಸವಲ್ಲಿ ಪಾರಂಗತರಾದ ನಾವು ಸುಧಾರಿಸಿದ ಹೊಸ ಪದ್ಧ ಯಿಂದ ಹಲ್ಲುಗಳನ್ನು ತೆಗೆದು ಹಾಕುವೆವು. ಇದೇ ಹ ಕಡ್ಡಿ ಶುದ್ಧಮಾಡಿ ಚಿನ್ನ ಬೆಳ್ಳಿಯಿಂದ ತುಂಬಿ ಕೊಡ ಡುವು, ಯಂತ್ರದಿಂದ ಹಲ್ಲುಗಳ ಮೇಲಿನ ಪಾಳಿವನ್ನು ಗೆದು ಅವುಗಳನ್ನು ಸ್ವಚ್ಛ ಹೊಳೆಯುವ ಹಾಗೆ ಮಾಡಿ ಡುವೆವು ಹಲ್ಲುಕಡ್ಡಿಗಳನ್ನು ಔಷದಹಚ್ಚಿ ನೋಯಿ ದೆ ತೆಗೆದ ಕೊಡುವೆವು. ಬಿಟ್ಟ ಹೋದ ಹಲ್ಲುಗಳ ಕಡ್ಡಿ ನ್ನು ದುರುಸ್ತಮಾಡಿ ಸರಿಯಾಗಿ ಕೂಡಿಸಿಕೊಡುವೆವು. ತಿ ಕೆಲಸವು ನಿಶ್ಚಾಸದಿಂದ ಮತ್ತು ಅಗ್ಗವಾಗಿ ಮಾಡ ಡುತ್ತದೆ.

Javeri Mansion
near Marwadi Vidyalaya,
Sandhurst Road,
BOMBAY No 4.

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

ಬೇಕಾದವರು ಭಾಡಿಗೆಯ ದರವಾರ ವಗೈರೆ ವಾ ತಿ ಕೆಳಗಿನ ಪತ್ತೆಗೆ ಮುಕ್ತಾ ಶಿಕ್ಕಿ ತಿಳಕೊಳ್ಳಬಹುದು.

ಪುರುಷೋತ್ತಮ ಲಕ್ಷ್ಮಯ್ಯ ಶ್ಯಾನಭಾಗ.
ಹೆಗಡೇಕರ, ದುಕಾನ, ಕುಮಟಾ.

ಕಾರ್ಡ ಸೈಜ ಫೋಟೋ.

ಮಹಾತ್ಮಾ ಗಾಂಧಿ, ಕೈ। ಲೋ। ಟಿಳಕ, ಮೌಲಾನಾ ಶೌಕತ ಅಲ್ಲಿ, ದೇ। ಲಾಲಾ ಲಜಪತರಾಯ ಇವರ ಉತ್ತಮ ಕಾರ್ಡ ಸೈಜಿನ ಫೋಟೋಗಳು ನಮ್ಮಲ್ಲಿ ಸಿಗುವವು.

ಕ್ರಯ.— ೧ಕ್ಕೆ ೭ಪೈ, ೧ ಡಜನ ಬೇಕಾದವರು ೫ ಆಣೆ ಸ್ಟಾಂಪುಗಳೂ ಮತ್ತು ೧೦೦ ಬೇಕಾದವರು ೧-೧೨-೦ ಮನಿಆರ್ಡರದ್ವಾರಾ ಹಣವು ಕಳುಹಿಸಬೇಕು. ನಂಪಲಗಳು ಬೇಕಾದರೆ, ೨।। ಆಣೆಯ ಸ್ಟಾಂಪುಗಳು ಕಳುಹಿಸಬೇಕು.

ಪತ್ತೆ— ಸ್ಟಾರ ಆಫ್ ಕೆನರಾ ಪ್ರೆಸ್ಸ,
ಕುಮಟಾ (ಎನ್. ಕೆನರಾ,)

ಮೋಟಾರ.

ಹಾವೇರಿಯಿಂದ— ಸಿರಸಿಗೆ ಮತ್ತು ಸಿರಸಿಯಿಂದ ಹಾವೇರಿಗೆ, ಪ್ರತಿ **ಆದಿತ್ಯವಾರ-ಗುರುವಾರ** ಮೋಟಾರ ನಡಿಸುವ ವ್ಯವಸ್ಥೆ ಇಟ್ಟಿದೆ. ಹಾವೇರಿಯಿಂದ ಬೆಳಿಗ್ಗೆ ೯ ಘಂಟೆಗೆ ಮತ್ತು ಸಿರಸಿಯಿಂದ ಮಧ್ಯಾಹ್ನ ೨ ಘಂಟೆಗೆ ಹೊರಡುವದು. ಹಾವೇರಿಯಲ್ಲಿ ಅಥವಾ ಸಿರಸಿಯಲ್ಲಿ ಐದಕಿಂತ ಹೆಚ್ಚು ಜನರು ಸಿಕ್ಕರೆ ಬೇರೆ ದಿವಸಗಳಲ್ಲಿ ಸಹ ನಡಿಸುವೆವು.

ಟಿಕೇಟುಗಳು ಸಿರಸಿಯಲ್ಲಿ ಶೇಷಗಿರಿರಾವ ಧಾಕಪ್ಪನವರ ಇವರ ಅಂಗಡಿಯಲ್ಲಿ, ಮತ್ತು ಹಾವೇರಿಯಲ್ಲಿ ಸ್ಟೇಶನದ ಹತ್ತರ ಕೇಳಕರರ ಬಂಗ್ಲೆಯಲ್ಲಿ ಸಿಗುವವು.

ಎಸ್. ಎಲ್. ಧಾಕಪ್ಪಾ

ಅಗ್ಗ] [ಅಗ್ಗ

ಮಳೆಗಾಲ ಮತ್ತು ಬಿಸಿಲು ದೆಸೆಯಿಂದ ಬೇಕಾಗುವ ಎಲ್ಲ ತರದ ಹೊಸ ಛತ್ರಿಗಳು, ಜ್ವರ, ಕೆಮ್ಮು, ಜಂತು, ಹೆಂಗಸರ ಗರ್ಭಾಶಯದ ವಿಕಾರ, ದರಮಾ, ಅಶಕ್ತತೆ ವಗೈರೆ ವಿಕಾರದ ಮೇಲೆ ಖಾತ್ರಿದಾಯಕ ಪೇಟಂಟು ಔಷಧಗಳೂ, ಸ್ಟೇಶನರಿ, ಪರಫ್ಯೂಮರಿ ವಗೈರೆ ಸಾಮಾನುಗಳೂ, ಮಹಾತ್ಮಾ ಗಾಂಧಿಯವರ ಬಿಳೀ ಖಾದೀ ಟೊಪ್ಪಿಗೆಗಳೂ, ಕಂಬಳೀ ಟೊಪ್ಪಿಗೆಗಳೂ ಅಗದೀ ಕಡಿಮೆ ದರಕ್ಕೆ ಕೊಡಲಾಗುವದು.

ಎಸ್. ಎಲ್. ಧಾಕಪ್ಪ ಮತ್ತು **ಬಂಧು**
ಶಿರ್ಸಿ.

ಭಡತೀ ಭ್ರಾತೃಸಂಘದ

ಅನುಭವಸಿದ್ಧವಾದ

ಜ್ವರದ ಗುಳಿಗೆಗಳು ಕ್ರಯ:— ೨೫ಕ್ಕೆ ೦-೧೦-೦.

ಉತ್ತಮ ನೀಲಗಿರಿ ಎಣ್ಣೆ, ಹಿತ್ತಾಳಿ ನಿಬ್ಬ, ಉಂಚಿ ಕಾಬೂಲೀ ಹಿಂಗು, ಇದಲ್ಲದೆ, ಗೋಕರ್ಣ ಮಹಾಬಲೇಶ್ವರ ದೇವರ ಫೋಟೋಗಳೂ, ಶ್ರೀ ಮಂದಿರದ ಫೋಟೋಗಳೂ, ಕಾಲೋಪಯೋಗಿ ಪುಸ್ತಕಗಳೂ, ಸ್ಟೇಶನರಿ ಸಾಮಾನುಗಳೂ ಯೋಗ್ಯ ಬೆಲೆಗೆ ದೊರೆಯುತ್ತವೆ.

ಪತ್ತೆ— ಭಡತೀ ಭ್ರಾತೃಸಂಘ,
ಗೋಕರ್ಣ.

Khilafat & National Leaders' badges.

ನಮ್ಮಲ್ಲಿ ಖಿಲಾಫತ ಮತ್ತು ಮಹಾತ್ಮ ಗಾಂಧಿ, ಲೋ. ಟಿಳಕ, ಶೌಕತ ಅಲ್ಲಿ, ಮಹಮ್ಮದ ಅಲ್ಲಿಯವರ ಸುಂದರವಾದ ಬೇಜುಗಳು ದೊರೆಯುತ್ತವೆ. ಕೋಟಿಗೆ ಮತ್ತು ಟೊಪ್ಪಿಗೆಗೆ ಹಚ್ಚಲಿಕ್ಕೆ ಯೋಗ್ಯವಾದಂಥವು. ಡಜನ ೧ಕ್ಕೆ ೩-೦-೦. ಟಪಾಲ ಖರ್ಚು ಬೇರೆ.

ಪತ್ತೆ:— **ಬಿ ಎ. ಸೈ. ಹೊನ್ನಾವರ.**
(ಉತ್ತರ ಕಾನಡಾ)

ಸತ್ಯಮೇವ ಜಯತೇ.

(ಗುಣಕಾರದಿದ್ದರೆ ಹಣ ಪರತು.)

ಧಾತುಪೌಷ್ಟಿಕ ಕಾಮೋತ್ತೇಜಕ ಇಂದ್ರಿಯ ಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ ವೀರ್ಯವರ್ಧಕ ರಕ್ತಶೋಧಕ, ಕಾಮೋತ್ತೇಜಕ ಮನೋಲ್ಲಾಸಕ ಇಂದ್ರಿಯಸ್ತಂಭಕ ಗರ್ಮಿ, (ಪಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲತರದ ಬಕ್ಕೆಗಳು ಹುಣ್ಣುಗಳು ಪಿತ್ತದ ಬಾಧೆಗಳು ಕಟಿಶೂಲೆ ವಾತರೋಗ ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಟ. ಖ. ಬೇರೆ. ಅನುಪಾನಪತ್ರಿಕೆ ಔಷಧದ ಸಂಗಡ.

ವಿಳಾಸ:— **ಜಿ. ಎಲ್. ಜೋಶಿ ಕಂಪನಿ.**
ಪೋಸ್ಟ— ಸಿರಸಿ. ಉತ್ತರ ಕಾನಡಾ.

ಸವಲತು.

ಬಗ್ಗೋಣ ರಾಮಾ ತಿಮ್ಮಣ್ಣ ಪಂಡಿತರ

ದುಂದುಭಿ ಸಂವತ್ಸರದ ಪಂಚಾಂಗವು

ತಯಾರಾಗುತ್ತಲಿದೆ.

ಈ ವರ್ಷ ಕಿಮ್ಮತ್ತು ರೂ. ೧೨-೮-೦ ಇಟ್ಟಿದೆ. ಆದರೆ, ಇದೇ ಡಿಶಂಬರ ತಿಂಗಳ ಆಖೈರೊಳಗೆ, ಮುಂಗಡ ಹಣ ಕೊಡುವವರಿಗೆ ರೂಪಾಯಿ ೧೧-೮-೦ ರ ಸವಲತಿ ದರ ಇಟ್ಟಿದೆ ಅವಶ್ಯವಿದ್ದವರು ಇದರ ಪ್ರಯೋಜನ ಪಡೆಯಬಹುದು.

ಮಾಲಕ, ಸ್ಟಾರ ಆಫ್ ಕೆನರಾ ಪ್ರೆಸ್,
ಕುಮಟಾ.

ಅಧ್ಯಕ್ಷ ಹಕೀಮ ಅಜಮಲಖಾನರ ಭಾಷಣವು.

[ಕರ್ನಾಟಕಮಿತ್ರದಿಂದ]

ಪ್ರತಿನಿಧಿಗಳಾದ ಬಂಧು ಭಗಿನಿಯರೇ, [illegible] ಟೀಕೆ ಸರಕಾರದವರ [illegible] ವು ಆರಿಸಿದ ಅಧ್ಯಕ್ಷರು ನಮ್ಮೊಳಗೆ [illegible] ಮೂರ್ತಿ ಮೇಳವನ್ನು ನಡಿಸುವದೆಂದರೆ, ರಾಷ್ಟ್ರೀಯ [illegible] ಸದಲ್ಲಿ ಇದೇ ಮೊದಲು. ಈ ಸಭೆಯಲ್ಲಿ ನಡೆಯುವ [illegible] ಚರ್ಚೆಗಳನ್ನು ಕೇಳಲಿಕ್ಕೂ ವಿಚಾರಿಸಲಿಕ್ಕೂ ನಮ್ಮ ಅಧ್ಯಕ್ಷರಾದ ಶ್ರೀ ದಾಸರವರು ಇಲ್ಲದ್ದು ಅತ್ಯಂತ ವ್ಯಸನಕರವಾಗಿದೆ. ಇದೇ ವೇಳೆಗೆ ಒಂದಾಗಿ ಅವರಿಗೆ ಅತ್ಯಂತ ಮಾನನೀಯವಾದ ಪದವನ್ನು ಕೊಡುತ್ತಿರುವಾಗ ನಾನು ಅವರ ರಾಷ್ಟ್ರೀಯ ಸಾಮಾಜಿಕ ಸೇವೆಯನ್ನು ನಿಮ್ಮ ಮುಂದೆ ಒದರುತ್ತ ಕುಳ್ಳಿರುವಲ್ಲೇನು ತಾತ್ಪರ್ಯ? ಶ್ರೀ ದಾಸರು ಈಹೊತ್ತು ತಮ್ಮಲ್ಲಿಯ ಅನ್ಯಾದೃಶವಾದ ಸ್ವಾರ್ಥತ್ಯಾಗದಿಂದಲೂ ಆಲ್ಹಾದದ ಧೈರ್ಯದಿಂದಲೂ ನಗೆಮೊಖದಿಂದ ಕಷ್ಟಕ್ಕೀಡಾಗುವದರಿಂದಲೂ ತಮ್ಮ ಯೋಗ್ಯತೆಯನ್ನು ಸಾರ್ಥಕಮಾಡಿ, ತೋರಿಸಿದ್ದಾರೆ. ಆದುದರಿಂದಲೇ ಅವರನ್ನು ಸೆರೆಹಿಡಿಯುವದೇ ನಮಗೆ ಜಯಸಿಗುವದರ ಪೂರ್ಣ ಲಕ್ಷಣವು. ಅಧ್ಯಕ್ಷರಾಗಿ ಮಾಡುವ ಸೇವೆಗಿಂತ ಸೆರೆಮನೆಯಲ್ಲಿದ್ದು ಅವರೀಗ ಹೆಚ್ಚು ದೇಶಸೇವೆಯನ್ನು ಸಾಧಿಸಿದ್ದಾರೆ. ಅವರ ಸೆರೆವಾಸದಿಂದ ಜನರಲ್ಲಿ ಒಂದು ಬಗೆಯ ಸ್ಫೂರ್ತಿಯು ಹುಟ್ಟಿದಂತಾಗಿ, ರಾಷ್ಟ್ರೀಯ ಕಾರ್ಯಕ್ಕೂ ಹುರುಪಿಗೂ ಆತ್ಮತ್ಯಾಗಕ್ಕೂ ಉಕ್ಕು ಬಂದಿದೆ; ಆದುದರಿಂದ ಅಂಥ ಸ್ಥಾನವನ್ನಲಂಕರಿಸಲಿಕ್ಕೆ ನನ್ನ ಯೋಗ್ಯತೆಯಿಲ್ಲವೆಂಬುದನ್ನು ನಾನು ಬಲ್ಲೆನು, ಆದರೂ ನೀವು ಕೊಟ್ಟ ಮಾನಕ್ಕೆ ನಾನು ಯೋಗ್ಯನಾದೇನೆಂದು ಆಶಿಸುತ್ತೇನೆ

ಜೊತೆಸಭೆಯಿಂದ ಇಲ್ಲಿಯ ವರೆಗಾದ ಅಸಹಕಾರದ ನಿರ್ಣಯವನ್ನು ಮಾಹಿತೊಡಗಿದರೆ, ಕಾಲವಿಳಂಬವಾಗುವದೆ, ಆದುದರಿಂದ ನನ್ನದನ್ನೆಲ್ಲ ಸ್ವಲ್ಪದರಲ್ಲಿಯೇ ನಿಮ್ಮೆಲ್ಲರ ಮುಂದಿಟ್ಟು ಮುಂದೆ ಹೋಗುವೆನು. ಈಹೊತ್ತು ಅಸಹಕಾರವು ಮೂಲೆ ಕೊಂಪೆಯೊಳಗಿನ ರೈತರ ಮನಸ್ಸಿನಲ್ಲಿಯ ಸೇರಿ, ಅವರು ಕೂಡ ಕಷ್ಟಕ್ಕೂ ತ್ಯಾಗಕ್ಕೂ ಸ್ವರಾಜ್ಯದಿಂದ ಸಿದ್ಧವಾದ ಸಂಗತಿಯು ಗೊತ್ತಿದೆ. ಇಷ್ಟು ಅಲ್ಲದೆ ನಮ್ಮ ದೂರದ ಬಂಧುಗಳಾದ ಇಜಿಪ್ತದಂಥವರೂ ಸಹ ತಮ್ಮ ರಾಜಕೀಯ ಗೋಳನ್ನು ಹೋಗಲಾಡಿಸಲಿಕ್ಕೆ ನಮ್ಮಲ್ಲಿ ನಡೆದ ಅಸಹಕಾರವೇ ಮೇಲಾದ ಮದ್ದೆಂದು ಅದನ್ನೇ ಕೈಕೊಂಡು ಪುರಸ್ಕರಿಸಿದ್ದಾರೆ. ಅಸಹಕಾರಕ್ಕೆ ಇದೇನು ಅಷ್ಟಿಷ್ಟು ಮಾನವಾಯಿತೇ ! ಹಿಂದುಸ್ಥಾನದಿಂದಲೇ ಜಗತ್ತಿನ ಕಣ್ಣು ತೆರೆಯುವದು. ಹಿಂದುಸ್ಥಾನವು ತನ್ನ ಉದ್ಧಾರದ ಮಾರ್ಗವನ್ನು ಕಂಡುಕೊಳ್ಳುವದಲ್ಲದೆ ಬೇರೆ ನೊಂದ ಜನಾಂಗದವರಿಗೂ ಮಾರ್ಗದರ್ಶಕವಾಗುತ್ತಿರುವದು ಅತ್ಯಂತ ಅಭಿಮಾನದ ಸಂಗತಿಯು. ಶಾಂತಮಯ ಅಸಹಕಾರವು ಇನ್ನು ಮುಂದೆ ಬರಿಯ ಹಿಂದುಸ್ಥಾನದ ಚಳವಳಿಯಾಗದೆ, ಇಡೀ ಏಶಿಯಾ ಖಂಡದ ಚಳವಳಿಯಾಗತೊಡಗಿದೆ, ಮತ್ತು ಜಗತ್ತಿನೊಳಗಿನ ಅನ್ಯಾಯವನ್ನಾಗಲಿ, ಅಸತ್ಯವನ್ನಾಗಲಿ, ಹೊಡೆದೋಡಿಸಲಿಕ್ಕೆ ಶಾಂತಿಮಯ ಅಸಹಕಾರದಂಥ ಬೇರೊಂದು ಶಸ್ತ್ರವಿಲ್ಲೆಂದು ಜಗತ್ತಿಗೆ ತಿಳಿಯಬರುವದೇನೂ ದೂರಿಲ್ಲ. ತಮ್ಮ ದೇಶಕ್ಕಾಗಿ ಸ್ವಾರ್ಥದಸೂರೆಗೊಂಡು ನಗೆಮುಖದಿಂದ ಸೆರೆಮನೆ ಸೇರುತ್ತಿರುವ ಸ್ವಯಂಸೇವಕರ ಹಾಗೂ ದೇಶಭಕ್ತರ ನಗೆಮುಖವನ್ನು ನೋಡಿದ ಯಾವಾತನು ಅಸಹಕಾರದ ಸತ್ಯತ್ವವನ್ನು ಅಲ್ಲಗಳೆಯುವನು! ಮತ್ತು ಆಶ್ಚರ್ಯವೇನಂದರೆ, ಈ ಸಂಖ್ಯೆಯು ದಿನಕ್ಕೊಂದು ಹೆಚ್ಚಾಗಿ ಬೆಳೆಯುತ್ತಿದೆ. ಸರಕಾರದವರು ನಡಿಸಿದ ದಬ್ಬಾಳಿಕೆಯಿಂದ ಜನರಲ್ಲಿ ಸಂತಾಪವು ಉಕ್ಕೇರಿ ರಾಷ್ಟ್ರದ ನಿಶ್ಚಯವು ಮತ್ತಷ್ಟು ಇಮ್ಮಡಿಗೊಂಡಿದೆ. ಸ್ವಾತಂತ್ರ್ಯದ ಚಿಕ್ಕ ಚಿಕ್ಕ ಹಕ್ಕುಗಳನ್ನು ಪ್ರಸ್ಥಾಪಿಸಲಿಕ್ಕೂ [illegible] ಬಂಗಾಲ, ಮಹಾರಾಷ್ಟ್ರ, ಪಂಜಾಬ ಮೊದಲಾದ ಪ್ರಾಂತಗಳಲ್ಲ ಸೆರೆಮನೆ ಯಾತ್ರೆ ಮಾಡಬೇಕಾಗಿದೆ

ಈಗ ನಡೆದಿರುವ ಜಗಳವು ಅತ್ಯಂತ ಘೋರದ [illegible] ದ್ದಾಗಿದ್ದು, ರಾಷ್ಟ್ರಕ್ಕೆ ಅದರ ಬೆಲೆಯು ತಿಳಿದದ್ದರಿಂದಲೇ ಅದೇ ನಿಶ್ಚಯವನ್ನೇ ರಾಷ್ಟ್ರವು ದೃಢವಾಗಿ [illegible] ಪರಿಸ್ಥಿತಿ [illegible] ಹಿಂದೀ ಜನರಿಗೆ ಅನುಕೂಲವಾಗಿದೆ. ಪ್ರಕೃತ ಬಂದಿರುವ [illegible] ದವರಾದ ಏಶಿಯಾ, ಆಫ್ರಿಕಾ [illegible] ಗೊಂಡಿರುವದಲ್ಲದೆ, ಕೈಕಾಲುಗಳನ್ನು ಅ[illegible] ಇಂದಿಲ್ಲ ನಾಳೆ ಅವರೂ ಪೂರಾ [illegible] ಸುವ ಲಕ್ಷಣಗಳೂ ತೋರುತ್ತಿವೆ. ಯುರೋಪ ಖಂಡವೂ ತನ್ನ ಕುಂಭಕರ್ಣ ನಿದ್ರೆಯನ್ನು ನೀಗಿ ಮೆಲ್ಲಗೆಯೂ ಮಂದವಾಗಿಯೂ ಕೈಕಾಲು ಝಾಡಿಸಲು ಮೊದಲು ಮಾಡಿದೆ. ನಾನು ಹೇಳಬೇಕಾದ ಇನ್ನೊಂದ ಸಂಗತಿಯೆಂದರೆ ಯುವರಾಜರ ಆಗಮನದ ಸಂಗತಿ. ಯುವರಾಜರೊಡನೆ ಯಾವ ವಿವಾದ ತಂಟೆಯಿಲ್ಲ. ಆದರೆ ಯುವರಾಜರ ಬರುವಿಕೆಯಿಂದ ನಮ್ಮ [illegible] ಮಾಡಿ ತಮ್ಮ ಪ್ರತಿಷ್ಠೆಯನ್ನು ಕಾಯ್ದುಕೊಳ್ಳುವಂಥ ಸರಕಾರವು ನಮಗೆ ಬೇಡ. ನಮ್ಮ ದೇಶಕ್ಕೆ ಆದ ಪಂಜಾಬದ ಹಾಗೂ ಖಿಲಾಫತದ ಹುಣ್ಣುಗಳೆರಡೂ ಮಾಯದೇ ಬಂದೇಸನಿನೇ ನೋಯುತ್ತಿರುವ ಸಮಯಕ್ಕೆ ನಾವು ಯುವರಾಜರನ್ನು ಸತ್ಕರಿಸುವಷ್ಟು ಮನಸ್ಸು ಸಮಾಧಾನವಿಲ್ಲ. ಮೇಲಾಗಿ ಹಿಂದುಸ್ಥಾನವು ಸ್ವರಾಜ್ಯದ ಗೋಳಿನಿಂದ ಮಿಡುಕುತ್ತಿದೆ. ಇವೆಲ್ಲ ಗೋಳುಗಳಿಂದ ನಮ್ಮ ಮನಸ್ಸು ವಿಪರೀತವಾಗಿ ಖಿನ್ನವಾಗಿರುವದರಿಂದ ನಾವು ಯುವರಾಜರ ಸನ್ಮಾನದೊಳಗೆ ಸೇರಬಾರದೆಂದು ನಿಶ್ಚಯಿಸಿದ್ದೇವೆ ಮತ್ತು ಇದರ ತಪ್ಪೆಲ್ಲ ಸರಕಾರದವರ ತಲೆಯ ಮೇಲೆಯೇ ಎಂದೂ ನಾವು ನಿಃಶಂಕೆಯಿಂದ ಹೇಳುತ್ತೇವೆ

ಶಾಲೆ, ಪದವಿತ್ಯಾಗ, ಹೊಸನ್ಯಾಯ, ವಿಧಾಯಕ ಮಂಡಳಿ, ವಕೀಲರು, ಇವಿಷ್ಟು ಅಂಶಗಳಲ್ಲಿ ಅಸಹಕಾರದ ಕಾರ್ಯಕ್ರಮವು ಮುಗ್ಗಿರುವದೆಂದು ನಮ್ಮ ಟೀಕಾಕಾರರು ಮನಬಂದಂತೆ ಮಾತಾಡುತ್ತಾರೆ. ಅವರಿಗೆ ನನ್ನ ಉತ್ತರವೇನಂದರೆ, ಶಾಲೆಯ ಬಗ್ಗೆ ನಿಮಗೆ ನಾನು ಹೇಳುವ ಸಾಕ್ಷಿಗಳು ಸಾಕಾಗದೆ ಹೋದ ಪಕ್ಷಕ್ಕೆ, ಶಾಲೆಗಳ ದುಃಸ್ಥಿತಿಯನ್ನು ಕುರಿತು ಕಲಕತ್ತಾ ವಿಶ್ವವಿದ್ಯಾಲಯದ ದಸ್ತಾಯಿಕ ಚಾನ್ಸಲರವರು ತೆಗೆದ ಉದ್ಗಾರಗಳನ್ನಷ್ಟು ತಕ್ಕೊಂಡು ನೋಡಿರಿ! ಅದು ಹಾಗಿರಲಿ, ನಾವು ಶಾಲೆ ಬಿಟ್ಟ ವಿದ್ಯಾರ್ಥಿಗಳಿಗಾಗಿ ಮಾಡುವಷ್ಟು ರಾಷ್ಟ್ರೀಯ ಶಾಲೆಯ ಪರ್ಯಾಯಗಳನ್ನು ಒದಗಿಸಿಕೊಡದ್ದರಿಂದ ಹಾಗಾಯಿತು, ಅದನ್ನಷ್ಟು ನಾವು ಕೈಕೊಂಡಿದ್ದರೆ, ಇಂದಿಗೆ ಸರಕಾರದ ಶಾಲೆಗಳು ಹಾಳು ಬೀಳುತ್ತಿದ್ದವು. ಇನ್ನು ಕೌನ್ಸಿಲದೊಳಗೆ ಹೋದವರ ಹಾಗೂ ಪದವಿಯನ್ನು ಬಿಡದವರ ಪ್ರತಿಷ್ಠೆಯಾದರೂ ಸಮಾಜದೊಳಗೆ ಯಾವ ತರದ್ದಾಗಿದೆ. ಸರಕಾರದವರು ಇನ್ನು ಬೇಕಾದರೆ, ಮೊದಲಿನಂತೆಯೇ ವಿದ್ಯಾಲಯಗಳೆಂಬ ಯಂತ್ರದೊಳಗಿಂದ ಪದವೀಧರರನ್ನು ಹೊರಡಿಸಲಿ! ಆದರೆ ಅವಕ್ಕೆ ಬೆಲೆಕೊಟ್ಟು ನಡೆಯುವಲ್ಲಿ ತರುವವರೆಂದರೆ ಜನರೇ! ಅದ್ದರಿಂದ ಇಂದಿಗೆ ಬೇರು ಸಹಿತವಾಗಿ ಕಿತ್ತು ಬಿದ್ದಿದೆ. ಇದ್ದು ಬಿದ್ದು ವಕೀಲರ ವಿಚಾರವೊಂದುಳಿಯಿತು, ಅವರು ನಮ್ಮ ಅಸಹಕಾರದ ನಿರ್ಣಯದಂತೆ ತಕ್ಕ ಕರ್ತವ್ಯವನ್ನು ಮಾಡದಿದ್ದರೂ ನಾವು ಪಂಚಾಯತಿಯ ಕಾರ್ಯಕ್ರಮವನ್ನು ಕೈಕೊಂಡ ಕೂಡಲೆ ಅವರು ಸಾರ್ವಜನಿಕ ದೃಷ್ಟಿಯಿಂದ ತಾವಾಗಿಯೇ ನೆಲಕ್ಕುರುಳುವರು. ಸರಕಾರದ ಕೆಲಸಗಾರರ ಮಾತು ಮಾತ್ರ ಬೇರೆಯಾಗಿದ್ದರೂ, ಹೋದ ತಿಂಗಳಲ್ಲಿ ಸರಕಾರದ ಕೆಲಸಕ್ಕೆ ಶರಣು ಹೊಡೆದವರ ಸಂಖ್ಯೆಯನ್ನು ನೋಡಿದರೆ, ಈ ವಿಷಯದಲ್ಲಿ ನಮಗೆ ಯಾವ ಬಗೆಯ ವಿಷಾದವಾಗುವ ಕಾರಣವಿಲ್ಲ. ಸರಕಾರದವರ ದಬ್ಬಾಳಿಕೆಯಿಂದಂತೂ ಅದು ದಿನ ದಿನಕ್ಕೆ ಬೆಳೆಯುತ್ತಿದೆ, ನಮ್ಮ ಬಂಧುಗಳಾದ [illegible] ವರಿಗಾದರೂ ನಾವು [illegible] ತೊಡಗಿದ ಕಾರ್ಯಕ್ರಮದ ಬಗೆ ತಿಳಿದಾಕ್ಷಣವೇ ಅವರು ನಮ್ಮಲ್ಲಿಗೆ ಬಂದು ಬಿಡುವರು, ಅವರಲ್ಲಿಯೂ ಸ್ವದೇಶಾಭಿಮಾನದ ಜ್ಯೋತಿಯು ಉರಿಯುತ್ತಿದೆ, ಮತ್ತು ಅದೆಂದೂ ನಂದಲರಿಯದು.

ಬಂಧು ಭಗಿನಿಯರೇ, ನಮ್ಮ ದೇಶವೀಗ ವಿಪರೀತವಾದ ಬೇ[illegible]ರಳುತ್ತಿದೆ; ಆದರೆ ಇವು ಇ[illegible] ಸತ್ಯ[illegible]ದ ಬೇನೆಗಳೆಂಬುದನ್ನು ಹೇಳಲಿಕ್ಕೆ ಯಾವ ಕಾಲಜ್ಞಾನಿಯೂ ಬೇಡ. ಆ ತರುಣ ಭಾ[illegible]ಯೂ ಆಗುವದರಿಂದ ನಮ್ಮ ಪುರಾಣ ರಾಷ್ಟ್ರವು ತನ್ನ ಹಳೇ ಹಿಂದಿನಪದಗಳನ್ನು ಕಾಯ್ದುಕೊಂಡು ಜಗತ್ತಿನ ಜನಾಂಗಗಳಲ್ಲಿ ಅತ್ಯಂತ ಅಭಿಮಾನಾಸ್ಪದವಾದ ಪದವನ್ನು ಪಡೆಯುವದೆಂದು ಕೋರುತ್ತೇನೆ

* * *

ಪ್ರಕಟಣೆ.

ಈ ಲೇಖದ ಮೂಲಕ ಯಾವತ್ತೂ ಜನರಿಗೆ ತಿಳಿಸುವದೇನಂದರೆ— ಗೋವೆಯಲ್ಲಿ ಫೋಂಡಾ ಮಹಾಲದೊಳಗಿನ ವೇಲಿಂಗ ಗ್ರಾಮದ ಶ್ರೀಲಕ್ಷ್ಮೀ ನರಸಿಂಹ ದೇವಸ್ಥಾನದಲ್ಲಿ ಬಾಯಿ ಬಾಳಾ ಬಾಪು ವೇಲಿಂಗಕರ ಇವರು ಬಹಳ ವರ್ಷಗಳ ಹಿಂದ ತೆರೆದ ಸದಾವರ್ತವು ಇನ್ನೂ ನಡೆಯುತ್ತದೆ, ಎಲ್ಲ ಯಾತ್ರಸ್ಥರಿಗೆ ಅಲ್ಲಿ ಆಶ್ರಯ ಸಿಗುವದು.

ಡಾ. ಶ್ರೀಧರ ಎನ್. ನಾಯಿಕ
ಪನವೇಲಕರ, ಶ್ರೀ ಲಕ್ಷ್ಮೀ ನರಸಿಂಹ
ದೇವಸ್ಥಾನದ ಅಢಳತೇದಾರ ಕಮಿ
ಸಾಂವರ ಕಮಿಟಿಯ ಅಧ್ಯಕ್ಷ,
ಪಣಜಿ, ಗೋವೆ.

ಜಾಹೀರನಾಮೆ.

ಗೋವೆಯ ಸರಕಾರದ ಕಟ್ಟಳೆಗಳ ಪ್ರಕಾರ ಫೋಂಡಾ ಮಹಾಲದೊಳಗಿನ ವೇಲಿಂಗ ಗ್ರಾಮದ ಶ್ರೀ ಲಕ್ಷ್ಮೀ ನರಸಿಂಹ ದೇವರ ಯಾವತ್ತು ಮಹಾಜನರ ಮತ್ತು ಅವರ ಕುಟುಂಬದೊಳಗಿನ ಸ್ತ್ರೀ ಪುರುಷರ ಹೆಸರುಗಳ ಯಾದಿಯನ್ನು ಸರಕಾರದ ಕಡೆಗೆ ಕಳಿಸಬೇಕು. ಅದ್ದರಿಂದ ಈ ಲೇಖದ ಮೂಲಕ ಸದರಿ ದೇವಸ್ಥಾನಕ್ಕೆ ಸಂಬಂಧಪಟ್ಟ ಎಲ್ಲಾ ಜನರಿಗೆ ಬಿನ್ನಹ ಮಾಡುವದೇನಂದರೆ, ಅವರು ತಮ್ಮ ಕುಟುಂಬದೊಳಗಿನ ಎಲ್ಲರ ಹೆಸರು, ವಯಸ್ಸು ಮತ್ತು ಅಂದಾಜ ಉತ್ಪನ್ನ ಇವುಗಳ ಮಾಹಿತಿಯನ್ನು ಇದೇ ಡಿಸೆಂಬರ ತಿಂಗಳ ೩೧ ನೇ ತಾರೀಖಿನ ಒಳಗಾಗಿ ಕೆಳಗೆ ಸಹಿ ಮಾಡುವವರ ಹೆಸರಲ್ಲಿ ಒದಗಿಸಬೇಕು

ಡಾ. ಶ್ರೀಧರ ಎನ್ ನಾಯಿಕ
ಪನವೇಲಕರ, ಶ್ರೀ ಲಕ್ಷ್ಮೀ ನರಸಿಂಹ
ದೇವಸ್ಥಾನದ ಅಢಳತೇದಾರ ಕಮಿ
ಸಾಂವರ ಕಮಿಟಿಯ ಅಧ್ಯಕ್ಷ,
ಪಣಜಿ, ಗೋವೆ.

ಪುಣೆ ಕೊಪ್ಪರಿಗೆಗಳಿಗಿಂತ ಉತ್ತಮ ಕೊಪ್ಪರಿಗೆಗಳು.

ನನ್ನಲ್ಲಿ ಪುಣೆ ಕೊಪ್ಪರಿಗೆಗಳಿಗಿಂತ ಉತ್ತಮವಾದ ಕೊಪ್ಪರಿಗೆಗಳು ತಯಾರ ಮಾಡಿಕೊಡುತ್ತೇನೆ. ಬೇಕಾದವರು ಸಾಧಿಸಿಕೊಳ್ಳಬಹುದು. ಎಗ್ರಿಕಲ್ಚರಲ [illegible] ಸಹ ನನ್ನಲ್ಲಿಯೇ ಮಾಡಿಸಿಕೊಂಡಿರುವರು. ಬೇಕಾದವರು ಕೆಳಗಿನ ಪತ್ತೆಯ ಮೇಲೆ ಪತ್ರವ್ಯವಹಾರ ಮಾಡಬಹುದು.

ಪತ್ತೆ — [illegible] ಚೆಟ್ಟಿಸಾಬ್ಯ,
ಕಾರವಾರ. (ಎನ್ ಕೆನರಾ)

ಅಪೂರ್ವ, ಅಲೌಕಿಕ, ಅನುಪಮೇಯ ಕಾಂಗ್ರೆಸು!

ಶುಭ್ರ ಖಾದಿಯ ವೈಭವ!

ನೇ ಇಸ್ಸಿನ

ಮಹಾತ್ಮರ ಧ್ವನಿಯ ಸ್ಪಷ್ಟತೆ

ದ ರಾಷ್ಟ್ರೀಯ ಸಭೆಯ ಅಧಿವೇಶನವು ಕದಲ್ಲಿ ಹೇಳಿದಂತೆ ಅಪೂರ್ವವಾಯಿತು ವೇಶನಗಳೊಳಗೆ ಇದ್ದಂತೆ ಖುರ್ಚಿ ಮುಂ ತ್ಯ ಸರ್ವತಿಸುವ ಥಾಟು ಇದ್ದಿಲ್ಲ, ಎಲ್ಲರಿಗೂ ದ ಆಚ್ಛಾದಿತ ನೆಲದಮೇಲೆ ಕೂಡ್ರುವ ವ್ಯವ ತ್ತು. ಹಳೇ ಕಾಲದ ಕಾಂಗ್ರೆಸ್ಸುಗಳಲ್ಲಿ ಸಾ ಪಾಕು ಹಾಕಿಕೊಂಡು ಬರುವ ಪ್ರತಿನಿಧಿಗಳೇ ಈ ಸಾರೆ ಬಹುತೇಕ ಯಾವತ್ತು ಜನರು ದ ಪೋಷಾಕು ಹಾಕಿಕೊಂಡು ಬಂದಿದ್ದರು. ಲದ ಕಾಂಗ್ರೆಸ್ಸುಗಳಲ್ಲಿ ಸಭೆಯೊಳಗೆ ಇಂಗ್ರೆ ಹೊರತು ಬೇರೆ ಭಾಷೆಗಳಲ್ಲಿ ಮಾತಾಡುವ ಪು ಅಪರಾಧವೆಂದು ತಿಳಿಯುವ ಸಂಪ್ರದಾಯ ವರ್ಷ ಎರಡು ಮೂರು ಭಾಷಣಗಳ ಹೊರ ಭಾಷಣಗಳು ದೇಶಭಾಷೆಗಳಲ್ಲಿ ಆದವು. ಸ್ಪಷ್ಟ ಹೇಳಬೇಕಾದರೆ ಸಭೆಯ "ಟೈಮ್ಸ" ವರದಿಗಾರನು ಹೇಳುವಂತೆ ಈ ವರ್ಷದ ರಾ ನಮ್ಮಲ್ಲಿ ಹಳೇ ಕಾಲದಲ್ಲಿ ಕಂಡುಬರು ಮಾಜದ ಸಭೆಯೇ" ಇತ್ತು.

* * *

ಈ ಸಭೆಯಲ್ಲಿ ನೆರೆದ ಪ್ರತಿನಿಧಿಗಳು ಸಹ ದ್ದೆಗಳ ಸಾಂಗೋಪಾಂಗ ಚರ್ಚೆ ಮಾಡು ವರು ಮಾಡಿದ ನಿರ್ಣಯಗಳೂ ಅವಿಲ ವಿಚಾರಪೂರ್ವಕವೂ ಯುಕ್ತವಾದವೂ ಇದ್ದ ಬಹಳ ಉಚಿತವಾಗಿದ್ದವು. ಸನ್ ೧೯೧೪ ನೇ ಆಗೋಸ್ತ ತಿಂಗಳ ಪ್ರಾರಂಭಕ್ಕೆ ಇಂಗ್ಲಂಡವು ಸಭೆಯು ಜರ್ಮನಿಯ ಕೂಡ ಯುದ್ಧ ರ ಮಾಡುವಾಗ ಹೊಂದ ತರದ ಗಂಭೀರ ಸಂಕ್ಷಿಪ್ತ ಚರ್ಚೆ ಮಾಡಿತೋ ಅದೇ ತರದ, ರ ಮತ್ತು ಸಂಕ್ಷಿಪ್ತ ಚರ್ಚೆಯನ್ನು ನಮ್ಮ ಪದ ರಾಷ್ಟ್ರೀಯ ಸಭೆಯು ಮಾಡಿತೆಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಆ ಕಾಲಕ್ಕೆ ಇಂ ದೆಂಥಾ ಉತ್ಕಟತೆಯ ಪ್ರಸಂಗವು ಈಗ ರಾಷ್ಟ್ರೀಯ ಸಭೆಯಮೇಲೆ ಬಂದಿದೆ. ಆಗ ಇಂ ಜನರಲ್ಲಿ ಕಂಡುಬರುವ ಉತ್ಸಾಹವೂ ದಾಸ್ಯ ರಕ್ಷಣೆಗಾಗಿ ಜನರು ತೋರಿಸಿದ ಅನುಪಮೇಯ ಸ್ವಾರ್ಥತ್ಯಾಗದ ತಯಾರಿಯೂ ನಮ್ಮ ದೇಶದಲ್ಲೂ ಪ್ರಸ್ತುತ ಕಂಡುಬರುತ್ತವೆ ಮತ್ತು ಅವು ತಿ ನದಿಯ ತೀರದಲ್ಲಿ ಹಾಕಿದ ಭವ್ಯ ಖಾ ರಾಷ್ಟ್ರೀಯ ಸಭೆಯ ಕಾಲಕ್ಕೆ ನೆರೆದ ಪ್ರತಿನಿ ಗಳ ಪ್ರೇಕ್ಷಕರೊಳಗೂ ಪೂರ್ಣವಾಗಿ ಪ್ರತಿಬಿಂ ಕಾಣುತ್ತಿತ್ತು.

* * *

ವು ಈ ಕಾಲಕ್ಕೆ ತನ್ನ ಸ್ವಾತಂತ್ರ್ಯ ರಕ್ಷಣೆಗಾ ತನ್ನ ಸಾಮ್ರಾಜ್ಯದ ಬಾಹುಬಲದ ಅಥ ಸ್ತ್ರಗಳ ಉಪಯೋಗ ಮಾಡುವ ನಿಶ್ಚಯ ಮಾಡಿ ಪ್ರ ಮಾತ್ರ ದೇವರಲ್ಲಿ ವಿಶ್ವಾಸವನ್ನಿಟ್ಟು ಆತ್ಮ ಬ ಮರ್ಥ್ಯದ ಅಭಿಮಾನಿಗಳಾಗಿ ಅತ್ಯಂತ ಶಾಂತ ದ ಮನೋವಾಕ್ಕಾಯಗಳಿಂದ ಯಾವದೇ ತರ ಭಂಗವನ್ನು ಮಾಡದೇ ಕಾಯದೆ ಭಂಗದ ನಿಃ ತೀಕಾರವೆಂಬ ಅಮೋಘ ಅಸ್ತ್ರದಿಂದಲೇ ಸರ ಗೆದ್ದು ನಮ್ಮ ಜನ್ಮಸಿದ್ಧ ಸ್ವಾತಂತ್ರ್ಯವನ್ನು ಪ ಕೆಂದು ನಿಶ್ಚಯಿಸಿದ್ದೇವೆ. ಅಂತ್ಯದಲ್ಲಿ ಇಂಗ್ಲಂಡ ದಂತೆ ನಮಗೂ ಈಗ ಪ್ರಾರಂಭವಾಗುವ ದಲ್ಲಿ ಜಯ ಸಿಕ್ಕೇಸಿಗುವದು ಎಂದು ರಾಷ್ಟ್ರೀ ಗೆ ದೃಢ ನಂಬಿಕೆಯುಂಟು.

* * *

ಇಂಥ ಅಪೂರ್ವ ರಾಷ್ಟ್ರೀಯ ಸಭೆಯ ಅಧಿವೇಶನಕ್ಕೆ ತಾ ೨೭ಕ್ಕೆ ಪ್ರಾರಂಭವಾಗುವದೆಂದು ಜಾಹೀರಾಗಿದ್ದರೂ ತಾ ೨೧ರಿಂದಲೇ ಪ್ರತಿನಿಧಿಗಳೂ ಪ್ರೇಕ್ಷಕರೂ ಬರಹತ್ತಿದರು. ೨-೩ ದಿವಸಗಳಲ್ಲಿ ಶಹರವೂ ಖಾದಿನಗರವೂ ಜನರಿಂದ ತುಂಬಿ ತುಳುಕ ಹತ್ತಿದವು. ಮಹಾತ್ಮರ ಆಶ್ರಮದ ಸಮೀಪ ಕೂಡುವ ಈ ಮಹಾಸಭೆಯ ಸಂದರ್ಶನಕ್ಕೆಂದು ಕಡಿಮೆಯೆಂದರೆ ೨ಲಕ್ಷ ಜನರು ಹೊರಗಿಂದ ಬಂದಿದ್ದರು ಎಂದು ಅಂದಾಜು ಇದೆ. ಹೀಗಾಗಿ ಊರೊಳಗೆ ಹಾದಿಯ ಮೇಲೆ ದಟ್ಟ ಸಂದಣಿಗಳಾಗಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಹಾದು ಹೋಗುವದು ಬಹಳ ಪರಿಶ್ರಮದ್ದಾಗುತ್ತಿತ್ತು.

* * *

ತಾ ೨೩ಕ್ಕೆ ವರ್ಕಿಂಗ ಕಮೀಟಿಯು ಸಭೆಗೂಡಿತು ಅಧ್ಯಕ್ಷ ವಿಜಯ ರಾಘವಾಚಾರ್ಯರು ಬಂದು ಮುಟ್ಟಿಲ್ಲ. ಬಾಕಿ ೫ ಜನರು ಸೆರೆಮನೆಯಲ್ಲಿದ್ದರು, ಮತ್ತು ಉಳಿದ ಜನರು ಹಾಜರಿದ್ದರು, ಸಭೆಗೆ ಬೇರೆ ಬೇರೆ ಪ್ರಾಂತಗಳ ಮುಖಂಡರನ್ನು ಆಮಂತ್ರಿಸಿದ್ದರು ಅದರಲ್ಲಿ ಸರ್ವಾನುಮತದಿಂದ ಮುಂದಿನ ಕಾರ್ಯಕ್ರಮವು ನಿಶ್ಚಿತವಾಗಿ ಚರ್ಚೆಗಾಗಿ ವಿಷಯನಿಯಾಮಕ ಕಮೀಟಿಯ ಮುಂದೆ ಇಡತಕ್ಕ ಠರಾವುಗಳು ನಿಶ್ಚಿತವಾದವು.

* * *

ತಾ ೨೪ಕ್ಕೆ ಮಧ್ಯಾಹ್ನಕ್ಕೆ ಆಲ್-ಇಂಡಿಯಾ-ಕಾಂಗ್ರೆಸ ಕಮೀಟಿಯು ಸಭೆಗೂಡಿ ಸಕ್ರೆಟರಿಗಳು ಸಿದ್ಧ ಮಾಡಿದ ರಿಪೋರ್ಟು ಮಂಜೂರ ಆಯಿತು ದೇಶಬಂಧು ದಾಸರ ಅಧ್ಯಕ್ಷಸ್ಥಾನದ ಕೆಲಸವನ್ನು ನಡಿಸಲಿಕ್ಕೆ ಮೊದಲು ದೇಶಬಂಧುಗಳ ಸಹಧರ್ಮಚಾರಿಣಿಗಳಾದ ಶ್ರೀಮತೀ ವಸಂತೀದೇವಿಯವರನ್ನು ಆರಿಸಬೇಕೆಂದು ವಿಚಾರವಿತ್ತು. ಆದರೆ ಅವರು ಕಲಕತ್ತೆಯಲ್ಲಿ ಆ ಕಾಲಕ್ಕೆ ಇರುವದು ಅವಶ್ಯವಿದ್ದದರಿಂದ ಅವರು ಬರುವದಿಲ್ಲವೆಂಬು ತಿಳಿದಮೇಲೆ ದಿಲ್ಲಿಯ ಹಕೀಮ ಅಜಮಲಖಾನ ಇವರಿಗೆ ಆಕ್ಟಿಂಗ ಅಧ್ಯಕ್ಷರನ್ನಾಗಿ ಚುನಾಯಿಸಿದರು. ಇಷ್ಟು ಕೆಲಸ ಮಾಡಿ ಕಮೀಟಿಯು ವಿಷಯನಿಯಾಮಕ ಕಮೀಟಿಯೊಳಗೆ ರೂಪಾಂತರವಾಗಿ ಠರಾವುಗಳ ಚರ್ಚೆಗೆ ಶುರುವಾಯಿತು.

* * *

ತಾ. ೨೭ಕ್ಕೆ ಮಧ್ಯಾಹ್ನ ೩ ಘಂಟೆಗೆ ಮಹಾಸಭೆಯ ಅಧಿವೇಶನಕ್ಕೆ ಪ್ರಾರಂಭವಾಗುವದೆಂದು ಪ್ರಸಿದ್ಧವಾಯಿತು. ಆದರೂ ೧೨ ಬಡಿಯುವ ಮೊದಲಿಂದಲೇ ಪ್ರತಿನಿಧಿಗಳೂ ಪ್ರೇಕ್ಷಕರೂ ಬರಹತ್ತಿ ೨ ಬಡಿಯುವದರಲ್ಲಿ ಮಂಟಪವು ತುಂಬಿ ಹೋಯಿತು. ಒಂದು ಇಂಚು ಸಹ ಜಾಗೆಯು ಖಾಲಿ ಉಳಿಯಲಿಲ್ಲ. ಸ್ವಾಗತ ಕಮೀಟಿಯ ೩ ಸಾವಿರ ಸಭಾಸದರು, ೫ ಸಾವಿರ ಪ್ರತಿನಿಧಿಗಳು ಮತ್ತು ೩-೪ ಸಾವಿರ ಪ್ರೇಕ್ಷಕರು ಕೂಡಿದ್ದರು. ಮಂಟಪದ ಹೊರಗಂತೂ ೫೦-೬೦ ಸಾವಿರ ಮೇಲೆ ಜನರು ಕೂಡಿ, ಅಲ್ಲಿ ವ್ಯವಸ್ಥೆಯನ್ನಿಡಬೇಕಾದರೆ ಸ್ವಯಂಸೇವಕರಿಗೆ ಸಾಕುಸಾಕಾಯಿತು. ಇಷ್ಟಿದ್ದರೂ ಒಂದು ಕಡೆಯಲ್ಲಿ ಸಹ ಗಡಿಬಿಡಿಯಾಗಲಿಲ್ಲ. ಎಲ್ಲವೂ ಶಾಂತತೆಯಿಂದ ಸಾಗುತಿತ್ತು.

* * *

ಮಂಟಪದಲ್ಲಿ ಪುರುಷ-ಸ್ತ್ರೀಯರಿಗೆ ನಾಲ್ಕು ಬದಿಗೆ "ಜಾಲರಿಗಳನ್ನು" ಹಾಕಿ ಪ್ರತ್ಯೇಕ ಸ್ಥಾನವನ್ನು ಮಾಡಿದ್ದರು. ಅಧ್ಯಕ್ಷರು ಕೂಡ್ರುವ ಮೇಲೆಯೇ "ಭಾರತ ಮಾತೆ"ಯ ಚಿತ್ರವನ್ನು ನಿಲ್ಲಿಸಿದ್ದರು. ಮಧ್ಯಭಾಗದಲ್ಲಿ ಎಲ್ಲರ ಕಣ್ಣಿಗೆ ಬೀಳುವಂತೆ ಲೋ॥ ಟಿಳಕರ "ಬಸ್ಟು" ಇಟ್ಟಿದ್ದರು. ಮಂಟಪದ ಒಳಭಾಗವು ದೇಶಭಕ್ತರ ಚಿತ್ರಗಳಿಂದಲೂ, ಹೂಮಾಲೆಗಳಿಂದಲೂ, ಕೂಡಿದ ಜನರಿಗೆ ತಮ್ಮ ಕರ್ತವ್ಯದ ಸೂಚನೆಯನ್ನು ಕೊಡುವ "ಉಕ್ತಿ" ಪಟಗಳಿಂದಲೂ ಭೂಷಿತವಾಗಿತ್ತು. ಯಾವತ್ತು ಜನರು ನಖಶಿಖಾಂತ ಖಾದಿಯನ್ನೇ ಧರಿಸಿದ್ದರು. ("ಟೈಮ್ಸ"ದ ವಾ ರ್ತಾಹರನು ಈ ಕಾಂಗ್ರೆಸಿಗೆ "ಖಾದಿ-ಕಾಂಗ್ರೆಸ

[illegible]

ಕಾಣಿಸಿದ ಆಯಂ [illegible]

ಹಕೀಮ [illegible] ಅನಸಾರಿ, ಪಂಡಿತ ಮದನ [illegible] ರಾಘವಾಚಾರ್ಯ, ಕಸ್ತೂರಿರಂಗ ಅಯ್ಯಂಗಾರ [illegible] ಅಯ್ಯಂಗಾರ, ಶ್ರೀನಿವಾಸ ಅಯ್ಯಂಗಾರ, ಸ್ವಾಮಿ ಶ್ರದ್ಧಾನಂದ, ವಲ್ಲಭಭಾಯಿ ಪಟೇಲ, ವಿಟ್ಠಲಭಾಯಿ ಪಟೇಲ, ಬೇ॥ ಜಯಕರ, ಮಿಸ್ಟರ ವ ಮಿಸೆಸ ಜಿನ್ನಾ, ಮಿ॥ ಅಂಡ್ರೂಜ, ಪೋಲ ರಿಚಾರ್ಡ (ಫ್ರೆಂಚ ಮನ್) ಶಾರದಾ ಪೀಠದ ಶಂಕರಾಚಾರ್ಯ, ಅಲ್ಲಿ ಬಂಧುಗಳ ತಾಯಿ, ಬೇಗಮ್ಮು! ಆಸಫ್ ಅಲ್ಲಿ, ಮಹಮ್ಮದ ಅಲ್ಲಿ, ಖ್ವಾಜಾ, ಲಾಲಾ, [illegible], ಪಂಡಿತ, ಬಿದರಿ ಶ್ರೀ॥ ಸರಳಾದೇವಿ, ಸರೂಪರಾಣಿ ನೆಹರು, ಸರೋಜಿನಿ ನಾಯಡು, ಶ್ರೀ॥ ಕೇಳಕರ, ಕರಂದೀಕರ ಮೊದಲಾದ ಯಾವತ್ತು ರಾಷ್ಟ್ರೀಯ ಪಕ್ಷದ ಮುಂದಾಳುಗಳು ("ಸ್ವರಾಜ್ಯಕ್ಕೆ" ಕಾಂಗ್ರೆಸಕ್ಕೆ— ಹೋಗಲು "ಪಾಸ ಪೋರ್ಟ" ಸಿಗದಿದ್ದವರು) ಕಾಣುತ್ತಿದ್ದರು.

* * *

ಪ್ರಾರಂಭಕ್ಕೆ ಬೇರೆಬೇರೆಯವರು ಸಂಗೀತ, ಸ್ವಾಗತ ಕೀರ್ತನ, ರಾಷ್ಟ್ರೀಯ ಗೀತ ಮುಂತಾದ ಹಾಡುಗಳನ್ನು ಹಾಡಿದಮೇಲೆ ಸ್ವಾ। ಕಮೀಟಿಯ ಅಧ್ಯಕ್ಷ ಶ್ರೀ॥ ವಲ್ಲಭಭಾಯಿ ಪಟೇಲರು ಪ್ರತಿನಿಧಿಗಳ ಸ್ವಾಗತ ಮಾಡಿ, ತಮ್ಮ ಸಣ್ಣ ಭಾಷಣದಲ್ಲಿ ಮಾರ್ಮಿಕ ರೀತಿಯಿಂದ ದೇಶದೊಳಗಿನ ಪರಿಸ್ಥಿತಿಯ ಪರಿಶೀಲನ ಮಾಡಿ ತ್ಯಾಗ ಅಸಹಕಾರವೇ ನಮ್ಮ ತರಣೋಪಾಯವಿರುತ್ತದೆ, ಅಸಹಕಾರತೆಯಲ್ಲಿ ಗುಜರಾತ ಪ್ರಾಂತವು ಎಷ್ಟು ಪ್ರಗತಿಯನ್ನು ಮಾಡಿದೆ ಎಂಬ ಸಂಗತಿಗಳನ್ನು ತಿಳಿಸಿ ಹೇಳಿದರು.

* * *

ಆ ಮೇಲೆ ಅಧ್ಯಕ್ಷರ ಭಾಷಣವಾಯಿತು; ಅಧ್ಯಕ್ಷರು ವಾಡಿಕೆಯಂತೆ ಒಂದು ದೊಡ್ಡ ಉದ್ದನ್ನ ಭಾಷಣ ಮಾಡಲಿಲ್ಲ. ಅವರ ಭಾಷಣವು ತೀರ ಸಣ್ಣದಿತ್ತು. ಆದರೂ ಅದರಲ್ಲಿ ಸೂತ್ರರೂಪವಾಗಿ ಯಾವತ್ತು ವಿಷಯಗಳ ಚರ್ಚೆ ಮಾಡುತ್ತ ಮೊಟ್ಟಮೊದಲು ಅವರು ನಿಯುಕ್ತ-ಅಧ್ಯಕ್ಷರು ಆಗಿರುವ ಶ್ರೀ॥ ಚಿತ್ತರಂಜನ ದಾಸರವರ ಅತುಲ ದೇಶಭಕ್ತಿಯ, ಸ್ವಾರ್ಥತ್ಯಾಗದ ಸ್ತುತಿಯನ್ನು ಮಾಡಿ ಅವರ ಗೈರ ಹಾಜರಿಯ ಬಗ್ಗೆ ದುಃಖಿತರಾಗದೆ ಅವರು ದೇಶಕಾರ್ಯದ ಸಲುವಾಗಿ ಬ್ರಿಟಿಷ ಸರಕಾರದ ಸೆರೆಮನೆಯಲ್ಲಿ ಇದ್ದ ಬಗ್ಗೆ ಆನಂದ ಪ್ರದರ್ಶನ ಮಾಡಿದರು. ಆ ಮುಂದೆ ಅವರು ಅಸಹಕಾರದ ಚಳವಳವು ಯಶಸ್ವಿಯಾಗಲಿಲ್ಲ; ಜನರು— ವಿಶೇಷತಃ ಪದವಿಧರರು, ವಿದ್ಯಾರ್ಥಿಗಳು, ವಕೀಲರು, ಕಾಯದೇ ಕೌನ್ಸಿಲ ಮೆಂಬರರು ಅಸಹಕಾರಿತೆಯ ಠರಾವನ್ನು ಮನ್ನಿಸಲಿಲ್ಲವೆಂಬ ಪ್ರತಿಪಕ್ಷದ ಆಕ್ಷೇಪದ ಸಮಾಚಾರ ತಕ್ಕೊಂಡರು. ಪದವಿಧರರು ಮತ್ತು ಕಾಯದೆ ಕೌನ್ಸಿಲ ಮೆಂಬರರು ನಮ್ಮ ಠರಾವು ಮನ್ನಿಸಲಿಲ್ಲ ಖರೆ, ಆದರೆ ಅವರ ಪದವಿಗೂ ಮೆಂಬರಿಕೆಗೂ ರಶ್ಯದ "ರುಬಲ" ನೋಟುಗಳಿಗಿದ್ದ ಕಿಮ್ಮತ್ತು ಸಹ ಇಲ್ಲ! ವಿದ್ಯಾರ್ಥಿಗಳ ವಿಷಯದಲ್ಲಿ, ಕಲಕತ್ತೆಯ ಯುನಿವರ್ಸಿಟಿಯಲ್ಲೇ ೫೩,೦೦೦ ವಿದ್ಯಾರ್ಥಿಗಳು ಕಡಿಮೆಯಾಗಿರುತ್ತಾರಂತೆ! ಇದು ಸಹ ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳ ಅಭಾವವಿದ್ದಾಗ! ವಕೀಲರು ವಕೀಲಿಯನ್ನು ಬಿಡಲಿಲ್ಲ; ಆದರೆ ಅವರು ಸಹ ಪಂಚಾಯತ ಕೋರ್ಟುಗಳು ಸ್ಥಾಪಿತವಾದಂತೆ ಸರಕಾರಿ ಕೋರ್ಟುಗಳಿಗೆ ರಾಮರಾಮ ಹೊಡೆಯುವರು. ಅಧ್ಯಕ್ಷರು ಮಲಬಾರದ ದಂಗೆಯ ಯಾವತ್ತು ಜವಾಬದಾರಿಯನ್ನು ಸರಕಾರದಮೇಲೆಯೇ ಹೊರಿಸಿ, ಅಸಹಕಾರಿಗಳಿಗೆ ಅಲ್ಲಿ ಹೋಗಿ ಶಾಂತಿಯ ಸಂದೇಶವನ್ನು ಉಪದೇಶಿಸಕೊಟ್ಟರೆ ಆ ದಂಗೆಯಾಗುತ್ತಿದ್ದಿಲ್ಲೆಂದು ಅಭಿಪ್ರಾಯಪಟ್ಟರು. ಆದರೂ [illegible]

ಮಾಪ್ಲೇಯರು ಹಿಂದುಗಳ ಮೇಲೆ ಮಾಡಿದ ಅತ್ಯಾಚಾರಗಳನ್ನು ನಿಷೇಧಿಸಿದರು ಮತ್ತು ಈಗ ದೇಶದ ಮೇಲೆ ಬಂದ ಸಂಕಷ್ಟಗಳು ನವ ಸ್ವತಂತ್ರ ಭಾರತವು ಜನ್ಮತಾಳುವಾಗ ಆಗುವ ಪ್ರಸೂತಿವೇದನೆಗಳು ಎಂದು ಹೇಳಿ ಭಾಷಣವನ್ನು ಮುಗಿಸಿದರು

* *

ಆಮೇಲೆ ಶ್ರೀ ಸರೋಜಿನಿ ನಾಯುಡು [illegible] ದ ಬಂದಿರುವಾಗಂಧು ದಾಸ [illegible] ಯವರಾಗಿ ವರ ಸಂದೇಶಗಳನ್ನು ಓದಿ ಹೇಳಿದರು [illegible] 'ಅಸಹಕಾರವೇ ತಾರಕೋಪಾಯವು [illegible] ದರೆ ಅನ್ಯಾಯ-ಪಾಪಗಳಿಗೆ ಸಹಾಯ ಮಾಡದೆ ಇರುವ [illegible] ದ ಅದು ವಿಧ್ವಂಸಕ ತತ್ವವೆಂಬುದು ಸುಳ್ಳು ನಿರಾ [illegible] ಮೂಲವೆಂಬುದು ಸುಳ್ಳು" ಎಂದು ಹೇಳಿ ವಿದ್ಯಾರ್ಥಿಗಳಿಗೆ [illegible] ಈ ಕಠಿನ ಭಾರವನ್ನು ವಹಿಸಲಿಕ್ಕೆ ಆಹ್ವಾನ ಮಾಡಿದರು. ಶ್ರೀಮತಿಗಳು ಸಹ ಪ್ರತಿಯೊಬ್ಬರಿಗೆ [illegible] ಸ್ವಯಂಸೇವಕರಾಗಿ ರಾಷ್ಟ್ರದ ಕೆಲಸವನ್ನು ಕೈಕೊಳ್ಳಲು ಉಪದೇಶಿಸಿದ್ದಾರೆ ಇಷ್ಟಾದ ಮೇಲೆ ಮೊದಲನೇ ದಿವಸದ ಕಾರ್ಯಕ್ರಮವು ತೀರಿತು

* * *

ಮರುದಿವಸ ಮಧ್ಯಾನ್ಹಕ್ಕೆ ಸಭೆ ಕೂಡಿತು ಮಹಾತ್ಮರು ರಾಷ್ಟ್ರಕ್ಕೆ ಕಾಯದೆ ಭಂಗದ ಚಳವಳವನ್ನು ಕೈಕೊಳ್ಳಲಿಕ್ಕೆ ಉಪದೇಶ ಮಾಡುವ ಮತ್ತು ಮಹಾತ್ಮಾ ಗಾಂಧಿಗಳಿಗೆ ಸರ್ವಾಧಿಕಾರಿ ಸೂತ್ರಧಾರರಾಗಿ ನೇಮಿಸುವ ಮುಖ್ಯ ಠರಾವನ್ನು ಸಭೆಯ ಮುಂದಿಟ್ಟರು ಆಗ ಅವರು ಮಾಡಿದ ಭಾಷಣವು ಬಹು ಮನನೀಯವಿರುತ್ತದೆ [illegible] ದರ ಸಾರಾಂಶವೇನೆಂದರೆ, ಈ ೧೫ ತಿಂಗಳ ಚಳವಳದ ಮೇಲೆ ಈ ಠರಾವಿನ ಆವಶ್ಯಕತೆಯನ್ನೂ ಅದರ ಮರ್ಮವನ್ನೂ ನಿಮಗೆ ತಿಳಿಸಿ ಹೇಳುವ ಅಗತ್ಯವಿದೆಯೆಂದು ನನಗೆ ಕಾಣುವದಿಲ್ಲ, ಠರಾವಿನೊಳಗೆ ಹೊಸದೇನಿಲ್ಲ, ವಿಷಯನಿಯಾಮಕ ಕಮಿಟಿಯು ಕಾಂಗ್ರೇಸ [illegible] ಚರ ಮಾಡಿ ಈ ಠರಾವನ್ನು ರಚಿಸಿರುತ್ತದೆ ದೇಶದೊಳಗಾಗುವ ಸಂಗತಿಗಳನ್ನು ನಿರೀಕ್ಷಿಸುತ್ತಿದ್ದವರಿಗೆ ಈ ಠರಾವು ನಮ್ಮ ರಾಷ್ಟ್ರೀಯ ಕಾರ್ಯಕ್ರಮದ ಸ್ವಾಭಾವಿಕ ಪರಿಣಾಮವೆಂದು ಕಂಡು ಬರುವದು ಅದು ನಾವು ಸ್ವತಃ ಬೆಳೆದಿರುವೆವು ಎಂಬುದನ್ನು ದೃಢೀಕರಿಸುತ್ತದೆ ಕೇವಲ ದೇವರ ಸಹಾಯದಿಂದ ಸ್ವಾತಂತ್ರ್ಯವನ್ನು ಪಡೆಯುವ ನಮ್ಮ ನಿಶ್ಚಯವನ್ನು ಅದು ವ್ಯಕ್ತಮಾಡುತ್ತದೆ ಸರಕಾರಕ್ಕೆ [illegible] ನಮ್ರ ಭಾವದಿಂದ ಹೇಳುತ್ತಿದ್ದೇನೆ [illegible] ಮಾಡಿರಿ, ಎಲ್ಲಾ ದಬ್ಬಾಳಿಕೆಯನ್ನು ಮಾಡಿರಿ [illegible] ನಿಮಗೆ ಪಶ್ಚಾತ್ತಾಪವಾಗದೆ ಇರದು [illegible] ಮಾಡಿ [illegible] ಕೃತಿಗಳಿಂದ ೩೦ ಕೋಟಿ ಜನರ [illegible] ಶಸ್ತ್ರಗಳು ಸಾಗದಂತೆ ಜಾಗ್ರತೆ [illegible]" ಈ ಠರಾವು ನಮಗೂ ಸರಕಾರಕ್ಕೂ [illegible] ವಿರುದ್ಧವಿಲ್ಲ ಆದರೆ [illegible] ಮಾಡಲಿಕ್ಕೆ ಸಂಕಟವಾದ್ದರಿಂದ [illegible] ಬಹುದಾಗಿ [illegible] ಮಾಡಿದ ಪರಿಸ್ಥಿತಿ [illegible] ಸರಕಾರ [illegible] ಮಾಡಿದ್ದೇವೆ [illegible] ಪ್ರಜೆಗಳ [illegible] ಸ್ವಾತಂತ್ರ್ಯ [illegible] ಸ್ವಾತಂತ್ರ್ಯ Freedom f [illegible] [illegible] ಅಧಿಕಾರ [illegible] ದಿಕ್ಕರಿಸ [illegible] ಧರ್ಮಖಂಡಗಳೊಳಗಿನ ದೇಶಬಾಂಧವರ [illegible] ಪ್ರಜಾಪರ [illegible] ಬೆಳೆದ [illegible] ನನಗೆ [illegible] ದರೆ ಸ್ವಾತಂತ್ರ್ಯವು [illegible] ಸರ್ವೋತ್ಕೃಷ್ಟ [illegible] ರಕ್ಷಿತವಾದ [illegible] ಶಾಂತಿಯೆ ನನಗೆ ಬೇಕು ಮಹಾತ್ಮರ ಠರಾವಿಗೆ ಶ್ರೀಮತ್ [illegible] ಯಿ ನಟೇಶನ್, ಶ್ರೀಮತಿ ನಾಯುಡು ಮತ್ತು ಕೆಲವರು ಅನುಮೋದನ ಕೊಟ್ಟಾಗಿ (ಕೇವಲ ೧೦ ಮತಗಳು ವಿರುದ್ಧ ಬಿದ್ದು) ಬಹುತ್ತೇಕ ಸಂಪೂರ್ಣ ಮತದಿಂದ ಅದು ಪಾಸಾಯಿತು

* * *

ಮಲಬಾರದ ದಂಗೆಯ ಜವಾಬದಾರಿಯನ್ನು ಸರಕಾರದ ಮೇಲೆ ಹೊರಿಸುವ ಠರಾವು ಮುಂಬಯಿಯ ದಂಗೆಯ ನಿಷೇಧದ ಠರಾವು ಸರಕಾರದಿಂದ ರಾಷ್ಟ್ರ ಸೇವಕರಿಗೆ [illegible] ಸತ್ಕಾರದ [illegible] ಪರಿಪೂರ್ಣ [illegible] ಲ್ಲಿ ಹಿಂದೂ ಜನರ [illegible] ಯಾಗುವ [illegible] ಬಂದಿ [illegible] ನಾವು ಪಾಶಿತ ಬಹಿಷ್ಕಾರವು [illegible] ನಮ್ಮ ಪ್ರೇಮ ದರ್ಶಿಸುವ [illegible] ಆದರೆ ಅವರ ಸ್ವಾಗತದಲ್ಲಿ ನಾವು ಭಾಗ ತಕ್ಕೊಳ್ಳಕೂಡದು ಹಿಂದುಹಿತಪ್ರಿಯರೊ [illegible] ನೌಕರಶಹಿಯ ಅಧಿಕಾರವನ್ನು ಮತ್ತಿಷ್ಟು ಹೆಚ್ಚಿಸಲಿಕ್ಕೆ ಸಹಾಯ ಮಾಡದಂತೆ [illegible] ರೀತಿಯ ಮೂಲಕವೆಂದು [illegible] ಮಾಡುವ ಠರಾವ ಅಧ್ಯಕ್ಷರೇ ಮಂಡಿಸಿ ಪಾಸ ಮಾಡಿಸಿದರು ಘಟನೆಯಲ್ಲಿ ಕೆಲವು ದುರುಸ್ತು ಮಾಡುವ ಸೂಚನೆಗಳೂ ಮಂಜೂರಾದವು

* * *

ಆಮೇಲೆ ಮಿ। ಹಜರತ ಮೋಹಾನಿಯವರು 'ಪೂರ್ಣ ಪರಾನಿಯಂತ್ರಿತ (free from foreign control) ಸ್ವಾತಂತ್ರ್ಯವೇ ನಮ್ಮ ಧ್ಯೇಯವು ಎಂದು ಜಾಹೀರ ಮಾಡಿ ಅದರಂತೆ ಕಾಂಗ್ರೆಸ್ಸಿನ ಧ್ಯೇಯವನ್ನು ಬದಲಯಿಸುವ [illegible] ತಮ್ಮ ಠರಾವು [illegible] ತಂದರು ಅವರು ತಮ್ಮ ಭಾಷಣದಲ್ಲಿ ಕಳೆದ [illegible] ತಿಂಗಳಲ್ಲಿ ಇಷ್ಟು ಚಳವಳ ಮಾಡಿದರೂ [illegible] ನಮ್ಮ ಸ್ವರಾಜ್ಯವು ಸಾಧ್ಯವಾಗುವದಿಲ್ಲ, ಆಗ ಬ್ರಿಟಿಶ ಸಾಮ್ರಾಜ್ಯದೊಳಗೆ ಉಳಿದು ಲಾಭವೇನು ಪೂರ್ಣ ಸ್ವಾತಂತ್ರ್ಯವನ್ನೇ ನಾವು ಜಾಹೀರು ಮಾಡುವದು ಅವಶ್ಯವದೆಯೆಂದು ಹೇಳಿದರು ಕೆಲವರು ಅದರ ಅನುಮೋದನ ಕೊಟ್ಟರು ಮಹಾತ್ಮಾ ಗಾಂಧಿಗಳು ಅದಕ್ಕೆ ವಿರೋಧ ಮಾಡಿದರು ಧ್ಯೇಯವನ್ನು ಈ ರೀತಿಯಿಂದ ಸಂಕುಚಿತ ಮಾಡಿ ನಮ್ಮ ಅನೇಕ ಸಹಕಾರಿಗಳನ್ನು ಹೊರಗೆಡಿಸುವದು ಅವರಿಗೆ ಯುಕ್ತ ಕಾಣಲಿಲ್ಲ ಠರಾವಿನ ಮೇಲೆ ಮತಗಳನ್ನು ತಕ್ಕೊಳ್ಳಲಾಗಿ ಠರಾವು [illegible] ಬಿದ್ದಿತು ಆದರೂ ಮಿ। ಮೋಹಾನಿಯವರ [illegible] ಅನೇಕ [illegible] ಬಿದ್ದವು ಎಂಬುದನ್ನು ಲಕ್ಷದಲ್ಲಿಡಬೇಕು ಇಷ್ಟಾದ ಮೇಲೆ ಅಬಕಾರ ಪ್ರದರ್ಶನದ [illegible] ಉಚಿತ, ಮತ್ತು ಅಧ್ಯಕ್ಷರು ಸಮಾರೋಪಾತ್ಮಕ ಭಾಷಣಮಾಡಿ ಸಭೆಯ ಕೆಲಸವನ್ನು ಮುಗಿಸಿದರು ಮತ್ತು ಮಹಾತ್ಮರ [illegible] ಜಯ ಜಯ ಕಾರ ಮಾಡುತ್ತ ಜನರು ಹೊರಬಿದ್ದರು

* *

ವಿಷಯ ನಿಯಾಮಕ ಕಮಿಟಿಯಲ್ಲಿ ಎರಡು ಮಹತ್ವದ ಸಂಗತಿಗಳಾದವು ಅವುಗಳನ್ನು ನಮೂದಿಸಿ ಈ ವೃತ್ತಾಂತವನ್ನು ಮುಗಿಸುತ್ತೇನೆ ಮೊದಲನೇ ಸಂಗತಿಯೆಂದರೆ ಮಹಾರಾಷ್ಟ್ರೀಯ ಪಕ್ಷದ ಸಮಾಧಾನ, ಮಹಾತ್ಮರು [illegible] ಖುಲಾಸಾ ಮಾಡಿ ಅವರಿಗೆ ಸಮಾಧಾನವಾಗುವಂತೆ ತಮ್ಮ ಮುಖ್ಯ ಠರಾವಿನಲ್ಲಿ ಕೆಲವು ತಿದ್ದುಪಾಟುಗಳನ್ನು ಮಾಡಿದರು ಬೇರೆ ಸಂಗತಿಯೆಂದರೆ ಪಂಡಿತ ಮಾಲವೀಯರು ಕಾಯದೆಭಂಗದ ಚಳವಳವನ್ನು ಕೈಕೊಳ್ಳುವ ವಿಚಾರವನ್ನು ಬದಿಗೊತ್ತಿ ಸರಕಾರದ ಕೂಡ ಸಂಧಿಯನ್ನು ಮಾಡುವ ಬಗ್ಗೆ ವಿಚಾರ ನಿರ್ಣಯ ಮಾಡುವ ಬಗ್ಗೆ ತಂದ ಠರಾವು ಈ ವಿಷಯ ಮಹಾತ್ಮರು ವ್ಯಾಖ್ಯಾನದಲ್ಲಿ ರಾಷ್ಟ್ರೀಯ ಸಭೆ ನಿಶ್ಚಯಾತ್ಮಕ ನಿಮಂತ್ರಣವಿಲ್ಲದ್ದರಿಂದ ಈ ಬಗ್ಗೆ ಠರಾವು ಮಾಡುವದು ಅವಶ್ಯವಿಲ್ಲ, ಮುಂದೆ ಯೋಗ್ಯ ಕಾಲ ಬಂದರೆ ಒಪ್ಪಂದ ಮಾಡಲಿಕ್ಕೆ ಅಡ್ಡಿಯಿಲ್ಲ, ಒಪ್ಪಂದದ ಮಾತಿಗೆ ಯಾವಾಗಲೂ ಮುಕ್ತದ್ವಾರ ಉಂಟು ಎಂದು ಹೇಳಿದ ಮೇಲೆ, ಪ್ರಚಂಡ ಬಹುಮತದಿಂದ ಪಂಡಿತಜಿಯವರ ಠರಾವು ನಾಪಾಸ ಆಯಿತು

" ವಂದೇ ಮಾತರಮ್ '

TO The Registrar of C C Societies, Poona.

Sir, I [illegible] the honour hereby to tender [illegible] ation of the post of [illegible] rary Organiser of Co-operative Societies which I was [illegible] hitherto I may avail myself of this opportunity to give expression to the feelings which have driven me to this step and to explain the circumstances which have rendered it imperatively necessary for me to sever my connection with this Government Department I have been connected with the Co-operative Department for the last four years and I need make no secret of the fact that I got myself connected with this Department and allowed myself to remain so till now with the only hope and motive that I may through this Department be capable of some useful service to the poor ryots [illegible] of mine and I can [illegible] claim today to have utilised all the opportunities that were afforded to me by my connection with this Department to render some honest service to my people to the best of my little ability But the almost sickening tale of the regime of repression carried on by Government that is pouring on our [illegible] for the last one or two years and new chapters of which are manifesting themselves every day render it daily more and more humiliating for any honest self respecting Indian to work under this Government in any capacity The latest events of the regime which is being pursued unabated turn are most distressing and it will appear natural that in the present disquiet of my mind I should not have the necessary peace for an undisturbed and conscientious discharge of my duties I cannot also believe that I can successfully render any useful public service now as the attitude of the public mind at present is so generally hostile to receiving any offices useful or otherwise from any worker under the unsympathetic system of administration For myself I have begun to dislike more and more being a party in any way to the sin of lending countenance to the present system of administration by working in any capacity even in any useful department under it It will therefore be readily recognised that I have no other alternative but to place my resignation in your hands at this moment

Sadashivgad 14 12 21 } G S NADKARNI

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ

ಕಾಮಿನಿಯಾ ತೈಲ. (ರಿಜಿಸ್ಟರ್)

[illegible] ವಾದ, ಗುಂಗುರು ಗುಂಗುರಾಗಿದ್ದ ನೀಳವಾದ [illegible] ಕೇಶ [illegible] ಸ್ತ್ರೀಯರಿಗೆ ಒದಗಿಸಿ [illegible] ಉಪಕರಣ [illegible]

ಕಾಮಿನಿಯಾ ಆಯಿಲ್ (ರಜಿಸ್ಟರ್)

ಈ ಆಯಿಲ್ ಸ್ತ್ರೀಯರಿಗೆ [illegible] ಕೂದಲಿಗೆ [illegible] ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ ಈ ಆಯಿಲ್ ಹಚ್ಚಿಕೊಳ್ಳುತ್ತಲೇ [illegible] ನೆಯು ತಣ್ಣಗಾಗಿ ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ ಕೂದಲುಗಳು ಇದನ್ನು ತೊಡೆಯ ತೊಡಗಿದ [illegible] ಜಗ್ಗಿ [illegible] ಹೋಗಲಾರವು ಆದರೆ ಅವು [illegible] ವಾಗಿ ಬೆಳೆದು ಸಪ್ಪಾದ [illegible] ಇದರ [illegible] ಗಂಧವಾದರೋ [illegible] ವೋಹಕವಾಗಿರುತ್ತದೆ

[illegible] ಗಳನ್ನು ಕೊಂಡುಕೊಂಡು ತಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡಿಕೊಳ್ಳುವದಕ್ಕಿಂತ ಒಂದೇಯೊಂದು ಬಾರಿ ಈ "ಕಾಮಿನಿಯಾ ಆಯಿಲ್" ಉಪಯೋಗಿಸಿ [illegible] ಶ್ರೇಷ್ಠತೆಯು ದೆಸೆಯಿಂದ ನಮಗೆ [illegible] ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರ [illegible] ಸಾವಿರಾರು ಗ್ರಾಹಕರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ

ಕ್ರಯ — [illegible] ರೂಪಾಯಿ 1 0 0, ಸೀಸೆ 3 ಕ್ಕೆ ರೂಪಾಯಿ 2 10 0 ವಿ. ಪಿ. [illegible] 0 1 4 0

ಅತಿ ಮನೋಹರವಾದ ಸುವಾಸಿಯು !

ಒಟ್ಟೋ-ದಿಲ್ ಬಹಾರ್ !! (ರಜಿಸ್ಟರ್)

ಈ [illegible] ಗಂಧದ್ರವ್ಯವು ಮಧುರ ಕೋಮಲ, ಚಿರಸ್ಥಾಯಿ ಮತ್ತು ಅತ್ಯುತ್ತಮವು ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದ [illegible] ವಿರೆಯು (ಅಲ್ಕೊಹೋಲ್) ಸಂಪರ್ಕವಿಲ್ಲವು ಒಂದೇ ಒಂದು ಸಲ ನಿಮ್ಮ ಕೈ ಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ತೊಟ್ಟುಗಳನ್ನು [illegible] ದಿಂ ನಿಮ್ಮ [illegible] ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ ಈ ಒಟ್ಟೋದಿಲ್ ಬಹಾ[illegible] ಗಂಧವು ಅವೆಲ್ಲವುಗಳನ್ನು [illegible] ತನ್ನ ಶಕ್ತಿಯಿಂದ ಸೆಳೆದೊಯ್ಯುವುದು ಇಂದೇ ಒಂದು ಸೀಸೆಯನ್ನು ಖರೀದಿಸಿಕೊಳ್ಳಿರಿ

[illegible] 1 ಕ್ಕೆ 0-8-0 1 [illegible] (ಮಿಡಿಯಂ) ಸೀಸೆ 1 ಕ್ಕೆ 0-12-0, ½ [illegible] ದೊಡ್ಡ ಸೀಸೆ 1 ಕ್ಕೆ 2-0-0 ಅಂಚೆಯ ವೆಚ್ಚ ಬೇರೆ 0-4-0

ಒಟ್ಟೋ ದಿಲ್ ಬಹಾರ್ ಪರಿಮಳ [illegible] ಡಜನ್ 1 ಕ್ಕೆ 0 12 0

Address **The Anglo Indian Drug & Chemical Co,**
16, Market, **BOMBAY. 2.**

ಖರೇ ಮಾತು ! [illegible] ಕಲ್ಮ !! [illegible] !

ಒಮ್ಮೆಗೆಲಾದರೂ ಅನುಭವ ತೆಗೆದುಕೊಳ್ಳದೆ ಬಿಡಬೇಡಿರಿ.

ತಾರುಣ್ಯ ಸಂಜೀವನಿ ಗುಳಿಗೆಗಳು.

ಶುಕ್ರಧಾತುವನ್ನು [illegible] ಪುರುಷರಿಗೆ ಸ್ತ್ರೀ ವಿಷಯವಾಗಿಯೂ, ಸ್ತ್ರೀಯರಿಗೆ ಪುರುಷ ವಿಷಯವಾಗಿಯೂ [illegible] ಶಕ್ತಿಯನ್ನು ಉಂಟುಮಾಡಿ, [illegible] ಶರೀರದ ಜತನವನ್ನೂ ರೋಗಗಳನ್ನೂ ದೂರಪಡಿಸಿ, [illegible] ಯೋಗ್ಯವನ್ನೂ ರತಿಯಲ್ಲಿ [illegible] ಕುತೂಹಲವನ್ನೂ ತೋರಿಸುವ ಕ್ರೀಡಾ ಶಕ್ತಿಯ ಉತ್ಸಾಹವನ್ನೂ ಸಂಭೋಗದಲ್ಲಿ ತೃಪ್ತಿಯನ್ನೂ, ಸೌಖ್ಯವನ್ನೂ ಕೊಟ್ಟು, ಮನಸ್ಸಿನ ದೃಢತೆಯನ್ನೂ ಯೌವನದ ಕಳೆಯನ್ನೂ ದೊರಕಿಸಿ ಮುದಿತನವನ್ನು ನೀಗಿ ಬಲವನ್ನು ಉಂಟುಮಾಡುವದು ಮೃತ್ಯುವನ್ನು ನಿರಾಕರಿಸಿ ಬಗೆಬಗೆಯ ರೋಗಗಳನ್ನು ನಾಶಮಾಡುವದು [illegible] ಶುಕ್ಲಸ್ರಾವ, ಆಮಶಂಕೆ [illegible] ಇವುಗಳನ್ನು ನಾಶಮಾಡುವದು ಇದು ಆರೋಗ್ಯಕ್ಕೆ ಅತ್ಯುತ್ತಮವಾದ ಔಷಧವಾಗಿಯೂ, [illegible] ಗಳಿಂದಲೂ, [illegible] ಗಳಿಂದಲೂ, [illegible] ದಿಂದಲೂ, ದೇಹಪ್ರಕೃತಿಯಿಂದಲೂ, ಚಿಕ್ಕವಯಸ್ಸಿನಲ್ಲಿ ನಡಿಸುವ [illegible] ಹಸ್ತಮೈಥುನದಿಂದಲೂ, [illegible] ವಿಷಯೋಪಭೋಗದಿಂದಲೂ ಇಂದ್ರಿಯ [illegible], ತೆಳುವು, ನಿಸ್ತೇಜವು [illegible] ಯತ್ನವಿಲ್ಲದೆ ಸ್ಖಲನವಾಗುವದು ಒಂದೊಂದು ಸಾರಿ ಮೂತ್ರದಲ್ಲಿಯೂ, ಸ್ವಪ್ನದಲ್ಲಿಯೂ ಸಹ ಹೋಗುವದಲ್ಲದೆ, ನಪುಂಸಕತ್ವ, ಶರೀರ ಕ್ಷೀಣತೆ ಅಶಕ್ತಿ, ಅರುಚಿ ದೃಷ್ಟಿಮಾಂದ್ಯ ಬೆನ್ನೆಲುಬಿನಲ್ಲಿಯೂ, ತಲೆಯಲ್ಲಿಯೂ ನೋವು, [illegible], ನಿದ್ರೆಯಲ್ಲಿ [illegible] ಸ್ವಪ್ನ [illegible] ಮತ್ತು ಶರೀರದ [illegible] ಮನಸ್ಸಿನ ಚೇತನ [illegible] ಹೋಗುವದು ಇವೆಲ್ಲವುಗಳಮೇಲೆ ರಾಮಬಾಣದಂತಿರುವದು [illegible] ಗುಳಿಗೆಗಳುಳ್ಳ ಸೀಸೆ ೧ ಕ್ಕೆ ರೂ ೧॥ ನಂ ೧ ನಂ ೨ ಹೀಗೆ ಎರಡು ಸೀಸೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ [illegible] ಗುಳಿಗೆಗಳುಳ್ಳ ಸೀಸೆಗಳಿಗೆ ರೂ [illegible] ಪೋಸ್ಟೇಜ ಬೇರೆ

ಎಮ್. ಜಿ. ಭಾಗ್ವತ್, ಆಯುರ್ವೇದಿಕ್ ಕೆಮಿಸ್ಟ್,
ಕಾರ (ಕೆನರಾ)

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.



೧ ರಾಗದ ಕೈಪೆಟ್ಟಿಗೆ ಕಿಂ [illegible]
೨ „ ಕಾಲುಪೆಟ್ಟಿಗೆ ಕಿಂ [illegible]
೩ ತಬಲೆ ಜೋಡಿ ಕಿಂ [illegible] ೧೬, ೨೦
೪ ಹಾರ್ಮೋನಿಯಮ ಗ್ಯಾಡ ಕಿಂ [illegible], ತಬಲೆ [illegible] ಡ ಕಿಂ [illegible]

ವಿಶೇಷ ಮಾಹಿತಿ ಬಗ್ಗೆ ನಮ್ಮ ಕ್ಯಾಟಲಾಗ [illegible] ಕೊಡುವೆವು

ಪತ್ರವ್ಯವಹಾರ ಮರಾಠಿಯಿಂದ [illegible] ಗ್ರಜಿಯಿಂದ ಮಾಡಬೇಕು

ಪತ್ತೆ – **ಗೋಪಾಳ ಸಖಾರಾಮ** [illegible]
ಕಂಪನಿ, ನಂ [illegible],
ಕಾಳಬಾದೇವಿ ರೋಡ, ಮುಂಬಯಿ

ಕಾನಡಾವೃತ್ತ.

ಗುರುವಾರ, ತಾರೀಖು ೫ ಮಾಹೆ ಜನವರಿ ೧೯೨೨

ಭಾರತೀಯ ರಾಷ್ಟ್ರೀಯ ಸಭೆ. ಅಮದಾಬಾದ ಅಧಿವೇಶನವು.

ಕ್ರೈಸ್ತ ಯುಗಾದಿಯು ಇಂದಿನ ಸಂಚಿಕೆಯಲ್ಲಿ ಅಮದಾಬಾದದೊಳಗೆ ನೆರೆದ ಭಾರತೀಯ ರಾಷ್ಟ್ರೀಯ ಸಭೆಯು ಬಹಳೇ ಯಶಸ್ವಿಯಾದ ಅಧಿವೇಶನದ ವೃತ್ತಾಂತವನ್ನು ವಾಚಕರಿಗೆ ನಿವೇದಿಸುವದಕ್ಕಿಂತ ಮತ್ತೂ ಆನಂದಕರವಾದ ಶುಭ ವರ್ತಮಾನವನ್ನು ನಿವೇದಿಸುವದು ಸಾಧ್ಯವೂ ಅಲ್ಲ, ಪ್ರಾಸಂಗಿಕವೂ ಅಲ್ಲ. ಅಮದಾಬಾದದ ರಾಷ್ಟ್ರೀಯ ಸಭೆಯು ಪರಿಪೂರ್ಣವಾಗಿ ಯಶಸ್ವಿಯಾಗಿ, ಕೊನೆಗಂಡಿತೆಂದು ಭರತಭೂಮಿಗಷ್ಟೇ ಅಲ್ಲ, ಬ್ರಿಟಿಷ ಸಾಮ್ರಾಜ್ಯಕ್ಕೆ, ಸುಧಾರಿಸಿದ ಜಗತ್ತಿಗೆಲ್ಲ ಘಂಟಾಘೋಷದಿಂದ ಸಾರುತ್ತ ನಮ್ಮ ಕ್ರೈಸ್ತ ಬಾಂಧವರ ಹೊಸ ವರುಷವು ಉದಯಹೊಂದಿದೆ. ಇಂಥ ಶುಭ ಸಂವತ್ಸರವು ಹಿಂದುಸ್ಥಾನದೊಳಗಿನ ಲೋಕರಿಗೆ ಅತ್ಯಂತ ಸುಖಕರವಾಗದೆ, ಫಲಪ್ರದವಾಗದೆ, ಹ್ಯಾಗುಳಿಯುವದು? ಕಲ್ಯಾಣಕರ ಸ್ವರಾಜ್ಯದ ಭವಿಷ್ಯವನ್ನು ಸೂಚಿಸುವ ಈಗಿನ ಕಾಲಮಾನದ ಒಂದು ಸ್ಪಷ್ಟವಾದ ಸುಚಿಹ್ನವೆಂದು ಅರಿತು, ಮೊನ್ನೆ ಸಮಾಪ್ತಿಯಾದ ಅಮದಾಬಾದ ಅಧಿವೇಶನದ ಪರವಾಗಿ, ಎರಡು ಮಾತುಗಳನ್ನು ಇಂದಿಗ ಬರೆಯುವೆವು.

ಅಮದಾಬಾದದೊಳಗೆ ಸಾಬರಮತೀ ನದಿಯ ತೀರದಲ್ಲಿ ಮಹಾತ್ಮಾ ಗಾಂಧಿಗಳಂಥ ರಾಜಯೋಗಿಗಳ ಜನ್ಮದಿಂದ ಪವಿತ್ರವಾದ ಪ್ರಾಂತದೊಳಗೆ ಮಹಾತ್ಮರ ಸ್ವರಾಜ್ಯಾಶ್ರಮದ ಸನ್ನಿಧವಾಗಿ ನಿರ್ಮಿಸಲ್ಪಟ್ಟ ಖಾದೀ ನಗರವೆಂಬ ರಾಜಕೀಯ ಕ್ಷೇತ್ರದೊಳಗೆ, ಇಡೀ ಭರತಖಂಡದೊಳಗಿನ ಎಲ್ಲ ಪ್ರಾಂತಗಳ ಲೋಕಪಕ್ಷದ ಮೂರು ಸಾವಿರ ಪ್ರತಿನಿಧಿಗಳು [illegible] ಸಾವಿರ ಪ್ರೇಕ್ಷಕರ ಸಾಕ್ಷಿಯಾಗಿ ಪ್ರಕಟಿಸಿದ ನಿರ್ಣಯಗಳ ಮರ್ಮವು ಯಾವದು? ರಾಷ್ಟ್ರೀಯ ಸ್ವಯಂಸೇವಕರ ಸಂಘಗಳನ್ನು ನಿರ್ಮಿಸಬೇಕು. ಕಾಯಿದೆ ಭಂಗದ ಶಾಂತತೆಯ ಯುದ್ಧವನ್ನು ನಡಿಸಬೇಕು, ಹಿಂದಿಯರಿಗೆ ಸಕಲ ದೃಷ್ಟಿಯಿಂದ ಹಿತಕರವಾಗುವಂಥ ರಾಷ್ಟ್ರಕಾರ್ಯವನ್ನು ಮುಂದರಿಸಲು ಮಹಾತ್ಮಾ ಗಾಂಧಿಗಳಿಗೆ ಸರ್ವಾಧಿಕಾರಿಗಳಾಗಿ ನೇಮಿಸತಕ್ಕದ್ದು, ಎಂಬೀ ನಿರ್ಣಯಗಳ ಮತ್ತು ಬೇರೆ ಎಲ್ಲ ಠರಾವುಗಳ ಮಥಿತಾರ್ಥವನ್ನು ಗ್ರಹಿಸಬೇಕಾದರೆ, ಈಗಿನ ರಾಷ್ಟ್ರೀಯ ಸಭೆಯ ಕಾರ್ಯಕ್ರಮವನ್ನು ಹತ್ತೆಂಟು ವರ್ಷದ ಹಿಂದಿನ ಯಾವದೇ ಒಂದು ರಾಷ್ಟ್ರೀಯ ಸಭೆಯ ಕಾರ್ಯಕ್ರಮದ ಸಂಗಡ ತುಲ[illegible] ನೆ[illegible]ಲ್ಲಿ ಪರಿಪೂ[illegible] ಹಳೆ[illegible] ಜನರ [illegible]ಮಾನದೊಳಗಿನ ಭಿನ್ನತ್ವವು ಸ್ಪಷ್ಟವಾಗಿ ಹೊಳೆಯುವದು. ಹಳೇ ಪದ್ಧತಿಯ ರಾಷ್ಟ್ರೀಯ ಸಭೆಯೊಳಗೆ ಪಾಸಾದ ಠರಾವುಗಳ ಅನುಕ್ರಮ ನಂಬರುಗಳನ್ನು ಎಣಿಸಿರಿ. ಒಂದರಿಂದ ಇಪ್ಪತ್ತು ಮೂವತ್ತು ಸಂಖ್ಯೆಗಳನ್ನು ಎಣಿಸಿದರೂ, ಠರಾವುಗಳು ತೀರುವದಿಲ್ಲ. ಈ ಠರಾವುಗಳ ಭಾಷೆಯನ್ನು ನೋಡಿರಿ. ಅವುಗಳ ಅರ್ಥವನ್ನು ನೋಡಿರಿ. ಅವೆಲ್ಲವುಗಳೊಳಗೆ ಭಿಕ್ಷಾಂದೇಹಿಯು ಪರಿಪೂರ್ಣವಾಗಿ ತುಂಬಿತ್ತು. ನಮಗೆ ದೊಡ್ಡ ದೊಡ್ಡ ಹುದ್ದೆಗಳನ್ನು ಕೊಡಿರಿ, ನಮಗೆ ಮೆಂಬರೀ ಜಾಗೆಗಳನ್ನು ಕೊಡಿರಿ, ನಮಗೆ ಈ ಶಿಕ್ಷಣವನ್ನು ಕೊಡಿರಿ, ಆ ಶಿಕ್ಷಣವನ್ನು ಕೊಡಿರಿ, ನಮಗೆ ಆರೋಗ್ಯ ರಕ್ಷಣೆಯನ್ನು ಕೊಡಿರಿ, ಬಟ್ಟೆಯನ್ನು ಕೊಡಿರಿ ಭೂಮಿಯನ್ನು ಕೊಡಿರಿ, ಅದನ್ನು ಕೊಡಿರಿ, ಇದನ್ನು ಕೊಡಿರಿ, ತುದಿಯಲ್ಲಿ ಈ ಮಾದರಿಯ ಆ ನೇಮಗಳಿಗೆ ಒಳಗಾದ ಈ ವಿಧದ ಆ ವಿಧದ ಸ್ವರಾಜ್ಯವನ್ನು ಮೆಲ್ಲಮೆಲ್ಲನೆ ದಯಮಾಡಿ ಕೊಡಿರಿ,-- ಎಂದು ಅನಂತ ಹಸ್ತಗಳುಳ್ಳ, ಅನಂತ ಮುಖಗಳುಳ್ಳ, ಕಲ್ಪಿತ ದೇವರಂತೆ ಇರುವ ಸರಕಾರದ ಕೂಡ ನಮ್ಮ ಮಾಯಾಭ್ರಮದೊಳಗೆ ನಮ್ಮ ಎರಡು ಕೈಗಳಿಂದ, ಒಂದು ಮುಖದಿಂದ, ಪ್ರತಿಸಾಲುವರ್ಷ ನಾವು ಯಾಚನೆಗಳನ್ನು ಮಾಡುತ್ತಿದ್ದೆವು. ಒಟ್ಟಿಗೆ, ನಾವು ಪರಿಪೂರ್ಣವಾಗಿ ನಿರ್ಬಲರಾಗಿದ್ದೇವೆಂದು ನೆನಿಸಿ, ಕೇವಲ ಬಹಿರ್ಮುಖಿ ನೋಟದಿಂದ ಭಿಕ್ಷುಕರಂತೆ, ಪರರ ಕೂಡ ಬೇಡಿಕೆಗಳನ್ನು ಮಾಡುತ್ತಲೇ ಇದ್ದೆವು. ಒಂದು ತುಣುಕನ್ನು ಅನಿವಾರ್ಯವಾಗಿ, ಮೊಗದಮೇಲೆ ಒಗೆದ ಕೂಡಲೇ, ಬಹುಸಂತುಷ್ಟರಾಗಿ ಕುಣಿಯುತ್ತಿದ್ದೆವು. "ಬಹ್ವಾಶೀರಲ್ಪಸಂತುಷ್ಟಃ' ಎಂದು ಹೇಳುವ ಶ್ವವೃತ್ತಿಯು ನಮ್ಮದಾಗಿತ್ತೆಂದು ಹೇಳಿದರೆ ಅತಿಶಯೋಕ್ತಿಯಾಗದು, ಈಗಿನ ದಿವಸಗಳಲ್ಲಿ ಇಂದಿನ ರಾಷ್ಟ್ರೀಯ ಸಭೆಯು ಎಂಥ ನಿರ್ಣಯಗಳನ್ನು ಏರ್ಪಡಿಸುತ್ತದೆ ನೋಡಿರಿ! ಈಗಿನ ನಿರ್ಣಯಗಳಲ್ಲಿ ಪರಾವಲಂಬಿತನದ ಲೇಶವಾದರೂ ಹುಡುಕಿದರೆ, ಸಿಗುವದೇನು? ನಾವು ಇದನ್ನು ಮಾಡಬೇಕು, ಅದನ್ನು ನೆರವೇರಿಸಬೇಕು ಮತ್ತು ಇಷ್ಟವನ್ನು ಸ್ವಪ್ರಯತ್ನದಿಂದಲೇ ಪಡೆಯಬೇಕು. ಒಟ್ಟಿಗೆ ನಮಗೆ ಬೇಕಾದದ್ದನ್ನು ನಾವು ಗಳಿಸಬೇಕು. ಯಾರ ಕೂಡ ನಮ್ಮ ಯಾಚನೆ ಇಲ್ಲ. ಇದರ ಮೇಲಿಂದ ಮೊದಲು ಕೇವಲ ಪರಾವಲಂಬಿಯಾಗಿ, ಯಾಚನೆಗೊಂಡು ಬಹಿರ್ಮುಖವಾದ ರಾಷ್ಟ್ರವು ಈಗ ಸ್ವಾವಲಂಬಿಯಾಗಿ, ಆತ್ಮೋದ್ಧಾರಕ್ಕಂದು, ಅಂತರ್ಮುಖವಾಗಿದೆಂದು ಕಂಡುಬರುವದಿಲ್ಲವೇ? ಆತ್ಮಿಕ ಶಕ್ತಿಯ ಬ[illegible] ಏಳಿಗೆಯನ್ನು ಬೇಗನೆ ಸಾ[illegible], ಸತ್ಯ[illegible]ರಮಾಡಿದ ಜನಾಂಗದ ಆಕಾಂಕ್ಷೆಗಳು ಫಲಿಸದೆ, ಹ್ಯಾಗಿರುವವು? ಒಂದ ಜನಾಂಗದ ಏಳಿಗೆಯನ್ನೂ, ಸ್ವಾಯತ್ತತೆಯನ್ನೂ ನಿರ್ಬಂಧಿಸುವದು ಯಾರಿಗೂ ಸಾಧ್ಯವಿಲ್ಲ. ಮಹಾತ್ಮಾ ಗಾಂಧಿಗಳ ಕೈಕೆಳಗಿನ ಹಿಂದೀ ಜನತೆಯು ಅಸತ್ಯಾಚಾರಿ ಅಸಹಯೋಗದಿಂದ ಇಷ್ಟವನ್ನು ಸಾಧಿಸಿ, ಭರತಖಂಡವನ್ನು ವಿಮೋಚಿಸುವದಷ್ಟೇ ಅಲ್ಲ, ಹಿಂಸಾಪರವಾದ ಜಗತ್ತಿನೊಳಗಿನ ಎಲ್ಲ ಜನಾಂಗಗಳನ್ನು ಯುದ್ಧದಂಥ ಮಹಾಸಂಕಟಗಳಿಂದ ರಕ್ಷಿಸುವದು, ತೋಫುಖಾನೆಗಳಿಂದ, ಶಸ್ತ್ರಾಸ್ತ್ರಗಳಿಂದ ರಕ್ಷಿಸಲಿಕ್ಕಾಗದ ಜಗತ್ತಿನ ಶಾಂತತೆಯನ್ನು ಆತ್ಮಿಕ ಶಕ್ತಿಯ ಸುಲಭ ಸಾಧನದಿಂದ ಸಂಪಾದಿಸುವದು ಮತ್ತು ಜಗತ್ತನ್ನು ನಿಜವಾಗಿ ಸುಧಾರಿಸುವದು, ಎಂಬುದೊಂದು ಇತಿಹಾಸಜ್ಞರ ಭವಿಷ್ಯವಾದಿ ನೋಡುವಷ್ಟು ಈಕ[illegible]ಯಿಂದ [illegible] ಸಫಲವಾಗುತ್ತದೆಂದು? ಒಂದೆರಡು ವರ್ಷದೊಳಗೆ ಈ ಭವಿಷ್ಯದ ಪ್ರತ್ಯಯವು ಲೋಕಕ್ಕೆ ಬಂದೇ ಬರುವದು. ಅಷ್ಟರ ತನಕ, ಮಹಾತ್ಮರು ತೋರಿಸಿದ ಆತ್ಮದಂಡನೆಯ ದಾರಿಯಿಂದ ನಾವು ಅವರನ್ನು ವಿಶ್ವಾಸಪೂರ್ವಕವಾಗಿ ಹಿಂಬಾಲಿಸುತ್ತಿರುವಾಗ ನಮ್ಮ ಹಳೇ-ಹೊಸ ರಾಷ್ಟ್ರೀಯ ಸಾಧ್ಯಸಾಧನೆಗಳ ಭೇದವನ್ನು ಸೂಕ್ಷ್ಮವಾಗಿ ಅರಿತುಕೊಳ್ಳುವದು ಇದಕ್ಕಾಗಿ ಅವಶ್ಯಕವಾಗಿದೆ.

ಅಹಮ್ಮದಾಬಾದ ರಾಷ್ಟ್ರೀಯ ಸಭೆಯ ವೃತ್ತಾಂತವನ್ನು ಬೇರೊಂದು ಕಡೆ ವಿಹಂಗಮ ದೃಷ್ಟಿಯಿಂದ ಸಮಾಲೋಚಿಸಿದ್ದೇವೆ. ಮಹಾಸಭೆಯೊಳಗಾದ ನಿರ್ಣಯಗಳಿಂದ ರಾಷ್ಟ್ರವು ಸ್ವಾವಲಂಬನದ ತತ್ವಾನುರೋಧದಿಂದ ಅಸಹಕಾರಿತೆಯ ಶಾಂತತೆಯ ಯುದ್ಧಕ್ಕೆ ಪರಿಪೂರ್ಣ ಸಿದ್ಧತೆಯನ್ನು ಮಾಡತಕ್ಕದ್ದೆಂದು ನಾವು ಕಂಡುಹಿಡಿಯಬೇಕಾಗಿದೆ. ರಾಷ್ಟ್ರದ ಸ್ವಾತಂತ್ರ್ಯತೆಯ ಇತಿಹಾಸದಲ್ಲಿ ಈಗಿನ ಕಾಲವು ಅತಿಶಯ ಬಿಕ್ಕಟ್ಟಿನದಾಗಿದೆ, ಗಹನವಾಗಿದೆ. ಸ್ವಯಂಸೇವಕರ ಸಂಘಗಳನ್ನು ನಿರ್ಮಿಸುವದೂ, ಕಾರ್ಯಕಾರಿ ಕಮಿಟಿಯು ಪ್ರಕಟಿಸಿದ ನೇಮಗಳಿಗೆ ಒಳಗಾಗಿ ಕಾಯಿದೆ ಭಂಗವನ್ನು ಮಾಡುವದೂ, ಇವೆರಡೇ ಕಾರ್ಯಕ್ರಮಗಳ ಮೇಲೆ ಕಾಂಗ್ರೆಸ ಕಮಿಟಿಗಳು ತಮ್ಮ ಎಲ್ಲ ಕರ್ತವ್ಯಶಕ್ತಿಯನ್ನು ಇನ್ನು ಮುಂದೆ ವೆಚ್ಚಬೇಕೆಂದು ಹೇಳುವದೇ ಇದರ ತಾತ್ಪರ್ಯವು. ಇದರ ಮೇಲಿಂದ ಹಿಂದುಸ್ಥಾನದ ರಾಜಕೀಯ ಪರಿಸ್ಥಿತಿಯು ಅಯರ್ಲಂಡದ ಸ್ಥಿತಿಗೆ ಸರಿ[illegible]ವಂತೆ ಎಷ್ಟು ತೀಕ್ಷ್ಣವಾಗುತ್ತ ನಡೆದದೆಂದು ನಿಜವಾಗಿ ಕಂಡುಬರುವದು. ಮೊದಲಿನ ಅಯರ್ಲಂಡದೊಳ

ಅಹಮದಾಬಾದ ಕೊಂಗ್ರೆಸ್ಸಿನ ಅಧ್ಯಕ್ಷ

ಹಕೀಮ ಅಜಮಲಖಾನ (ಡಿಲ್ಲಿ.)

ಈಗಿನ ಹಿಂದುಸ್ಥಾನದೊಳಗೂ ಸ್ಪಷ್ಟ ದ ಭೇದವಿದ್ದರೆ, ಅದು ನಮ್ಮ ಅನತ್ಯಾಚಾ ಕನದಲ್ಲಿದೆ. ಇಂದ ಅತಿ ವ್ಯಾಪಕ ರಾಜಕೀ ಸ್ವಾತಂತ್ರ್ಯದ ಹೋರಾಟದಲ್ಲಿ ಅಹಿಂಸೆಯ ತ್ವವನ್ನು ಕಾಪಾಡಿ ನಾವು ವಿಜಯಿಯಾಗಲು ಗತ್ತಿನ ಇತಿಹಾಸದಲ್ಲಿ ಸ್ವಾಯತ್ತ ಭರತಖಂ ವು ಅಜರಾಮರವಾಗುವದು, ಮತ್ತು ಲೋಕ ಲ್ಲಿ ಆದರ್ಶವಾಗುವದು

* * *

ಸ್ಫುಟ ಸೂಚನೆಗಳು.

೧ ರಾಷ್ಟ್ರೀಯ ಚಳವಳಿಯ ಈ ವರ್ಷದ ಸಪ್ತಾ ಹ ಬಹಳೇ ಉತ್ಸಾಹದಿಂದ ಕೊನೆಗಂಡಿತು. ಹಕೀ ಅಜಮಲಖಾನ ಮಹಾಶಯರ ಅಧ್ಯಕ್ಷತೆಯೊಳ ರಾಷ್ಟ್ರೀಯ ಸಭೆಯು ನೆರೆದಂತೆ, ರಾಷ್ಟ್ರೀಯ ಸಾ ಮಾಜಿಕ ಪರಿಷತ್ತು ಶ್ರೀಯುತ ನಟರಾಜನ್ ಇವರ ಧ್ಯಕ್ಷತೆಯಲ್ಲಿ ಸಾಂಗ್ಯವಾಗಿ ನಡೆಯಿತು. ಅಖಿಲ ರತೀಯ ವಿದ್ಯಾರ್ಥಿಗಳ ಪರಿಷತ್ತು ಶ್ರೀಮತಿ ಸರೋ ನ್ಯುಡು ಅಮ್ಮನವರ ಅಧಿಪತ್ಯದೊಳಗೆ ಬಲು ಸಂಭ್ರಮದಿಂದ ಜರುಗಿತು. ಮೊಸ್ಲಿಮ ಲೀಗದ ವೇಶನವು ಪರಮಪ್ರಸಿದ್ಧ ಸ್ವಾತಂತ್ರ್ಯವಾದಿ ಹ ತ ಮೋಹಾನಿಗಳೆಂಬ ಮಹಮ್ಮದ ಮುಖಂಡರ ಕ್ಷತ್ವದ ಕೆಳಗೆ ನೆರವೇರಿತು ಹೀಗೆಲ್ಲ ರಾಷ್ಟ್ರಕಾ ರ್ಯಾಂಗಗಳ ವಳಿಗೆಯನ್ನು ಸಾಧಿಸಲು ಜನತೆಯು ಸ್ವಾವಲಂಬನದ ದಾರಿಯನ್ನು ನಿಶ್ಚ ಕೊಂಡಿದೆ ಈಗಿನ ಕಾಲವು ನಮ್ಮ ದೇಶಕ್ಕೆ ರ್ಣವಾಗಿ ಉತ್ಕ್ರಾಂತಿಕರವಾಗಿದೆ. ಸಾಧ್ಯವನ್ನು ಕೈಗೂಡಿಸಲು ತಕ್ಕ ಸಾಧನಗಳ ಯೋಜನೆಯನ್ನು ಮಾಡುವಾಗ ನಾಯಕರಿಂದಾಗಲಿ, ಅನುಯಾಯಿಗಳಿಂದಾಗಲಿ, ಅಲ್ಪ ಸಹ ತಪ್ಪಾದರೆ, ಇಡೀ ನಮ್ಮ ಭವಿಷ್ಯವು ಕೆಟ್ಟು ಹೋಗುವದೆಂಬ ಅರಿವು ಅಹಮದಾಬಾದದೊಳಗೆ ನೆರೆದ ಎಲ್ಲ ಪರಿಷತ್ತುಗಳ ಕಾರ್ಯಕರ್ತರಲ್ಲಿ ಸ್ಪಷ್ಟವಾಗಿ ಉಂಟಾಗಿದೆಂದು ಅವುಗಳ ಫಲಿತವೇ ಹೇಳುತ್ತದೆ. ಎಲ್ಲ ಪರಿಷತ್ತುಗಳ ಕಾರ್ಯಕ್ರಮವು ಯಶಸ್ವಿಯಾಗಲೆಂದು ಮನಃಪೂರ್ವಕವಾಗಿ ಹಾರೈಸುವೆವು

---

೨. ಮುಂಬಯಿಯೊಳಗಿನ ನಮ್ಮ ಕರ್ನಾಟಕಸ್ಥ ಬಾಂಧವರು ಕರ್ನಾಟಕದಲ್ಲಿ ಕಾಂಗ್ರೆಸಿನ ಕಾರ್ಯವನ್ನು ಪ್ರಚಾರಿಸಲು ಕರ್ನಾಟಕ ಪ್ರಾಂತದೊಳಗಿನ ಎಲ್ಲ ಕಾಂಗ್ರೆಸ ಕಮಿಟಿಗಳಿಗೆ ತಮ್ಮಿಂದಾದ ಸಹಾಯವನ್ನು ಮಾಡುವ ಸದುದ್ದೇಶದಿಂದ ಅಖಿಲ ಕರ್ನಾಟಕ ಸಂಘವನ್ನು ಸ್ಥಾಪಿಸಿದ್ದನ್ನು ನೋಡಿ ಹರುಷಪಡುವೆವು. ಮತ್ತು ಅದರ ಉತ್ಪಾದಕರನ್ನು ಹೃತ್ಪೂರ್ವಕವಾಗಿ ಅಭಿನಂದಿಸುವೆವು. ದೇ|| ಭ|| ರಾಮರಾವ ಪಡಬಿದ್ರಿಗಳಂಥ ಅಧ್ಯಕ್ಷರು ಮತ್ತು ದೇ|| ಭ|| ರಾಮಚಂದ್ರ ಪ್ರಭುಗಳಂಥ ಉಪಾಧ್ಯಕ್ಷರು ಉತ್ಸಾಹಿ ಎಳೆ ಮುಂದಾಳುಗಳ ಕಾರ್ಯಕಾರಿ ಕಮಿಟಿಯೊಂದಿಗೆ ಈ ಸಂಘವನ್ನು ಏರ್ಪಡಿಸಿದಾಗ ಅದು ಪರಿಪೂರ್ಣವಾಗಿ ಯಶಸ್ವಿಯಾಗುವದೆಂದು ನಾವು ಹೇಳಬೇಕೇನು ? ಮುಂಬಯಿಯೊಳಗಿನ ಎಲ್ಲ ಕರ್ನಾಟಕಸ್ಥ ನಾಗರಿಕರು ಸಂಘದ ಸಭಾಸದರಾಗಿ ಅದರ ಉದ್ದೇಶವನ್ನು ಕೊನೆಗಾಣಿಸಲು ಹುಮ್ಮನಸ್ಸಿನಿಂದ ನೆರವಾಗುವರೆಂದು ತುಂಬಾ ಕೋರುವೆವು. ಏಕಾದರೂ ಕರ್ನಾಟಕದಂಥ ಹಿಂದುಳಿದ ಪ್ರಾಂತಕ್ಕೆ ಇಂಥ ಸಂಘದ ಚಾಲಕತ್ವವು ಪರಸ್ಪರ ಸಹಕಾರಿತೆಯುಳ್ಳ ಅತೀವ ಲಾಭಕರವಾಗುವದೆಂದು ನಮ್ಮ ನಂಬುಗೆ. ಮುಂಬಯಿಯಂಥ ಮುಂದರಿದ ಲೋಕಸಮೂಹ ವಾತಾವರಣದೊಳಗಿನ ಕರ್ನಾಟಕಸ್ಥರ ಮಾರ್ಗದರ್ಶಕತ್ವವು ಈಗಿನ ದೇಶಕಾರ್ಯದಲ್ಲಿ ಕೆಲ ಮಟ್ಟಿಗೆ ಅತ್ಯವಶ್ಯಕವಾಗಿದೆ ಸುಖವು ಮಾಡುತ್ತಿರುವ ತಮ್ಮ ಬಾಂಧವರ ಸೇವೆಗಾಗಿ ಕರ್ನಾಟಕವು ಅವರಿಗೆ ನಿರಂತರ ಋಣಿಯಾಗುವದು.

---

೩. ಕಾರವಾರದ ದೇಶಭಕ್ತ ಗಣಪತರಾವ ನಾಡಕರ್ಣಿ ಇವರು ಅಳರಸರ ದಬ್ಬಾಳಿಕೆಯ ನಿಷೇಧಕ್ಕಾಗಿ ಪರಸ್ಪರ ಸಹಕಾರಿ ಸಂಘದ ಮ್ಯಾನೇಜರೀ ಹುದ್ದೆಯನ್ನು ರಾಜಿಯಾಗಿ ತ್ಯಜಿಸಿದರೆಂದು ಅವರಿಗೆ ಮನಃಪೂರ್ವಕವಾಗಿ ಅಭಿನಂದಿಸುವೆವು ಶ್ರೀಯುತ ನಾಡಕರ್ಣಿಯವರು ಮೊದಲಿನಿಂದ ಸ್ವಾರ್ಥತ್ಯಾಗ ಪೂರ್ವಕವಾಗಿ ಸದಾಶಿವಗಡ (ಕಾರವಾರ) ದಲ್ಲಿ ಶಿಕ್ಷಕವೃತ್ತಿಯನ್ನು ಸ್ವೀಕರಿಸಿ, ಒಂದು ಇಂಗ್ರಜಿ ಶಾಲೆಯನ್ನು ಬಹು ಕಾಲದಿಂದ ನಡಿಸುತ್ತಿದ್ದರು. ಕೊಂಗ್ರೆಸ ಕಾರ್ಯಕ್ರಮವನ್ನು ಮನ್ನಿಸಿ ಅಸಹಕಾರಿ ಚಳವಳಿಯನ್ನು ನಡಿಸಬೇಕೆಂದು ಅವರು ತಮ್ಮ ಶಿಕ್ಷಕವೃತ್ತಿಯನ್ನು ತ್ಯಜಿಸಿ, ಕಾರವಾರ ಕೊಂಗ್ರೆಸ ಕಮಿಟಿಯ ಸಭಾಸದರಾಗಿ ಅದರ ಉಪಾಧ್ಯಕ್ಷರಾಗುವ ಪದವಿಯನ್ನು ಪಡೆದಿರುವರು ಇಂಥ ತರುಣ ಮತ್ತು ಉತ್ಸಾಹಿ ಚಾಲಕರು ಸ್ವಾರ್ಥತ್ಯಾಗಪೂರ್ವಕವಾಗಿ ದೇಶಸೇವೆಯ ವ್ರತವನ್ನು ಅಂಗೀಕರಿಸಿ, ನಡೆಯುತ್ತಿದ್ದದ್ದು ಅವರಿಗೂ ಭೂಷಣಾವಹವು, ದೇಶಕಾರ್ಯಕ್ಕೂ ಲಾಭಕರವು. ಶ್ರೀಯುತ ನಾಡಕರ್ಣಿಗಳು ತಮ್ಮ [illegible]ಶಸೇವೆಯನ್ನು ಇನ್ನಷ್ಟು ಉತ್ಸಾಹದಿಂದ ಸಾಗಿಸಲು ಅವರಿಗೆ ದೇಶಮಾತೆಯ ಪ್ರೇರಣೆಯಾಗಲೆಂದು ಬಯಸುವೆವು.

* * *

ಸ್ಥಾನಿಕ ವೃತ್ತಾಂತ.

ಕುಮಟಾ— ಚಳಿಯು ಬೀಳುತ್ತಿದೆ ಕಳೆದ ಶನಿವಾರ ರಾತ್ರೆ ಚಲೋ ಮಳೆಯು ಬಿತ್ತು ಇದರಿಂದ ರಯತರಿಗೂ, ವ್ಯಾಪಾರಸ್ಥರಿಗೂ ಬಹಳೇ ಲುಕ್ಸಾನು ಆಯಿತು

ಇಲ್ಲಿಯ ಶಾಲಾ ಇನ್‌ಸ್ಪೆಕ್ಷನ ಮಾಡುವರೆ ಎಜ್ಯುಕೇಶನಲ ಇನ್‌ಸ್ಪೆಕ್ಟರ ಮಿ| ಚಂದಾವರ ಇವರು ಇಲ್ಲಿ ಬಂದಿರುವರು. ಗಿಬ್ಬ ಹ್ಯಾಸ್ಕೂಲಿನ ತಪಾಸಣೆಯ ಕೆಲಸವಾಗಿ, ಶಾಲೆಯ ಸ್ಥಿತಿಯನ್ನು ನೋಡಿ ಇವರು ಉತ್ತಮ ಅಭಿಪ್ರಾಯಪಟ್ಟರಂತೆ.

ಮೆಡಿಕಲ್ ಇನ್‌ಸ್ಪೆಕ್ಟರ ಡಾ| ಪಾಲೀಹಾಲ ಇವರು ವಿದ್ಯಾರ್ಥಿಗಳ ಆರೋಗ್ಯ ತಪಾಸಣೆಯ ಸಲುವಾಗಿ ಇಲ್ಲಿಗೆ ಬಂದಿರುವರು. ಇದೊಂದು ಹೊಸದಾದ ಸ್ತುತ್ಯ ಉಪಕ್ರಮವು.

ಗಿಬ್ಬ ಹ್ಯಾಸ್ಕೂಲಿನ ಸದ್ಯಕ್ಕೆ ಡಿಸ್ಮಿಸ ಮಾಡಿದ ೬ ವಿದ್ಯಾರ್ಥಿಗಳ ವಿಷಯವಾಗಿ, ಅವರು ಈಗ ಪಶ್ಚಾತ್ತಾಪಪೂರ್ವಕವಾಗಿ ಇನ್ನು ಪ್ರಚಲಿತ ರಾಜಕಾರಣದಲ್ಲಿ ಕೈಹಾಕಲಾರೆವೆಂದು ಲೇಖಿ ಆಶ್ವಾಸನೆ ಕೊಟ್ಟಲ್ಲಿ ಅವರನ್ನು ಪುನಃ ಶಾಲೆಯಲ್ಲಿ ಸೇರಿಸಿಕೊಳ್ಳುವೆವೆಂದು ಶಾಲಾಧಿಕಾರಿಗಳು ಲೇಖಿ ನೋಟೀಸು ತೆಗೆದಿರುವರು.

ಕಳೆದ ವಾರದಲ್ಲಿ ಈ ಊರಿನ ಮುಷ್ಟಿಫಂಡಿಗೆ ಅಂತು ರೂ. ೬೪-೧೧-೬ ಜಮಾ ಆಗಿರುವದು. ಹೊರತು ಮ|| ಗಾಂಧಿ ಕಾಣಿಗೆ ಫಂಡಿಗೆ ೨-೧೧-೦

೩೬ನೇ ಕಾಂಗ್ರೆಸ್ಸಿನ ನಿಯೋಜಿತ ಅಧ್ಯಕ್ಷ

ದೇಶಬಂಧು ಚಿತ್ತರಂಜನದಾಸ (ಕಲಕತ್ತಾ)

ದೇಶಬಂಧುಗಳ ಸಹಧರ್ಮಚಾರಿಣೀ

ಶ್ರೀಮತೀ ವಸಂತೀ ದೇವೀ

ಕೂಡಿರುವದು ಇದಲ್ಲದೆ ಬಾಡ ಗ್ರಾಮದಲ್ಲಿ ಶ್ರೀ ವೈಕುಂಠ ನಾರಾಯಣ ನಾಯ್ಕರು ಕೂಡಿಸಿದ ಅಕ್ಕಿಯ ಉತ್ಪನ್ನದ ರೂ ೩೦೦ ಕುಮಟಾ ತಾಲೂಕ ಕೊಂಗ್ರೆಸ ಕಮಿಟಿಯ ಮುಷ್ಟಿಫಂಡಿನ ಖಾತೆಗೆ ಜಮಾ ಬಂದಿರುವದು

ಗೋಕರ್ಣ— ಇಲ್ಲಿ ಕಳೆದ ವಾರದಲ್ಲಿ ನಮ್ಮ ಕೊಂಗ್ರೆಸ ಸ್ವರಾಜ್ಯ ಸಿದ್ಧಿಯ ಸಂಬಂಧ ಶ್ರೀ ಮಹಾಬಳೇಶ್ವರ ದೇವಸ್ಥಾನದಲ್ಲಿ ನಿತ್ಯ ಶತರುದ್ರ ಪೂಜಾ ಹಾಗು ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಭಜನೆ ಸಪ್ತಾಹ ಬಹು ವಿಜೃಂಭಣೆಯಿಂದ ನಡೆಯಿತು ಮಿ। ಚಿತ್ರಿಗಿ ಮೊದಲಾದವರ ರಾಜಕೀಯ ವಿಷಯಾಂತರ್ಗತ ಕೀರ್ತನೆಗಳು ನಡೆದವು ಸ್ತುತ್ಯ

ಕಳೆದ ವರ್ಷದ ಹಂಗಾಮಿ ಮುನಿಸಿಪಾಲಿಟಿಯು ವಿಧಾಯಿಸಿದ ಹೊಸ ಮನೆತೆರಿಗೆಯ ವಸೂಲಿಯನ್ನು ಸಕ್ತಿಯಿಂದ ಮಾಡುವ ಕ್ರಮವು ಈಗ ನಡೆದದೆ [illegible] ೨೦-೩೧ ಪ್ರವಾಸಿ ಮನೆಯ ಮಾಲೀಕರಿಗೆ ಜಪ್ತಿ ವಾರಂಟ ಹೊರಟಿರುವಂತೆ ಬ ಪ್ಯಕಿ ಈ ಜೊತ್ತು ಬಗ್ಗೆ ಎರಡು ಮನೆಯ ಮಾಲೀಕರಿಗೆ ವಾರಂಟು ಜಾರಿ ಆಗಿ, ಸಾಮಾನ ಜಪ್ತಮಾಡಿ ಒಯ್ದಿರುತ್ತಾರೆ ಸದ್ರಿ ಜಪ್ತಾದ ಸಾಮಾನು ಒಯ್ಯುವಾಗ ಹೂರ ಕಾಲಿ ಆಳ ಸಿಗಲಿಲ್ಲವಂತೆ ಇದ್ದಾದರೂ ಇಲ್ಲಿಯ ನಿವಾಸಿಕರು ಬಂದ ಆಪತ್ತಿಗೆ ಶಾಂತರೀತಿಯಿಂದಲೂ ಧೈರ್ಯದಿಂದಲೂ ಎದೆ ಗಾಗಿ [illegible] ಬಹು ಸ್ತುತ್ಯವು ಈ ವಿಷಯದ ದರ್ಬಾರಿಗೆ ಚರ್ಚೆ ಮಾಡುವರೆ, ನಾಳೆ ಇಲ್ಲಿಯ ಮುಖ್ಯ [illegible] ಜನರಲ ವಿಚಾರ ಆಗುವದುಂಟು ಸದ್ರಿ ವಿಚಾರಗಳಲ್ಲಿ ಈ ಹೊಸ ಮನೆ ತೆರಿಗೆಯ ಆದ್ದರಿಂದ [illegible] ಬಹುತೇಕ ಪಟ್ಟಣದ ಮೆಂಬರರು ವ ಕೌನ್ಸಿಲರಗಳು [illegible] ರಾಜೀನಾಮೆ ಕೊಡುವವರಿದ್ದಾರೆಂದು ಊರಲ್ಲಿ ಸುದ್ದಿ ಇದೆ ಎಂಟು

ಸಿದ್ದಾಪುರ— ಇಲ್ಲಿಯ ಸ್ವಯಂಸೇವಕ ಪಥಕದವರು ವ ರಾಷ್ಟ್ರೀಯ ಶಾಲೆ ಹುಡುಗರು ಪ್ರತಿ ದಿವಸ ಮಧ್ಯಾಹ್ನ ೫ ಘಂಟೆಗೆ ಡ್ರಿಲ್ ವಗೈರೆ ಕಸರತ್ತು ಕಲಿಯುವ ಕಾರ್ಯ ಮಾಡ [illegible] ಕ್ರಮ ನಡೆದದೆ ಈ ತಾಲೂಕಿನ ಬಹಳ ಗಟ್ಟಿ ಮೊತ್ತ ಮನೆ ಬಂಬಾಳೊಂದಲ್ಲಿ ಸಹ ಸ್ವಯಂಸೇವಕ [illegible] ಕಗಳು ತಯಾರಾಗಿದ್ದಾವೆಂತ ತಿಳಿಯುತ್ತದೆ

ಇಲ್ಲಿಯ ರಾಷ್ಟ್ರೀಯ ಶಾಲೆ ಇಷ್ಟರಲ್ಲಿ ಹೊಸದಾಗಿ ಕಟ್ಟಿಸುವರೆ ಶುರುವಾಗಿದ್ದಾರೆ ಇದರ ಖರ್ಚಿನ ಬಗ್ಗೆ ಹಳ್ಳಿಗಳಲ್ಲಿ ಅಡಕೆ ಸಂಭಾವನೆ ಶುರು ಆಗಿ ಇದು ವರೆಗೆ ಸುಮಾರು ೧॥ ಖಂಡಿ ಅಡಕೆ (೩೦ ಮಣ) ಸ್ವಯಂಸೇವಕರು ಜಮಾಯಿಸಿದ್ದಾರೆ ಮತ್ತು ಈ ಬಗ್ಗೆ ಸ್ವಯಂಸೇವಕರು ಹಳ್ಳಿಗಳಲ್ಲಿ ತಿರುಗುತ್ತ ಇದ್ದಾರೆ ಅಡಿಕೆ ಬೆಳೆಸಿದವರು ಖಂಡಿ ೧ ಕ್ಕೆ (೨೦ ಮಣ) ೩ ಶೇರ ಪ್ರಕಾರ ಈ ಸಂಭಾವನೆ ಕೊಡುತ್ತಾರೆ ಹಳ್ಳಿಗಳಲ್ಲಿ ನಿರುಪಯೋಗ ಸಂಭಾವನೆಯನ್ನು ಪೂರ್ಣ ವರ್ಜ ಮಾಡಿದ್ದಾರೆ

ಇಲ್ಲಿ ಅಸಹಕಾರಿತೆ ಚಳವಳಿ ಮತ್ತು ರಿಬಡಿಸಾ ವ ಸಾಮ್ಯಂಥವರೋ ಏನೋ [illegible] ಹೇಬರು ಇಲ್ಲಿಯ ಮಾಮಲೇದಾರ ಸಾಹೇಬರಿಗೆ ೧ ನೇ ವರ್ಗ ಮೇಜಿಸ್ಟ್ರೇಟರ ಅಧಿಕಾರ ಕೊಟ್ಟದ್ದಾಗಿ ತಿಳಿಯುತ್ತದೆ

ಸಿರ್ಸಿ— ನಮ್ಮ ೩೧ ಕ ೨೧ ನೇ ತಾರೀಕಿನ ೪೯ ನೇ ಸಂಚಿಕೆಯ ೬ ನೇ ಪಾನದ ಸಿರಸಿ ಸ್ಥಾನಿಕ ವೃತ್ತಾಂತದಲ್ಲಿ ಡಾ। ನಾಗಪ್ಪಾ ಸುಬ್ರಾಯ ವೈದ್ಯ ಇವರ ಬಗ್ಗೆ ಪ್ರಕಟಿಸಲ್ಪಟ್ಟ ರಾಜಸ್ನಿಷ್ಠ ತೀರ ನಿಂದಾರ್ಹವದೆಂದು ಅವರು ನಮ್ಮ ಕಡೆಗೆ ನಡೆಸಿದ ಪತ್ರವ್ಯವಹಾರದ ಮೂಲಕ ನಮಗೆ ತಿಳಿದುಬಂದದ್ದರಿಂದ ಮಹಾತ್ಮಾ ಗಾಂಧಿಗಳಿಗೆ ಸ್ಮರಿಸಿ, ಅವರು ನಮಗೆ ಸತ್ಯವನ್ನು ತಿಳಿಸಿದ್ದಾರೆಂದು ನಂಬಿ ನವರಿ ನಾಗಪ್ಪಾ ವೈದ್ಯರಿಗೆ ವೃಥಾ ಅನ್ಯಾಯವಾಗಿದೆಂದು ನಮ್ಮ ಮನಃಪೂರ್ವಕ ವಿಷಾದವನ್ನು ಪ್ರಕಟಿಸುವೆವು ಮತ್ತು ಆ ದುಷ್ಕರ್ಮದೊಳಗಿನ ಒಳಗಿಂದೊಳಗೆ ನಡೆದ ನ್ಯಾಯಾಂಕ್ಕೆ ಸದರಿ ನಾಗಪ್ಪಾ ವೈದ್ಯರ ಏನೂ ಸಂಬಂಧ ಇದ್ದಿಲ್ಲೆಂದು ಈಗ ಜಾಹೀರಪಡಿಸುತ್ತೇವೆ

ಸಂಪಾದಕ ಕಾ ವೃ]

ಹೊನ್ನಾವರ— ಇಲ್ಲಿಂದ ಅಹಮದಾಬಾದ ಕೊಂಗ್ರೆಸಕ್ಕೆ ಹೋದ ದೇಶಭಕ್ತ ಕರ್ಕಿ, ನಾಡಕರ್ಣಿ ವಗೈರೆ ಮಂಡಳಿಯು ನಿನ್ನೆ ಬೋಟಿಯಿಂದ ಬಂದರು ಅವರಿಗೆ ಬಂದರದಿಂದ ಕರೆತರುವರೆ ಇಲ್ಲಿಯ ನಾಗರಿಕರು ಹೋಗಿ ವಾದ್ಯ ವಗೈರೆದಿಂದಾ ಕರೆತಂದರು ಸಭೆಯ ಸಂದೇಶವನ್ನು ತಿಳಿಸಿ ಹೇಳುವರೆ ಈ ಹೊತ್ತು ಮಧ್ಯಾಹ್ನ ೩ ಘಂಟೆಗೆ ಟಪ್ಪರ ಹೋಲಿನಲ್ಲಿ ಸಭೆ ಇಟ್ಟಿರುತ್ತಾರೆ

ಇಲ್ಲಿಯ ಪೋಸ್ಟ ಮಾಸ್ತರ ಕರ್ಮಾಂತಿಕ ಇವರು ಮೊನ್ನೆ ರಾತ್ರಿ ಹೃದ್ರೋಗದ ಉಪಟಳದಿಂದ ಆಕಸ್ಮಿಕವಾಗಿ ದೈವಾಧೀನರಾದರೆಂದು ತಿಳಿಸಲು ವಿಷಾದವಾಗುತ್ತದೆ ಇವರು ಶಾಂತ ಸ್ವಭಾವದವರಿದ್ದು ಬಹಳ ದಿವಸದಿಂದ ಇಲ್ಲಿ ಪೋಸ್ಟ ಆಫೀಸಿನ ಕೆಲಸ ಮಾಡಿ ಇಲ್ಲಿಯ ಜನರಲ್ಲಿ ಒಳ್ಳೇ ಪ್ರೀತಿ ಸಂಪಾದಿಸಿಕೊಂಡಿದ್ದರು

ಇತ್ತಲಾಗಿ ಇಲ್ಲಿಯ ಮುಷ್ಟಿ ಫಂಡು ವಸೂಲ ಮಾಡುವ ಸ್ವಯಂಸೇವಕರ ಕೊರತೆಯಿಂದಲೋ, ಸರಕಾರಿ ನವ್ಕರರು ಕೊಡಿದಿದ್ದರಿಂದಲೋ ಏನೋ ವಾರಕ್ಕೆ ೩೦ ೩೫ ರೂಪಾ ಆಗುವದು ಈ ಆರಮಾಡಿಗೆ ೧೮ ೬ ೧೦ ಆಗಿ ಅದೆ ಕಾರಣ ಈ ಫಂಡಿನ ವ್ಯವಸ್ಥಾಪಕರು ಸಭೆ ಕೂಡಿಸಿ ಪ್ರತಿಯೊಂದು ವಾರ್ಡಿಗೆ ಮತ್ತೊಬ್ಬರಂತೆ ಹೆಚ್ಚಿನ ಸ್ವಯಂಸೇವಕರನ್ನು ಆರಿಸಿ ಈ ಸಾರ್ವಜನಿಕ ಫಂಡವನ್ನು ವೃದ್ಧಿಗೊಳಿಸುವದು ಅಗತ್ಯವಿರುತ್ತದೆ

ಕಾನಡಾವೃತ್ತ ಕರ್ನಾಟಕೀಲಿನ ಬಟ್ಟೆಯು ನಿನ್ನೆ ಪ್ರಾರಂಭವಾಗಿ ೨ ನೇ ಫೆಬ್ರುವರಿ ದಿವಸ ಹಿಟಾಸಿಯಾಗಿ, ರಾ ಕೋಶಿ ತರ್ಫೆ ಬಿಟಾಸಿ ಪೂರೈಸಿಯ ಬಗ್ಗೆ ಇದೇ ಬರುವ ೧೦ ನೇ ತಾರೀಕಿಗೆ ಇಟ್ಟಿರುತ್ತದೆ

ಹಳಿಯಾಳ— ಈ ತಾಲೂಕ ಸುಮಾರು ಪೇರು ಉಳ್ಳ ಪಾಗಣೆಯ ಪೀರವೇಳ ಗ್ರಾಮದ ಶ್ರೀ ನಾರಸಿಂಹ ದೇವಸ್ಥಾನದಲ್ಲಿ ಮಹಾ [illegible] ನೇತುರ್ಗ, ಬೋಗ್ರಗದ್ದೆ ಸಾಗೇರಿ ಈ ಗ್ರಾಮದವರು ಜಾಹೀರ ಸಭೆಗೂಡಿಸಿ ಒಂದು ಕೊಂಗ್ರೆಸ ಕಮಿಟಿಯನ್ನು ಸ್ಥಾಪಿಸಿರುವರು ಈ ಕಮಿಟಿಗೆ ಶ್ರೀ। ನರಸಿಂಹ ನಾರಾಯಣ ಭಾಗವತ ಇವರು ಅಧ್ಯಕ್ಷ, ಶ್ರೀ। ಕೇಶವ ರಾಮಕೃಷ್ಣ ಹೆಗಡೆ ಇವರು ಸೆಕ್ರೆಟರಿ, ಶ್ರೀ। ನರಸಿಂಹ ಗಣಪಯ್ಯಾ ಇವರು ಟ್ರೆಜರರರಾಗಿಯೂ, ಗಣಪತಿ ಸೀತಾರಾಮ ಭಾಗವತ, ಶಿವರಾಮ ನಾರಾಯಣ ಗಾವಕರ, ರಾಮಚಂದ್ರ ಶಿವ್ರಾಮ ಭಾಗವತ ರಾಮಕೃಷ್ಣ ಗಣಪಯ ಭಾಗವತ ಇವರು ಮೆನೆಜಿಂಗ ಕಮಿಟಿಯ ಮೆಂಬರರಾಗಿಯೂ ಆರಿಸಲ್ಪಟ್ಟಿರುವರು ಮತ್ತು ಪ್ರತಿ ಒಂದ ಮನೆಯಲ್ಲಿ ಕೊಂಗ್ರೆಸ ಮೆಂಬರರನ್ನು ನೋಂದಿಸುವದು ಪ್ರಚಾರಕ ಫಂಡಿಗೆ ಹಣ ಕೂಡಿಸುವದು ಮತ್ತು ಸ್ವಯಂಸೇವಕ ಸಂಘವನ್ನು ಸ್ಥಾಪಿಸುವದು ಇತ್ಯಾದಿ ಕಾರ್ಯಕ್ರಮವು ನಿಶ್ಚಯಿಸಿರುತ್ತದೆ

ಕಾರವಾರ— ಇಲ್ಲಿ ದೀರ್ಘ ಕಾಲದ ವರೆಗೆ ಸರಕಾರೀ ವಕೀಲರಾಗಿದ್ದ, ಇಮೇಲೆ ಬೆಂಚ ಮ್ಯಾಜಿಸ್ಟ್ರೇಟರಾಗಿದ್ದ ರಾವಸಾಹೇಬ ದತ್ತಾತ್ರಯ ಕೃಷ್ಣ ಉಪ್ಪೀನ ಇವರು ಸೋಮವಾರ ಈ ೨ ನೇ ದಿವಸ ಪ್ರಾತಃಕಾಲದಲ್ಲಿ ಕಾಲಾಧೀನರಾದರೆಂದು ತಿಳಿಸಲು ವಿಷಾದವಾಗು

ರಾಷ್ಟ್ರೀಯ ದೃಢನಿಶ್ಚಯ.

ಬಾಹುಬಲಕ್ಕಿಂತ ಹೆಚ್ಚು ಆತ್ಮಿಕಬಲ.

ಅಹಮ್ಮದಾಬಾದದಲ್ಲಿ ಮಂಜೂರಾದ ಮುಖ್ಯ ಠರಾವು

(೧೯೨೦ ವರ್ಷದಲ್ಲಿ ರಾಷ್ಟ್ರೀಯ ಸಭೆಯು ... ನೆರೆದಂದಿನಿಂದ ಶಾಂತತಾಪ್ರಧಾನ ... ಚಳವಳಿಯ ಸ್ಥಾಪನದಿಂದ ಅಖಿಲ ... ನಿರ್ಭಯತೆ, ಸ್ವಾರ್ಥತ್ಯಾಗ ಹಾಗೂ ... ಗುಣಗಳು ಬಹು ಪರಿಯಿಂದ ವಿಕಾಸ ... ಮಾನಾಪಹಾರದಿಂದ ಹಿಂದೀ ಜನತೆಗೆ ... ಒದಗಿದವೆ, (೨) ಈ ಚಳವಳಿಯಿಂದ ಸರ... ವರ್ಚಸ್ಸಿನ ಬಹಳ ಪೆಟ್ಟಿಗೆ ಕಡಿಮೆಯಾ... (೩) ಹಿಂದುಸ್ಥಾನವು ಸ್ವರಾಜ್ಯದ ದಿಯನ್ನು ಬಲು ... ದ ಆಕ್ರಮಿಸುತ್ತ ನಡೆದಿದೆ

...ರಿಂದ ಈ ಕಾಂಗ್ರೆಸು ಕಲಕತ್ತೆಯ ಖಾಸಾ ... ನಾಗಪುರದ ಸಾಧಾರಣ ಅಧಿವೇಶನದ ... ಠರಾವನ್ನೇ ಪುನಃ ಕಾಯಂ ಮಾಡಿ, ... ಖಿಲಾಫತ್ ಅನ್ಯಾಯಗಳು ದೂರ... ಹಾಗೂ ಸ್ವರಾಜ್ಯ ಸ್ಥಾಪನೆಯಾಗಿ ... ಮೇಲಿನ ಅಂಕಿತವು ದೇಶವಾಸಿ ... ಕೈಯೊಳಗಿನ ಲೋಕಶಕ್ತಿಯ ... ವರೆಗೆ ಅನತ್ಯಾಚಾರಿ ಅಸಹಕಾರಿ ... ಕಾರ್ಯಕ್ರಮವನ್ನೇ ಮತ್ತೂ ಉತ್ಸಾಹದಿಂ ... ಪ್ರವರ್ತಿಸುವ ರಾಷ್ಟ್ರೀಯ ದೃಢನಿಶ್ಚಯವನ್ನು ... ರುಪಡಿಸಿ ಆ ಬಗ್ಗೆ ಯೋಗ್ಯ ಉಪಾಯಗಳ ... ಕೊಳ್ಳುವರೆ ಪ್ರಾಂತಿಕ ಕಮಿಟಿಗಳಿಗೆ ಅಧಿ... ಕೊಡುತ್ತದೆ,

ಹಾಗೂ ವ್ಯಾಪಕವಾಯ ಪ್ರಶ್ನೆಗಳು ... ಭಾಷಣಗಳಿಗನುಸರಿಸಿ ಅನೇಕ ಪ್ರಾಂ... ವೃತ್ತಪತ್ರಗಳನ್ನು, ಉಧ್ವಸ್ತಮಾಡಿ ಸಾ... ನಿಕ ಮತ್ತು ಕಮಿಟಿ ಸಭೆಗಳನ್ನು ಬಲಾತ್ಕಾರ ... ಬೇಕಾಬಿಟ್ಟಿ ದೇಶೀರ ರೀತಿಯಿಂದಲೂ, ದೇಶ ... ಪ್ರತಿಬಂಧಿಸಿ ಅನೇಕ ರಾಷ್ಟ್ರಸೇವಕ ... ಹಿಡಿದು ಸರಕಾರವು ಪಬ್ಲಿಕರಯನ್ನು ... ವರು (೫) ಕಾಂಗ್ರೆಸ್, ಖಿಲಾಫತ್ ... ಗಳ ಬಗ್ಗೆ ಬಹುಜನರಲ್ಲಿ ನಿರಾಧಾರ ... ಸರಕಾರದ ಉದ್ದೇಶವಿದೆ,

ಈ ಕಾರಣ ಈ ಕಾಂಗ್ರೆಸು ಅವಶ್ಯವಿದ್ದರೆ ಕಾಂ... ಚಳವಳಿಯ ಎಲ್ಲ ಅಂಗ ಉಪಾಂಗಗಳನ್ನು ... ನಿಲ್ಲಿಸಬೇಕೆಂದು ಠರಾಯಿಸಿ, ಜನತೆಗೆಲ್ಲ ಅಗ್ರ... ಹ ಮಾಡುವದೇನೆಂದರೆ — ಕಳೆದ ವರು ... ದಿಲ್ಲಿಯಲ್ಲಿ ನೆರೆದ ಕಾಂ... ಕಾರ್ಯಕಾರೀ ಮಂಡಳವು ಮಾಡಿದ ಠರಾ... ವಸರಿಸಿ ಇಡೀ ದೇಶದಲ್ಲೆಲ್ಲ ಸ್ವಯಂಸೇವಕ ಸಂಸ್ಥೆ... ಗಳನ್ನು ನಿರ್ಮಿಸಿ, ಅವುಗಳೊಳಗೆ ತಮ್ಮನ್ನು ನೋಂ... ದಾಯಿಸಿಕೊಂಡು ಗಸ್ತಿನಲ್ಲಿ ಮಾಡಬೇಕು ಶಾಂತತೆಯಿಂ... ಸೆರೆ ಹೋಗಲು ಸಿದ್ಧರಿರತಕ್ಕದ್ದು, ಅವರ ಈ ಕೆಳ... ಪ್ರತಿಜ್ಞಾಪತ್ರವನ್ನು ಪ್ರತಿಯೊಬ್ಬ ಸ್ವಯಂಸೇ... ವಕನಾಗಬಯಸುವವನು ಸಹಿ ಮಾಡತಕ್ಕದ್ದು

ಪ್ರತಿಜ್ಞಾಪತ್ರ.

ನಾನು ಪರಮಾತ್ಮನನ್ನು ಸಾಕ್ಷಿಯಾಗಿಟ್ಟು ಪ್ರತಿಜ್ಞೆ ಮಾಡುವದೇನೆಂದರೆ —

(೧) ನಾನು ರಾಷ್ಟ್ರೀಯ ಸ್ವಯಂಸೇವಕ ಸಂಸ್ಥೆಯ ಸಭಾಸದನಾಗಲಿಚ್ಛಿಸುತ್ತೇನೆ,

(೨) ನಾನು ಸಂಸ್ಥೆಯ ಸಭಾಸದನಾಗಿರುವವರೆಗೆ ಹಿಂದುಸ್ಥಾನದ ಸದ್ಯಸ್ಥಿತಿಯಲ್ಲಿ ಖಿಲಾಫತ್ ಮತ್ತು ಪಂಜಾಬ ಅನ್ಯಾಯಗಳ ನಿವಾರಣೆಗೂ, ಸ್ವರಾಜ್ಯ ಸಂಸ್ಥಾಪನೆಗೂ, ಹಿಂದೂ ಮುಸಲ್ಮಾನ ಸಿಖ ಪಾರಸಿ ಕ್ರಿಶ್ಚನ್, ಯಹೂದೀ ಮೊದಲಾದ ಎಲ್ಲ ಧರ್ಮಗಳ ಹಾಗೂ ಜಾತಿಗಳ ಐಕ್ಯಮತ್ಯ ಉಂಟಾಗಲಿಕ್ಕೂ ಅಹಿಂಸಾ ವ್ರತವೆ ಉಪಯೋಗವಾದೀತೆಂದು ನನ್ನ ಶ್ರದ್ಧೆಯಿರುವದರಿಂದ, ನಾನು ಕಾಯಾ ವಾಚಾ ಶಾಂತವೃತ್ತಿಯನ್ನೇ ಅವಲಂಬಿಸುವೆನು, ಮತ್ತು ಮನಃಪೂರ್ವಕವಾಗಿ ವಿಚಾರದಲ್ಲಿ ಸಹ ಅಹಿಂಸೆಯನ್ನೇ ಪಾಲಿಸುವೆನು

(೩) ಈ ಐಕ್ಯದ ಹೃದಯದಲ್ಲಿ ನನ್ನ ಶ್ರದ್ಧೆಯಿದೆ, ಹಾಗೂ ಇದನ್ನು ಬಲಪಡಿಸಲಿಕ್ಕೆ ಯಾವಾಗಲೂ ಯತ್ನಿಸುವೆನು.

(೪) ಹಿಂದುಸ್ಥಾನದ ಆರ್ಥಿಕ, ರಾಜಕೀಯ ಹಾಗೂ ನೈತಿಕ ಉದ್ಧಾರಕ್ಕೆ ಸ್ವದೇಶಿಯೇ ಅತ್ಯವಶ್ಯವೆಂದು ನನ್ನ ನಂಬಿಗೆಯದೆ ಕೈಯಿಂದ ನೂತ ಹಾಗೂ ನೇಯ್ದ ಖಾದಿಯ ಹೊರತು ಅನ್ಯ ಉಡಿವೆಯನ್ನು ಧರಿಸಲಿಕ್ಕಿಲ್ಲ

(೫) ಅಸ್ಪೃಶ್ಯತೆಯ ಕಳಂಕವನ್ನು ನಿರ್ಮೂಲಿಸುವದು ನ್ಯಾಯ್ಯವೂ, ಅವಶ್ಯಕವೂ ಎಂದು ಹಿಂದೂಧರ್ಮಾಭಿಮಾನಿಯಾದ ನನಗೆ ತೋರುತ್ತದೆ ಇದ್ದರಿಂದ ಸಾಧ್ಯವಾದ ಯಾವ ಸಂಧಿಯನ್ನೂ ಬಿಡದೆ ಅವರೊಳಗೆ ಕಲಿತು ನಡೆಯುವೆನು, ಹಾಗೂ ಅವರ ಸೇವೆಮಾಡಲೆತ್ನಿಸುವೆನು (೬) ನನ್ನ ವರಿಷ್ಠಾಧಿಕಾರಿಗಳ ಹುಕುಮುಗಳನ್ನೆಲ್ಲ ಪಾಲಿಸುವೆನು, ಹಾಗೂ ಈ ಪ್ರತಿಜ್ಞೆಯ ಧೋರಣಕ್ಕನುಸರಿಸಿ ಸ್ವಯಂಸೇವಕ ಬೋರ್ಡುಗಳಾಗಲಿ, ಕಾಂಗ್ರೆಸ ಕಾರ್ಯಕಾರೀ ಕಮಿಟಿಯಾಗಲೀ ಕಾಂಗ್ರೆಸು ಸ್ಥಾಪಿಸಿದ ಇತರೇ ಸಂಸ್ಥೆಗಳಾಗಲೀ ಮಾಡುವ ನಿಯಮಗಳನ್ನೆಲ್ಲ ಮನ್ನಿಸುವೆನು. (೭) ನಾನು ನನ್ನ ಧರ್ಮರಕ್ಷಣೆಗಾಗಿ, ದೇಶಸೇವೆಗಾಗಿ ಗಣ್ಯಮಾಡದೆ ಸೆರೆ ಹೋಗಲಿಕ್ಕಾಗಲೀ, ಹೊಡೆತ ಸಹಿಸಿಕೊಳ್ಳಲಿಕ್ಕಾಗಲೀ, ಪ್ರಾಣಾರ್ಪಣೆ ಸಹ ಮಾಡುವದಕ್ಕಾಗಲೀ ಸಿದ್ಧನಿದ್ದೇನೆ (೮) ನನ್ನನ್ನು ಸೆರೆ ಹಾಕಿದ್ದಲ್ಲಿ ಕುಟುಂಬ ಪೋಷಣಕ್ಕಾಗಲೀ, ಆಶ್ರಿತರಿಗಾಗಲೀ ಕಾಂಗ್ರೆಸದಿಂದ ಯಾವದೇ ರೀತಿಯಿಂದ ಸಹಾಯವನ್ನು ಬೇಡಲಿಕ್ಕಿಲ್ಲ

ಸ್ವಯಂಸೇವಕರು.

೧೮ ವರ್ಷ ಹಾಗು ಅದರ ಮೇಲಿನ ಪ್ರಾಯದ ಪ್ರತಿಯೊಬ್ಬನು ಕೂಡಲೇ ಸ್ವಯಂಸೇವಕ ಸಂಸ್ಥೆಗಳಲ್ಲಿ ನೋಂದುಮಾಡಿಸಿಕೊಳ್ಳುವನೆಂದು ಈ ರಾಷ್ಟ್ರೀಯ ಸಭೆಯು ಅಪೇಕ್ಷಿಸುತ್ತದೆ. ಸಾರ್ವಜನಿಕ ಸಭೆಗಳನ್ನು ಪ್ರತಿಬಂಧಿಸುವ ಪ್ರಕಟಣೆಗಳನ್ನು, ಅದರಿಂದ [illegible] ಕಮಿಟಿಯ ಸಭೆಗಳನ್ನು ಸಹ ಸಾರ್ವಜನಿಕ ಸಭೆಗಳೆಂದು ತಿಳಿದು, ಸರಕಾರವು ಅವುಗಳನ್ನು ಪ್ರತಿಬಂಧಿಸಿರುವದರಿಂದ, ಈ ರಾಷ್ಟ್ರೀಯ ಸಭೆಯು ಕಾಂಗ್ರೆಸು ಕಮಿಟಿಗಳಿಗೆ ಆಜ್ಞಾಪಿಸುವದೇನಂದರೆ — ನಾಟಕ್ಕ ಹಿಡಿಯಲ್ಲಿ ಬಂದೋಬಸ್ತಿನ ಸ್ಥಳಗಳಲ್ಲಿ ಟಿಕೀಟುಗಳನ್ನಿಟ್ಟು, ಪೂರ್ವಸೂಚನೆ ಕೊಟ್ಟು, ಕಮಿಟಿ ಸಭೆಗಳನ್ನು ಸೇರಿಸಬೇಕು, ಮತ್ತು ಅಲ್ಲಿ ಶಕ್ಯವಾದರೆ ಮೊದಲು ಬರೆದು ಆದ ಉಪನ್ಯಾಸಕರೇ ಭಾಷಣಗಳನ್ನು ಬರೆದು ತಂದು ಓದಬೇಕು. ಅದರೆ ಒಮ್ಮೆಗೆ ಕ್ಷೋಭವಾಗಿ ಅತ್ಯಾಚಾರಕ್ಕೆ ಎಡೆ ಬಾರದ ಹಾಗೆ ಪೂರ್ಣ ಜಾಗ್ರತೆ ತಕ್ಕೊಳ್ಳಬೇಕು.

ವ್ಯಕ್ತಿಗಳು ಅಥವಾ ಸಂಘಗಳು ತಮ್ಮ ಅಧಿಕಾರವನ್ನು ನಿರಂಕುಶ ರೀತಿಯಿಂದ ಪ್ರಜಾಪೀಡನೆ ಮಾಡುವದರಲ್ಲಿಯೂ, ಪೌರುಷ ನಾಶನಮಾಡುವದರಲ್ಲಿಯೂ ಉಪಯೋಗಿಸದ ಹಾಗೆ ಮಾಡುವ ಎಲ್ಲ ಉಪಾಯಗಳು ನಿಷ್ಫಲವಾದಮೇಲೆ, ಶಾಂತತಾಪೂರ್ವಕ ಕಾಯಿದಾಭಂಗವೇ ಸಶಸ್ತ್ರ ಬಂಡಾಯಕ್ಕಿಂತ ಸುಸಂಸ್ಕೃತ ಹಾಗೂ ಫಲದಾಯಕ ಸಾಧನವೆಂದು ಈ ರಾಷ್ಟ್ರೀಯ ಸಭೆಯು ಅಭಿಪ್ರಾಯವಿರುವದರಿಂದ, ಯಾವತ್ತೂ ಕಾಂಗ್ರೆಸ ಅಧಿಕಾರಿಗಳಿಗೂ ಶಾಂತತಾಪ್ರಧಾನ ಉಪಾಯಗಳಲ್ಲಿ ವಿಶ್ವಾಸವಿದ್ದು, ಹಿಂದೀ ಲೋಕಮತಕ್ಕೆ ಸಂಪೂರ್ಣವಾಗಿ ಬೇಜಬಾಬದಾರರಿದ್ದ ಸರ್ಕಾರದ ಸ್ವೀಕಾರವನ್ನು ಲೋಕಮತಾನುವರ್ತಿ ಮಾಡಲಿಕ್ಕೆ ಒಂದಿಲ್ಲೊಂದು ತರದಿಂದ ಸ್ವಾರ್ಥತ್ಯಾಗ ಮಾಡಿದ ಹೊರತು ಗತ್ಯಂತರವಿಲ್ಲೆಂದು ಮನಗಂಡವರಿಗೂ, ಈ ಕಾಂಗ್ರೆಸು ಆಜ್ಞಾಪಿಸುವದೇನೆಂದರೆ — ವ್ಯಕ್ತಿಶಃ ಸವಿನಯ ಕಾಯಿದಾಭಂಗವನ್ನು ಆಚರಿಸುವ ವ್ಯವಸ್ಥೆ ಮಾಡಬೇಕು ಹಾಗೂ ದಿಲ್ಲಿಯಲ್ಲಿ ನೆರೆದ ಅಖಿಲ ಭಾರತೀಯ ಕಾಂಗ್ರೆಸ ಕಮಿಟಿಯ ಬೈಠಕಿಯಲ್ಲಿ ನಿರ್ದಿಷ್ಟವಾದ ಠರಾವಿಗನುಸರಿಸಿ, ಲೋಕಸಮೂಹವು ಅಹಿಂಸಾ ವ್ರತದಲ್ಲಿ ಸಾಕಷ್ಟು ತಯಾರಾದಲ್ಲಿ ಸಾರ್ವಜನಿಕ ಕಾಯಿದೇಭಂಗವನ್ನು ಸಹ ಕೈಕೊಳ್ಳಬೇಕು ಕಾರ್ಯಕಾರೀ ಕಮಿಟಿಯಾಗಲೀ, ಪ್ರಾಂತಿಕ ಕಮಿಟಿಯಾಗಲೀ ಆಗಿಂದಾಗ ಕೊಡುವ ಸೂಚನೆಗಳಿಗನುಸರಿಸಿ ಯೋಗ್ಯ ಜಾಗ್ರತೆ ತೆಗೆದುಕೊಂಡು ವ್ಯಕ್ತಿಶಃ ಅಥವಾ ಸಂಘಶಃ ಕೈಕೊಳ್ಳುವ ಸವಿನಯ ಕಾಯಿದೇಭಂಗದ ಮೇಲೆ ಸರ್ವಶಕ್ತಿಯನ್ನು ಕೇಂದ್ರೀಕರಿಸುವದಕ್ಕಾಗಿ ರಾಷ್ಟ್ರೀಯ ಸಭೆಯು ಇತರೇ ಚಳವಳಿಯನ್ನು ಬೇಕಾದಾಗ, ಬೇಕಾದಲ್ಲಿ ಅವಶ್ಯವಿದ್ದ ಹಾಗೆ ನಿಲ್ಲಿಸಿಡಬೇಕೆಂದು ಈ ಸಭೆಯ ಅಭಿಪ್ರಾಯವಿದೆ

೧೮ ವರ್ಷದ ಅಥವಾ ಅದಕ್ಕೆ ಮಿಕ್ಕಿದ ವಿದ್ಯಾರ್ಥಿಗಳಿಗೆ ವಿಶೇಷವಾಗಿ ರಾಷ್ಟ್ರೀಯ ವಿದ್ಯಾಲಯದೊಳಗಿನ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಕೂಡಲೇ ಮೇಲಿನ ಪ್ರತಿಜ್ಞೆಗೆ ಸಹಿ ಮಾಡಿ ರಾಷ್ಟ್ರೀಯ ಸ್ವಯಂಸೇವಕ ಸಂಸ್ಥೆಯ ಸಭಾಸದರಾಗಬೇಕೆಂದು ಈ ಸಭೆಯು ಆಜ್ಞಾಪಿಸುತ್ತದೆ.

ಕಾಂಗ್ರೆಸ ಅಧಿಕಾರಿಗಳನ್ನು ಸೆರೆಹಿಡಿಯುವದು ಭರದಿಂದ ನಡೆದಿರುವದರಿಂದ ಚಾಲೂ ಘೋಷಣೆಯನ್ನು

ಕಾಯಂ ಇಟ್ಟು ಹಾಗೂ ಶಕ್ಯವಿದ್ದಾಗ ವಾಡಿಕೆಯಂತೆ ಆ ಘಟನೆಯನ್ನು ಉಪಯೋಗಿಸಲಿಕ್ಕೆ ಯಾವದೇ ರೀತಿಯಿಂದ ಪ್ರತಿಬಂಧಿಸದೆ ಈ ರಾಷ್ಟ್ರೀಯ ಸಭೆಯು ಮುಂದೆ ಸೂಚನೆ ಕೊಡುವವರೆಗೆ ಮಹಾತ್ಮಾ ಗಾಂಧಿಯವರನ್ನೊಬ್ಬರನ್ನೇ ಕಾಂಗ್ರೇಸಿನ ಅನುಲಬಿಡಾವಣೀ ಅಧಿಕಾರಸ್ಥರನ್ನಾಗಿ ನೇಮಿಸುತ್ತದೆ, ಮತ್ತು ಅವರಿಗೆ ಅಖಿಲಭಾರತೀಯ ಕಾಂಗ್ರೇಸ ಕಮೀಟಿಯ ಅಧಿಕಾರಗಳನ್ನೂ, ಕಾಂಗ್ರೇಸಿನ ಕಮೀಟಿಯ ಅಥವಾ ಕಾರ್ಯಕಾರೀ ಕಮೀಟಿಯ ಜಾದಾ ಅಧಿವೇಶನವನ್ನು ನೆರೆಯಿಸುವ ಅಧಿಕಾರವನ್ನು ಪ್ರಸಂಗಬಿದ್ದರೆ ಉತ್ತರಾಧಿಕಾರಿಯನ್ನು ನೇಮಿಸುವ ಅಧಿಕಾರವನ್ನೂ ಕೊಡುತ್ತದೆ.

ಮಹಾತ್ಮರ ಉತ್ತರಾಧಿಕಾರಿಗಳಿಗೂ ಮತ್ತು ಅವರಿಂದ ಕ್ರಮೇಣ ನೇಮಿಸಲ್ಪಟ್ಟ ಉತ್ತರಾಧಿಕಾರಿಗಳೆಲ್ಲರಿಗೂ ಈ ರಾಷ್ಟ್ರೀಯ ಸಭೆಯು ಮೇಲಿನ ಅಧಿಕಾರವನ್ನು ಕೊಡುತ್ತದೆ.

ಆದರೆ ಮಹಾತ್ಮಾ ಗಾಂಧಿಯವರಿಗಾಗಲೀ ಅವರ ಉತ್ತರಾಧಿಕಾರಿಗಳಿಗಾಗಲೀ ಹಿಂದುಸ್ಥಾನದ ಸರಕಾರದ ಹತ್ತರ ಅಥವಾ ಬ್ರಿಟಿಶ ಸರಕಾರದ ಕೂಡ ಅಖಿಲಭಾರತೀಯ ಕಾಂಗ್ರೆಸ ಕಮೀಟಿಯ ಪೂರ್ವ ಮಂಜೂರಿಯನ್ನು ತೆಗೆದುಕೊಳ್ಳದೆ ಯಾವದೆ ಯಾಸಮೊಂದು ಕರಾರುನಾಮೆಯನ್ನು ಮಾಡುವ ಅಧಿಕಾರವಿಲ್ಲ. ಈ ಕರಾರುನಾಮೆಯು ಸಹ ಅದಕ್ಕಾಗಿ ಕರೆಯಿಸಿದ ಕಾಂಗ್ರೇಸಿನ ಜಾದಾ ಅಧಿವೇಶನದಲ್ಲಿ ಮಂಜೂರು ಮಾಡಿಕೊಳ್ಳತಕ್ಕದ್ದು. ಹಾಗೆಯೇ ಕಾಂಗ್ರೇಸಿನ ಅಪ್ಪಣೆಪಡೆಕೊಂಡಹೊರತು ಮಹಾತ್ಮಾ ಗಾಂಧಿಯವರಾಗಲೀ ಅವರ ಉತ್ತರಾಧಿಕಾರಿಗಳಾಗಲೀ ಸದ್ಯದ ಕಾಂಗ್ರೇಸಿನ ಧ್ಯೇಯದಲ್ಲಿ ಯಾವದೇ ತರಹದ ಫೇರಫಾರು ಮಾಡಬಾರದು.

ತಮ್ಮ ಮನೋದೇವತೆಗೆ ಮೆಚ್ಚುಗೆಯಾಗಿ ರಾಷ್ಟ್ರಸೇವೆಗಾಗಿ ಸದ್ಯಕ್ಕೆ ಕಾರಾಗೃಹವಾಸವನ್ನು ಅನುಭವಿಸುತ್ತಿರುವ ದೇಶಬಕ್ತರಿಗೆಲ್ಲ ಈ ಕಾಂಗ್ರೇಸು ಅಭಿನಂದಿಸುತ್ತದೆ ಮತ್ತು ಅವರ ಸ್ವಾರ್ಥತ್ಯಾಗದಿಂದ ಬಹುಸಮೀಪದ ಸ್ವರಾಜ್ಯದ ಉದಯಕಾಲವು ಸಮೀಪಿಸಿದೆಂದು ಈ ರಾಷ್ಟ್ರೀಯ ಸಭೆಯ ಅಭಿಪ್ರಾಯವಿದೆ

ಕಾರ್ಯಕಾರೀ ಕಮೀಟಿಯ ಪುಷ್ಟಿ

ಕಾಂಗ್ರೇಸಿನ ಕಾರ್ಯಕಾರೀ ಕಮೀಟಿಯು ಕಳೆದ [illegible] ಸ್ವಯಂಸೇವಕ ಸಂಸ್ಥೆಯ ಬಗ್ಗೆ ಕೆಳಗಿನ ವೃತ್ತಿಯನ್ನು ಘೋಷಿಸಿರುವದು.

“ಸ್ವಯಂಸೇವಕರ ಎರಡು ವರ್ಗಗಳನ್ನು ಮಾಡಬೇಕು. ಸರ್ವಸ್ವವನ್ನು ರಾಷ್ಟ್ರೀಯ ಕಾರ್ಯಕ್ಕಾಗಿ ಅರ್ಪಿಸಲಿಕ್ಕೆ ಸಿದ್ಧರಾದವರದೊಂದ, ತಮ್ಮ ವ್ಯವಸಾಯವನ್ನು ನೀಗಿಸಿ ದೇಶಕ್ಕಾಗಿ ಕಾರಾಗೃಹವಾಸವನ್ನೂ ಹೊಡತಗಳನ್ನೂ ಪ್ರಾಣತ್ಯಾಗವನ್ನೂ ಸಹಿಸಲಿಕ್ಕೆ ತಯಾರಾದವರನ್ನು ಎರಡನೇಯದಾದಿಯಲ್ಲಿ ದಾಖಲ ಮಾಡಬೇಕ. ಎರಡನೇ ವರ್ಗದ ಸ್ವಯಂಸೇವಕರಿಗೆ ಸರಿ ಬೀಳುವ ಪ್ರಸಂಗದ ಹೊರತು ಕಠಿಣ ತ್ಯಾಗದ ಕೆಲಸಕ್ಕೆ ಕರೆಯಲಾಗಲಿಕ್ಕಿಲ್ಲ

ಮಹತ್ವದ ಸೂಚನೆ.

ಕಾರ್ಯಕಾರೀ ಕಮೀಟಿಯು ಇನ್ನೊಂದು ಸೂಚನೆಯೇನಂದರೆ — ರಾಷ್ಟ್ರಕಾರ್ಯದ ಯಶಸ್ಸು ಸ್ವಯಂಸೇವಕರ ಸಂಖ್ಯೆಗಿಂತ ಅವರ ಶೀಲ, ಕರ್ತನಾ ಯೋಗ್ಯತೆಯ ಮೇಲೆ ಹೆಚ್ಚು ಅವಲಂಬಿಸಿರುತ್ತದೆಂದು ಈ ಕಮೀಟಿಯು ಸೂಚಿಸಿ, ಆದ್ದರಿಂದ ಸುಶೀಲ ಸ್ತ್ರೀಪುರುಷರನ್ನೇ ನೋಡಿ ಸ್ವಯಂಸೇವಕರನ್ನಾಗಿ ಆರಿಸುವದರಲ್ಲಿ ಎಲ್ಲ ಕಾಂಗ್ರೇಸು ಕಮೀಟಿಗಳು ವಿಶೇಷ ಜಾಗ್ರತೆ ತೆಗೆದುಕೊಳ್ಳಬೇಕು ”

ಸ್ಥಾನಿಕ ವೃತ್ತಾಂತ.

(೬ ನೇ ಪಾನಿನಿಂದ ಮುಂದರಿದದ್ದು)

ತ್ತಿದ್ದ ಬೇರೆ ಕೆಲವು [illegible] ಗಳಾಗಿರದ, ಶಾಂತ ಸ್ವಭಾವದವರು ಎಂಬುದರಿಂದ ತಕ್ಕಮಟ್ಟಿಗೆ ಲೋಕಪ್ರಿಯರೂ ಆಗಿದ್ದರು. ಹಿಂದೆ ಇವರು ಕೆಲವು ವರ್ಷಗಳ ವರೆಗೆ ಸ್ಥಾನಿಕ ಮ್ಯುನಸಿಪಾಲಿಟಿಯ ಅಧ್ಯಕ್ಷರೂ ಆಗಿದ್ದರು. ಸಾಕಷ್ಟು ವಿಧಾಯಕ ಕರ್ತೃತ್ವ ಶಕ್ತಿಯಿಲ್ಲದ ಅಧಿಕಾರಸ್ಥರ ನೇತೃತ್ವದಲ್ಲಿ ಈಗ ಮ್ಯುನಿಸಿಪಾಲಿಟಿಯ ಖರ್ಚು ಮಿತಿಮೀರಿ ಬೆಳೆಯುತ್ತಿರುವಾಗ, ಇವರ ಹಿಂದಿನ ಮಿತವ್ಯಯದ ಕಾರಕೀರ್ದಿಯ ನೆನಪು ಹಲವರಿಗೆ ಆಗದೇ ಉಳಿಯಲಿಲ್ಲೆಂಬುದು ಜನರ ನಿದರ್ಶನಕ್ಕೆ ಬಂದ ಸಂಗತಿಯೇ ಸರಿ! ಅವರ ಆತ್ಮಕ್ಕೆ ಪರಮೇಶ್ವರನು ಶಾಂತಿಯನ್ನೀಯಲಿ!

ಮತ್ತೊಂದು ತೀರ ಶೋಚನೀಯ ನಿಧನವೆಂದರೆ ಇಲ್ಲಿಯ ಲೋಕಪ್ರಿಯ ಡಾಕ್ಟರ ಮಾಧವ ರಾಮಚಂದ್ರ ಶೆಟ್ಟಿ ಈ ಯುವಕರದು. ತೀರ ಅನಪೇಕ್ಷಿತವಾಗಿ, ಜ್ವರದಿಂದ ಇವರು ಬುಧವಾರ ಪ್ರಾತಃ ಸಮಯದಲ್ಲಿ ನಿಧನಹೊಂದಿದಾಗ, ಇವರ ವಯಸ್ಸು ೨೫–೨೬ ಇಷ್ಟೇ ಇರಬಹುದು. ಇವರು ತಮ್ಮ ನಿಗರ್ವ ಮತ್ತು ಲೋಕಹಿತರತ ಸ್ವಭಾವದಿಂದಲೂ ನಿರಂತರ ಉಲ್ಹಾಸ ವೃತ್ತಿಯಿಂದಲೂ ಬಹಳ ಲೋಕಪ್ರಿಯರಾಗಿದ್ದರು. ಈ ಉತ್ಸಾಹಿ ತರುಣ ಗೃಹಸ್ಥರ ಅಕಾಲಿಕ ನಿಧನದಿಂದ ಅವರ ಕುಟುಂಬದ ಜನರಮೇಲೆ ದೊಡ್ಡದೊಂದು ಆಪತ್ತಿ ಬಂದೊದಗಿದಂತಾಗಿದೆ. ಆದರೆ ಈಶೇಚ್ಛೆಯೆಂದು ತಲೆ ಬಗ್ಗಿಸಿ ಈ ದುಃಖದಲ್ಲಿ ಉಳಿದ ಜನರೆಲ್ಲರು ಸಹತಾಪಿಗಳಾಗಿರುವರೆಂಬ ವಿಚಾರದಿಂದಲೇ ಅವರು ಸಮಾಧಾನ ಹೊಂದಬೇಕಲ್ಲದೇ ಬೇರೆ ಉಪಾಯವಿಲ್ಲ. ಮೃತರ ಆತ್ಮಕ್ಕೆ ಸದ್ಗತಿಯೂ ಶಾಂತಿಯೂ ದೊರೆಯಲಿ!

ನೂತನ ವರ್ಷದ ಪದವೀದಾನದಲ್ಲಿ ನಮ್ಮ ಜಿಲ್ಲೆಯ ಹೆಸರುಗೊಂಡ ಪ್ರಾಂತಾಧಿಕಾರಿ ಮಿ| ಕೋಯಿಮತ್ತೂರ ಇವರ ಪಾಲಿಗೆ “ ರಾಯಬಹಾದ್ದೂರ ” ಈ ಕಿತಾಬು ಬಂದದೆ. ಇಂಥ ಪೊಳ್ಳು ಸನ್ಮಾನದ ಬಿರುದಗಳಿಂದ ಬಿನ್ ಸರಕಾರೀ ಗೃಹಸ್ಥರು ಮೋಹಿತರಾಗುವ ಕಾಲವು ತೀರಿ ಹೋಗಿ ಜನರು ಇಂಥ ಕಿತಾಬುಗಳನ್ನು ತಿರಸ್ಕರಿಸಿ ಅವುಗಳಿಗೆ ಏನೂ ಮಹತ್ವ ಕೊಡದಂತಾದಮೇಲೆ ತಮ್ಮ ಅಧಿಕಾರಿಗಳಲ್ಲಿಯೇ ಈ ಸಾಂವತ್ಸರಿಕ ವಿ ರಾ ಮಿ ಹಂಚಿಬಿಡುವ ಕ್ರಮವನ್ನು ಸರಕಾರದವರು ಅಂಗೀಕರಿಸಿದರ ಆಶ್ಚರ್ಯವೇನು? ಇದ್ದ ಅಧಿಕಾರಿಗಳಲ್ಲಿಯೇ ಮಿ ಕೋಯಿಮತ್ತೂರರು ಈ ಸನ್ಮಾನಕ್ಕೆ ಅರ್ಹರಾಗಿ ಆರಿಸಲ್ಪಟ್ಟರೆಂಬ ಬಗ್ಗೆ ಅವರನ್ನು ಅಭಿನಂದಿಸಬೇಕಲ್ಲವೇ?

[ಕಳೆದ ಸಂಚಿಕೆಯ ಕಾರವಾರ ಸ್ಥಾನಿಕ ವೃತ್ತಾಂತದಲ್ಲಿ ಮಿ| ಬಸರೂರ ಇವರು ಕೈಕೊಂಡ ಕಾರ್ಯದ ವಿಷಯದಲ್ಲಿ ನಮ್ಮ ಬಾತ್ಮೀದಾರರು ತಪ್ಪು ತಿಳುವಳಿಕೆ ಮಾಡಿಕೊಂಡು ಅವರ ಕಾರ್ಯದ ವಿಪರ್ಯಸ್ತ ಮತ್ತು ಅಯಥಾರ್ಥ ಚಿತ್ರವನ್ನು ಕೊಟ್ಟದ್ದರಿಂದು, ಕಾರವಾರದ ಕ್ರೀಕೃಷ್ಣರಾವ ಹಳದೀಪೂರಕರ ಇವರು ನಮಗೆ ಒಂದು ಉದ್ದನ್ನ ಲೇಖ ಬರೆದು ತಿಳಿಸುತ್ತಾರೆ. ಅವರ ಲೇಖವು ತಡವಾಗಿ ಕೈಸೇರಿದ್ದರಿಂದ ಅವಕಾಶವಿದ್ದರೆ ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವೆವು.

ಸಂ ಕಾ ವೃ]

ಹೊಸ ಪಂಥದ ಪರಿಷತ್ತು.

— ಸದ್ಯ ಸ್ಥಿತಿಯ ವಿಷಯ ವಿಚಾರ ಮಾಡುವರೆ, ಮುಂಬಯಿಯಲ್ಲಿ ಎಲ್ಲ ಪಕ್ಷ–ಮತಗಳ ಒಂದು ಪರಿಷತ್ತು ಮುಂದಿನ ವಾರದಲ್ಲಿ ಮುಂಬಯಿಯಲ್ಲಿ ಪಂಡಿತ ಮದನ ಮೋಹನ ಮಾಲವೀಯ, ಬೆರಿಸ್ಟರ ಜಿನ್ನಾ, ಶ್ರೀಯುತ ಜಯಕರ, ಕೆ. ನಟರಾಜನ ಮೊದಲಾದವರು ನೆರೆಯಿಸುವವರಿದ್ದಾರೆಂದು ಜಾಹೀರಾಗಿದೆ. ನೋಡುವ ಇದರಿಂದ ಏನು ನಿಷ್ಪನ್ನವಾಗುತ್ತದೆಂಬುದು

ಸಾಭಾರ ಸ್ವೀಕಾರ

೧೯೩೩ನೇ “ ಸ್ವರಾಜ್ಯ ಡೈರಿ. ”

ಈ ದಿವಸಗಳಲ್ಲಾಗಿನ ಬದಲಾದ ಪರಿಸ್ಥಿತಿಯಲ್ಲಿ ಸ್ತು, ಸತ್ಯವು ಸಂಗ್ರಹದಲ್ಲಿರಬೇಕಾದ ನಮ್ಮ ಕಾಂಗ್ರೆಸಿನ ಘಟನೆಯ ಮಾಹಿತಿಯೂ, ಪ್ರಸ್ತುತ ಸ್ಥಿತಿ ಕಾರಭಾರದಿಂದ ನಮ್ಮ ದೇಶದಲ್ಲಿ ಉಂಟಾದ ನಿಜವಾದ ವಸ್ತುಸ್ಥಿತಿಯ ಜ್ಞಾನವೂ ಕೊಟ್ಟಿದ್ದಲ್ಲದೆ, ರಾಜಕೀಯ ಸಾಮಾಜಿಕ, ಮತ್ತು ವ್ಯವಹಾರಿಕ ವಿಷಯಗಳಲ್ಲಿ ಸಂಸ್ಕರಣೀಯ ಸಂಗತಿಗಳೂ ನಮೂದಿಸಲ್ಪಟ್ಟಿರುವವು. ಹೊರತು ಲೋ| ಟಿಳಕ, ಮ| ಗಾಂಧಿ, ದೇ| ಶಾಲಾಲಜಪತರಾಯ, ಅಲ್ಲೀ ಬಂಧು, ದಾಸ ನೆಹರು ಮೊದಲಾದ ರಾಷ್ಟ್ರವೀರರ ಭಾವಚಿತ್ರಗಳಿಂದ ಒಡಗೂಡಿದ ಈ ಹೊಸ ಮಾದರಿಯ ಡೈರಿಯು ಸರ್ವಾಂಗಸುಂದರವಾಗಿರುವದು. ಈ ಕ್ರಯವು ಮಾಫಕ ಇರುವದು [ಪ್ರಕಾಶಕ— ಪಿ ಎ ಪೈ ಬ್ರದರ್ಸ ಉಡುಪಿ ದ ಕ ಕ್ರಯ ೦ ೯ ೦]

ಮಹಾತ್ಮಾ ಗಾಂಧಿಯವರ ಚರಿತ್ರೆ—

[ಕಿಮ್ಮತ್ತು ೪ ಆಣೆ ಪ್ರಕಾಶಕ— ಪಿ. ಎ. ಪೈ. ಬ್ರದರ್ಸ, ಉಡುಪಿ, ದ ಕ] ಈ ಚಿಕ್ಕ ಗ್ರಂಥವು ಮನೋಹರವೂ, ಸರಸವೂ ವಾಚನೀಯವೂ ಆಗಿರುವದು. ಮಹಾತ್ಮರ ಅದ್ವಿತೀಯ ತೇಜಸ್ಸಿನ ಅಂತರಂಗವನ್ನು ತಿಳಕೊಳ್ಳಬಿಚ್ಛಿಸುವ ಕನ್ನಡಿಗನಿಗೆ ಇದೊಂದು ಉತ್ತಮ ಸಾಧನವಾಗಿದೆ, ವಿಶೇಷವಾಗಿ ಈಗಿನ ಸಮಯ ಪ್ರತಿ ಒಬ್ಬ ಕನ್ನಡಿಗನು ಇದನ್ನು ಅವಶ್ಯ ಓದಿ ಸಂಗ್ರಹಿಸಬೇಕು. ವಿಷಯ ವಿವೇಚನವೂ ಅತ್ಯುತ್ತಮವಾಗಿರುವದು. ಬೆಲೆಯೂ ಯೋಗ್ಯವಿರುವದು.

“ ಭಾರತ ಗೀತಾಂಜಲಿ ” — ಇದರಲ್ಲಿ ಹಿಂದಿ, ಬಂಗಾಲೀ, ಮರಾಠಿ, ಮತ್ತು ಕನ್ನಡ ಮನೋಹರವಾದ ಪದ್ಯಗಳಿರುವವು. ಇವುಗಳ ವಾಚನದಿಂದ ಸಹಜವಾಗಿ ಮನೋರಂಜನವಾಗುವದಲ್ಲದೆ, ವಾಚಕರಲ್ಲಿ ಸ್ವದೇಶಪ್ರೀತಿಯೂ ಕರ್ತವ್ಯಜಾಗ್ರತಿಯೂ ಕೂಡಾ ಹುಟ್ಟುವದು [ಪ್ರಕಾಶಕ, ಪಿ. ಎ ಪೈ ಬ್ರದರ್ಸ ಉಡುಪಿ, ದ ಕ ಕ್ರಯ ೦ ೧ ೬]

“ ಕನ್ನಡ ಪದ್ಯರತ್ನಾವಳಿ ” (ಪ್ರಥಮ ಭಾಗ), ಕಿಮ್ಮತ್ತು ೦-೩-೦ **“ ಭಾರತ ವೈಭವ ”** ಕಿಮ್ಮತ್ತು ೦-೧-೬ ಲೇಖಕ — ಜಿ ಎನ್. ಲಕ್ಷ್ಮಣ ಪೈ, ಮಂಗಳೂರ ಈ ಪುಸ್ತಕಗಳು ವಾಚನೀಯವಿರುವವು. ವಿಶೇಷವಾಗಿ ಚಿಕ್ಕ ಮಕ್ಕಳಿಗೆ ಉಪಯೋಗಕ್ಕೆ ಯೋಗ್ಯವಾಗಿರುವವು

ಪತ್ರಸ್ವೀಕಾರ

ಪ್ರೌಢ ವಿದ್ಯಾರ್ಥಿ— ಜೇ— ಸ್ಥಳಾಭಾವದ ಮೂಲಕ ಮುಂದಿನ ಸಂಚಿಕೆಯಲ್ಲಿ

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಯಾ ಸರಕಾರದ ೧೮೮೯ ನೇ ಇಸ್ವಿಯ [illegible] ೨ನೇ ಕಲ್ಪಿನಂತೆ ರಜಿಸ್ಟರ ಮಾಡಲ್ಪಟ್ಟ

ಕರ್ಪೂರರಸಾ ಅಥವಾ ಆರೋಗ್ಯಬಿಂದು.

ನಿದ್ರಾಭಂಗ, ಸ್ಮೃತಿಭ್ರಂಶ, ಶಿರೋಭ್ರಮಣ [illegible] ದ ಮಿದುಳಿನ ತೆ[illegible] ಸ್ಮೃತಿಪ್ರದಾಂದ್ಯ, ನೇತ್ರದಾ[illegible] ಕಾರಕ ಆರೋಗ್ಯಪ್ರದ ಅಪ್ರತಿಮ ಗುಣಕಾರಿ [illegible] ಕೇಶವರ್ಧಕ, ಶೀತಲ ಉತ್ತೇಜ[illegible] ಮನೋಲ್ಹಾಸಕ ಅತ್ಯಂತ ಸುಖದಾಯಕ ವಕೀಲ ವಿದ್ಯಾರ್ಥಿ ಮೊದಲಾಗಿ ಮಾನಸಿಕ ಶ್ರಮ ಪಡುವವರಿಗೆ ಬಹು ಹಿತಕರವು

೧೦ ತೊಲೆ ಬಾಟ್ಲಿಯೊಂದರ ಕ್ರಯ ರೂ ೨-೦-೦

ಶೀತಜ್ವರಾರಿ (*Antimalarial pills*)— ಚಳಿಜ್ವರ ಏಕಿಜ್ವರ ಪಿತ್ತಜ್ವರ ಮೊದಲಾದವುಗಳಿಗೆ [illegible] ೧೬ ಗುಳಿಗೆಯ ೧ ಬಾಟ್ಲಿಗೆ ೧-೪-೦ [illegible]

ಸೋಲ ಏಜಂಟ್ಸ—ವಿ ನೂ. ಎಂಪೋರಿಯಮ್
ಹೊನ್ನಾವರ (ಕೆನರಾ)

ಸ್ವದೇಶಿ ಶಾಬೂಗಳು.

ನಮ್ಮ [illegible] ಸ್ವದೇಶಿ ಶಾಬೂಗಳನ್ನು ತಯಾರ ಮಾಡಲು [illegible] ನಮ್ಮ ಶಾಬೂಗಳು ಬಿದೇಶೀ [illegible] ಬೇಕಾದವರು ಕಾಸಿಕೊಳ್ಳಬಹುದು [illegible] (ನಾರಂಗೀ [illegible] ಬಾಟ್ಲಿಗೆ ೧ ೪ ೦) ಹೋಲ್ಸೇಲ ಬೇರೆ

ಪತ್ತೆ— ಎಸ್. ಜಿ. ಪ್ರಭು.
ಮೇನೇಜರ ಸ್ವದೇಶೀ ಸೋಪ ವರ್ಕ್ಸ,
ಬಸ್ರೂರು, ಕಾರವಾರು (ಎನ್. ಕೆನರಾ



ಜ್ವರದ ಮೇಲೆ [illegible] ಕರ ಎಗ್ರು ಮಿಕ್ಷ್ಚರ್

ಮಲಶುದ್ಧಿಯಾಗುತ್ತದೆ, ಬೆವರು [illegible] ಜ್ವರವು [illegible]

ನಾಟಕಾಕರ ಮಾಯುದೇವ [illegible]
ಮುಂಬಯಿ ೪

ಸ್ವದೇಶಿಯೇ ಹಿಂದುಸ್ಥಾನದ ಪ್ರಾಣವು.
ಅದರಿಂದಲೇ ನಮ್ಮ ದೇಶದ ಭಾಗ್ಯೋದಯವಾಗುವದು.

ಉತ್ತಮ ತರದ ರಹಾಟೆ (ಚರಕ) [illegible] ಶುದ್ಧ ಸ್ವದೇಶಿ [illegible] ಗಾಂಧಿ, [illegible] ಮೊದಲಾದ [illegible] ಮತ್ತು ಬೇರೆ [illegible] ಸಕ ಪರವಾನ [illegible]

ಕುಡ್ವ ವಾಸುದೇವ ಪಾಂಡುರಂಗ ಶ್ಯಾನಭಾಗ, ಮತ್ತು ಬ್ರದರ್ಸ
ಹೊನ್ನಾವರ ಜಿ. ಉ. ಕಾನಡಾ.

FREE. FREE.

Purchasers of 36 tins of our well renowned Ringworm Ointment, price As 4 per tin, or of 12 Phials of Otto Mushk hina, Price As 12 per tube will be sent.

A WRIST WATCH FREE

King George
Coronation Co.,
BOMBAY No. 4.

ಸ್ಪೆಶಲ್ ಮೋಟರ ಬಂಡಿಗಳು ನಮ್ಮಲ್ಲಿ ಬಾಡಿಗೆಗೆ ಶಿಗುವವು.

ಬೇಕಾದವರು ಕೆಳಗಿನ ಪತ್ತೆಯವರಲ್ಲಿ ವಿಚಾರಿಸಬಹುದು. ಸವಲತ್ತಿನ ದರಗಳು ಇಟ್ಟಿರುವೆವು ನಮ್ಮ ಪತ್ತೆ —

ಗ್ಯಾತೋಂಡೇ ಬ್ರದರ್ಸ,
ಮೋಟರ ಡೀಲರ್ಸ, ರಿಪೇರರ್ಸ
ಕಾರವಾರ.

ಅನುಭವಸಿದ್ಧವಾದ ಔಷಧಗಳು.!!!
ನಿಸ್ಪೃಹಸ್ಯ ತೃಣಂ ಜಗತ್॥
ರಕ್ತಶುದ್ಧಿ, ಧಾತುವೃದ್ಧಿಯಮೇಲೆ ಅತಿ ಉತ್ತಮ
ಪ್ರವಾಳ, ಕೇಶರ ಅಮೃತಸತ್ವ, ಶಿಲಾಜಿತು,
ಮತ್ತು ವನಸ್ಪತಿ ಮಿಶ್ರಿತ

ಪಾತ್ಸ್ಟೌಷ್ಟಿಕ ಗುಳಿಗೆ.

ಇದರಿಂದ ಕ್ಷೀಣತೆ, ದುರ್ಬಲತೆ, ನಪುಂಸಕತ್ವ, ಸ್ವಪ್ನಾವಸ್ಥೆ, ರಕ್ತದೂಷಿತರೋಗ ಮೇಂದುವಿಕಾರ, [illegible] ಅಂಗನಿಸ್ತೇಜತ್ವ, ಧಾತುಪೋಗು [illegible] ಉಪದಂಶವಿಕಾರ ಮಸ್ತಕಶೂಲಿ, [illegible] ವಿಕಾರಗಳು, ಇದರಿಂದ ಗುಣವಾಗಿ, ಶರೀರಕ್ಕೆ ಪುಷ್ಟಿ [illegible] ಯಾಗಿ ರತಿಸುಖಕ್ಕೆ ಕಾಯಂ ಶಕ್ತಿಯನ್ನು ಕೊಡುತ್ತವೆ ಉತ್ತಮ ಗುಣಕ್ಕೆ ೪೨ ದಿವಸ ಬೇಕು ಗುಳಿಗೆ ೮೪ ಕ್ಕೆ ರೂ ೪-೦-೦

(೧) ಬಾಲಾಮೃತಗುಟಿಕಾ — ಚಿಕ್ಕ ಮಕ್ಕಳ ಎಲ್ಲ ರೋಗಗಳಮೇಲೆ ಅತಿ ಉಪ್ಯುಕ್ತವಾದ್ದು ಗುಳಿಗೆ ೩೦ ಕ್ಕೆ ರೂ ೧ ೨-೦ (೨) ಸ್ವಪ್ನಾವಸ್ಥೆಮೇಲೆ ಚೂರ್ಣ — ೧೪ ದಿವಸದ ಔಷದಕ್ಕೆ ರೂ ೨-೦-೦ (೩) ಗಜಕರ್ಣ ನಾಶಕ ಮಲಮು — ಡಬ್ಬಿಗೆ ಆಣೆ ೦-೮-೦ (೪) ಮೂಲವ್ಯಾಧಿ ನಾಶಕಗುಳಿಗೆ — ಎಲ್ಲ ಬಗೆಯ ಮೂಲವ್ಯಾಧಿಗೆ ಗುಳಿಗೆ ೩೦ ಕ್ಕೆ ರೂ ೨-೦-೦

ಅನುಪಾನಪತ್ರ ಔಷಧಿಯ ಸಂಗಡ ಅಂಚೆ ವೆಚ್ಚ ಬೇರೆ!

ವಿಳಾಸ— **ವೈದ್ಯ ವಿ. ಎನ್ ಮೋಡಕ, ಮತ್ತು ಕಂಪನಿ, ಪೋಸ ಸಿರಸಿ,**
ಜಿಲ್ಲಾ ಉತ್ತರಕಾನಡಾ



ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ, ರಾಮ ಬಾಣದಂತಾಗಿರುವದು ಕಳೆದ ೩೫ ವರ್ಷಗಳಿಂದ ಇದರ ಉಪಯೋಗವು ಸಹಜವಾಗಿ ಸಿದ್ಧವಾಗುತ್ತದೆ ಲಕ್ಷಗಟ್ಟಲೆ ಜನರು ಅಮೃತಾಂಜನವನ್ನು ಉಪಯೋಗಿಸುತ್ತಿರುವರು ಅದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯದವರು ಇದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು ಕಿಮ್ಮತ್ತು ೧೦ ಆಣೆ ವ್ಹಿ ಪಿ ಖರ್ಚು ಬೇರೆ

ಅಮೃತಾಂಜನ ಡಿಪೋ, ಫೋರ್ಟ,
ಮುಂಬಯಿ

Printed and published by Krishnarao Kesnav Shenvi at his Star of Kanara Press, Kumta

eg No B. 1270.
Thursday, 26th January 1922

ವರ್ಷ ೬.

ಸಂಚಿಕೆ ೧೫.

ಕಾನಡಾವೃತ್ತ.

THE KANARA NEWS.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಪತ್ರದ ವರ್ಗಣಿ:-
ುಮಟೆಯಲ್ಲಿ ಅಗಾವು ರೂಪಾಯಿ 2-4-0.
ುನೆಂಆರ್ಡರಿಯಿಂದ ರೂ 3-0-0.
ಪಿ. ಅಂಚೆವೆಚ್ಚ ಸೇರಿ ರೂಪಾಯಿ 3-2-0
ಬಿಡಿ ಸಂಚಿಕೆಗೆ 0-1-0.

ಜಾಹಿರಾತುಗಳ ದರ –
ಕನ್ನಡ, ಇಂಗ್ಲಿಷ ಸ್ಮಾಲ ಪ್ಯಾಯಿಕ(೧೫ ಎಮ್‌ಅಕ್ಷ) ೮ ಸಾಲುಗಳ ವರೆಗೆ ರೂ. 1-0-0 ಅನಂತರ ಪ್ರತಿ ಸಾಲಿಗೆ 0-2-0.
ಹೆಚ್ಚಿಂಗದ ಸಾಲು ಎಷ್ಟು ಹೆಚ್ಚಿರುವವೋ ಆ ಪ್ರಮಾಣದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು

ಕುಮಟಾ— ಕಾನಡಾವೃತ್ತ ಗುರುವಾರ, ತಾರೀಖ ೨೬ ಮಾಹೆ ಜನವರಿ ಸನ್ ೧೯೨೨ ನೇ ಇಸವಿ]

ನ ಡಾಕ್ಟರ ಕೃಷ್ಣರಾವ ಮುಳಮುತ.



ನ್ನವಿ ರಾಜಮುಕುಟದ ಛೆಟ್ಟಿ ಮತ್ತು ಸಂಕಡ ಕೆ ದಲ್ಲಿ ಪಾರಂಗತರಾದ ನಾವು ಸುಧಾರಿಸಿದ ಹೊಸ ಪದ್ಧ ಂದ ಹಲ್ಲುಗಳನ್ನು ತೆಗೆದು ಹಾಕ್ವುವೆವು. ಇದೇ ಹ ದ್ದಿ ಬಿದ್ದವಾಡಿ ಚಿನ್ನ, ಬೆಳ್ಳಿಯಿಂದ ತುಂಬಿ ಕೊಡು ವು, ಯಂತ್ರದಿಂದ ಹಲ್ಲುಗಳ ಮೇಲಿನ ಪೊಳವನ್ನು ದು ಅವುಗಳನ್ನು ಸ್ವಚ್ಛ ಹೊಳೆಯುವ ಹಾಗೆ ಮಾಡುವೆವು ಹಲ್ಲುಕಡ್ಡಿಗಳನ್ನು ಔಷಧಹಚ್ಚಿ ನೋಯಿ ತೆಗೆದುಕೊಡುವೆವು ಬಿದ್ದಹೋದ ಹಲ್ಲ ಗಳ ಕಡ್ಡಿ ನ್ನು ಮರುಸ್ತ ಭೂಡಿ ಸರಿಯಾಗಿ ಕೂಡಿಸಿಕೊಡುವೆವು. ಈ ಕೆಲಸವು ವಿಶ್ವಾಸದಿಂದ ಮತ್ತು ಅಗ್ಗವಾಗಿ ಮಾಡ ುತ್ತವೆ

Javeri Mansion
near Marwadi Vidyalaya,
Sandhurst Road,
BOMBAY No 4.

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

ಬೇಕಾದವರು ಭಾಡಿಗೆಯ ದರವಾರ ವಗೈರೆ ಮಾ ತಿ ಕೆಳಗಿನ ಪತ್ತೆಗೆ ಮುಕ್ತಾ ಶಿಕ್ಕಿ ತಿಳಕೊಳ್ಳ ಹುದು

ಪುರುಷೋತ್ತಮ ಲಕ್ಷುಮಯ್ಯ ಶ್ಯಾನಭಾಗ.
ಹೆಗಡೇಕರ, ದುಕಾನ, ಕುಮಟಾ.

ಕಾರ್ಡಸ್ಯಾಜ ಫೋಟೋ.

ಮಹಾತ್ಮಾ ಗಾಂಧೀ, ಲೋ| ಟಿಳಕ, ಮೌಲಾನಾ ಶೌಕತ ಅಲ್ಲಿ, ದೇ| ಲಾಲಾ ಲಜಪತರಾ ಮು ಇವರ ಉತ್ತಮ ಕಾರ್ಡ ಸ್ಯಾಜನ ಫೋಟೋಗ ನಮ್ಮಲ್ಲಿ ಸಿಗುವವು.

ಕ್ರಯ — ೧ಕ್ಕೆ ೬ಪೈ, ೧ ಡಜನ ಬೇಕಾದವರು ೫ ಆಣೆ ಸ್ಟ್ಯಾಂಪುಗಳೂ ಮತ್ತು ೧೦೦ ಬೇಕಾದವರು ೧-೧-೦ ವ ಮನಿಆರ್ಡರದ್ವಾರಾ ಹಣವು ಕಳಿಸಬೇಕು. ಸಂಪ ಲಗಳು ಬೇಕಾದರೆ, ೨॥ ಆಣೆಯ ಸ್ಟ್ಯಾಂಪುಗಳು ಕಳಿಸಬೇಕು

ಪತ್ತೆ— ಸ್ಟಾರ ಆಫ್ ಕೆನರಾ ಪ್ರೆಸ್,
ಕುಮಟಾ (ಎನ್. ಕೆನರಾ,)

ಮೋಟಾರ.

ಹಾವೇರಿಯಿಂದ— ಸಿರಸಿಗೆ ಮತ್ತು ಸಿರಸಿಯಿಂದ ಹಾವೇರಿಗೆ, ಪ್ರತಿ **ಆದಿತ್ಯವಾರ-ಮಂಗಳವಾರ - ಗುರುವಾರ** ಮೋಟಾರ ನಡೆಸುವ ವ್ಯವಸ್ಥೆ ಇಟ್ಟಿದೆ ಹಾವೇರಿಯಿಂದ ಬೆಳಿಗ್ಗೆ ೯ ಘಂಟೆಗೆ ಮತ್ತು ಸಿರಸಿಯಿಂದ ಮಧ್ಯಾಹ್ನ ೨ ಘಂಟೆಗೆ ಹೊರಡುವದು ಹಾವೇರಿಯಲ್ಲಿ ಅಥವಾ ಸಿರಸಿಯಲ್ಲಿ ೮ರಕಿಂತ ಹೆಚ್ಚು ಜನರು ಸಿಕ್ಕರೆ ಬೇರೆ ದಿವಸಗಳಲ್ಲಿ ಸಹ ನಡಿಸುವೆವು

ಟಿಕೆಟುಗಳು ಸಿರಸಿಯಲ್ಲಿ ಶೇಷಗಿರಿರಾವ ಧಾಕಪ್ಪನವರ ಇವರ ಅಂಗಡಿಯಲ್ಲಿ, ಮತ್ತು ಹಾವೇರಿಯಲ್ಲಿ ಸ್ಟೇಶನದ ಹತ್ತರ ಕೇಳಕರರ ಬಂಗ್ಲೆಯಲ್ಲಿ ಸಿಗುವವು

ಎಸ್. ಎಲ್. ಧಾಕಪ್ಪಾ.

ಅಗ್ಗ]

ಮಳೆಗಾಲ ಮತ್ತು ಬಿಸಿಲು ದೆಸೆಯಿಂದ ಬೇಕಾಗುವ ಎಲ್ಲ ತರ [illegible] ಹೊಸ ಛತ್ರಿಗಳು, ಜ್ವರ, ಕೆಮ್ಮು, ಜಂತು, ಹೆಂಗಸರ [illegible] ಗರ್ಭಾಶಯದ ವಿಕಾರ, ಪರಮಾ, ಅಶಕ್ತತೆ ವಗೈರೆ ವಿಕಾರದ ಮೇಲೆ ಖಾತ್ರಿದಾಯಕ ಪೇಟಂಟ ಔಷಧಗಳೂ, ಸ್ಟೇಶನರಿ, ಪರಫ್ಯೂಮರಿ ವಗೈರೆ ಸಾಮಾನುಗಳೂ, ಮಹಾತ್ಮಾ ಗಾಂಧಿಯವರ ಬಿಳೇ ಖಾದೀ ಟೊಪ್ಪಿಗಗಳೂ, ಕಂಬಳೀ ಟೊಪ್ಪಿಗೆಗಳೂ ಅಗದೀ ಕಡಿಮೆ ದರಕ್ಕೆ ಕೊಡಲಾಗುವದು.

ಎಸ್ ಎಲ್. ಧಾಕಪ್ಪ ಮತ್ತು ಬಂಧು
ಶಿರ್ಸಿ

ಭಡತೀ ಭ್ರಾತೃಸಂಘದ

ಅನುಭವಸಿದ್ಧವಾದ

ಜರದ ಗುಳಿಗೆಗಳು ಕ್ರಯ — ೨೫ ಕ್ಕೆ ೦-೧೦-೦

ಉತ್ತಮ ನೀಲಗಿರಿ ಎಣ್ಣೆ, ಹಿಪ್ಪುಳಿ ಹಿಟ್ಟು, ಉಂಚಿ ಕಾಬೂಲೀ ಹಿಂಗು, ಇದಲ್ಲದೆ, ಗೋಕರ್ಣ ಮಹಾಬಲೇಶ್ವರ ದೇವರ ಫೋಟೋಗಳೂ, ಶ್ರೀ ಮಂದಿರದ ಫೋಟೋಗಳೂ, ಕಾಲೋಪಯೋಗಿ ಪುಸ್ತಕಗಳೂ, ಸ್ಟೇಶನರಿ ಸಾಮಾನುಗಳೂ ಯೋಗ್ಯ ಬೆಳೆಗೆ ದೊರೆಯುತ್ತವೆ.

ಪತ್ತೆ— ಭಡತೀ ಭ್ರಾತೃಸಂಘ,
ಗೋಕರ್ಣ.

Khilafat & National Leaders' badges.

ನಮ್ಮಲ್ಲಿ ಖಿಲಾಫತ ಮತ್ತು ಮಹಾತ್ಮಾ ಗಾಂಧಿ, ಲೋಕ ಟಿಳಕ, ಶೌಕತ ಅಲ್ಲಿ, ಮಹಮ್ಮದ ಅಲ್ಲಿಯವರ ಸುಂದರವಾದ ಬೇಜುಗಳು ದೊರೆಯುತ್ತವೆ ಕೋಟಿಗೆ ಮತ್ತು ಟೊಪ್ಪಿಗೆಗೆ ಹಚ್ಚಲಿಕ್ಕೆ ಯೋಗ್ಯವಾದಂಥವು ಡಜನ ೧ಕ್ಕೆ ೩-೦-೦ ಟಪಾಲ ಖರ್ಚು ಬೇರೆ.

ಪತ್ತೆ:— **ಬಿ ಎ. ಪೈ ಹೊನ್ನಾವರ**
(ಉತ್ತರ ಕಾನಡಾ)

ಅಪೂರ್ವ ಸಂಧಿ!

– ನಮ್ಮ ಕಂಪನಿಯಲ್ಲಿ ಹೋಲ ಸ್ಯಾಲ ಬಗ್ಗೆ ಈ ಕೆಳಗಿನ ಜಿನಸುಗಳ ಜಂಗಿ ಸಂಗ್ರಹ ಇಡಲ್ಪಟ್ಟಿವೆ.

I ಅಸ್ಸಲ ಅಂಗೋರಾ ಜಾತಿಯ ಕಾಬುಲಿ ಹಿಂಗು
II ಶುದ್ಧ ನೀಲಗಿರಿ ಎಣ್ಣೆ (Eucalyptus Oil)
III ಹುಳದ ಪೋಮ (Worm Seed)

ದರಗಳ ಬಗ್ಗೆ ಪತ್ರದ್ವಾರ ತಿಳಕೊಳ್ಳಬೇಕು. ವ್ಯಾಪಾರಿಗಳಿಗೆ ಯೋಗ್ಯ ಸವಲತಿಯಿಂದ ಮಾಲು ಪೂರೈಸಲಾಗುವದು. ಕಮೀಶನ್ ಭರಪೂರ

ದಿ. ನ್ಯೂ ಎಂಪೋರಿಯಮ್,
ಜನರಲ್ ಮರ್ಚಂಟ್ಸ. **ಹೊನ್ನಾವರ.**

क पोष्टखर्चासाठीं ॥३ आण्याची टिकिट पाठविल्यास नवीन वर्षाचें

फुकट] कॅलेंडर [फुकट

सुंदर गुलाबी आर्टपेपरावर महात्मा गांधींचा फोटो असून ३ रंगांत छापलेलें हिंदुचे सण वगैरे असलेलें मोफत पाठवूं।

क्रतांत डीपो मुंबई नं. ११.

ಸತ್ಯಮೇವ ಜಯತೇ.
(ಗುಣಬಾರದಿದ್ದರೆ ಹಣ ಮರಳು.)
ಧಾತುಪೌಷ್ಟಿಕ ಕಾಮೋತ್ತೇಜಕ ಇಂದ್ರಿಯ ಸ್ತಂಭಕನಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ ಕ್ಷೀಣತೆ, ಸ್ವಪ್ನದೋಷ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ ವೀರ್ಯವರ್ಧಕ ರಕ್ತಶೋಧಕ, ಕಾಮೋತ್ತೇಜಕ ಮನೋಲ್ಲಾಸದಕ ಇಂದ್ರಿಯಸ್ತಂಭಕ ಗರ್ಮಿ, (ಚಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲತರದ ಬಕ್ಕೆಗಳು ಸ್ಸುಗಳು ಪಿತ್ತದ ಬಾಧೆಗಳು ಕಟಕೂಲೆ ವಾತರೋಗ ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ ಒಬ್ಬರಿಗೆ ೬೦ ಗುಳಿಗೆಗಳು ಬೇ ಗುತ್ತವೆ ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾ ಟ ಖ. ಬೇರೆ ಅನುಪಾನಪತ್ರಿಕೆ ಔಷಧದ ಸಂಗಡ.

ವಿಳಾಸ - **ಜಿ. ಎಲ್. ಜೋಶಿ ಕಂಪ**
ಪೋಸ್ಟ— ಸಿರಸಿ. ಉತ್ತರ ಕಾನಡ

ಪ್ರಸಿದ್ಧಿಪತ್ರಿಕೆ.

ಶ್ರೀ ಶಿರಸಿ ಮಾರೆಂಮದೇವರು.

ಕಾನಡಾಜಿಲ್ಹಾ ಶಿರಸಿಯಲ್ಲಿ ಸುಪ್ರಸಿದ್ಧ ಪ್ರತಿಷ್ಠಿತವಿರುವ ಶ್ರೀ ಮಾರೆಮ್ಮದೇವರ ಪ್ರೀತ್ಯರ್ಥವಾಗಿ ರಿವಾಜಿನಂತೆ ರಥೋತ್ಸವ ಮತ್ತು ಜಾತ್ರೆ ಸಮಾರಂಭಕ್ಕೆ ಕೂಡಾ ಬರುವ ಫಾಲ್ಗುಣ ಶುದ್ಧ ೨ ಮಂಗಳವಾರ ತಾ ೮-೩-೩೨ನೇ ದಿನ ಪ್ರಾರಂಭವಾಗಿ ಆ ಮಹೋತ್ಸವ ನಡೆಯುವದು ಕಾರಣ ಶ್ರೀ ದೇವರ ಭಕ್ತರು ಮತ್ತು ವ್ಯಾಪಾರಸ್ಥರು ಕೂಡಾ ಈ ಉತ್ಸವಕ್ಕಾಗಿ ದಯಮಾಡಿ ಬರಬೇಕೆಂದು ವಿನಂತಿ ಉಂಟು.
ತಾರೀಖು ೨೦-೧-೩೨ನೇ ಇಸ್ವಿ

ಸಹಿ ಮೊಕ್ತೇಸರ.
ಎಸ್ ಎನ್. ಕೇಶವೈನವರ
ವ್ಹಿ ಎಸ್. ಇಸಳೂರಕರ
ಆರ್. ವ್ಹಿ. ಭಾಕ್ಸನವರ
ಜಿ ಎ. ನಾಡಿಗ.

ಜಾಹೀರ ನೋಟೀಸು.

ಈ ಕೆಳಗೆ ಸಹಿ ಮಾಡುವವರು ಸನ್ ೧೯೩೨ ನೇ ಇಸ್ವಿ ಮಾಹೆ ಜನವರಿ ತಾರೀಖು ೩೦ನೇ ಸೋಮವಾರದ ದಿವಸ ಮುಂಜಾನೆ ೮ ಘಂಟೆಗೆ ಕುಮಟಾ ಫಾರ್ಮ ಸ್ಟೋರಿನಲ್ಲಿ ಅಜಮಾಸ ೧೯೦ ಖಂಡಿ ಭತ್ತ ಮತ್ತು ತೆಳ್ಳಗಿನ ಮ ಮೂಡೆ ಬೆಲ್ಲಾ ೮ ಖಂಡಿ ಕೂಡಾ ಲಿಲಾವಿನಿಂದ ಮಾರಾಟ ಮಾಡತಕ್ಕದ್ದಿರುತ್ತದೆ ಖರೇದಿ ಮಾಡಲಿಚ್ಛಿಸುವವರು ಸದ್ರಿ ತಾರೀಖಿನ ದಿವಸ ಫಾರ್ಮ ಆಫೀಸಿನಲ್ಲಿ ಬಂದು ತಮ್ಮ ತಮ್ಮ ಸವಾಲು ಮಾಡತಕ್ಕದ್ದು. ಅವಶ್ಯವಿದ್ದಲ್ಲಿ ಸಣ್ಣ ಸಣ್ಣ ರಕಮು ಮಾಡಿಕೊಡಬಹುದು. ಲಿಲಾವಿನ ಶರ್ತಗಳನ್ನು ಲಿಲಾವಿನ ಪೂರ್ವದಲ್ಲಿ ಓದಿಹೇಳಲ್ಪಡುವದು.

Kumta Farm, } **V. S Habbu.**
23-1-1932. } ಸುಪರಿಂಟೆಂಡೆಂಟ.
ಗವ್ಹರ್ನಮೆಂಟ ಫಾರ್ಮ, ಕುಮಟಾ

ನೋಟೀಸು.

ಈ ನೋಟೀಸಿನ ಮೂಲಕ ಯಾವತ್ತು ಜನರಿಗೆ ಪ್ರಕಟಪಡಿಸುವದೇನಂದರೆ:-

ನನ್ನ ಮತ್ತು ನನ್ನ ವಿಭಕ್ತ ಸಹೋದರ ಗಣಪಯ್ಯಾ ಬಿನ್ ನಾರಾಣಪ್ಪಾ ಇವರೊಳಗೆ ಆಸ್ತೀ ಮುಂತಾದ್ದರ ಬಗ್ಗೆ ವಾಟಣಿಯಾಗಿ, ಈಗ ಅಜಮಾಸ ೩೫ ವರ್ಷಕ್ಕೂ ಜಾಸ್ತಿ ಆಗಿರುತ್ತದೆ ಆದರೆ, ಸದರಿ ಗಣಪಯ್ಯನು ಬಾಲೀಶದೆಶೆಗೆ ವ್ಯಸನವನ್ನು ಸದ್ರಿಯವನಿಗೆ ಅಪ್ರಾಯಸ್ಥ ನಾರಾಣಪ್ಪಾ ಎಂಬ ಹುಡುಗನಿದ್ದು ಅವನು ಅಶನವಸನಕ್ಕೆ ತ್ರಾಸಪಡುವದು ನೋಡಲಾರದೆ, ಆಸ್ಥರ ದೇಖರೇಖಿ ಪೂರ್ತಾ ನನ್ನ ನಜ್ರಿಯ ಕೆಳಗೆ ಇಟ್ಟುಕೊಂಡಿದ್ದೇನೆ. ಇಷ್ಟು ಮಾತ್ರದಿಂದ ಸದ್ರಿ ಅಪ್ರಾಯಸ್ಥನಾಗಲಿ, ಯಾ ಅವನ ಮೃತ ತಂದೆ ಗಣಪಯ್ಯ ಮಾಡಿದ ಸಾಲದ ಬಗ್ಗೆ ಆಗಲಿ, ಯಾವದೊಂದು ವ್ಯವಹಾರಣೆಯಲ್ಲಿ ನನ್ನನ್ನು ರಕ್ಷಕ ನೇಮಿಸಿ ಕೆಲಸ ಮುಂದರಿಸಬಾರದಾಗಿಯೂ ನನ್ನ ವಿನಂತಿ ಅದೆ ಸದ್ರಿಯವರ ಯಾವದೊಂದು ತರದ ಲೇವಾದೇವಿಗೆ ನಾ ಆಟಗ ಸಾಸು ವ್ಯವಹರಿಸಲಿಕ್ಕೆ ಒಡಂಬಡಿಕೆ ಬಾರದ ಮಾತ್ರ ಕೆಯಿರುವದಿಲ್ಲ ಇದಕ್ಕೂ ಮಿಕ್ಕೆ ನನ್ನನ್ನು ಸೇರಿಸಿ, ಇಲಾಜು ನಡಿಸುವವರಿಗೆ ಆ ಬಗ್ಗೆ ನನಗೆ ತಗಲುವ ಯಾವತ್ತೂ ಖರ್ಚು, ವೆಚ್ಚ ವ ನಷ್ಟಕ್ಕೆ ಕೂಡಾ ಅವರವರೇ ಬದ್ಧಿಕೃತರಿರತಕ್ಕದ್ದು ಜಾಹೀರ ಇರಲಿ

ಇಂತೀ ವೆಂಕಪ್ಪಾ ನಾರಾಣಪ್ಪ ಹೆಗಡೆ, ಬೊಪ್ಪನಳ್ಳಿ, ತಾಲೂಕ ಶಿರ್ಶಿ.

ತಾ ೧೧-೧-೧೯೩೨

(ಶ್ರೀ) ಆದೇ ಶ್ರೀಕಾರಗುರ್ತ ವೆಂಕಪ್ಪಹೆಗಡೆ ನಾರ್ಣಪ್ಪಹೆಗಡೆ, ಬೊಪ್ಪನಳ್ಳಿ

ಕಾನಡಾ ಜಿಲ್ಲೆಯಲ್ಲಿ ಫೋರೆಸ್ಟ ಸಂಬಂಧಿ ಕಾಯಿದೆಭಂಗದ ಅವಶ್ಯಕತೆ.

ಅಮದಾಬಾದಿನ ಡಿಸ್ಟ್ರಿಕ್ಟ ಸಭೆಯಲ್ಲಿ ಸವಿನಯ ಕಾಯದೇ ಭಂಗದ ಠರಾವು ಪಾಸ ಆದಂದಿನಿಂದ ಎಲ್ಲ ಪ್ರಾಂತದವರೂ ಕಾಯದೇ ಭಂಗದ ಸಿದ್ಧತೆಯನ್ನು ತಮ್ಮ ತಮ್ಮ ಮಟ್ಟಿಗೆ ಜ್ಯಾರಿಯಿಂದ ನಡಿಸಿರುವರು ಮತ್ತು ಎಲ್ಲ ಪ್ರಾಂತಗಳಲ್ಲಿಯೂ ಸವಿನಯ ಕಾಯದೇ ಭಂಗವು ಬೇರೆ ಬೇರೆ ಸ್ವರೂಪಗಳಿಂದ ಪ್ರಕಟವಾಗುವ ತಯಾರಿಯಲ್ಲಿರುವದು ಪಂಜಾಬ ಸಂಯುಕ್ತ ಪ್ರಾಂತ, ಬಿಹಾರ, ಬಂಗಾಲ, ಆಸಾಮ ಮತ್ತು ಉತ್ತರ ಹಿಂದುಸ್ಥಾನದ ಪ್ರಾಂತಗಳಲ್ಲಿ ಬೇಕಾಯದೇಶೀರ ಠರಾಯಿಸಲ್ಪಟ್ಟ ಕಾಂಗ್ರೆಸ ಸಂಘಗಳು ತಮ್ಮ ಅಸ್ತಿತ್ವದ ಬಗ್ಗೆ ಸತ್ಯಾಗ್ರಹವನ್ನು ನಡೆಯಿಸಿರಲು, ಮಹಾರಾಷ್ಟ್ರದ ಕೆಲವು ಭಾಗಗಳಲ್ಲಿ ಸರಾಯಿ ಪಿಕೆಟಿಂಗೆ ಸಮ್ಮಂಧ ಸರಕಾರಿ ಆಜ್ಞೆಯು ಭಂಗವಾಗುತ್ತಿರುವದು. ಸಿಂಧ, ಗುಜರಾಥ, ಆಂಧ್ರ ಮೊದಲಾದ ಪ್ರಾಂತಗಳಲ್ಲಿಯೂ ಚರಾಯಿಯ ಕಾಯದೇ ಭಂಗವನ್ನು ಮಾಡಲು ಸ[illegible] ಉಪಕ್ರಮಿಸುವವು ಇಂಥ ಪರಿಸ್ಥಿತಿಯಲ್ಲಿ ಎಲ್ಲ ಬಂಧು[illegible]ಗಳು ತಮ್ಮ ಶೌರ್ಯವನ್ನು ಯಥಾಶಕ್ತಿ ನಡೆಯಿಸುತ್ತಿರುವಲ್ಲಿ ವೀರ ಮಾತೆಯೂ ಕರ್ನಾಟಕವನ್ನು ಬಿದ್ದ ರಾಷ್ಟ್ರಗಳ ಪಾಲಿಕೆಯಲ್ಲಿ ಸೇರಿಸುವದು ಕರ್ನಾಟಕಸ್ಥರಿಗೆ ಅಭಿಮಾನಾಸ್ಪದವಾಗಲಿಕ್ಕಿಲ್ಲ

ಹಿಂದುಸ್ಥಾನದ ಬೇರೆ ಬೇರೆ ಪ್ರಾಂತಗಳಿಗೆ ಕಾಯದೇ ಭಂಗಕ್ಕೆ ಒಂದಿಲ್ಲೊಂದು ಕಾರಣವು ದೊರೆತಿರಲು, ಕರ್ನಾಟಕಕ್ಕೆ ಅಂಥ ಕಾರಣವೇನೂ ದೊರಕದ್ದರಿಂದಲೂ, ಚರಾಯಿಯ ಕಾಯದೇಬಂಗ ಮಾಡುವ ಯೋಗ್ಯತೆಯು (ಮಹಾತ್ಮರ ನಿಯಮಗಳಂತೆ) ನಮಗೆ ಇಲ್ಲದ್ದರಿಂದಲೂ, ನಾವು ಸುಮ್ಮನೆ ಕುಳಿತರೆ ನಮಗೆ ಯಾರೂ ಹೆಸರು ಇಡುವ ಕಾರಣವಿಲ್ಲವೆಂದೂ, ಕೆಲವರು ತಮ್ಮ ಸಮಾಧಾನವನ್ನು ಮಾಡಲು ಯತ್ನಿಸಬಹುದು. ಆದರೆ ಈ ಸರಿಯ ಸಮಾಧಾನವು ಭೂಷಣಾಸ್ಪದವಲ್ಲವೆಂದು ನನಗೆ ತೋರುತ್ತದೆ. ಯಾಕೆಂದರೆ ಕರ್ನಾಟಕಸ್ಥರಿಗೆ, ವಿಶೇಷತಃ ನಮ್ಮ ಜಿಲ್ಹಾ ಬಂಧುಗಳಿಗೆ ಫಾರೆಸ್ಟ ಆಕ್ಟಿನ ಅಸಹ್ಯವಾದ ನೊಗವನ್ನು ಬಿಸಾಡಲು ಇಂಥ ಸುಸಂಧಿಯು ಪುನಃ ದೊರಕಲಿಕ್ಕಿಲ್ಲ ಕೃಷಿಕರ್ಮಿಗಳಿಗೆ, ಅನ್ನವನ್ನು ಬೇಯಿಸಲಿಕ್ಕೆ ಒಂದು ಕಟ್ಟಿಗೆ ಚಿಗ್ಗನ್ನಾಗಲೀ, ಗುಡಿಸಲನ್ನು ಕಟ್ಟಲಿಕ್ಕೆ ನಾಲ್ಕು ಖಂಬಗಳನ್ನಾಗಲೀ, ಕರಗೊಡದ ಈ ಫಾರೆಸ್ಟ ಆಕ್ಟಿನ ಅಸಹ್ಯ ಬೇಡಿಯನ್ನು ತುಂಡರಿಸಿ ನಿಮ್ಮ ಭಾಗ್ಯೋದಯವನ್ನು ಸಾಧಿಸಲಿಕ್ಕೆ ಅನುಕೂಲವಾದ ಈ ಸುಸಂಧಿಯನ್ನು ಕಳಕೊಳ್ಳಬೇಡಿರಿ.

ಸಣ್ಣ ಹುಡುಗರಿಗೆ ಸವಿ ಊಟದಲ್ಲಿ ನಿರ್ಬಂಧವಿಲ್ಲದಿದ್ದರೆ ಅವು ಅಪಚನದ ರೋಗಕ್ಕೆ ಬಲಿಯಾಗುವವು, ಅದೇ ನ್ಯಾಯವು ಕಾಷ್ಟವಹನ ಸ್ವಾತಂತ್ರ್ಯಕ್ಕೂ ಹಚ್ಚಬಹುದು. ಸವಿ ಪದಾರ್ಥಗಳನ್ನು ಮಿತಿಮೀರಿ ತಿಂದರೆ ಹ್ಯಾಗೆ ಅಪಚನವಾಗುತ್ತದೆಯೋ, ಅದರಂತೆ ಕಟ್ಟಿಗೆ ಕಡಿಯಲಿಕ್ಕೆ ಅವ್ಯಾಹತ ಸ್ವಾತಂತ್ರ್ಯವಿದ್ದರೆ ಕೆಲವರ್ಷಗಳಲ್ಲಿ ಜಂಗಲ ಹಾಳಾಗಿದ್ದು ಜನರಿಗೆ ಕಟ್ಟಿಗೆ ಸಿಗದಂತಾಗಬಹುದು. ಮತ್ತು ಒಂದೇ ಕಟ್ಟಿಗೆ ದೆಶೆಯಿಂದ ಜನರೊಳಗೆ ಹೊಡಿದಾಟವಾಗುವ ಸಂಭವವೂ ಇರಬಹುದು. ಆದ್ದರಿಂದ ಕಟ್ಟಿಗೆ ತರಲಿಕ್ಕೆ ರವಾನಿಕ ನಿರ್ಬಂಧಗಳಿರುವದು ಅವಶ್ಯವಿದೆ ಅಂಥ ನಿರ್ಬಂಧಗಳು ಪೂರ್ವದಲ್ಲಿಯೂ ಇದ್ದವು, “ಸ್ವರಾಜ್ಯ”ದಲ್ಲಿಯೂ ಇರುವವು. ಆದರೆ, ಇಂಗ್ಲಿಷ ಸಾಮ್ರಾಜ್ಯದ ಸುರಾಜ್ಯದ ಕಾಲದಲ್ಲಿ ತೋಟಿಗರ ಸಪ್ಪಿನ ಮೇಲೂ, ಅಡಿಗೆಯವರ ಉರವಲದ ಮೇಲೂ, ಬಡಜನರ ಗುಡಿಸಲುಗಳ ಮೇಲೂ, ಹಾಕಲ್ಪಟ್ಟ ಆಸುರೀ ನಿರ್ಬಂಧಗಳ ಪ್ರತಿಕಾರ ಮಾಡುವದು ಅವಶ್ಯಕವೂ, ಕರ್ತವ್ಯವೂ, ಆಗಿರುತ್ತದೆ ಈ ನಿರ್ಬಂಧಗಳಿಂದ ಆದಾಯ ಬೆಳವಣಿಗೆಯನ್ನು ನೋಡಿದರೆ ಅದು ವ್ಯಕ್ತ ಪ್ರಮಾಣ. ಬ್ರಿಟಿಶ ಆಡಳಿತದಲ್ಲಿ ಇಂದಿನ ವರೆಗೆ ಅರ್ಧಕ್ಕಿಂತ ಹೆಚ್ಚು ಜಂಗಲು ಖಲಾಸು ಆಗಿರುತ್ತದೆ ಇದು ೧೫೦ ವರುಷಗಳ ಲೆಕ್ಕವಾಯಿತು ಇದೇ ಆಡಳಿತವು ಇನ್ನು ನೂರಾರು ವರುಷ ನಡೆದರೆ — ! ಆ ಮೇಲೆ — ?

ಮೇಲಿನ ವರ್ಣನೆಯಿಂದ ಈಗಿನ ಕಠಿಣ ಫಾರೆಸ್ಟ ಆಕ್ಟಿನ ಘಾತುಕತನವನ್ನು ವಾಚಕರು ಮನಗಂಡಿರಬಹುದು. ಇದೇ ಕಾಯದೆಯು ಇನ್ನು ಕೆಲವು ವರ್ಷ ನಡೆದು ನಮ್ಮ ರೈತರು ಒಣಗಿದ ಕಟ್ಟಿಗೆ ಕೋಲುಗಳಂತೆ ಆದರೆ, ನಮ್ಮ ಜಿಲ್ಹೆಯಲ್ಲಿ ಜನವಸ್ತಿಯು ಇರುವದೆಂದು ಹೇಳುವ ಕಾರಣವುಳಿಯಲಿಕ್ಕಿಲ್ಲ, ಮತ್ತು ಆಗ ಫಾರೆಸ್ಟ ಆಕ್ಟಿನ ಪ್ರತ್ಯಕ್ಷ ಕಟು ಅನುಭವವು ಬರುವದು ಆದರೆ ಬೆಂಕಿಯಲ್ಲಿ ಕೈಸುಡುತ್ತದೆಂಬ ಅನುಭವವನ್ನು ಸ್ವತಃ ತೆಗೆದುಕೊಳ್ಳಲು ಇಚ್ಛಿಸಿದ ಮಗುವಿನ ರೀತಿ ಪಾಂಡಿತ್ಯವನ್ನು ನಮ್ಮ ಜಿಲ್ಹಾ ಬಂಧುಗಳು ನಡೆಯಿಸದೆ, ಈ ಆಪತ್ತಿಯನ್ನು ದೂರ ಮಾಡುವದಕ್ಕೆ ಸತ್ಯಾಗ್ರಹದ ಹೊರತು ಬೇರೆ ಉಪಾಯ ಇಲ್ಲವೆಂಬುದನ್ನು ಮನಗಾಣುವರೆಂದು ನಾನು ನಂಬುತ್ತೇನೆ ಈ ದಿವ್ಯ ತಪಕ್ಕೆ ಬೇಕಾಗುವ ಸ್ವಾರ್ಥತ್ಯಾಗವನ್ನು ತೋರ್ಪಡಿಸಲು ಸಿದ್ಧವಾದ ಜನರಿಂದ ತುಂಬಿದ ಒಂದು ತಾಲೂಕ ಸಹ ನಮ್ಮ ಅಭಾಗ್ಯ ಜಿಲ್ಹೆಯಲ್ಲಿ ಇಲ್ಲವೇ? ಉತ್ತಮವಾದ ಐಕ್ಯೋತ್ಸಾಹಗಳಿಂದೊಡಗೂಡಿದ ಒಂದು ತಾಲೂಕು ಸಹಾ ನಮ್ಮಲ್ಲಿಲ್ಲವೇ? ಸಮೀಪದ ಭವಿಷ್ಯಕಾಲವು ಈ ಪ್ರಶ್ನೆಯ ಉತ್ತರವನ್ನು ಕೊಡುವದು

ಶಿರ್ಶಿ, } “ಪ್ರೌಢ ವಿದ್ಯಾರ್ಥಿ”
ತಾ ೧೪-೧ ೧೯೩೨ }

ಪುಣೆ ಕೊಪ್ಪರಿಗೆಗಳಿಗಿಂತ ಉತ್ತಮ ಕೊಪ್ಪರಿಗೆಗಳು.

ನಮ್ಮಲ್ಲಿ ಪುಣೆ ಕೊಪ್ಪರಿಗೆಗಳಿಂತ ಉತ್ತಮ ಕೊಪ್ಪರಿಗೆಗಳನ್ನು ತಯಾರ ಮಾಡುತ್ತೇವೆ ಬಾಯಸ ಇದ್ದವರು ಕುಮಟಾ ಎಗ್ರಿಕಲ್ಚರಲ್ ಫಾರ್ಮಿನಲ್ಲಿ ಎಡವಾನ್ಸ ರೂಪಾಯಿ ೩೦-೦-೦ ಕಟ್ಟಿ ಫಾರ್ಮ ಸುಪರಿಂಟೆಂಡೆಂಟರವರ ವಿದ್ಯಮಾನ ಪಡಿಸಿ ಕೊಳ್ಳಬಹುದು.

ರಾಮಾ ಜಟ್ಟಿ ನ್ಯಾಶನಲ್ ಕಾರ್ಪೆಂಟರ
ಕುಮಟಾ, (ಎನ್ ಕೆನರಾ)

“ ಆತ್ಮೋದ್ಧಾರ ”

ಹೊಸ ಮಾಸ ಪತ್ರಿಕೆ

ಕಾನಡಾ ಜಿಲ್ಹೆಯ ೧ ಮೊದಲನೇಯದು ಧಾರ್ಮಿಕ, ರಾಜಕೀಯ, ವಿದ್ಯಾವಿಷಯಗಳನ್ನು ಕುರಿತದ್ದು. ಇದೇ ಫೆಬ್ರುವರಿ ತಿಂಗಳಲ್ಲಿ ಹೊರಡುವದು ವರ್ಗಣಿದಾರರಾಗಲಿಚ್ಛಿಸುವವರು ಕೂಡಲೇ ಹೆಸರು ಕಳಿಸಬೇಕು ವ್ಹಿ. ಪಿ ಯಿಂದ ವರ್ಗಣಿ ೧ ವರ್ಷಕ್ಕೆ ೨-೧-೦ ಮಾತ್ರ

ವಿಳಾಸ — ವ್ಯಾ. ಆ ಬೊಮ್ಮ

ರಾಷ್ಟ್ರೀಯ ಕಾಲೂಧ್ಯಾಪಕ ೬೯ (ಜಿ ಕ ಕ್ಷ್ವರ ಕಾನ

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಸ. ೧೮೮೫ರಲ್ಲಿ ಸ ೧೮೬೭ ನೇ ಇಸ್ವಿಯ ೨೫ ನೇ ಆಕ್ಟಿನಾತ ರಜಿಸ್ಟರ ಮಾಡಲ್ಪಟ್ಟ

ರ್ಕಶಫಾ ಅಥವಾ ಆರೋಗ್ಯಬಿಂದು.



ಅರ್ಕಶಫಾ ಎಂಬ ಔಷಧವು ಯಾವತ್ತು ರೋಗ ನಪರಿಹಾರಕವಾಗಿ ತಾ ೧೮-೮-೧೮೮೫ರನೇ ಇಸ್ವಿಯಿಂ ೧೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಬಾಟ್ಲಿಗಳು ಖರ್ಚಾದವು ಸನ್ ೧೯೧೮ ಇಸ್ವಿಯ ಆಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯೆಂಜಾ ಒಂದೇ ತಿಂಗಳಲ್ಲಿ ಒಂಬತ್ತು ಸಾವಿರ ಬಾಟ್ಲಿ ಖರ್ಚಾದವು. ಅಂತು ಈವರೆಗೆ ನಲ್ವ ಮೂ ...ಗಳಲ್ಲಿ ಹತ್ತು ಮೂವತ್ತೊಂಬತ್ತು ಸಾವಿರ ಬಾಟ್ಲಿ ಖರ್ಚಾದವು ಅಂದ ಮೇಲೆ ಈ ಔಷಧವು ಎಷ್ಟು ಪ್ರಖ್ಯಾತವಾದದೆ ಇದು ಯಾವತ್ತರು ತಾವೇ ಅನುಭವಿಸಿ ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲಿ ಇಟ್ಟು ಕೊಳ್ಳುವದು ಅವಶ್ಯವೇ ಎಂದು ತಿಳಿದು ಬರಮಾಡಿ ಕೊಳ್ಳಬೇಕು ಈ ಆರೋಗ್ಯಬಿಂದು ಕರ್ನಾಟಕ ದೇಶದಲ್ಲೆಲ್ಲಾ ಹೋಗಿ ರೋಗಿಗಳು ...ಕಕ್ಷಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ...ತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ, ಇನಾಮ ಸರ್ಟಿಫಿಕೇಟುಗಳು ಸಹ ದೊರೆತಿ... ...ಪ್ಪು ಬರೆದ ಲಿಕ್ಕೆ ಕಾಗದವು ಸಾಲದು. ಇಂಥ ಖ್ಯಾತವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ...ರಬೇಕಾದಾಗುವರೆಂದು ನಂಬುತ್ತೇನೆ ರೋಗದ ...ಯು ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರು ಬೇಕಾಗುವದಿಲ್ಲ ಅಂದ ಮೇಲೆ ಈ ಆರೋ...ಡುವ ಮೇಲೆ ದ ಲಕ್ಷ್ಯ ಮಾಡದೆ ಕೆಳಗೆ ಬರೆದ ...ಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ...ಕೊಳ್ಳಬೇಕು

ರೋಗಗಳ ನಾಮಗಳು.

ಶೀತರೋಗ, ಹಡದರೋಗ, ಪಾಂಡುರೋಗ, ಗುಲ್ಮರೋ... ...ಲರಾರೋಗ, ವಾಂತಿಭೇದಿ (ಕಾಲರಾ), ಪ್ಲೇಗ, ಚಳಿ ಜ್ವರ ಮಜ್ವರ ಇನ್‌ಫ್ಲುಯೆಂಜಾಜ್ವರ, ಅನೇಯಿಸ್ಪ್ರಕಾರ, ಗಂಡಮಾಲೆ, ತಿವಿಕಲೆ, ಮೂಗಿನೊಳಗಿನ, ಮಾದಲುದ ರೋಗವು, ಕಣ್ಣನೊಳಗೆ ಹೂವು, ...ತ್ತ ಕಣ್ಣನೋವು, ಕೆಮ್ಮು, ದಮ್ಮು, ಶ್ವಾ..., ಇದ ಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲ ತಲೆಶೂಲಿ, ನಡಶೂಲಿ, ವಾತಶೂಲಿ, ಪಕ್ಕೆಜಡ್ಡು, ಸ್ತನವೇನೆ, ಹುರುಕು ಕಜ್ಜಿ, ಗಜಕರ್ಣ, ಇಸಬು ...ನಾಯವಣ, ಸಾಂಡು, ಸ್ತ್ರೀಯರ ಮುಟ್ಟಿ ... ಹುತದಸಿಂಜು, ಸಣ್ಣ ಕೂಸುಗಳ ಬಾಲಗ್ರಹ, ... ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ಪಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ತಿಳಿಯದ ಇದ್ದ ಅನೇಕ ರೋಗಗಳು ಖಾತ್ರಿಯಿಂದ ವಾಗುತ್ತವೆ ಈ ಆರೋಗ್ಯಬಿಂದುವಿನ ಕ್ರಯ. ಬಾಟ್ಲಿ ಕೇವಲ ಒಂದಲ್ಲಿ ಒಡವರಿಗೂ ಧನವಂತರಿಗೂ ... ಒಂದೇ ಕ್ರಯ ಬಲೆ ಇಟ್ಟಿರತ್ತದೆ. ಒಂದು ...ತೊಲೆ ಬಾಟ್ಲಿ ಒಂದಕ್ಕೆ ಎಂಟ ಆಣೆ. ವಿ.ಪಿ. ...ಸ್ಟೈ ಹದು ಆಣೆ ಹೊಕವ ಬಾಟ್ಲಿ ಒಂದಕ್ಕೆ ಎಂಟು [illegible] ಬಾಟ್ಲಿ ತಗೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ... ಇದಕ್ಕೆ ಒಂಬತ್ತು ಆಣೆ ಖರ್ಚು ಬರು... ದರಿಂದ ಹನ್ನೊಂದವು ಬಾಟ್ಲಿಯಾಗೆ ಕಮಿಶನ್ ಇಲ್ಲ. ಇದಕ್ಕೆ ಆರು ಆಣೆ ಖರ್ಚು ಬರುವದು. ಒಂದು ನಾಲು ತೊಲೆ ಬಾಟ್ಲಿ ಮಾದರಿಗೆಂದುಕೊಂಡರೆ ಒಂದು ಬಾಟ್ಲಿ ಕಮಿಶನ್ ಕೊಡುತ್ತೇವೆ ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಹೋಟಲು ಹೊರಟರೆ ಪರತ ತಕ್ಕೊಳ್ಳುತ್ತೇವೆ ಮತ್ತು ಕೆತ್ತನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ್ ತಿಕೀಟ ಅಗಳ ಇತಡ ಹೊರ್ಚು ದೊರೆಯಲಿಕ್ಕಿಲ್ಲ. ...ಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ವಸಂದಿ ಪ್ರಕಾರ ಖಾತ್ರಿಯ ಸೂಚಕ ಸಿಗುವದು ನಿಮ್ಮ ... ಕಾಗದ ಕನ್ನಡದಲ್ಲಿ ನಾನು ಮರ್... ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಎಚ್. ಎಂ. ಮುಲ್ಲಾ, ಸಂಪಾದಕ ಅರ್ಕಶಫಾ,
ಕಬ್ ಆಫೀಸ. ಶಹಾಪೂರ, ಬೆಳಗಾಂವ

ಖ್ಯಾತಿಯಿಂದ ಗುಣಪಡಿಸುವ ಔಷಧಗಳು.

1 ಮಹಾಮದನ ಕಾಮೇಶ್ವರಿ ಲೇಹ.— ಬಹಳ ಶ್ರಮಪಟ್ಟು ಕೆಲಸ ಮಾಡುವ ಲೇಖಕರೂ, ಮತ್ತು ಇಂದ್ರಿಯ ದೌರ್ಬಲ್ಯ, ಅಜೀರ್ಣ, ಎದೆನೋವ ಮಲಬದ್ಧತೆ, ಶರೀರಗಳ ಸಳೆತದಿಂದ ಅಶಕ್ತಿ ಮೊದಲಾದ ಪ್ರಕೃತಿಯುಳ್ಳವರೂ ಇದನ್ನು ಸೇವಿಸಿದ್ದಲ್ಲಿ ರಕ್ತಶುದ್ಧಿ, ಧಾತುಪುಷ್ಟಿ ಮತ್ತು ಮುಖದಲ್ಲಿ ಕಾಂತಿ ತೋರಿಸುವದು 40 ಕಾಲ ಸೇವಿಸುವ ಲೇಹ ಡಬ್ಬಿ 1ಕ್ಕೆ 1-12-0 3 ಡಬ್ಬಿಗಳಿಗೆ 4-12-0

2. ಮಹಾಜ್ವರಾಂಕುಶ — (ಇತ್ತೀಚ ಗುಣ)— ಇನ್‌ಫ್ಲುಯೆಂಜಾ, ನಿಮೋನಿಯಾ, ದಿವಸಕ್ಕೊಮ್ಮೆ ದ್ವಿತೀಯ ತೃತೀಯ, ಚಾತುರ್ಥಿಕ ಜ್ವರಗಳ ಮೇಲೆ ರಾಮಬಾಣ. ಬಾಟ್ಲಿ 1 ಕ್ಕೆ 0-8-0

3. ಬಾಲಗ್ರಹ ಗುಟಿಕೆ.— ಕೂಸು ವ ಸ್ವಪ್ನ ದ... ಅಪಸ್ಮಾರಕ್ಕೆ ರಾಮಬಾಣ ಬಾಟ್ಲಿ 1ಕ್ಕೆಯು 0-6-0

4 ಖಾಸಕುಟಾರ ಗುಟಿಕೆ: .. ಇದು ಖಾಸಕ್ಕೆ ಸಿದ್ಧ ಔಷಧಿ ಒಂದೇಗ ಟಿಕೆ ನಿಂದ ಕಫ, ಉಬ್ಬಸ ಕೆಮ್ಮು ಇವು ಗುಣ. ಬಾಟ್ಲಿ 1 ಕ್ಕೆಯು 0-10-0

5 ಇಚ್ಛಾಬೇದಿ.— ಅಜೀರ್ಣವನ್ನು ಉಂಟುಮಾಡದ ಸುಖವಿರೇಚಕ. ಬಾಟ್ಲಿ 1ಕ್ಕೆ 0-12 0

ಎಮ್. ಗಣಪಯ್ಯಾ ಎಂಡ ಸನ್ಸ್
ನೆಟಿವ್ ಡೊಕ್ಟರ್ಸ್ ರಥಬೀದಿ.
ಮಂಗಳೂರ (ದ. ಕ.

ಸ್ಟಾರ ಎಗ್ಯೂ ಮಿಕ್ಷ್ಚರ.

ಜ್ವರ, ಚಳಿಜ್ವರ, ಇನ್‌ಫ್ಲುಯೆಂಜಾ ವಗೈರೆ ಎಲ್ಲ ಪ್ರಕಾರದ ಜ್ವರಗಳ ಮೇಲೆ ಅತ್ಯಂತ ಗುಣಕರ ಔಷಧ ಸಿದ್ಧ, ಎಪ್ಪತ್ತು ವರ್ಷಗಳ ಅನುಭವದಿಂದ ಮತ್ತು ಶಾಸ್ತ್ರೋಕ್ತ ಪದ್ಧತಿಯಿಂದ ತಯಾರಿಸಿದ್ದಿರುತ್ತವೆ. ಇದರಲ್ಲಿ ಕ್ವಿನಾಯಿನ ವಗೈರೆ ಅಪಾಯಕಾರಕ ದ್ರವ್ಯಗಳಿಲ್ಲವೆಂದು ದೊಡ್ಡ ದೊಡ್ಡ ದಾಕ್ಟರ, ಹಕೀಮ ಮತ್ತು ವೈದ್ಯರೂ ಕೂಡಾ ಅಭಿಪ್ರಾಯ ಪಟ್ಟಿರುವರು.

ಜ್ವರದ ರೋಗಿಗೆ ಒಂದೇ ಸಲದ ಅನುಭವದಿಂದ ಖಾತ್ರಿಯಾದೀತು

ಬಾಟ್ಲಿ ಒಂದರ ಕಿಮ್ಮತ್ತು, ಬರೇ ೧೨ ಆಣೆ. ಟಪಾಲ ಖರ್ಚ ಬೇರೆ ಏಜಂಟರು ಬೇಕು.

ದಿ ಸ್ಟಾರ ಫಾರ್ಮಸಿ,
ಮುಂಬಯಿ ನಂ ೧೨

The Star Pharmacy,
Bombay No. 12.

ಭಕ್ಷೀಸು ಯೂ ಸರ್ಟಿಫಿಕೇಟು ಪಡೆದಿರುವ

ಶಕ್ತಿವರ್ಧಕ ಹಲವಾ.

ಇದರ ಸೇವನೆಯಿಂದ ರಕ್ತಶುದ್ಧಿ ಧಾತುಪುಷ್ಟಿಯಾಗಿ ಶರೀರವು ಕಾಂತಿಗೊಳ್ಳುವದು. ಇದಲ್ಲದೆ ಕೆಮ್ಮು, ದಮ್ಮು, ಕಫ, ವಾತ, ಪಿತ್ತ, ನಿದೆ, ಇಲ್ಲಾಗೋಣ, ಮಲ ವಿಸರ್ಜನೆ ಸರಿಯಾಗಿ ಆಗದಿರೋಣ, ಅಜೀರ್ಣ ಜ್ವರ, ಸ್ತ್ರೀಯರ ಗರ್ಭದೋಷ, ಹುಡುಗರ ಹೊಟ್ಟೆಯ ಎಲ್ಲಾ ಬೇನೆಗಳು ಬೇಗನೇ ಗುಣಹೊಂದುವವು ಉಪಯೋಗಿಸಿ ನೋಡಿರಿ. ೨೦ ತೊಲೆ ಡಬ್ಬಿ ೧ ಕ್ಕೆ ರೂಪಾಯಿ ೧॥

ಕೆರೇಕರ ಬ್ರದರ್ಸ, ಶಕ್ತಿವರ್ಧಕ ಹಲವಾ
ಡಿಪೋ, ಕುಮಟಾ (ಕಾನಡಾ)

अलौकिक.

व्हेजीटेबल टॉनिक सिरप— निर्दोष व शुद्ध वनस्पतींच्या सत्वांपासून बनविलेलें शक्तिवर्धक औषधी सरबत ह्याच्या सेवनानें बद्धकोष्ठ अपचनादि विकार नष्ट होऊन साफ कोठशुद्धि होते भूक लागते व अन्नाचें पचन होऊन शुद्ध रक्त व वीर्यवृद्धि होते. कि. रु. १ ८-०

फेब्रोलीन— मलेरिया, हीव, सर्द किंवा दूषित हवेमुळे येणारे सांथ, विषारी, अगर इतर ताप, इन्फ्लुएन्झा इत्यादि खास गुणकारी. हे केवळ वनस्पतींचें–क्विनाईनचे दुष्परिणाम रहित–औषध घेतल्याने अशक्तपणा न येतां घाम येऊन ताप उतरतो व रोग्यास त्वरित आराम वाटतो. ६ औं० बा० कि. रु १-०-०

उंची कोलन वॉटर व कस्तुरीमिश्र लव्हेंडर— परदेशी मालाला टक्कर देणारीं हीं सुगंधी द्रव्यें आमच्या स्वतःच्या कारखान्यात तयार होणाऱ्या स्पिरिटमध्ये बनविलीं जात असल्यामुळे गुणांत श्रेष्ठ व किंमतीत स्वस्त आहेत. वि. मा. पत्रद्वारें.

अलौकिक केमिकल वर्क्स कं० लि०
नं. ५० प्रिन्सेस स्ट्रीट मुंबई.

ಪಂಡಿತ ಮಾಲವೀಯು ಕುಟುಂಬ

(ಲೇಖಕ— ಮಹಾತ್ಮಾ ಗಾಂಧೀ)

ಆಶ್ಚರ್ಯಕರವಾದ ಅಸಹಕಾರ ಚಳವಳಿಯಲ್ಲಿಯು ಎಲ್ಲಕ್ಕೂ ಆಶ್ಚರ್ಯಕರವಾದ ಸಂಗತಿಯೆಂದರೆ ಅದು ಒಂದೇ ಕುಟುಂಬದಲ್ಲಿ ಮತಭೇದವನ್ನುಂಟು ಮಾಡಿದ್ದು. ಅವರಲ್ಲಿಯಂತೂ ಮಾಲವಿಯಾ ಕುಟುಂಬದಲ್ಲಿ ಉಂಟಾದ ಮತಭೇದವು ಚೆನ್ನಾಗಿ ಒಡೆದು ಕಾಣಿಸುವಂಥ ಮಾತಾಗಿದೆ. ಮತ ಸಹಿಷ್ಣುತೆ ಮತ್ತು ಕಾಯದೆಭಂಗ ಈ ವಿಷಯಗಳಲ್ಲಿ ಇಡೀ ಹಿಂದುಸ್ಥಾನಕ್ಕೆ ಇದು ಒಳ್ಳೇ ದೃಷ್ಟಾಂತವಾಗಿದೆ. ಪಂಡಿತ ಮಾಲವಿಯಾ ಇವರ ಮತಸಹಿಷ್ಣುತೆಯು ಅದ್ವಿತೀಯವಾಗಿದೆಂಬುದರಲ್ಲಿ ಸಂಶಯವಿಲ್ಲ. ಸೆರೆಮನೆಗೆ ಹೋಗಲು ಆತುರರಾಗಿರಬೇಕೆಂಬ ಮಾತಿಗೆ ಅವರು ವಿರೋಧಿಗಳಿದ್ದಾರೆಂಬುದು ನನಗೆ ಗೊತ್ತಿದೆ. ಈ ಮಾತಿನಲ್ಲಿ ಅವರ ವಿಶ್ವಾಸವಿದ್ದರೆ ಸೆರೆಮನೆಗೆ ಹೋಗಲು ಅವರು ಸ್ವಲ್ಪವಾದರೂ ಹಿಂದೆ ಮುಂದೆ ನೋಡರೆಂಬುದು ನನಗೆ ಗೊತ್ತುಂಟು. ಸ್ವರಾಜ್ಯ ಪ್ರಾಪ್ತಿಗಾಗಿ ನಾವು ಪಡುತ್ತಿರುವ ಕಷ್ಟವು ಮರ್ಯಾದಿತವಾಗಿ ಬೆಳೆದು, ಬ್ರಿಟಿಶ ನ್ಯಾಯದೇವತೆಯಲ್ಲಿಯ ಅವರ ವಿಶ್ವಾಸವು ನನ್ನಂತೆ ಅಳಿದುಹೋಯಿತೆಂದರೆ ಸೆರೆಮನೆಗೆ ಹೋಗಲು ಅವರು ಅಗ್ರಗಣ್ಯರಾಗಿ ನಿಲ್ಲಬಹುದು. ಸಧ್ಯಕ್ಕೆ ಸವಿನಯ ಕಾಯದೆಭಂಗದ ವಿರೋಧಿಗಳಾಗಿದ್ದರೂ ಕೂಡ, ಅವರು ಕಾಯದೆಭಂಗ ಮಾಡಿದ ತಮ್ಮ ಮಗನಿಗೆ ಯತ್ಕಿಂಚಿತ್ತಾದರೂ ಅಡ್ಡಿಯನ್ನುಂಟು ಮಾಡಿಲ್ಲ. ಅಲ್ಲದೇ ತಂದೆಯ ಕರ್ತೃ ಮತ್ತು ಹಿರಿಯತನ ಇವುಗಳ ಅಧಿಕಾರವನ್ನು ತಮ್ಮ ಮಗನ ಮೇಲೆ ನಡಿಸಲಿಕ್ಕೆ ಬದ್ಧರಿದ್ದಾಗ್ಯೂ ಅವರು ಹಾಗೆ ಮಾಡಿಲ್ಲ. ತಮ್ಮ ಮನೋದೇವತೆಯು ಹೇಳಿದಂತೆ ಅವಶ್ಯವಾಗಿ ನಡೆಯಬೇಕೆಂದು ಅವರು ತಮ್ಮ ಮಕ್ಕಳಿಗೆ ಪೂರ್ಣ ಸ್ವತಂತ್ರತೆಯನ್ನು ಕೊಟ್ಟಿದ್ದಾರೆ. ಗೋವಿಂದನ ಸವಿನಯ ಕಾಯದೆಭಂಗವು ಮಾಣಿಕ್ಯದಕ್ಕಿಂತ ಹೆಚ್ಚಿನದಾಗಿದೆ. ತಮ್ಮ ಸೌಮ್ಯ ಮತ್ತು ಅಂತಃಕರುಣ ಯುಕ್ತವಾದ ಸ್ವಭಾವದಿಂದ ಆ ಶೂರ ತರುಣನು ಕಾಯದೆಭಂಗ ಮಾಡಬಾರದೆಂದು ಉಪದೇಶಿಸಿದನು. ಕಡೆತನಕ ತಮ್ಮ ತಂದೆಯವರ ಇಚ್ಛೆಯ ಮೇರೆಗೆ ನಡೆಯಬೇಕೆಂದು ಗೋವಿಂದನು ಪ್ರಯತ್ನಪಟ್ಟನು. ಆದರೆ ಒಂದು ಬದಿಗೆ ಪಿತೃಸೇವೆ ಮತ್ತೊಂದು ಬದಿಗೆ ದೇಶಸೇವೆ ಇವುಗಳಲ್ಲಿ ಹೆಚ್ಚಿನದಾವದೆಂಬುದು ಅವನಿಗೆ ಗೊತ್ತಾಗಲಿಲ್ಲ. ಈ ಎರಡೂ ಕರ್ತವ್ಯಗಳ ಆತಂಕದಲ್ಲಿ ಸಿಗಬಿದ್ದನು. ಅವನು ತೋಚದಂತಾಯಿತು. ದೇವರಲ್ಲಿ ಮೊರೆಯಿಟ್ಟನು. ತಮ್ಮ ಪೂಜ್ಯರಾದ [illegible]ರವರನ್ನು ಒಡಿದಿದ್ದು ಅವನಿಗೆ ಸಹಸಾ [illegible] ಗಲಿಲ್ಲ. ಕೂಡಲೇ ಈ ತರುಣನು ಪ್ರತ್ಯಕ್ಷರೂ ವಿಶಾಲ ಹೃದಯದವರೂ ಆದ ತಮ್ಮ ತಂದೆಯವರು ತನ್ನನ್ನು ಆಶೀರ್ವದಿಸಬೇಕೆಂದು ಬೇಡಿಕೊಂಡು ಈ ಯುದ್ಧದಲ್ಲಿ ಸೇರಿಕೊಂಡನು. ಗೋವಿಂದ ಮಾಲವಿಯನಾಗಿ ತ ಹಚ್ಚಿಗೆ ಪ್ರಜ್ವಲಿತವಾದ ಹೃದಯವು ಈಗ ಜೇಲಿನಲ್ಲಿ ಯಾವದು ಇರಲಿ. ಸ್ಕೂಲ ಸವಿನಯ ಕಾಯದೆಭಂಗ ಮಾಡಿದ್ದರಿಂದ ಅವನು ಪಿತೃಸೇವೆ ಮತ್ತು ರಾಷ್ಟ್ರಸೇವೆ ಇವೆರಡೂ ಒಳ್ಳೇ ಸಮಾಧಾನಕರ ರೀತಿಯಿಂದ ಮಾಡಿರುವನೆಂದು ನಾನು ನಿಶ್ಚಿತದಿಂದ ಹೇಳಬಲ್ಲೆ. ಕರ್ತವ್ಯಯುಕ್ತರಾದ ಮಕ್ಕಳು ತಮ್ಮ ತಂದೆಯವರ ಸಂಗತ ಸಹಿತ ಕಾಯದೆಭಂಗ ಮಾಡಬೇಕಾಗಿದ್ದರೆ ಗೋವಿಂದನ ಈ ಉದಾಹರಣೆಯನ್ನು ಕಣ್ಣದುರಿಗೆ ಇಟ್ಟುಕೊಳ್ಳತಕ್ಕದ್ದು. ತಂದೆಮಕ್ಕಳ ನಡುವೆ ಯಾವತರದ ದುಷ್ಟ ಬುದ್ಧಿಯೂ ಇರುವದಿಲ್ಲೆಂಬುದನ್ನು ನಾನು ಒಲ್ಲೆ. ಸೆರೆಮನೆಗೆ ಹೋಗಬೇಕೆನ್ನುವದನ್ನು ನಿಶ್ಚಯಿಸಿದ ಮೊದಲು ತಮ್ಮ ಮಗನ ಬಗ್ಗೆ ಎಷ್ಟು ಅಭಿಮಾನವೆನಿಸುತ್ತಿತ್ತೋ ಅದರ ಇಮ್ಮಡಿಯಷ್ಟು ಅಭಿಮಾನವು ಈಗ ಮಾಲವಿಯಾಜೀಯವರಿಗೆ ಅನಿಸುತ್ತಿರಬಹುದು. ಇಂಥ ಸತ್ಯಯುಕ್ತ ಕೃತಿಗಳಿಂದಲೇ ನಮ್ಮ ಯುದ್ಧದ ಧಾರ್ಮಿಕ ಸ್ವರೂಪವು ಸಿದ್ಧವಾಗುತ್ತದೆ. ಕೋರ್ಟಿನ ಮುಂದೆ ಗೋವಿಂದನು ಕೊಟ್ಟ ಧಿಟ್ಟತನದ ಜವಾಬನ್ನು ನಾನು ಇಲ್ಲಿ ಕೊಡದೆ ಇರಲಾರೆ

ಕೋರ್ಟಿನವರಿಗೆ ನಾನು ಹೇಳುವದೇನೆಂದರೆ — ಈ ಖಟಲೆಯು ಹೇಗೆ ಕೊನೆಗಾಣಬೇಕೆಂಬುದನ್ನೂ, ನಿರ್ಣಯವು ಯಾವ ಪ್ರಕಾರದ್ದಿರಬೇಕೆಂಬುದನ್ನೂ, ಅಪರಾಧಿಗಳನ್ನು ದಂಡಿಸುವದಕ್ಕಲ್ಲದೇ ಜನರ ನ್ಯಾಯಸಮ್ಮತವಾದ ರಾಷ್ಟ್ರೀಯ ಆಕಾಂಕ್ಷೆಗಳನ್ನು ಮುರಿದು ಬದಿಗೊತ್ತುವದಕ್ಕಾಗಿಯೇ ನೀವು ದಿನೇ ದಿನೇ ಕುಂದಿ ಹೋಗುತ್ತಿರುವ ನಿಮ್ಮ ಅಧಿಕಾರವನ್ನು ಉಪಯೋಗಿಸುತ್ತಿರುವಿರೆಂಬುದನ್ನು ಯಾರೂ ಅಲ್ಲಗಳೆಯರು. ಆದ್ದರಿಂದ ನಾನು ನಿಮ್ಮ ಕಾಯದೆ ಕಾನೂನುಗಳಿಗೆ ಸಮ್ಮತಿಸುವದಿಲ್ಲ. ಅದಕ್ಕಾಗಿ ರೆಟ್ಟೆಗೇ ನಾನು ಏನೂ ಹೇಳಲಿಚ್ಛಿಸುವದಿಲ್ಲ. ನನ್ನನ್ನು ಮುರಿಬಡಿಯಲಿಕ್ಕೆ ನೀವು ಸಿದ್ಧರಾದದ್ದು ನಿಜ. ಅದೇ ಪ್ರಕಾರವಾಗಿ, ನಿಮಗೂ ನಿಮಗೆ ಸಂಬಂಧಿಸಿದವರಿಗೂ, ಅಖಂಡ ಜಗತ್ತಿಗೆ ೩೦ ಕೋಟಿ ಜನರ ಆತ್ಮಬಲವು ಶುದ್ಧವಾಗಿಯೂ ಪಶು ಬಲದ ಮೇಲೆ [illegible]ನಿಸಿರುವ ನಿಮ್ಮ ಸರಕಾರದ ಬಲಕ್ಕಿಂತ ಶ್ರೇಷ್ಠವಾಗಿದೆಂಬದನ್ನು ಸಿದ್ಧಮಾಡಲಿಕ್ಕೆ ನಾವೂ ಸಿದ್ಧರಾಗಿದ್ದೇವೆ. ಇದೇ ಉದ್ದೇಶದಿಂದ ನಿಮಗೂ ನಿಮ್ಮ ಸರಕಾರಕ್ಕೂ ನಾನು ಹೇಳುವದೇನೆಂದರೆ — ನನ್ನಂಥ ಕ್ಷುದ್ರ ಮನುಷ್ಯನನ್ನೇ ಆಗಲಿ ಇಲ್ಲವೆ ಬೇರೆ ದೊಡ್ಡ ಮನುಷ್ಯನನ್ನಾಗಲಿ ಬಂಧಿಸಿದರೂ ನಮ್ಮ ರಾಷ್ಟ್ರಕಾರ್ಯವು ನಿಲ್ಲದು. ನನ್ನ ನಶ್ವರವಾದ ಈ ದೇಹಕ್ಕೆ ನೀವು ಬೇಕಾದಂಥ ಕಠೋರ ಯಾತನೆಗಳನ್ನುಂಟು ಮಾಡಬಹುದು. ಆದರೆ ನಮ್ಮಲ್ಲಿರುವ ಆತ್ಮವು, ಸ್ವರಾಜ್ಯವನ್ನು ದೊರಕಿಸಿಯೇ ಬಿಡುವದೆಂಬ ನಮ್ಮಲ್ಲಿ ನಿಶ್ಚಿತವಾದ ಧೈರ್ಯವು, ನಿಮಗೆ ಆಗಲಿ ಬೇರೆಯವರಿಗೆ ಆಗಲಿ ಸರ್ವಥಾ ವಶಹೋಗದು. ನಮ್ಮಲ್ಲಿ ಉತ್ಸಾಹವನ್ನು ಹುಟ್ಟಿಸಿ ಸ್ವಸಂತೋಷದಿಂದ ಇಲ್ಲಿಗೆ ನನ್ನನ್ನು ತಂದುಕೊಂಡು ಬಂದಂಥ ಶಕ್ತಿಯು ಅಸಹಯೋಗಿಗಳದಷ್ಟೇ ಅಲ್ಲ, ಆದರೆ ನಮ್ಮ ರಾಷ್ಟ್ರದಲ್ಲಿಯ ಪ್ರತಿಯೊಬ್ಬನ ಮನದಲ್ಲಿಯೂ ಆ ಜ್ಯೋತಿಯು ನೆಲೆಗೊಂಡಿದೆ. ನಮ್ಮ ಈ ಭೌತಿಕ ಶರೀರಗಳನ್ನು ಸೆರೆಮನೆಯಲ್ಲಿರಿಸುವದರಿಂದ ನನಗೂ ನನ್ನ ದೇಶಬಾಂಧವರಿಗೂ ಒಳ್ಳೇ ಉಚ್ಚತರದ ನೈತಿಕ ಸಾಮರ್ಥ್ಯವನ್ನು ಸಂಪಾದಿಸಲಿಕ್ಕೆ ನೀವು ಸಹಾಯಮಾಡುತ್ತಿರುವಿರಿ. ನೀವು ಈಗ ಅನುಸರಿಸಿದ ಈ ಅಘೋರಮಾರ್ಗವನ್ನು ಇನ್ನೂ ಕೆಲ ಕಾಲದ ವರೆಗೆ ಹಿಡಿದು ಹೋಗುವ ಸುಬುದ್ಧಿಯು ನಿಮಗೆ ಉಂಟಾದರೆ ಸಾಕಿದೆ. ನಾವು ಶೀಘ್ರದಲ್ಲಿಯೇ ನಿಮ್ಮ ಈ ದುಷ್ಟ ರಾಜ್ಯಪದ್ಧತಿಯನ್ನು ಧ್ವಂಸಮಾಡಿ ಸ್ವತಂತ್ರರಾಗಿ ಸುಖದಿಂದ ಬಾಳುವೆವು. ನೀವು ಇದೇ ಮಾರ್ಗವನ್ನು ಹಿಡಿಯುವಿರೆಂದು ಆಶಿಸಿ ನನ್ನ ಮತ್ತು ನನ್ನ ದೇಶಬಾಂಧವರ ಅಂತಃಕರಣ ಪೂರ್ವಕವಾದ ವಂದನೆಗಳನ್ನರ್ಪಿಸುತ್ತೇನೆ 'ವಂದೇ ಮಾತರಂ'

ಶಂದ ಮಕ್ಕಳನ್ನಿಟ್ಟರ ಆಭಾರವನ್ನು ವಾಚಕರು ಮನ್ನಿಸುವರೆಂದು ಆಶಿಸುತ್ತೇನೆ. ಇವರಿಬ್ಬರ ಒಗ್ಗಿಯ ಅಭಿಮಾನವನ್ನು ಇಡೀ ರಾಷ್ಟ್ರವೇ ಹಿಡಿಯುವದು. ಗೋವಿಂದನು ತೋರಿಸಿದಂಥ ಧೈರ್ಯವನ್ನು ಎಲ್ಲಿಯವರೂ ತೋರಿಸಹತ್ತಿದರೆ ಈ ನಮ್ಮ ಯುದ್ಧದಲ್ಲಿ ಜಯವು ನಮಗೆ ಬೇಗನೆ ದೊರೆಯುವದು

[ಕನ್ನಡ ನವಜೀವನದಿಂದ

* * *

'ಸ್ಪೀಕರ' ಸರ ಶಂಕರನ ನಾಯರರು

(ಸಂಯುಕ್ತ ಸಮ್ಮೇಲನವೆಂಬ ತಮ್ಮ ಲೇಖದಲ್ಲಿ ಮಹಾತ್ಮರು ಸ್ಪೀಕರ — ಅಧ್ಯಕ್ಷರಲ್ಲ — ಸರ ಶಂಕರನ ನಾಯರರು ಯಾಕೆ ತಮ್ಮ ಖುರ್ಚಿ ಬಿಟ್ಟು ನಡೆದರು ? ಆವರ ವರ್ತನವು ಪರಿಷತ್ತಿನಲ್ಲಿ ಅವರಿಗಿದ್ದ ಅಧಿಕಾರಕ್ಕೆ ಅನುರೂಪವಿತ್ತೋ ಹ್ಯಾಗೆಂದು ನವಜೀವನದಲ್ಲಿ (ತಾ. ೨೨–೧–೨೨) ಚರ್ಚಿಸಿರುವರು. ಸರ ಶಂಕರನ ನಾಯರರಿಗೆ ಸಂಬಂಧಿಸಿದ ಭಾಗದ ಭಾಷಾಂತರವನ್ನು ಈ ಕೆಳಗೆ ಕೊಟ್ಟಿರುವೆವು)

ಮೊಟ್ಟಮೊದಲು ಸರ ಶಂಕರನ ನಾಯರರಿಗೆ ಸಿಟ್ಟು ಬರಲಿಕ್ಕೆ ನನ್ನ ವರ್ತನವೇ ಕಾರಣವು. ನಾನು ಒಂದೊಂದಾಗಿ ಶರ್ತು ಹೇಳಿದ್ದು ಅವರಿಗೆ ಸೇರಲಿಲ್ಲ. ಒಗಲೇ ತಾವು ಎದ್ದು ಹೋಗುತ್ತೇವೆಂದು ಅವರು ಹೇಳಿದರು, ಆದರೆ ಈ ಮಾತು ಮಾಲವೀಯಜೀಯವರಿಗಾಗಲೀ, ಮಿ। ಜಿನ್ನಾರವರಿಗಾಗಲೀ ಸಹನವಾಗಲಿಲ್ಲ. ಅದನ್ನು ನೋಡಿ (ಸರ ಶಂಕರನರು) ಸುಮ್ಮಗಾದರು. ಆದರೆ (ಅಲ್ಲಿ ಬಂಧು ಇತ್ಯಾದಿ) ಘಟ್ಟಿ ಕೈದಿಗಳ ಬಿಡುಗಡೆಯ ಮಾತು ಬಂದ ಕೂಡಲೆ, ಅವರು ತಡೆದುಕೊಳ್ಳಲಿಕ್ಕೆ ಅಸಮರ್ಥರಾಗಿ, ಎದ್ದು ನಡೆದರು

ಅವರಿಗೆ 'ಸ್ಪೀಕರ' ಜಾಗೆಯ ಮೇಲೆ ನೇಮಿಸಲಾಗಿತ್ತು. ಅಧ್ಯಕ್ಷರು ಪಕ್ಷಾಭಿಮಾನಿಯಾಗಬಹುದು, ಆದರೆ ಸ್ಪೀಕರರಿಗೆ ಈ ಅಧಿಕಾರವಿಲ್ಲ. ಸಭೆಯನ್ನು ನಿಯಮದಂತೆ ನಡಿಸುವ ಕೆಲಸದ ಹೊರ್ತು ಸ್ಪೀಕರರನ್ನು ನೇಮಿಸುತ್ತಾರೆ. ಸ್ಪೀಕರರಿಗೆ ತಮ್ಮ ಮತಕೊಡುವ ಅಧಿಕಾರವಿಲ್ಲ. ಅದ್ದರಿಂದ ಸರ ಶಂಕರನ ನಾಯರರು ಸುಮ್ಮಗೇನೆ ಕೂಡ್ರಬೇಕಾಗಿತ್ತು. ಅದನ್ನು ಬಿಟ್ಟು ಅವರು ವಾದದಲ್ಲಿ ಬಿದ್ದು ಸ್ಥಾನತ್ಯಾಗ ಮಾಡಿದರು. ಇದನ್ನು ನೋಡಿ ಸಕಲರಿಗೆ ವ್ಯಸನವಾಯಿತು. ಆದರೆ ಯಾರೂ ನಿರಾಶರಾಗಲಿಲ್ಲ, ಅಥವಾ ನಿರಾಧಾರರಂತೆ ವರ್ತಿಸಲಿಲ್ಲ. ಈ ಸರ ಸಾಹೇಬರು ಗದ್ದಿ ಬಿಟ್ಟ ಕೂಡಲೆ, ಪಂಡಿತಜೀಯವರು ಸರ ವಿಶ್ವೇಶ್ವರ ಅಯ್ಯಾರವರನ್ನು ಸ್ಪೀಕರರಾಗಿ ನೇಮಣೂಕಿಯ ಸೂಚನೆ ತಂದರು, ಮತ್ತು ಸರ ವಿಶ್ವೇಶ್ವರರು ಸ್ಥಾನಾಪನ್ನರಾದರು. ಒಂದು ವರ್ಷದ ಮುಂಚೆ ಸರ ಶಂಕರನನಾಯರರಂಥವರು ಪ್ರಮುಖಪದವನ್ನು ತ್ಯಜಿಸಿದರೆ, ಬಹಳೇ ಗಡಿಬಿಡಿಯೂ, ಅವರ ಮನ ಒಲಿಸುವ ಅನೇಕ ಪ್ರಯತ್ನಗಳೂ ನಡೆಯುತ್ತಿದ್ದವು. ಆದರೆ ಈಗ ಜನತೆಯಲ್ಲಿ ಸ್ವಾತಂತ್ರ್ಯದ ಗಾಳಿಯು ಬೀಸಹತ್ತಿದೆ. ತನ್ನ ಹಕ್ಕೇನು ? ತನ್ನ ಕೆಲಸವೇನು ? ಎಂದು ಅದಕ್ಕೆ ತಿಳಿಯುತ್ತದೆ. ಅದ್ದರಿಂದ ಇಂಥ ಪ್ರಸಂಗದಲ್ಲಿ ಸಹ (ತನ್ನ ಕೆಲಸವನ್ನು) ಧೈರ್ಯದಿಂದ ಮುಗಿಸಲಿಕ್ಕೆ ಸಮರ್ಥವಾಯಿತು

ಬಗ್ಗೋಣ ರಾಮಾ ತಿಮ್ಮಣ್ಣ ಪಂಡಿತರಿಂದ
ಗುಣಿಸಿ ಪರಿಶೋಧಿಸಲ್ಪಟ್ಟ
ದುಂದುಭಿ ಸಂವತ್ಸರದ
ಪಂಚಾಂಗಗಳು ೭ ೧೦ ದಿವಸಗಳಲ್ಲಿ
ಮಾರಾಟಕ್ಕೆ ತಯಾರಾಗುವವು.
ಬೇಕಾದವರು ಕರಿಸಿಕೊಳ್ಳಬಹುದು. ಕೀಮತ್ತು ಆಣೆ ೧೦।
ಮಾಲಕ, ಸ್ಟಾರ ಓಫ್ ಕೆನರಾ ಪ್ರೆಸ್,
ಕುಮಟಾ

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ

ಕಾಮಿನಿಯಾ ತೈಲ. (ರಜಿಸ್ಟ

ಹೃದಯವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕುರುಳನ್ನು ಯಾವ ಸ್ತ್ರೀಯು ತಾನೇ ಬಯಸಲೊಲ್ಲಳು ? ಇಂಥಹ ಕೇಶರಾಶಿ [illegible] ಗೆ ಬರಗಿಸಿ ಕೊಡತಕ್ಕ ಉಪಕರಣವಾದರೋ,

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ.)

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿರುವದೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಬಹಳ ಅಗತ್ಯದ ಸಹಕಾರಿಯಾಗಿರುತ್ತದೆ. ಈ ಆಯಿಲ್ ಹಚ್ಚಿಕೊಳ್ಳುತ್ತಲೇ ಮಸ್ತಿಷ್ಕವು ಸೆಖೆ ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಕೆಂಪಾಗುವ [illegible] ಬಿದ್ದು ಹೋಗುವದಿಲ್ಲ. ಆದರೆ, [illegible]ವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ತೀವ್ರವೂ ಆಗಿರುವದು.

ಕೀಳ್ ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನೂ [illegible] ಹಾಳುಮಾಡಿಕೊಳ್ಳುವದಕ್ಕಿಂತ ಒಂದೇ ಒಂದು ಬಾರಿ ಈ "ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯು [illegible] ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಸಾವಿರಾರು ಗ್ರಾಹಕರ ಉತ್ತಮೋತ್ತಮವಾದ ಪ್ರಶಂಸಾಪತ್ರಗಳೂ ದೊರಕಿವೆ.

ಕ್ರಯ — ಸೀಸೆ ರೂಪಾಯಿ 1 0 0, ಸೀಸೆ 3 ಕ್ಕೆ ರೂಪಾಯಿ 2-10-0, [illegible] 0-14 0.

ಅತಿ ಮನೋಹರವಾದ ಸುಗಂಧವು !

ಒಟ್ಟೋ-ದಿಲ್ ಬಹಾರ್ !! (ರಜಿಸ್ಟರ್ಡ)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಅತ್ಯುತ್ತಮ [illegible] ಒಳ್ಳೆ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದದ್ದು. ಇದರಲ್ಲಿ ಮದ್ಯಸಾರದ (ಆಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ [illegible] ಈ ದ್ರವ್ಯದ ಕೆಲವು ಹನಿಗಳನ್ನು ಚೆಲ್ಲಿದರೆ ನಿಮ್ಮ ಸುತ್ತಲು ಸ್ವರ್ಗೀಯವಾದೊಂದು ಪುಷ್ಪವಾಟಿಕೆಯು [illegible] ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋದಿಲ್ ಬಹಾರ್‌ನ ಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಕಡೆಗೆ ಸೆಳೆದುಕೊಳ್ಳುವದು [illegible] ಒಂದು ಸೀಸೆಯನ್ನು ಖರೀದಿಸಿರಿ

ಸಣ್ಣ ಸೀಸೆ 1 ಕ್ಕೆ 0-8-0, 1 ಡ್ರಾಮಿನ (ಮಿಡಿಯಂ) ಸೀಸೆ 1 ಕ್ಕೆ 0-12-0 4 ಡ್ರಾಮಿನ ದೊಡ್ಡ ಸೀಸೆ 1 ಕ್ಕೆ 2-0-0 ಅಂಚೆಯ ವೆಚ್ಚ ಬೇರೆ 0-4-0

ಒಟ್ಟೋ ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0 12-0

Address.- **The Anglo Indian Drug & Chemical Co,**
16, Market, **BOMBAY. 2**

ಖರೇ ವಸ್ತು ! ಸಾಚಾ ಕಲ್ಪ ! ಸ್ಥಿರ ಸ್ವಭಾವ !!

ಒಮ್ಮೆಗೆಲಾದರೂ ಅನುಭವ ತೆಗೆದುಕೊಳ್ಳದೆ ಬಿಡಬೇಡಿರಿ.

ತಾರುಣ್ಯ ಸಂಜೀವನಿ ಗುಳಿಗೆಗಳು.

ಶುಕ್ಲಧಾತುವನ್ನು ಬೆಳೆಸಿ, ಪುರುಷರಿಗೆ ಸ್ತ್ರೀವಿಷಯವಾಗಿಯೂ, ಸ್ತ್ರೀಯರಿಗೆ ಪುರುಷವಿಷಯವಾಗಿಯೂ ಹರ್ಷದಾಯಕ ಶಕ್ತಿಯನ್ನು ಉಂಟುಮಾಡಿ, ದಿನೇ ದಿನೇ ಶರೀರದ [illegible] ರೋಗಗಳನ್ನು ದೂರಪಡಿಸಿ, [illegible] ಆರೋಗ್ಯವನ್ನೂ, ರತಿಯಲ್ಲಿ ವೆಗ್ಗಳವಾದ [illegible] ತೋರಿಸುವ ಕ್ರೀಡಾಶಕ್ತಿಯ ಉತ್ಸಾಹವನ್ನೂ, ಸಂಭೋಗದಲ್ಲಿ ತೃಪ್ತಿಯನ್ನೂ, ಸೌಖ್ಯವನ್ನೂ ಕೊಟ್ಟು, ಮನಸ್ಸಿನ ವ್ಯಸನತೆಯನ್ನು [illegible] ಯೌವ್ವನದ ಕಳೆಯನ್ನೂ ದೊರಕಿಸಿ ಮುದಿತನವನ್ನು ನೀಗಿ ಬಲವನ್ನು ಉಂಟುಮಾಡುವದು [illegible] ನಿವಾರಿಸಿ, [illegible] ರೋಗಗಳನ್ನು ನಾಶಮಾಡುವದು ಜೀರ್ಣಜ್ವರ ಮಂದಾಗ್ನಿ, ಶುಕ್ಲಸ್ರಾವ, ಆಮಶಂಕೆ ಮೊದಲಾದ ಇವುಗಳನ್ನು ನಾಶಮಾಡುವದು. ಇದು ಆರೋಗ್ಯಕ್ಕೆ ಅತ್ಯುತ್ತಮವಾದ ಔಷಧವಾಗಿಯೂ, [illegible] ಸ್ತ್ರೀಯರಿಂದಲೂ, ದೇಹಪ್ರಕೃತಿಯಿಂದಲೂ, ಚಿಕ್ಕವಯಸ್ಸಿನಲ್ಲಿ [illegible] ಹಸ್ತಸ್ಪರ್ಶದಿಂದಲೂ ಅತಿವಿಷಯೋಪಭೋಗದಿಂದಲೂ, ಇಂದ್ರಿಯ ಶಿಥಿಲವೂ, ತೆಳುವೂ, ನಿಸ್ತೇಜವೂ ಆಗಿ ಯತ್ನವಿಲ್ಲದೆ ಸ್ಖಲನವಾಗುವದು ಒಂದೊಂದು ಸಾರಿ ಮೂತ್ರದಲ್ಲಿಯೂ ಸ್ವಪ್ನದಲ್ಲಿಯೂ ಸಹ ಹೋಗುವದಲ್ಲದೆ, ನಪುಂಸಕತ್ವ, ಶರೀರ ಕ್ಷೀಣತೆ, ಅಶಕ್ತಿ, ಅರುಚಿ, ದೃಷ್ಟಿಮಾಂದ್ಯ, ಬೆನ್ನೆಲುಬಿನಲ್ಲಿಯೂ, ತಲೆಯಲ್ಲಿಯೂ ನೋವು, [illegible], ನಿದ್ರೆಯಲ್ಲಿ ಭೀಕರವಾದ ಸ್ವಪ್ನ, ಅರಿವು, ಮರುವು ಮತ್ತು ಶರೀರದ ಹಾಂಗೂ ಮನಸ್ಸಿನ ಚೇತನ ಕುಂದಿ ಹೋಗುವದು, ಇವೆಲ್ಲವುಗಳ ಮೇಲೆ ಗುಣಕಾರಿಯಾಗಿರುವದು. ೩೦ ಗುಳಿಗೆಗಳುಳ್ಳ ಸೀಸೆ ೧ಕ್ಕೆ ರೂ ೧॥ ನಂ ೧ ನಂ ೨ ಹೀಗೆ ಎರಡು ಸೀಸೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ೬೦ ಗುಳಿಗೆಗಳುಳ್ಳ ಸೀಸೆಗೆ ರೂ. ೩ ಪೋಸ್ಟೇಜ ಬೇರೆ

ಎಸ್. ಜಿ. ಭಾಗ್ವತ್, ಆಯುರ್ವೇದಿಕ್ ಕೆಮಿಸ್ಟ್,
ಕರ್ಕಿ. (ಕೆನರಾ)

ರಾಗದ ಪೆಟ್ಟಿಗೆಗಳು

ತಬಲೆ ಜೋಡಿ ಇತ್ಯಾದಿ ಗಾಂ ಸಾಮಾನು.



೧. ರಾಗದ ಪೆಟ್ಟಿಗೆ ಕಿಂ ೩೦, ೪೦, ೪೫ ೫೦
೨. „ ಕಾಲ ಪೆಟ್ಟಿಗೆ ಕಿಂ ೬೫, ೭೫, ೧೪೦,
೩. ತಬಲೆ ಜೋಡಿ ಕಿಂ ೧೩, ೧೫ ೧೮, ೨೦,
೪. [illegible] ಕಿಂ ೧॥, ತಬಲೆ ದ ಕಿಂ. ೧೨ ೮.

ವಿಶೇಷ ಮಾಹಿತಿ ಬಗ್ಗೆ ನಮ್ಮ ಕ್ಯಾಟಲಾಗ [illegible] ಕೊಡುತ್ತೇವೆ.

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ [illegible] ಮಾಡಬೇಕು.

ಪತ್ತೆ – **ಗೋಪಾಳ ಸಖಾರಾಮ**
ಕಂಪನಿ, ನಂ ೨೬
ಕಾಳಬಾದೇವಿ ರೋಡ, ಮುಂಬ

ಪಂಡಿತ ಮಾ

(ಲೇಖಕ-
ಆಶ್ಚರ್ಯಕ
ದು ಎಲ್ಲಕ್ಕೂ **ಕಾನಡಾವೃತ್ತ**
ಅದು ಒಂದ್
ಮಾಡಿದ್ದು
ಟುಂಬ — ತಾರೀಖು ೨೬ ನೆಯ ಜನವರಿ ೧೯೨೨
ದು ಕಾಣಿಸ

ಮತ್ತು ಕಾ ಮುಂಬಯಿಯಿಂದ ದಿಲ್ಲಿಗೆ.

ಹಿಂದುಸ್ಥಾನ

ಪಂಡಿತ ಮಾ “ದಿಲ್ಲಿ ತೋ ಬಹುತ ದೂರ ಹೈ”

ಅದ್ವಿತೀಯ
ಗೆ ಹೋ

ರು ವಿರೋಧವೇಗ್ಯೂ ಸುಧಾರಣೆಗ [illegible] ಮಾತಿನಲ್ಲಿ [illegible] ನಡೆದಾಗ [illegible] ಲು ಅವರ [illegible] ಬದು ನನ್ನ [illegible] ನಾವು ಪ[illegible]ಂದಿಡಲಿಕ್ಕೊಂದು ಮೆಟ್ಟಿಲೆಗ್ಯ ಚಿನ್ನಳದು, [illegible] ರಣೆಗಳ ರಿಪೋರ್ಟ ಎಂಬ ಬಹುವು ನ[illegible] ಮುಂದಿನ [illegible] ಪುಸ್ತಕವು [illegible] ಹೋ ಸಧ[illegible] ಇದೇ ಪುಸ್ತಕ [illegible] ಭಾ[illegible] ಬಹು ದೂರ ಹೈ” ಎಂಬ ವಾಕ್ಯವನ್ನು ಬಿಡ ತ[illegible]ವರು, ಅದರ ಸಂದರ್ಭವು [illegible] ಯನ್ನು [illegible] ಏನೂ ಇರಲಿ ದಿಲ್ಲಿಯು ಬಹು ಮಟ್ಟಿಗೆ ದೂರವಿದೆಂದು ಉದಾಹರಣೆಯಿಂದ ತೋರಿಸಿದ್ಧ ಮಾಡಲಿಕ್ಕಾಗುವದು. ಮುಂಬಯಿ ದಿಲ್ಲಿಗೆ ಅಂತರವು ಬಾಹ್ಯತಃ [illegible] ಬಹಳೇ ಹೆಚ್ಚಿನದೆಂದು, ಅಪರಿಮಿತವೆಂದು ಇನ್ನು ಹೇಳಲಿಕ್ಕಾಗುವದು ಇದೆಷ್ಟು ಅಂತರವಿದ್ದ, ಅದರ ಎಣಿಕೆ ಪ್ರಸ್ತುತ ಪ್ರಮಾಣವು ತ್ತ[illegible]ದು, ಎಂದು ಕೇಳುವವರಿಗೆ ಸ್ಪಷ್ಟವಾದ ಉತ್ತರವನ್ನು ಕೊಡಲು ಎರಡು ಮಹತ್ವದ [illegible] ಸಂಗತಿಗಳು ಸಂಭವಿಸಿರುವವೆ ಮುಂಬಯಿಯಲ್ಲಿ ನಡೆದ ಮಧ್ಯಸ್ಥರ [illegible]ಯ ಪರಿಷತ್ತು ಒಂದು ಸಂಗತಿಯು ದಿಲ್ಲಿಯಲ್ಲಿ ನಡೆದ ಕೌನ್ಸಿಲ ಸಭೆಗಳ ಅಧಿವೇಶನವು ಮತ್ತೊಂದು ಸಂಗತಿಯು. ಇವೆರಡು ಸಂಗತಿಗಳಿಂದ ಮಹತ್ವದ ಸಿದ್ಧಾಂತಗಳು ಹೊರಡುತ್ತಿವೆ ಸಿದ್ಧಾಂತಗಳನ್ನು ಹೊರಡಿಸುವಾಗ ನ[illegible]ದ ಚರ್ಚೆಯೂ ಅದನ್ನು ನಡಿಸಿದ ರಾಜಕೀಯ ಧುರಂಧರ ಮುಖಂಡರೂ ಅವರು ವ್ಯಕ್ತಪಡಿಸಿದ ಅಭಿಪ್ರಾಯಗಳೂ ಮುಂಬಯಿಯಿಂದ ದಿಲ್ಲಿಯು ತನಕ ಇರುವ ಉದ್ದವಾದ ಅಂತರವನ್ನು ಸ್ಪಷ್ಟವಾಗಿ ತೋರಿಸುವವು. ಮುಂಬಯಿಯ ಮಧ್ಯಸ್ಥರ ಪರಿಷತ್ತಿನ ವಿಧಾಯಕ ನಿರ್ಣಯಗಳೂ ದಿಲ್ಲಿಯ ಕೌನ್ಸಿಲಗಳೊಳಗಿನ ವಿನಾಶಕ ಠರಾವುಗಳೂ ಇಷ್ಟು ಪರಸ್ಪರ ವಿರುದ್ಧವಾಗಿರುವವಲ್ಲ, ಸ್ವರಾಜ್ಯದ ಪ್ರಭೆಯಿಂದ ಮೋಹಿತವು [illegible] ಎಂದು [illegible] [illegible]ಕಟದಿಂದ ಮುಕ್ತವಾಗ[illegible] ದಾಸ್ಯ ಮುಂಬ [illegible] ತದೇಕ [illegible] [illegible] ಪ್ರತಿ ಗೋಚಿಸುತ್ತಿದ್ದ ದಿಲ್ಲಿಯು ಎಲ್ಲಿ! ಮುಂಬಯಿಯು ಎತ್ತ, ದಿಲ್ಲಿಯು ಎತ್ತ! ಮೊಂ[illegible] ಸಾಹೇಬರು ‘ದಿಲ್ಲಿ ತೋ ಬಹುತ ದೂರ ಹೈ’ ಎಂದು ಹೇಳಿದ್ದು ಶಬ್ದಶಃ ನಿಜವಾಗಿ [illegible]ಂದ ಈಗ ಅಲ್ಲಗಳೆಯುವಂತಿದೆ ?

ಮುಂಬಯಿಯೊಳಗೆ ನೆರೆದ ಮಧ್ಯಸ್ಥರ ಪರಿಷತ್ತು, ಸ್ವರಾಜ್ಯದ ಸಂಧಾನದ ಮಾತನ್ನು [illegible], ಸರಕಾರದವರ [illegible] ಒಂದಾಗಿ ಕೂತು ದಿನೇ ದಿನೇ ಪ್ರ[illegible] ಗತ್ತ ನಡೆದ ಸದ್ಯಸ್ಥಿತಿಯನ್ನು ಸುಧಾರಿಸಲು ತಕ್ಕ ಉಪಾಯ ಯೋಜನೆಯನ್ನು ವಿಚಾರಿಸಿ, ಶಾಂತ ವಾತಾವರಣವನ್ನು ನಿರ್ಮಿಸ[illegible] ರ್ಣಗಳನ್ನು ಪಾಸ ಮಾಡಿದರು ಸರಕಾರವು ತನ್ನ ದಮನ ನೀತಿಯನ್ನು ತಾಸಬೇಕು, [illegible] ಬಿಡಬೇಕು [illegible] ಸೆರೆಯಾದವರನ್ನು, ಮತ್ತು ಅಸಹಕಾರ [illegible] ಕಾರ್ಯಕರ್ತರನ್ನು [illegible] ನೀವು [illegible] ಬಹುಮತದ [illegible], ಮಹಾತ್ಮಾ ಗಾಂಧಿಯವರ [illegible] ನಿರ್ಣಯಗಳ [illegible] ಮುಖಂಡರ ಈ ಪ್ರಯತ್ನದ [illegible] ಲೋಕಮತ [illegible] ಮುಂಬಯಿಯ ಇಂಗ್ರಜಿ [illegible] ಪತ್ರಿಕೆಯ [illegible] ರುದ್ರಾವತಾರ [illegible] ರವ ಯಿತು [illegible] ಜನರ ಪ್ರತಿನಿಧಿಗಳು [illegible], ಅದರಲ್ಲಿ ಬಹುಕಾಲ [illegible] ಮುದ್ರಿಸಿದ ಮುಖಂಡರ [illegible] ರನಾಯಕರನ್ನು ಪತ್ರಿಕೆಯಲ್ಲಿ [illegible] ಪ್ರಾವತಾರವನ್ನು ಧರಿಸಿ, ತಮ್ಮ ಉಪದೇಶ [illegible] ದವರಿಗೆ [illegible] ಹೇಳಿದ್ದರು ಅಷ್ಟೇ—“ಹುಚ್ಚರೇ, ಗಾಂಧಿಯ ಹಿಂದಿನಿಂದ ಮತ್ತೆ ಮರುಳಾಗಬೇಡಿರಿ ದಿಲ್ಲಿಯು ದೂರ ಇದೆ, ದಿಲ್ಲಿಗೆ ಲಕ್ಷ ಮಾಡಿದವರಂತೆ ಪ್ರತಿ[illegible]ತ್ತೀರೋ, ನಿಮ್ಮ [illegible] ಕೈಬಿಟ್ಟಿರಿ.” ಈ ರುದ್ರಾವತಾರದಿಂದ [illegible] ತಮ್ಮ [illegible], ಎಷ್ಟಷ್ಟು [illegible] ನೋಡಲು ಅಲ್ಪ್ಯವಾದ ಎಲ್ಲ ವಿಪರೀತ [illegible] ರ [illegible] ದಿಲ್ಲಿಯ ಕೌನ್ಸಿಲ ಸಭೆಗಳೊಳಗೆ ನಾ. ಈಶ್ವರಶರಣ ಮತ್ತು ನಾ. ಸೇಟ್ನಾ ಇವರಿಬ್ಬರು ಮಧ್ಯಸ್ಥಿಯ ಸಂಧಾನಕ್ಕೆ ಅನುಕೂಲವಾಗುವ ಠರಾವುಗಳನ್ನು ಸರಕಾರದ ಮಾನ್ಯತೆಗೆಂದು ಮುಂದಿಡಲು, ಸರಕಾರ ಸಭಾಸದರಷ್ಟೇ ಅಲ್ಲ, ಸ್ವಯಂಪ್ರತಿನಿಧಿಗಳಾ[illegible] ಸರಕಾರಿ [illegible] ಯಾರಕೂಡ [illegible] ಅನಹ [illegible]ರವು ಬೇಕೋ!” ಎಂಬಂತೆ ಪ್ರಾರ್ಥನೆ ಮಾಡಿ, ಠರಾವುಗಳನ್ನು [illegible]. ಬಹುಮತದಿಂದ ಈ ಠರಾವುಗಳು ನಾಪಾಸು ಆದವೆಂದು ಹೇಳುವದೇ ತಾತ್ಪರ್ಯವು. ಒಟ್ಟಿಗೆ, ಮುಂಬಯಿಯೊಳಗೆ ಸಂಧಾನವಾಗುವದು ಅವಶ್ಯಕವೆಂದು ನಿರ್ಣಯಿಸಲ್ಪಟ್ಟಾಗ, ದಿಲ್ಲಿಯೊಳಗೆ ಅದು ಅನಾವಶ್ಯಕವೆಂದು ನಿರ್ಣಯಿಸಿದಂತಾಯಿತು. ಈ ಪರಸ್ಪರ ಭಿನ್ನ ನಿರ್ಣಯಗಳು ದಿಲ್ಲಿಯು ದೂರವೆಂದು ಸಾರುವದಕ್ಕಿಂತ ಹೆಚ್ಚೇನು ಹೇಳುವವು ?

ದಿಲ್ಲಿಯು ನಮ್ಮ ಸ್ವರಾಜ್ಯವು ದೂರವದೆಂದು ಹಟವಾದಿಯಾಗಿ ಹೇಳುತ್ತಿದ್ದೇವೆ, ಮುಂಬಯಿಯು ಅದೇನು ಅಷ್ಟು ದೂರವಿಲ್ಲೆಂದು ಸಮಂಜಸತನದಿಂದಲೂ, ನಮ್ರತೆಯಿಂದಲೂ ಪ್ರತಿಪಾದಿಸುತ್ತಿದೆ. ದಿಲ್ಲಿ-ಮುಂಬಯಿಯೊಳಗಿನ ಮತಭೇದ, ಅಂತರಂಗ [illegible]ಜ್ಞಾನವಾದ್ದರಿಂದಲೇ ಮಹಾತ್ಮಾ ಗಾಂಧಿಯವರು ಮುಂಬಯಿಯ ಪರಿಷತ್ತಿನೊಳಗೆ ತಮ್ಮ ಅನುಯಾಯಿಗಳ ಸಹಿತ ತ್ಯಾಯಸ್ಥತನವನ್ನು ತಾಳಿಕೊಂಡಿದ್ದರೆಂದು ಹೇಳಬಹುದು ಅದೊಂದು ಅವರ ಜಾಣತನವು. ಸರಕಾರದ ಅಂತರಂಗದೊಳಗೆ ಬದಲಾಗಿದೆಂದು ಸ್ಪಷ್ಟ ಕಂಡು ಬಂದ ಕೂಡಲೆ, ಸಂಧಿ ಪ್ರಸ್ತಾಪವು ನಿಷ್ಪ್ರಯೋಜಕವೆಂದೂ ಅವರು ಮೊದಲೇ ಹೇಳುತ್ತಿದ್ದರು. ಇನ್ನಾದರೂ ಅವರ ಹೇಳಿಕೆಯೇನಂದರೆ, ನಾವು ಸ್ವರಾಜ್ಯವಾದಿಗಳು ತಕ್ಕಷ್ಟು ಶಕ್ತಿವಂತರಾಗಿಲ್ಲ ನಮ್ಮಲ್ಲಿ ಇನ್ನೂ ದುರ್ಬಲತೆ ಇದೆ. ಅದು ಪರಿಹಾರವಾದ ಕೂಡಲೆ ನಾವು ಶಕ್ತಿವಂತರಿದ್ದೇವೆಂದು ಮನಗಂಡ ಕೂಡಲೆ ತಾನಾಗಿ ರೀಡಿಂಗ ಪ್ರಭುಗಳು ಅವರ ಮನೆಯ ಬಾಗಿಲನ್ನು ತೆರೆದು ಅವರ ಕೂಡ ಸರಿಸಮಾನಸ್ಕಂಧರಂತೆ ಧೈರ್ಯದಿಂದ ಒಪ್ಪಂದದ ಮಾತುಕಥೆಯನ್ನು ನಡಿಸಬೇಕಾಗುವದು, ಇವು ಮಹಾತ್ಮರ ಧೀರೋದಾತ್ತ ನುಡಿಗಳು. ಕೆಂಗ್ರೆಸಿನ ಸರ್ವಾಧಿಕಾರಿಗಳ ವಿನಯಶೀಲ ಮಾತುಗಳು [illegible] ಸಾಹೇಬರು ಕಲಕತ್ತೆಯೊಳಗಿನ ತಮ್ಮ ಭಾಷಣದಲ್ಲಿ ಕೊಟ್ಟ ಆಶ್ವಾಸನಗಳನ್ನು ಕಾಯುವರೋ? ಯಾ ದಿಲ್ಲಿಯ ಸಭೆಯ ಧೋರಣವನ್ನು ಹಿಂಬಾಲಿಸುವರೋ ? ಇದೊಂದೇ ಪ್ರಶ್ನೆಯು ಈಗ ಪ್ರಾಮುಖ್ಯದ [illegible] ಉತ್ತರವನ್ನು ಕಾಯುತ್ತಿದೆ. ಈ ಉತ್ತರವು ದೊರೆಯುವ ತನಕ ದಿಲ್ಲಿಯು ದೂರವಿದೆಂದು ಜನರು ಭಾವಿಸಿದ [illegible] ಗತ್ಯಂತರವಿಲ್ಲ ಮುಂಬಯಿಯಿಂದ ದಿಲ್ಲಿಯ ಅಂತರವನ್ನು ಅಳೆಯಲು [illegible] ಸ್ವಪ್ರಯತ್ನದಿಂದಲೇ ಸಾಧ್ಯವಾಗುವದೆಂದು ಸ್ವಾವಲಂಬಿಗಳಂತೆ ನಾವೆಲ್ಲರೂ ನಂಬಿರುವೆವು.

* * *

ಸ್ಫುಟ ಸೂಚನೆಗಳು

ಮುಂಬಯಿಯೊಳಗೆ ನಡೆದ ಮಧ್ಯಸ್ಥರ (…ಪಕ್ಷೀಯ) ಪರಿಷತ್ತಿನೊಳಗಾದ ನಿರ್ಣಯಗಳ …ಪರಹವು ಏನೂ ಇರಲಿ. ಅವುಗಳನ್ನು ಮನ್ನಿಸಿ …ಸರಕಾರವು ಸಂಧಿ ಪ್ರಸ್ತಾಪವನ್ನು ನಡಿಸಲಿ …ಬಿಡಲಿ. ಪರಿಷತ್ತಿನೊಳಗೆ ನಡೆದ ಚರ್ಚೆಯಿಂದ … ಮಹಾತ್ಮಾ ಗಾಂಧಿಗಳ ಬೋಧಪ್ರದ ಭಾ…ದ ಜನಪಕ್ಷಕ್ಕೆ ಜನರು ಬೋಧವನ್ನು ಪಡೆ…ದಾಗಿದೆ ಶ್ರೀ। ಬೊಮ್ಮನಜಿಯವರು ಹೇಳು… ಸಭೆಯೊಳಗೆ ನಮ್ಮ ಸಂಯುಕ್ತ ದೇಶಬಾಂಧವ ವ್ಯಕ್ತಪಡಿಸಿದ ಉದ್ಗಾರಗಳನ್ನು ಸೂಕ್ಷ್ಮರೀತಿ…ದ ಅವಲೋಕಿಸಿದರೆ ನಮ್ಮ ಧುರೀಣರೊಳಗೆ ಪರಿತಾವಾದಿಗಳು ಇಲ್ಲೇ ಇಲ್ಲೆಂದು ಹೇಳಿದರೂ …ಮುದ. ಜುಲಿ ಮೈ ರಾಜ್ಯಕರ್ತರು "ಕಾಯಿದೆ… ವ್ಯವಸ್ಥೆ"ಗಳ ನೆವದಿಂದ ದಬ್ಬಾಳಿಕೆಯನ್ನು …ದನು ಇತಿಹಾಸದ ಅನುಭವವೇ ಸರಿ ಎಂದು …ವಾತಃಕಜಿ ವಾತಿಯಂವರಂಥ ನೇಮಸ್ತ…ಳು ಉದ್ಗರಿಸುವದೆಂದರೆ ಅದು ಸಣ್ಣ ಮಾತ…ನೂ ಇರಲಿ. ಸಂಧಾನವನ್ನು ಸರಕಾರವು …ನಿಜವಾದ ಪ್ರತಿನಿಧಿಗಳ ಕಡೆಗೆ ನಡಿಸಬೇಕು. …ಪ್ರತಿನಿಧಿಗಳನ್ನು ಈಗಿನ ಕೊಂಗ್ರೆಸ ಫೈಸ… ತತ್ವದಲ್ಲಿದ್ದಂತೆ ನಾಲ್ಕು ಆಣೆ ಕೊಡಲಿಚ್ಛಿಸುವ …ವಾದರೇ ಆರಿಸತಕ್ಕದ್ದು. ಈ ಪ್ರತಿನಿಧಿಗಳೇ ಸ…ವೆ ಕಾದ ಸ್ವರಾಜ್ಯದ ತಪಶೀಲುಗಳನ್ನು ಸೂಚಿ…ತಕ್ಕದ್ದು ಎಂದು ಮಹಾತ್ಮರು ಸ್ಪಷ್ಟೀಕರಿಸಿದ್ದಾರೆ …ಸೂಚನೆಯಲ್ಲಿ ಲೋಕಶಾಹಿಯ ತತ್ವವು ಪೂರ್ಣ… ಪ್ರತಿಬಿಂಬಿಸಲ್ಪಟ್ಟಿದೆ ಇದಲ್ಲದೆ ಮಹಾಸಭೆಯ …ದ ಪಕ್ಷಾದರಿಯ ಮತ್ತು ಡರೇಯ ಸ್ವರಾಜ್ಯ…ನಗೂ ಬೇಕೆಂದು ಪರಿಷತ್ತಿನ ನಿರ್ಣಯದಲ್ಲಿ …ಪಟ್ಟಿದೆ. ಸಧ್ಯಕ್ಕೆ ಪರಿಷತ್ತಿನ ಫಲಿತವೆಂಬುದ… ಈ ಸ್ಪಷ್ಟೀಕರಣವೇ ನಮಗಾದ ಶಾಶ್ವತಿಕ ಲಾ… ಮಂಡಳಿ, ಖಿಲಾಫತ್, ಮತ್ತು ಸ್ವರಾಜ್ಯ … ಅರ್ಥವು ಇನ್ನು ಎಲ್ಲರಿಗೂ ಅಸಂದಿಗ್ಧವಾಗಿ ಸ್ಪಷ್ಟವಾಗಿಯೂ ತಿಳಿಸಿದಂತಾಗಿದೆ. ನಮ್ಮ …ದ ಬೇಡಿಕೆಗಳ ವಿಷಯವಾಗಿ ನಮ್ಮ ಮನಸ್ಸಿ…ತ್ಯಲ್ಪ ಸಹ ಸಂದೇಹವು ಇನ್ನು ಮುಂದೆ ಉಳಿ…ದು. ಇದೇ ಈ ಪರಿಷತ್ತಿನ ವಿಜಯವು

ದಿಲ್ಲಿಯ ಕೌನ್ಸಿಲುಗಳಲ್ಲಿ ಈ ವಿಷಯ ನಡೆದ …ಯಿಂದಲೂ ನಾವು ಬಹಳೇ ಬೋಧಪಡುವ … ಮಧ್ಯಸ್ಥರ ಪರಿಷತ್ತಿನಲ್ಲಿ ಪುಣೆಯ ಸರ ವಾ…, ಲಖನೌದ ಪಂಡಿತ ಗೋಕರ್ಣನಾಥ ಇವ…ರು ನೇಮಸ್ತ ಧುರೀಣರು ಮೊಂಟೆಗ್ಯು ಸುಧಾರ… ನಿಷ್ಫಲವಾಗಿವೆಂದು ನಿರಾಶೆಯಿಂದ ಉದ್ಗರಿ…ಲ್ಲೇ ದಿವಸಗಳು ಮುಗಿಯುವಷ್ಟರೊಳಗೆ ದಿ… ಸುಧಾರಣಾ ಕೌನ್ಸಿಲುಗಳು ತಮ್ಮ ನಿರರ್ಥಕ…ನ್ನು ನಾ. ಅಯ್ಯರ ಚರಣ ಮತ್ತು ನಾ. ಸೇರನಾ… ಸೂಚಿಸಿದ ಠರಾವುಗಳನ್ನು ಬಹು ಮತದಿಂದ …ದು ಉದಾಹರಣೆಯಿಂದ ಸಿದ್ಧಪಡಿಸುತ್ತವೆ … ಕೌನ್ಸಿಲುಗಳು ಸ್ವಯಂಮನ್ಯ ಸಭಾಸದರಿಂದ …ತವಾಗಿವೆ. ಜನರ ನಿಜವಾದ ಪ್ರತಿನಿಧಿಗಳಿಂದ … ಕೃತವಾಗಿಲ್ಲ ಎಂದು ಮತ್ತೂ ಪುರಾವೆಯು …ನು? ಎನೀಬೇಸೆಂಟರ ಹಸ್ತಕರಾದ ನಾ. ಜ…ದಾಸ ಶೇಟರವರಂತೂ ಕೌನ್ಸಿಲನಲ್ಲಿ ಅಕಾಂಡತಾಂಡವ ಮಾಡಿ ಮಹಾತ್ಮರಿಗೂ ಅಸಹಕಾರಿತೆಗೂ ಯಥೇಚ್ಛ ಶಾಪದಳಿಂದ ಮನ್ನಿಸಿ ಆಗಿನಮೇಲೆ ಲಾಗು ಹೊಡೆದರು. ಅವರ ಆರಾಧ್ಯ ದೇವತೆಯಾದ ಬೇಝೆಂಟ ದೇವಿಯೂ ಸರಕಾರವೂ ಈ ಬಾಲವೀರನ ಕಸರತನ್ನು ನೋಡಿ ಅವನ ಬೆನ್ನು ಬಡಿಯದಿರರು. ಸರಕಾರದ ತರ್ಫಿನಿಂದ ಕಾವಾಡಲಿಕ್ಕೆ ಇವರೊಬ್ಬ ಚಲೋ ವಕೀಲರಾದರು. ತಯಾರಾಗುತ್ತಲಿದ್ದಾರೆ. ಅಂಥವರಿಗೆ ತಕ್ಕ ಇನಾಮು ಸಿಗದ ಎಂದೂ ಇರದು. ಇಷ್ಟೆಲ್ಲ ವಾಗ್ವಾದದ ಕವಾಯತಿನ-ದಲೂ ನಾ. ಈಶ್ವರಚರಣರ ತಹಕೂಬಿಯ ಸೂಚನೆಗೆ ೩೭ ಮತಗಳು ಸಿಕ್ಕೆ ಸಿಕ್ಕಿದವು. ಸರಕಾರದ ಪಕ್ಷಕ್ಕೆ ೫೨ ಮತಗಳಾದವು. ಸರಕಾರದ ದಬ್ಬಾಳಿಕೆಯ ಪರವಾದ ನಿಂದಾತ್ಮಕ ಠರಾವಿನ ಮೇಲೆ ೩೭ ದಿಟ್ಟಮತಗಳು ಅನುಕೂಲವಾದದ್ದು ಈಗಿನ ಕೌನ್ಸಿಲದ ಘಟನೆಯಲ್ಲಿ ಒಂದು ಸೋಜಿಗವೇ. ಗಾಳಿಯು ಮೆಲ್ಲಮೆಲ್ಲನೆ ಬೀಸುತ್ತಿದ್ದರೂ ಯಾವದಿಕ್ಕಿನಿಂದ ಬೀಸುತ್ತಿದೆಂದು ಪರೀಕ್ಷಿಸಲು ಇದೇ ಪ್ರಮಾಣವು. ಕೌನ್ಸಿಲವು ಸ್ವಯಂಮನ್ಯ ಧುರೀಣರಿಂದ ತುಂಬಿದ್ದಾಗ ಅದರೊಳಗೆ ೩೭ ಜನರಾದರೂ ಸ್ವತಂತ್ರ ಮತವಾದಿಗಳಿದ್ದಾರೆಂಬುದು ಸರಕಾರಕ್ಕಾದರೂ ನಿರಾಶಾಜನಕವಲ್ಲವೇ? ಅಸಹಕಾರಿಗಳಿಗೆ ಇಂಥ ಮತಪ್ರದರ್ಶನದಿಂದ ಲಾಭವೂ ಇಲ್ಲ ಹಾನಿಯೂ ಇಲ್ಲ. ತಹಕೂಬಿಯ ಠರಾವು ಕೌನ್ಸಿಲದಲ್ಲಿ ಪಾಸಾದರೆ ನಮಗೆ ಸ್ವರಾಜ್ಯವು ದೊರೆಯಿತು, ನಮ್ಮ ಕಷ್ಟಗಳ ಪರಿಹಾರವಾಯಿತ, ಎಂದು ಅವರ ಭಾವನೆಯು ಇದ್ದಿಲ್ಲ. ಕೌನ್ಸಿಲದ ಘಟನೆಯ ಚಮತ್ಕಾರಗಳನ್ನು ನೋಡಿ ಅವರಿಗೆ ಒಳ್ಳೇ ಮನೋರಂಜನವಷ್ಟು ಆಗುವದು, ಮತ್ತೇನಿಲ್ಲ. ಇವು ಜನರ ಪ್ರತಿನಿಧಿಗಳ ಕೌನ್ಸಿಲುಗಳಲ್ಲೆಂದು ಅವರು ಮೊದಲಿನಿಂದ ಪ್ರತಿಪಾದಿಸುವದನ್ನು ಕೌನ್ಸಿಲುಗಳೇ ಈಗ ಪ್ರಯೋಗದಿಂದ ಸಿದ್ಧಪಡಿಸಿದಂತಾಯಿತು..

---

೨. ದೇ। ಭ। ಕೀರ್ತನಕೇಸರಿ ಜಯರಾಮಾಚಾರ್ಯರ ಪರಿಚಯವು ನಮ್ಮಲ್ಲಿ ಅಬಾಲವೃದ್ಧರಿಗೆ ಆಗಿರುವದು. ಕೀರ್ತನಕೇಸರಿಗಳು ಪ್ರಾಂತಿಕ ಕೊಂಗ್ರೆಸ ಕಮೀಟಿಯ ಪರಿಯಿಂದ ಕೊಂಗ್ರೆಸ ಪ್ರಚಾರಕರಾಗಿ ನಮ್ಮ ಜಿಲ್ಲೆಯಲ್ಲೆಲ್ಲ ಪ್ರಯಾಣ ಬೆಳಿಸಿ ತಮ್ಮ ಸುಶ್ರಾವ್ಯ ಉಪನ್ಯಾಸಗಳಿಂದ ಜನರೊಳಗೆ ಬಹಳೇ ಜಾಗ್ರತಿಯನ್ನುಂಟುಮಾಡಿದರು. ಸಧ್ಯಕ್ಕೆ ಅವರು ದಕ್ಷಿಣ ಕಾನಡಾ ಜಿಲ್ಹೆಯಲ್ಲಿ ಸಂಚರಿಸುತ್ತಿದ್ದು ಉಡುಪಿಯಿಂದ ಮಂಗಳೂರಿಗೆ ಹೋಗಿ ಅಲ್ಲಿಂದ ಬೇಗನೇ ಕಾರವಾರವನ್ನು ಸಂದರ್ಶಿಸುವ ಕಾರ್ಯಕ್ರಮವನ್ನು ಮಾಡಿಟ್ಟಿದ್ದರು. ಆದರೆ ಅವರ ಕಾರ್ಯಕ್ರಮಕ್ಕೆ ವಿಘ್ನ ವಾಗುವದೋ? ಏನೋ? ಎಂಬ ಭೀತಿಯಾಗಿದೆ. ಅವರು ನಿಜಾಮಹೈದರಾಬಾದ ಪ್ರಾಂತದ ಮೂಲ ನಿವಾಸಿಕರಿದ್ದು ನೋಗಲ ಸಂಸ್ಥಾನದ ನಾಗರಿಕರು ಇದ್ದದರಿಂದಲೋ? ಏನೋ? ಅವರಿಗೆ ನಿಜಾಮಸರಕಾರದಿಂದ ನೋಟೀಸಿನ ಅಸ್ತ್ರವು ಲಾಗುಮಾಡಲ್ಪಟ್ಟಿದೆ. ಬ್ರಿಟಿಶ ಹದ್ದಿನೊಳಗೆ ನೀವು ವ್ಯಾಖ್ಯಾನಕೊಡುತ್ತ ತಿರುಗುವದನ್ನು ತಡಿಸದಿದ್ದರೆ ವಾರ್ಷಿಕ ಮೂರುಸಾವಿರ ಉತ್ಪನ್ನದ ಸಂಸ್ಥಾನದೊಳಗಿನ ನಿಮ್ಮ ಆಸ್ತಿಯು ನಿಜಾಮ ಸರಕಾರಕ್ಕೆ ಜಪ್ತಮಾಡಲ್ಪಡುವದೆಂದು ಹುಕುಂ ಹೊರಟಿದೆ. ಇದಕ್ಕೂ ಬೆದರದೆ ಧೀರ ನಾಯಕನಂತೆ ಅವರು ತಮ್ಮ ಪ್ರಚಾರಕ ಕಾರ್ಯವನ್ನ ಮುಂದರಿಸಿದ್ದಾರೆ ಅವರಿಗೆ ಹಿಂದುಸ್ಥಾನ ಸರಕಾರದ ಗುಪ್ತಪೋಲೀಸ ಖಾತೆಯ ಸೂಚನೆಯಿಂದ ನಿಜಾಮ ಸರಕಾರವು ಮುಖಬಂದಿಯ ಅಸ್ತ್ರವನ್ನು ಅವರ ಮೇಲೆ ಒಗೆದಿದ್ದಾರೆಂದು ತಿಳಿಯುತ್ತದೆ. ಸರಕಾರವು ಈ ದಕ್ಷಿಣ ಪ್ರಾಣಾಯಾಮದ ಆಯಾಸವನ್ನು ತಕ್ಕೊಳ್ಳುವದಕ್ಕಿಂತ ಬ್ರಿಟಿಷ ಹದ್ದಿನಲ್ಲಿ ನೀವು ಜಿಲ್ಲೆಯ ಕೆರೆಯ ಬಾರದೆಂದು ಸಾದಾ ಹುಕುಂ ಯಾಕೆ ಮಾಡುವದಿಲ್ಲ? ಒಟ್ಟಿಗೆ ಈ ಲಕ್ಷಣಗಳನ್ನು ನೋಡಿದರೆ ಅವರಿಗೂ ಸ್ವರಾಜ್ಯಾಶ್ರಮಕ್ಕೆ ತಪಶ್ಚರಣೆಗೆಂದು ಬೇಗನೇ ತೆರಳುವ ಪ್ರಸಂಗವು ಬರುವದೆಂದು ಕಾಣುತ್ತದೆ. "ಅಲೀಯಾ ಭೋಗಾಪಿ ಅಸಾವೆಂ ಸಾದರ" ಎಂದು ಎಲ್ಲ ನಾಯಕರು ಸಿದ್ಧರೇ ಆಗಿರುವರು. ಇನ್ನು ಮತ್ತೇತರ ಚಿಂತೆ!

---

೪ ದೇಶದಲ್ಲೆಲ್ಲ ರಾಷ್ಟ್ರೀಯ ಚಳವಳಿಯ ಪ್ರಸಾರವು ಆಗಹತ್ತಿದಂತೆ ಗೋಕರ್ಣದಲ್ಲಿಯೂ ಆಗಹತ್ತಿದೆಂದು ಎಲ್ಲರೂ ಬಲ್ಲರು. ರಾಷ್ಟ್ರೀಯ ಚಳವಳಿಯು ತೀರ ಶಾಂತತಾ ಪ್ರಧಾನವಾದದ್ದು ಅದರಲ್ಲಿ ಎಳ್ಳಷ್ಟು ಸಹ ಕಾಯಿಕ ಅತ್ಯಾಚಾರವಂತೂ ಇರಲೇ ಬಾರದು. ಇಷ್ಟೇ ಅಲ್ಲ, ಮನಸ್ಸಿನಲ್ಲಿ ಯಾ ವಾಚೆಯಲ್ಲಿ ಸಹ ಅತ್ಯಾಚಾರಕ್ಕೆ ಇಂಬು ದೊರೆಯಬಾರದು. ಹೀಗಿದ್ದು ಗೋಕರ್ಣದೊಳಗೆ ಮಾತ್ರ ಕೆಲವರು ಮನೆ ಜಪ್ತಿಗೆ ಬಂದ ಸರಕಾರಿ ನೌಕರರಿಗೆ ಆಹಾರ ವಿಹಾರಕ್ಕೆ ಬೇಕಾದ ಸಾಮಾನು ಸಿಗದಂತೆ ಪೀಡಿಸುವ ಅಡ್ಡ ಮಾರ್ಗವನ್ನು ಹಿಡಿದಿದ್ದಾರೆಂದು ಮೆ। ಕಲೆಕ್ಟರರಿಗೆ ವರದಿಯು ಮುಟ್ಟಿರುವದಂತೆ! ಮತ್ತು ಮೆ। ಕಲೆಕ್ಟರರು ಈ ವಾರ್ತೆಯನ್ನು ಕೇಳಿ, ನೀವು ಸರಕಾರಿ ನೌಕರರಿಗೆ ಸಾಮಾನು ಸಿಗದಂತೆ ಅಡಕ ಮಾಡಲಿಕ್ಕೆ, ಅವರಿಗೆ ಸಾಮಾನು ಸಿಗಬಾರದೆಂದು ಅಂಗಡಿಗಳ ಹತ್ತರ ಪಿಕೆಟಿಂಗ ಮಾಡಲಿಕ್ಕೆ ಅಥವಾ ಈ ಉದ್ದೇಶದಿಂದಲೇ ಗೋಕರ್ಣದಿಂದ ಐದು ಮೈಲಿನ ಹದ್ದಿನೊಳಗೆ ಎಲ್ಲಿಯಾದರೂ ಸಭೆ ಕೂಡಿಸಿ ಜನರಿಗೆ ಉಪದೇಶಿಸಲಿಕ್ಕೆ ೧೪೪ ಕಲಮಿನಂತೆ ಎರಡು ತಿಂಗಳು ತನಕ ಮನಾಯಿ ಇರುತ್ತದೆಂದು ಜಾಹೀರು ಪಡಿಸಿರುವರು. ಈ ಪ್ರಕಟನೆಗೆ ಆಧಾರವಾಗಿರುವದೆಂಬ ವಾರ್ತೆಯು ನಿಜವಾಗಿದ್ದರೆ, ಮೆ। ಕಲೆಕ್ಟರರ ಹುಕುಮು ಸಕಾರಣವೂ ನ್ಯಾಯವೂ ಎಂದು ಹೇಳಬಹುದು. ಆದರೆ, ಈ ತನಕ ನಮ್ಮ ಕೈಸೇರಿದ ಮಾಹಿತಿಯ ಮೇಲಿಂದ ಈ ಪ್ರಕಟನೆಯು ತೀರ ಅನಾವಶ್ಯಕವೂ ನಿಷ್ಕಾರಣ ಭೀತಿಯ ದ್ಯೋತಕವೂ ಎಂದು ಹೇಳಬೇಕಾಗಿದೆ. ಯಾಕೆಂದರೆ, ಜಪ್ತಿಗೆ ಪ್ರಾರಂಭವಾದ ಮಾರನೇ ದಿವಸ ಅಂದರೆ ಕಳೆದ ೬ ನೇ ತಾರೀಖಿಗೆ ಕೂಡಿದ ಕೊಂಗ್ರೆಸ ಕಮೀಟಿಯು ಜಾಹೀರ ಸಭೆಯಲ್ಲಿ ಸರಕಾರಿ ನೌಕರರಿಗೆ ಮನುಷ್ಯಪ್ರಾಣಿಗೆ ಅವಶ್ಯವುಳ್ಳ ಆಹಾರ ವಿಹಾರದ-ಅನಾನುಕೂಲತೆಯಾಗದಂತೆ ಪ್ರತಿ ಒಬ್ಬರು ವರ್ತಿಸಬೇಕೆಂದು ಸರ್ವರಿಗೆ ಜಾಹೀರ ಪಡಿಸಿದ್ದಲ್ಲದೆ, ಈ ಸಂಗತಿಯನ್ನು ಮೆ। ಮಾಮಲೇದಾರ, ಮತ್ತು ಮೆ। ಕಲೆಕ್ಟರರಿಗೆ ತಿಳಿಸಿರುತ್ತದಂತೆ ಜಪ್ತಿಯಾದ ಮೊದಲನೇ ದಿವಸ ಸರಕಾರಿ ನೌಕರರನ್ನು ಪೀಡಿಸಬೇಕೆಂಬ ವಿಚಾರವು ಕೆಲ ಉತ್ಸಾಹಿ ಜನರಲ್ಲಿ ತಲೆದೋರಿತ್ತೆಂದು ಒಂದು ವೇಳೆ ಕಲ್ಪಿಸಿದರೆ, ಮಾರನೇ ದಿವಸವೇ ಕೊಂಗ್ರೆಸ ಕಮೀಟಿಯು ಜಾಹೀರ ನಿರ್ಣಯದಿಂದ ಆ ವಿಚಾರವು ತ್ಯಾಜ್ಯವಾಯಿತೆಂಬುದು ಸ್ಪಷ್ಟವು. ಹೀಗಿದ್ದು ೫-೬ ದಿವಸ ವಿಚಾರ ಮಾಡಿ, ತಾ. ೧೨ ಕ್ಕೆ ಕಲೆಕ್ಟರರು ಈ ಮನಾಯಿ ಹುಕುಮು ಹೊರಡಿಸುವ ಅವಶ್ಯ

ಕತೆಯು ಏನಿತ್ತೆಂದು ನನಗಂತೂ ತಿಳಿಯದು. ಕೊಂಗ್ರೆಸ್ಸಿನ ಅಹಿಂಸೆಯ ತತ್ವವನ್ನು ಕೊಂಗ್ರೆಸ ಭಕ್ತರು ಆಚರಿಸಬೇಕೆಂಬ, ಇಂಥ ಸರಕಾರಿ ಹುಕುಮುಗಳಿಂದ ನಾವು ಇನ್ನೂ ಕಲಿಯಬೇಕಾಗಿಲ್ಲ. ಆ ಬಗ್ಗೆ ನಮಗೆ ಮಹಾತ್ಮರ ಆಜ್ಞೆಯು ಮೊದಲೇ ಇದ್ದೇ ಇರುವದು. ಪೇಂಟರ ಸಾಹೇಬರನ್ನು ಬಹಿಷ್ಕರಿಸಿರೆಂದ ಮಹಾತ್ಮರು ಗುರ್ಜರ ಪ್ರಾಂತದವರನ್ನು ಉಪದೇಶಿಸಿದಾಗ, ಅವರಿಗೆ ಆಹಾರ-ವಿಹಾರದ ಜೀನಸು ಅಟಕೆ ಮಾಡಿ ಪೀಡಿಸುವಂಥ ಮಾನವ ಧರ್ಮಕ್ಕೆ ವಿರುದ್ಧವಾದ ಕೃತ್ಯಗಳನ್ನು ಯಾರೂ ಮಾಡಬಾರದೆಂದು ಮಹಾತ್ಮರು ಎಚ್ಚರಿಕೆ ಕೊಟ್ಟಿದ್ದು ಎಲ್ಲ ವಾಚಕರ ಲಕ್ಷದಲ್ಲಿದ್ದಿರಬಹುದು. ಹೊರ್ತು, ಸರಕಾರೀ ನವುಕರರಾದರೂ ನಮ್ಮ ಬಾಂಧವರಲ್ಲವೇ? ಅವರು ಕೆಲ ದೇಶಭಕ್ತರಷ್ಟು ಸ್ವಾರ್ಥತ್ಯಾಗಿಗಳು ಆಗದೆ ಇರಲಿಕ್ಕೆ ಸಾಕು. ಹೀಗಿದ್ದರೂ ಅವರಲ್ಲಿ ರಾಷ್ಟ್ರವಾದಿಯು ಇಲ್ಲ ಎಂತ ಹೇಳಕೂಡದು. ಅನೇಕ ಕಾರಣಗಳಿಂದ ಅವರ ಮನೋದುರ್ಬಲತೆಯು ಅವರನ್ನು ಹಿಂದುಳಿಸಿರಲಿಕ್ಕೆ ಸಾಕು. ಅದ್ದರಿಂದ ಅವರ ಉದರ ನಿರ್ವಾಹಕ್ಕೆ ವಗೈರೆ ಅವಶ್ಯಕವಾಗಿರುವ ಸಾಮಾನು ಸಹ ಅವರಿಗೆ ಕೊಡದೆ ಅವರಿಗೆ ನಮ್ಮ ಮತಕ್ಕೆ ಎಳಕೊಳ್ಳುವದೆಂದರೆ ತೀರ ಅನ್ಯಾಯದ, ಅಹಿಂಸಾಪರ ಚಳವಳಿಗೆ ವಿರುದ್ಧವಾದ ಉಪಕ್ರಮವೇ ಸರಿ. ಅವರು ಈಹೊತ್ತು ಇಲ್ಲವೇ ನಾಳೆಗೆ, ಅವರ ಮನೋಶಕ್ತಿಯು ಹೆಚ್ಚೆಚ್ಚು ಪ್ರಬಲವಾಗಿ, ನಮ್ಮನ್ನು ಹಿಂಬಾಲಿಸದಿರರು. ಅದ್ದರಿಂದ ಸಾಮಾಜಿಕ ಬಹಿಷ್ಕಾರದಂಥ ಅಸಹ್ಯ ಉಪಕ್ರಮಕ್ಕೆ ಗೋಕರ್ಣ ನಿವಾಸಿಕರಾಗಲಿ, ಇನ್ನಾವ ಕೊಂಗ್ರೆಸ್ಸಿಗರಾಗಲಿ, ಎಡೆ ಕೊಡಲಾರರೆಂದು ನನಗೆ ಪೂರ್ಣ ಆಶೆ ಇದೆ.

ಶಿರ್ಸಿಯಲ್ಲಿ ತಾ. ೨೨—೧—೨೨ರಲ್ಲಿ ಕೂಡಿದ ಕಾನಡಾ ಜಿಲ್ಲೆಯ ಕೊಂಗ್ರೆಸ ಕಮಿಟಿಯ

ಮಹಾಸಭೆಯಲ್ಲಿ ಪಾಸಾದ ಠರಾವುಗಳು.

೧. ಪ್ರತಿ ಒಂದು ತಾಲೂಕಿನಿಂದ ಈ ಸಭೆಗೆ ಆರಿಸಿ ಕಳುಹಿಸಿದ ೧೦ ಜನರೇ ಜಿಲ್ಲಾ ಮಹಾಸಭೆಯ ೧೯೨೨ ನೇ ನವಂಬರ ವರೆಗೆ ಮೆಂಬರುಗಳಾಗಿರಬೇಕು ಮತ್ತು ೨೧-೮-೧೯೨೧ ನೇ ದಿವಸ ಸೇರಿದ ಮಹಾಸಭೆಯಲ್ಲಿ ನೇಮಕಪಟ್ಟ ಅಧ್ಯಕ್ಷ ಉಪಾಧ್ಯಕ್ಷ ವಗೈರೆ ಆಫೀಸ ಅಧಿಕಾರಿಗಳು ಮತ್ತು ಕಾರ್ಯಕಾರಿ ಮಂಡಳದ ಸಭಿಕರು ೧೯೨೨ ನೇ ನವಂಬರ ವರೆಗೆ ಅಧಿಕೃತವಿರಬೇಕಾಗಿ ಇದ ಠರಾವು ಈ ಸಭೆಯು ಮಂಜೂರ ಮಾಡುತ್ತದೆ.

೨. [illegible]ಯಿಂದ ಜಿಲ್ಲಾ ಕಮಿಟಿಗೆ ಕೊಡಬೇಕಾದ ಟಿಳಕ ಸ್ವರಾಜ್ಯ ಫಂಡಿನ ಮತ್ತು ಮೆಂಬರಶಿಪ್ ಫೀ ಭಾಗವನ್ನು ಕೂಡಲೇ [illegible] ಕಮಿಟಿಯವರು ಕಳುಹಿಸಿಕೊಡಬೇಕು

೩. ಮುರ್ಡೇಶ್ವರ ಗ್ರಾಮ ಕಮಿಟಿಯ ಲೆಕ್ಕಪತ್ರಗಳನ್ನು ತಪಾಸಣೆ ಮಾಡಿ ಅಲ್ಲಿಯ ವ್ಯವಸ್ಥೆ ಕುರಿತು ರಿಪೋರ್ಟ ಮಾಡುವ ಬಗ್ಗೆ ಜಿಲ್ಲಾ ಕಮಿಟಿಯ ಸೆಕ್ರೆಟರಿಗಳಿಗೆ ನೇಮಿಸತಕ್ಕದ್ದು. ಅವರು ಒಂದು ತಿಂಗಳ ಒಳಗೆ ತಮ್ಮ ರಿಪೋರ್ಟನ್ನು ಜಿಲ್ಲಾ ಕಮಿಟಿಯ ಕಾರ್ಯಕಾರಿ ಮಂಡಳಕ್ಕೆ ಸಾದರಮಾಡತಕ್ಕದ್ದು.

೪. ಅಹಮದಾಬಾದ ಕಾಂಗ್ರೆಸ ಠರಾವ ಪ್ರಕಾರ ಪ್ರತಿ ಒಂದು ಜಿಲ್ಲಾ ಮತ್ತು ತಾಲೂಕಿನ ಒಳಗೆ ಸ್ವಯಂಸೇವಕರ ಪಥಕಗಳನ್ನು ನಿರ್ಮಿಸುವದು ಅವಶ್ಯವಿರುವದರಿಂದ ಪ್ರತಿ ತಾಲೂಕ ಕಮಿಟಿಯವರು ಆಯಾಯ ತಾಲೂಕಿನ ಜನಸಂಖ್ಯೆಯ ಮಾನದ ಮೇಲೆ ೧೦೦ ಕ್ಕೆ ಕನಿಷ್ಠ ೧೦ ರಂತೆ ಸ್ವಯಂಸೇವಕರನ್ನು ಫೆಬ್ರವರಿ ಆಖೈರ ಒಳಗೆ ತಯಾರ ಮಾಡಿ ಜಿಲ್ಲಾ ಕಮಿಟಿಗೆ ರಿಪೋರ್ಟ ಮಾಡತಕ್ಕದ್ದು. ಪ್ರತಿ ಸ್ವಯಂಸೇವಕರು ಬರಕೊಡತಕ್ಕ ಶಪಥ ಫೊರ್ಮುಗಳನ್ನು ಜಿಲ್ಲಾ ಕಮಿಟಿಗೆ ಬರೆದು ತರಿಸಿಕೊಳ್ಳತಕ್ಕದ್ದು.

೫. ಅಸ್ಪೃಶ್ಯತಾನಿವಾರಣ ತತ್ವ ಅಮಲಿನಲ್ಲಿ ತರುವದಕ್ಕೆ ಪ್ರತಿ ಒಂದು ಕಮಿಟಿಯವರು ಮತ್ತು ಪ್ರತಿ ಒಬ್ಬ ಅಸಹಕಾರ ಸಂಘದವನು ಈ ಕೆಳಗಿನ ಉಪಾಯಗಳನ್ನು ಯೋಜಿಸಬೇಕು

(೧) ರಾಷ್ಟ್ರೀಯ ಶಾಲೆಗಳಲ್ಲಿ ಧಾರ್ಮಿಕ ಅನಾನುಕೂಲಗಳಾಗಿ ವಿರುದ್ಧವಾಗದಂತೆ ಅಸ್ಪೃಶ್ಯವರ್ಗದ ಹುಡುಗರನ್ನು ಭೇದವಿಲ್ಲದೆ ನಡಿಸಬೇಕು

(೨) ಸಾರ್ವಜನಿಕ ಅಂದರೆ ಮುಖ್ಯವಾಗಿ ಅಸಹಕಾರ ಸಭೆಗಳಲ್ಲಿ ಈ ವರ್ಗದವರನ್ನು ಕೂಡಿಸಿಕೊಂಡು ನಡಿಸಬೇಕು.

(೩) ಸಾರ್ವಜನಿಕ ಬಾವಿಗಳ ವಗೈರೆಗಳ ಉಪಯೋಗದಲ್ಲಿ ಅವರಿಗೆ ಎಲ್ಲರಂತೆ ಮೋಕಳೀಕ ಇರಬೇಕು.

(೪) ಸ್ವಯಂಸೇವಕರ ಪಥಕಗಳಲ್ಲಿ ಈ ವರ್ಗದವರನ್ನು ಸೇರಿಸಿಕೊಳ್ಳಬೇಕು

೬. ಗೋಕರ್ಣದ ಮುನಿಸಿಪಲದ ತೆರಿಗೆ ಕೊಡದ ಪ್ರಜನರು ಅವರಮೇಲೆ ಅವರ ಇಚ್ಛೆಯ ವಿರುದ್ಧ [illegible]ರಿಗೆ ಕೂಡ್ರಿಸಿದ ಸಮ್ಮಂಧ ಅಲ್ಲಿ ತೋರಿಸಿದ ಶಾಂತಿಯ ವೃತ್ತಿ ಬಗ್ಗೆ ಈ ಸಭೆಯು ಅವರನ್ನು ತುಂಬಾ ಅಭಿನಂದಿಸುತ್ತದೆ ಮತ್ತು ಅವರ ಶಾಂತಿಯುದ್ಧದ ಬಗ್ಗೆ ತನ್ನ ಪೂರ್ಣ ಸಹಾನುಭೂತಿ ವ್ಯಕ್ತಮಾಡುತ್ತದೆ ಮತ್ತು ಇದೇ ರೀತಿ ಶಾಂತಿಯ ವೃತ್ತಿಯನ್ನು, [illegible] ಅಧಿಕಾರಿಗಳ ಸಂಗಡ ಕೂಡಿದ ಅವರ ಶಾಂತಿಯ [illegible] ಕೊನೆಯವರೆಗೆ ಪಾಲನೆ ಮಾಡುವರೆಂದು ಈ ಸಭೆಯು ನಂಬುತ್ತದೆ.

೭. ಈ ಜಿಲ್ಲೆಯೊಳಗಿನ ಕಾಲೇಜ ಬಿಟ್ಟ ವಿದ್ಯಾರ್ಥಿಗಳ ಒಂದು ಸ್ವಯಂಸೇವಕ ಪಥಕವನ್ನು ಜಿಲ್ಲಾ ಕಮಿಟಿಯ ನೇತೃತ್ವದಲ್ಲಿ ನಿರ್ಮಿಸತಕ್ಕದ್ದು. ಈ ಸ್ವಯಂಸೇವಕರು ರಾಷ್ಟ್ರೀಯ ಸ್ವಯಂಸೇವಕರ ಕರ್ತವ್ಯಗಳನ್ನು ಮಾಡುವದಲ್ಲದೆ ತಾಲೂಕ ಮತ್ತು ಗ್ರಾಮ ಕಮಿಟಿಗಳ ಸ್ವಯಂಸೇವಕರಿಗೆ ಶಿಕ್ಷಣ ಕೊಡತಕ್ಕದ್ದು ಮತ್ತು ಜನರಲ್ಲಿ ಕಾಂಗ್ರೆಸ ತತ್ವಗಳ ಪ್ರಸಾರ ಮಾಡತಕ್ಕದ್ದು. ಹಾಗೂ ಜಿಲ್ಲಾ ಕಮಿಟಿಯವರು ಹೊತ್ತೊತ್ತಿಗೆ ನೇಮಿಸಿಕೊಡುವ ಕಾಂಗ್ರೆಸ ಕೆಲಸಗಳನ್ನು ಮಾಡತಕ್ಕದ್ದು. ಈ ಬಗ್ಗೆ ಅವರಿಗೆ ೬ ತಿಂಗಳ ಪರಿಯಂತರ ದರ ಮಾಹೆ ೧೦-೦-೦ ರಂತೆ ಜಿಲ್ಲಾ ಕಮಿಟಿಯವರು ಕೊಡುವ ವ್ಯವಸ್ಥೆ ಮಾಡತಕ್ಕದ್ದು. ಈ ಸ್ವಯಂಸೇವಕರ ಸಂಖ್ಯೆ ೫ ಕ್ಕಿಂತ ಹೆಚ್ಚಾಗಕೂಡದು

ಮುಂಬಯಿಯ ಮುಖಂಡರ ಪರಿಷದೆಯ ಉತ್ತರೇತಿಹಾಸವು

ಪಂಡಿತ ಮದನ ಮೋಹನ ಮಾಲವೀಯರು ಮುಂಬಯಿಯಲ್ಲಿ ಕೂಡಿಸಿದ ಮುಖಂಡರ ಪರಿಷದೆಯ ತ್ರೋಟಕ ಕಥೆಯು ಹಿಂದಿನ ಸಂಚಿಕೆಯಲ್ಲಿ ಪ್ರಸಿದ್ಧವಾಗಿಯದೆ. ಪರಿಷದೆಯ ಸ್ವೀಕೃತ ಸರ ಶಂಕರನ್ ನಾಯರರು ಅವಿಶ್ವವಾದ ಸಂದೇಹ. ಸುಮಾರಕ್ಕೆ ಸಿಟ್ಟಿನಿಂದ ಕಮಿಟಿಯೊಳಗಿಂದ ಎದ್ದು ಹೋಗಿದ್ದರಿಂದ ಕಮಿಟಿಯಲ್ಲಿ ಏನಾಯಿತ, ಎಂದು ತಿಳಕೊಳ್ಳುವ ಕುತೂಹಲವು ಎಲ್ಲರಿಗೂ ಉಂಟಾಯಿತು. ಆದರೆ, ಕಮಿಟಿಯೊಳಗಿನ ಚರ್ಚೆಯು ಪೂರ್ಣ ಖಾಸಗಿ ಸ್ವರೂಪದ್ದು ಇರುವದರಿಂದ ಅಲ್ಲೇನಾಯಿತೆಂದು ಸರ್ವಸಾಧಾರಣ ಜನತೆಗೆ [illegible] ತಿಳಿದಿಲ್ಲ

ಇಂಥ ಪರಿಸ್ಥಿತಿಯಲ್ಲಿ ಸರ ಶಂಕರನ್ ನಾಯ ಕ್ರೋಧವಶರೂ ಅಹಂಕಾರಮೂಢರೂ “ಟೈಮ್ಸ ಆಫ ಇಂಡಿಯಾ” ಪತ್ರಕ್ಕೆ ಒಂದು ದ್ದನ್ನ ಪತ್ರ ಬರೆದು, ಮಹಾತ್ಮರ ಯಥಾರ್ಥ ಧೋರಣದ ವಿಪರ್ಯಾಸ ಮಾಡಿ ಪ್ರಕಟಿಸಿದ್ದರಿ ಜನರಲ್ಲಿ ಆ ಬಗ್ಗೆ ತಪ್ಪು ತಿಳಿವಳಿಕೆಯಾಗಲು ಲೋ ಆಸ್ಪದವಾಯಿತು. ಆ ಪತ್ರದಲ್ಲಿ ಈ ಸರ ಹೇಬರು ಹೇಳಿದ್ದೇನಂದರೆ, “ಗಾಂಧಿಯವರು ಬಂಧುಗಳ ಬಿಡುಗಡೆ, ಇಜಿಪ್ತದ ಸ್ವಾತಂತ್ರ್ಯ, ಕಿಯ ಸ್ವಾತಂತ್ರ್ಯ, ಇತ್ಯಾದಿಗಳ ಅವ್ಯವಹಾ ಶರ್ತುಗಳನ್ನು ಹೇಳುತ್ತಾರೆ. ಸರಕಾರದ ಎದು ಮಾಡಲು ಹವಣಿಸುತ್ತಾರೆ, ಮೋಪ್ಲಾ ದಂಗೆ ದ ಅನಿಷ್ಟ ಸಂಗತಿಗಳೆಲ್ಲ ಗಾಂಧಿಯವರ ಚಳವಳಿ ಪರಿಣಾಮವು. ಇಂಥ ಪ್ರಸಕ್ತಿಯಲ್ಲಿ ಗಾಂಧಿಗಳ ಕ ತ ಮಾತುಕತೆ ಮಾಡುವ ಶಕ್ಯತೆಯೇ ಇಲ್ಲ ಇತ್ಯಾದಿ ವಿಧಾನಗಳನ್ನು ಮಾಡಿದ್ದರು. ಪತ್ರ ಮಾಡಿದ ಮಿಥ್ಯಾ ವಿಧಾನಗಳನ್ನೂ, ಮಿಥ್ಯಾ ಆರ ಪಗಳನ್ನೂ ಭೇದಿಸುವ ದೆಸೆಯಿಂದ ಮ|| ಗಾಂ ವಿ. ನಟರಾಜನ್, ಜೆ. ಜಿನ್ನಾ, ಜೆ. ಬೆವಟಿಸ್ಟಾ, ಜಯಕರ ಮೊದಲಾದವರಿಗೆ ಮೊದಲು ಅಪ್ರಕಾ ಶಿತ ಕಮಿಟಿಯ ಚರ್ಚೆಗೆ ಪ್ರಕಾಶ ಕೊಡಬೇ ಯಿತು. ಅವರು ಪ್ರಸಿದ್ಧ ಮಾಡಿದ ಸಂಗತಿಗಳ ಲಿಂ, ಗಾಂಧಿಯವರು ಸರಕಾರದ ಹತ್ತರ ಮಾ ಕಥೆ ನಡೆಸುವ ಮೊದಲು, ಬ್ರಿಟಿಷರು ಇಜಿಪ್ತ ಬಿಟ್ಟು ಹೋಗಬೇಕು, ಫ್ರೆಂಚರು ಸೀರಿಯಾದಿ ಕಾಲು ತೆಗೆಯಬೇಕೆಂದು ಮಹಾತ್ಮರು ಹೇಳಿದ್ದ ಬ ಸರ ಶಂಕರನವರ ವಿಧಾನವು ತೀರ ನಿರಾಧಾರ ವು ಸಿದ್ಧವಾಯಿತು. ಮತ್ತು ಸರ ಶಂಕರನರು ಸ್ವ ರ ಈ ಸಾಲೆಯ ಕರ್ತವ್ಯವನ್ನು ಮರೆತು ಖಾಸ [illegible] ಪರಿಷತ್ತು [illegible]ಬೇಕೆಂಬ ಅವರ ಆಸ ಸ ಮತ್ತು ಉದ್ದಾಮ ವರ್ತನವು ಸರ್ವತ್ರ ಇನ್ನಿ ಹೊರಬಿತ್ತು. ‘ನಿಮ್ಮ ಪರಿಷತ್ತಿನಿಂದ ಎದ್ದು ಹೋ ರೂ ಅಡ್ಡಿ ಇಲ್ಲ. ಇಂಥ ವರ್ತನವನ್ನು ನಾವು ಸ ಬಾರೆವು’ ಎಂದು ಶಾಂತ ಸ್ವಭಾವದ ಬೆರಿಸ್ಟರ ಜರರು ಸಹ ಒಮ್ಮೆ ಅವರಿಗೆ ಸ್ಪಷ್ಟವಾಗಿ ಹೇ ಕಾಯಿತಲ್ಲ! ಇರಲಿ.

ಸರ ಶಂಕರನ್ನರ [illegible]ದಿಂದ ನಮ್ಮ ಸರ ಕ್ಕೂ, ಎಂಗ್ಲೋ ಇಂಡಿಯನ ಪತ್ರಕಾರರಿಗ [illegible] ಸಹಕಾರಿ ಮುಖಂಡರಿಗೂ, ಜಿ ಹಾ ಮೆಲೂ, ಅವರ ಚಳವಳಿಯಮೇಲೂ ಟೀಕೆ ಮಾ ಲಿಕ್ಕೆ ಸಾಧನವಾಯಿತು! ಮತ್ತು ಈ ಎಲ್ಲ ಸ ಗಳ ಮೇಲಿಂದ ಮಹಾತ್ಮಾ ಗಾಂಧಿಯವರ ಕ ಸರಕಾರವು ಒಪ್ಪಂದ ಮಾಡುವದು ಅಶಕ್ಯವು, ಅಯೋಗ್ಯವು ಎಂಬ [illegible] ಇತ್ಯರ್ಥವನ್ನು ತ ದ್ದಾರೆ! ಹೋದ ತಾ. ೧೮ ಕ್ಕೆ ದಿಲ್ಲಿಯಲ್ಲಿ ಲೆ ಟಿವ್ಹ ಎಸೆಂಬ್ಲಿಯಲ್ಲಿ [illegible] ಈಶ್ವರ ರ ಸರಕಾರಕ್ಕೆ ಈಗಿನ ಪಾಲಿಸಿಯ ಗೋಲ ತ್ಯಜಿಸಿ ಒಪ್ಪಂದ ಪರಿಷದೆಯನ್ನು ಕೂಡಿಸಬೇಕೆ ವಿನಂತಿ ಮಾಡುವ ಠರಾವನ್ನು [illegible] [illegible] ವಿ [illegible], ಮುಂಬಯಿ ಮಿ|| ಸಮರ್ಥ ಪ್ರಭೃತಿಯವರ ಸಹಾಯದಿಂದ ಸರ ವಿನ್ಸೆಂಟ [illegible] ಲೀಲೆಯಿಂದ ಸಾ ಮಾಡಿಸಿದ [illegible] ಕೌನ್ಸಿಲ ಒ ಜದೊಳಗೂ ಇದೇ ಅರ್ಥದ ನಾ|| [illegible] ರಾವು ಸಹ ನಾಪಾಸಾಯಿತು. ಒಟ್ಟಿಗೆ

ಅವರ “ಜೀ ಹುಕುಮ” ಸಹಕಾರಿಗಳಿ ನ ಹಾಸ್ಯಾಚಿಯವರ ಕೂಡ ಒಪ್ಪಂದ ಮಾಡು ದು ಇಷ್ಟವಿಲ್ಲೆಂದು ನಿರ್ಣಯವಾಯಿತು ! ಈಗ ದೇನು ಆಗುತ್ತದೆಂದು ನೋಡುವಾ.

ಸ್ಥಾನಿಕ ವೃತ್ತಾಂತ.

ಕುಮಟಾ— ಚಳಿ ಬೀಳುತ್ತಲಿದೆ, ಜ್ವರ, ಸಿಡುಬು ವ್ಯಾಧಿ ರೋಗಗಳೂ ಸ್ವಲ್ಪ ಸ್ವಲ್ಪ ಇವೆ.

ಕಳೆದ ಮತ್ತು ಈ ರವಿವಾರ ಈ ಊರ ಮುಷ್ಟಿಫಂಡಿನ ಅಕ್ಕಿಯು ಮತ್ತು ನಗದು ಹಣದ ಒಟ್ಟು ಉತ್ಪನ್ನ ರೂ ೬೩-೬-೧ ಕೂಡಿರುವದು, ಮತ್ತು ಮಹಾತ್ಮಾ ಗಾಂಧಿ ತಾತ್ಕಾಲಿಕ ಫಂಡಿಗೆ ರೂ ೧-೪-೬ ಜಮಾ ಆಗಿರುತ್ತದೆ.

ಇದಲ್ಲದೆ—ಧಾರೇಶ್ವರದಲ್ಲಿ ಮತ್ತು ಹೆಗಡೆಯಲ್ಲಿ ರಥೋತ್ಸವ ಜಾತ್ರೆಯಲ್ಲಿ ಹಬ್ಬಿಗರಿಂದ ಸ್ವಯಂ ಸೇವಕರು ಕೂಡಿಸಿದ ನಿಕ್ಕಿ ರೂ. ೩-೧೩-೦ ಮತ್ತು ರೂ ೨೩-೩-೯ ಇಲ್ಲಿಯ ಮುಷ್ಟಿ ಫಂಡಿಗೆ ಜಮಾ ಬಂದಿರುತ್ತದೆ.

ಈ ಕುಮಟಾ ತಾಲೂಕ ಕೊಂಗ್ರೆಸ ಕಮೀಟಿಯು ಎಲ್ಲ ಮೆಂಬರರ ಮಹಾ ಸಭೆಯು ಇದೇ ಬರುವ ರವಿವಾರ ತಾ ೨೯ ನೇ ದಿವಸ ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದಲ್ಲಿ ಕೂಡತಕ್ಕದ್ದಿದೆ.

ಗೋಕರ್ಣದಲ್ಲಿ ಸರಕಾರಿ ನೌಕರರಿಗೆ ಏನೊಂದು ಸಾಮಾನು ಸಿಗದಂತೆ ಕೆಲ ಜನರು ಪ್ರತಿಬಂಧಿಸಿದ ಸಂಗತಿಯು ಕಲೆಕ್ಟರರಿಗೆ ತಿಳಿದು ಬಂದದೆಂಬುದರ ಮೇಲಿಂದ, ಇತ್ತು ಎರಡು ತಿಂಗಳ ತನಕ ಗೋಕರ್ಣದ ೫ ಮೈಲಿನ ಸುತ್ತುಮುತ್ತಲು, ಸರಕಾರಿ ನೌಕರರಿಗೆ ಸಾಮಾನು ಸಿಗದಂತೆ ಅಟಕಾವ ಮಾಡುವದು, ಆ ಉದ್ದೇಶದಿಂದ ಅಂಗಡಿಗಳನ್ನು ಮುಚ್ಚಿ ಸುಳಿದಾಡುವದು, ಆ ಬಗ್ಗೆ ಅಂಗಡಿಕಾರರನ್ನು ಉಪದೇಶಿಸುವದು, ಮತ್ತು ಅದೇ ಉದ್ದೇಶದಿಂದ ಸಭೆಗಳನ್ನು ಕೂಡಿಸುವದು ಇವೆಲ್ಲ ಸಂಗತಿಗಳಿಗೆ ಮನಾಯಿ ಇರುತ್ತದೆಂತ ಮೇ॥ ಕಲೆಕ್ಟರ ಸಾಹೇಬರು ಕ್ರಿ. ಪ್ರೊ. ಕೊಡಿನ ೧೪೪ ನೇ ಕಲಮಿನ ಅನ್ವಯ ಮನಾಯಿ ಹುಕುಂ ಮಾಡಿರುವರು.

ತಾ ೧೩-೧-೨೨ ನೇದಿ ಶ್ರೀ ಧಾರೇಶ್ವರ ಜಾತ್ರೆಯ ಕಾಲಕ್ಕೆ ಪರದೇಶೀ ಸಕ್ಕರೆಯ ಮಿಠಾಯಿ, ಚಹಾ ಇ. ವ್ಯಾಪಾರಿಗಳು ವ್ಯಾಪಾರವನ್ನು ಮಾಡಬಾರದೆಂದು ಕಮೀಟಿಯವರು ವ್ಯಾಪಾರಸ್ಥರ ಕಡೆಯಿಂದ ಮುಚ್ಚಳಿಕೆಯನ್ನು ಕೊಂಡಿದ್ದರಿಂದ, ಈ ವರ್ಷ ಏನೂ ಪರದೇಶೀ ವಸ್ತುವಿನ ವಿಕ್ರಯವಾಗಲಿಲ್ಲ.

ಅದೇ ದಿವಸ ರಾತ್ರಿ ರಥಬೀದಿಯಲ್ಲಿ ದಶಾವತಾರ ಆಟವಾಗಿ ಲವಕುಶರ ಆಖ್ಯಾನವನ್ನು ಆಡಿದರು. ರಾತ್ರಿ ೩ ಘಂಟೆಯ ಸುಮಾರಕ್ಕೆ ಅಲ್ಲಿ ಕೂಡಿದ ೪೦೦೦ ಜನರ ಸಭೆಯಲ್ಲಿ ಶ್ರೀ॥ ಮಹೇಶ್ವರ ಜನಾರ್ಧನ ಭಟ್ಟ ಇವರ ಅಧ್ಯಕ್ಷತೆಯ ಕೆಳಗೆ ಶ್ರೀಯುತ ಭಟ್ಟರಮಕ್ಕಿ ಇವರು ಸ್ವರಾಜ್ಯ ಭಾಷಣ ಮಾಡಿ, ಸೇಂದಿ ಸರಾಯಿ ಕುಡಿಯಬಾರದೆಂಬುದೂ, ಬರುವ ಸಾಲಿನಲ್ಲಿ ಗುತ್ತಿಗೆದಾರರು ಗುತ್ತೇ ಮಾಡಬಾರದಾಗಿಯೂ, ಮತ್ತು ಯಾವ ರೈತ ಜನರು ಸೇಂದಿ ತೆಗೆಯುವ ಬಗ್ಗೆ ಮರಗಳನ್ನು ಕೊಡಬಾರದೆಂದೂ ಉಪದೇಶಿಸಿದರು. ಈ ಜಾತ್ರೆಯ ಕಾಲಕ್ಕೆ ಗಡಗಡೆಯ ಜೂಗಾರ ಆಟವು ಮಾತ್ರ, ಪೋಲಿಸ ಬಂದೋಬಸ್ತಿಯಿಂದಲೇ ಸುಖರೂಪದಿಂದ ಸಾಗಿತು.

ಹೊನ್ನಾವರ— ಹವಾಮಾನ ನೆಟ್ಟಗಿದೆ. ರೋಗರಾಯಿ ವಿಶೇಷವಿಲ್ಲ. ಇಲ್ಲಿ ಬಂದ ಮೊಗಲರು ಈಗ ೩-೪ ದಿವಸದಿಂದ ಪೇಟೆಯ ಭರ ಬಜಾರಿನಲ್ಲಿ ರಸ್ತೆಯ ಮೇಲೆ ಗಡಗಡೆ ಆಟ ಮತ್ತು ಮೂರು ಎಲೆ ಜುಗಾರಿನ ಆಟ ಮೊದಲಾದ ಆಟಗಳ ಪಸಾರೆ ಹಾಕಿಕೊಂಡು ಅವರವರೊಳಗೇ ಮತ್ತು ಇಲ್ಲಿಯ ಬೀದಿ ಅಂಗಡಿಯ ೩-೪ ಜನರನ್ನು ತಮ್ಮ ಸಂಗಡದೊಳಗೆ ಇಟ್ಟುಕೊಂಡು ಆಡುತ್ತಾರೆ. ಇವನ್ನು ನೋಡಿ ಬರ ಹೋಗುವ ಹಳ್ಳಿ ಜನರು ಗುಂಪು ಗುಂಪಾಗಿ ಆಡಿ ಅವರು ಬಹಳೇ ಹಣ ಕಳಕೊಳ್ಳುತ್ತಾರಲ್ಲದೆ ಎಷ್ಟೋ ಮೇಲೆ ಧಾಂದಲೆ ಆದರೂ ಇಲ್ಲಿಯ ಪೋಲೀಸರು ಆ ಕಡೆಗೆ ಲಕ್ಷ ಕೊಟ್ಟದ್ದು ತೋರುವದಿಲ್ಲ. ಮೇ॥ ಕಲೆಕ್ಟರರು ಹಾಗೂ ಇಲ್ಲಿಯ ಮ್ಯಾಜಿಸ್ಟ್ರೇಟರು ಸಹ ಇವರಿಗೆ ಇಲ್ಲಿನ ತೇರು ಜಾತ್ರೆಗಳಲ್ಲಿ ಸಹ ಇಂಥ ಧಂದೆಯನ್ನು ನಡಿಸಲಿಕ್ಕೆ ಪರವಾನಗಿ ಕೊಟ್ಟಿರುತ್ತಾರೆಂದು ಕೇಳುತ್ತೇವೆ. ಇದು ನಿಜವೋ? ನಿಜವಿದ್ದರೆ, ಸರಾಯಿ ಅಂಗಡಿಯ ಮುಂದೆ ವಲಂಟಿಯರರು ಪಿಕೇಟಿಂಗ ಮಾಡುವಾಗ ಶಾಂತತಾಭಂಗವಾದೀತೆಂದು ಹೇಳುವ ಈ ಸರಕಾರಕ್ಕೆ ಈ ರೀತಿ ಭರ ಬಜಾರಿನಲ್ಲಿ ಆಗುವ ಧಾಂದಲೆಯಿಂದ ಶಾಂತತಾಭಂಗವಾಗುವದಿಲ್ಲೇನು?

ಈ ವಾರದಲ್ಲಿ ಮುಷ್ಟಿ ಫಂಡಿಗೆ ಅಕ್ಕಿ ಮತ್ತು ನಗದೀಯಿಂದ ೧೯-೧-೩ ವಸೂಲಾಗಿರುತ್ತದೆ.

ಮಹಾತ್ಮಾ ಗಾಂಧಿಯವರ ಥೈಲಿಗೆ ಈ ವರೆಗೆ ೧೫೫-೮-೦ ಜಮಾ ಬಂದಿರುತ್ತದೆ.

ಹಳಿಯಾಳ— ಹವೆಯು ಸಾಧಾರಣ ಚಳಿಯಿದೆ. ಇಲ್ಲಿಯ ಮುನಿಸಿಪಾಲಿಟಿಯ ತ್ರೈವಾರ್ಷಿಕ ಇಲೆಕ್ಷನು ಸಮೀಪಕ್ಕೆ ಬರುವದಿದೆ. ಅಸಹಕಾರ ಅನುಯಾಯಿಗಳಿಗೆ ಬಾಯಕಾಟ ಲೈಸನು ಸಿಗುವದು ದಿನೇ ದಿನೇ ಕಡಿಮೆಯಾಗುತ್ತ ನಡೆದದೆ. ಇಲ್ಲಿಯ ವ್ಯಾಪಾರ ವರ್ಗದವರು ಬಾಸು ಜೊತೆಗೂಡಿ ಕಾರವಾರದ ಯಾತ್ರೆ ಮಾಡಿ ಬಂದರು. ಬರೀ ಈ ಕಣಿವೆಯು ಕಲುಷವಾಗಿ ಮೋಟಾರ ಗಾಡಿಗಳು ಇಷ್ಟು ದೂರ ಹೋಗಿದ್ದರಿಂದ, ಎಷ್ಟೋ ಪ್ರವಾಸಿಕರಿಗೆ ಆದ ಕಷ್ಟ ಅನಾನುಕೂಲತೆಗಳು ಹೇಳಲಸಾಧ್ಯ. ಶರಿಗೆಯ ವಸೂಲಿಯ ಕೆಲಸವು ಸಮಾಪಿಸುತ್ತ ಬಂತು. ಈ ವರ್ಷ ಸವಲತ್ತು ಸಿಗುವ ಲಕ್ಷಣಗಳು ಕಾಣುವದಿಲ್ಲ. ಜನರಿಗಂತೂ ಕೋರ್ಟದವರೇ ಬೇಕೆನ್ನುವ ಸೇವಾವೃತ್ತಿಗಳ ನಿಜವಾದ ಮಹತ್ವವು ಇನ್ನೂ ತಿಳಿಯಲಿಲ್ಲವೆಂಬಂತೆ ತೋರುತ್ತದೆ. ಸೂಪ್ರಾಕೆಟಿಯ ಕೆಲಸವು ನಿಂತಿದೆ.

ಶಿರಸಿ— ಚಳಿಯು ಜೋರಾಗಿ ಬೀಳಹತ್ತಿದೆ ಮತ್ತು ಸುತ್ತಲಿನ ಹಳ್ಳಿಗಳಲ್ಲಿ ಒಂದು ತರದ ಜ್ವರವು ಇಲ್ಲಲ್ಲಿ ಕಾಡುತ್ತಿದೆ.

ಇಲ್ಲಿಯ ಮುನಿಸಿಪಾಲಿಟಿಯ ಹೊಸ ಇಲೆಕ್ಷನ್ನು ಆಗತಕ್ಕದ್ದಿತ್ತು. ಅದಕ್ಕೆ ರಾಷ್ಟ್ರೀಯ ಪಕ್ಷದ ಜನರೇ ಉಮೇದವಾರರಾಗಿ ನಿಂತಿದ್ದರು. ಆಯಾ ವಾರ್ಡಿಗೆ ಇರತಕ್ಕ ಮೆಂಬರರಷ್ಟೇ ಉಮೇದವಾರರು ನಿಂತಿದ್ದರಿಂದ, ಇಲೆಕ್ಷನ ಸಂಭ್ರಮವಿಲ್ಲದೆ ಕೆಲಸ ತೀರಿತು.

ಈ ತಾಲೂಕ ಉಪವಾಸಿಯ ಹತ್ತರ ಮುಗದಲ್ಲಿ ಜನರು ಊರು ಸುಟ್ಟ ಬಗ್ಗೆ ಗುಡಿಸಲುಗಳನ್ನು ಕಟ್ಟಿಕೊಳ್ಳಲಿಕ್ಕೆ ತಂದ ಕಟ್ಟಿಗೆಯ ಬಗ್ಗೆ, ಅವರಿಗೆ ದಂಡವಾದ ೩೦೦ ರೂಪಾಯಿಯನ್ನು ಇಲ್ಲಿಗೆ ಪುರಸ್ಕೃತ ಡಿವ್ಹಿಜನಲ ಆಫೀಸರರು ಮಾಫ ಮಾಡಿರುವರಂತೆ.

ವಿವಿಧ ವರ್ತಮಾನ.

— ದೇಶಬಂಧು ದಾಸರವರ ಮೇಲಿನ ಖಟ್ಲೆಯ ವಿಚಾರಣೆಯು ತೀರಿದ್ದು, ತೀರ್ಪು ತಾ ೨೪ಕ್ಕೆ ಕೊಡಲ್ಪಡತಕ್ಕದ್ದಿತ್ತು ಆದರೆ “ಟ್ರಿಬ್ಯೂನ” ಪತ್ರವು ಹೇಳಿದಂತೆ ದೇಶಬಂಧುಗಳಿಗೆ ಜಜ್ಜರು ಒಟ್ಟು ಕೊಡುವ ಮೊದಲೇ ೧॥ ತಿಂಗಳ ಮೇಲೆ ಕಾರಾಗೃಹವಾಸವನ್ನು ಅನುಭವಿಸಬೇಕಾಯಿತು.

— ಬಂಗಾಲದಲ್ಲಿ ಸತ್ಯಾಗ್ರಹಕ್ಕೆ ಈಗ ಹೊಸ ಸ್ವರೂಪವು ಬಂದಿರುತ್ತದೆ. ಕಲಕತ್ತೆಯಲ್ಲಿ ಸ್ವಯಂಸೇವಕರು ಸರಕಾರ ಮನಾಯಿ ಹುಕುಮನ್ನು ಮುರಿದು, ಸಭೆಗಳನ್ನು ಕೂಡಿಸುತ್ತಾರೆ. ಪೋಲೀಸರು ಸಭೆಗಳನ್ನು ಮುರಿದು, ವ್ಯಾಸಪೀಠದ ಮೇಲಿನ ಜನರನ್ನು ಹಿಡಿದೊಯ್ಯುತ್ತಾರೆ. ದಿನಾಲು ಇದೇ ಕ್ರಮವು ನಡೆದದೆ.

— ಕಲಕತ್ತೆಯೊಳಗಿನ ಕಾಲೇಜುಗಳು ಹೊಸ ವರ್ಷದ ಆರಂಭದಿಂದ ಪುನಃ ತೆರೆಯಲ್ಪಟ್ಟದ್ದವು. ಆದರೆ ಪ್ರಸ್ತುತ ಪರಿಸ್ಥಿತಿಯ ಪರಿಣಾಮವು ವಿದ್ಯಾರ್ಥಿಗಳ ಮೇಲಾಗಿ, ದೇಶದಲ್ಲಿ ನಡೆದಿರುವ ದಬ್ಬಾಳಿಕೆಯ ನಿಷೇಧಾರ್ಥವಾಗಿ ಅವರು ಪುನಃ ಹರತಾಳ ಮಾಡಹತ್ತಿದ್ದಾರೆ.

— ಬಂಗಾಲದ ಕೆಲವು ಜೈಲುಗಳಲ್ಲಿ ಅಸಹಕಾರಿಗಳಿಗೆ ಅಮಾನುಷ ರೀತಿಯಿಂದ ನಡಿಸುತ್ತಾರಂತೆ. ಕೆಲವರಿಗೆ ಚಾಬಕದ ಪೆಟ್ಟು, ಕೆಲವರಿಗೆ ಏಕಾಂತವಾಸ ಸಿಗುತ್ತದೆ. ಏಕಾಂತವಾಸದ ಶಿಕ್ಷೆಯಿಂದ ಕೆಲವು ಜನರು ಭ್ರಾಂತರಾಗಹತ್ತಿದ್ದಾರಂತೆ!

— ಕಾಶಿಯಲ್ಲಿ ಕೆಲವು ದಿವಸಗಳ ಹಿಂದೆ ಒಂದು ವರ್ಷದ ಶಿಕ್ಷೆಯನ್ನು ವಿಧಿಸಲ್ಪಟ್ಟ ಬಾಬು ಭಗವಾನ ದಾಸರು ಬಿನಶರ್ತ ಬಿಡುಗಡೆ ಹೊಂದಿದ್ದಾರೆ. ದೇಶಭಕ್ತರು ಸಾವಿರಾರು ಸರಕಾರದ ಆತಿಥ್ಯವನ್ನು ಅನುಭವಿಸುವಾಗ ತಾವು ಮಾತ್ರ ವಿಮುಕ್ತರಾದದ್ದನ್ನು ನೋಡಿ ಅವರಿಗೆ ಬಹಳೇ ದುಃಖವೆನಿಸುತ್ತದಂತೆ. ಮತ್ತು ಅವರು ತನಗೆ ಕೊಟ್ಟ ಶಿಕ್ಷೆಯ ಕಾಲವು ಮುಗಿಯುವ ವರೆಗೆ ತಾನು ಕೈದಿಯಂತೆ ತಿಳಕೊಂಡು ಕಾಶೀ ವಿದ್ಯಾಪೀಠದ ಸಮೀಪ ಬಂದು, ಗುಡಿಸಲದಲ್ಲಿ ಒಬ್ಬ ಕೈದಿಯ ಜೀವನಕ್ರಮವನ್ನು ನಡಿಸುವ ನಿಶ್ಚಯ ಮಾಡಿದ್ದಾರೆ.

— ಬಂಗಾಲದಲ್ಲಿ ಶ್ಯಾಮ ಸುಂದರ ಚಕ್ರವರ್ತಿ ಬಾಬು ಮಹಾಶಯರಿಗೆ ಪುನಃ ಒಂದು ವರ್ಷದ ಶಿಕ್ಷೆ ವಿಧಿಸಲ್ಪಟ್ಟಿರುತ್ತದೆ.

— ಪಾಟಣಾದಲ್ಲಿ ಜೇಲರನು ರಾಜೀನಾಮೆಯನ್ನು ಕೊಟ್ಟು ಅಸಹಕಾರಿಯಾದನು.

— ಸರಕಾರವು ೧೬ ಕೈದಿಗಳನ್ನು ಬಿಟ್ಟಿರುತ್ತದೆ. ಜನರ ಕಡೆಯಿಂದ ಅವರ ಚಂಗೀ ಸ್ವಾಗತವಾಯಿತು.

— ದಿಲ್ಲಿಯಲ್ಲಿ ಕಾಯದೆ ಕೌನ್ಸಿಲುಗಳಲ್ಲಿ ಸರಕಾರದ ದಬ್ಬಾಳಿಕೆಯ ಧೋರಣದ ನಿಷೇಧ ಮಾಡುವ ಠರಾವುಗಳು ನಾಮಂಜೂರಾದವು, ಮತ್ತು ಸರಕಾರಕ್ಕೆ ಪ್ರಾಬಲ್ಯ ಕೊಡುವ ವಿಷಯದಲ್ಲಿ ಬಂತು. ಅಷ್ಟಾದರೆ ಜನತೆಯ ಈ ಪ್ರತಿನಿಧಿಗಳೊಳಗೂ (?) ಜನರಲ್ಲೂ ದಕ್ಷಿಣೋತ್ತರ ಧ್ರುವಗಳ ಅಂತರವೆಂತ ಸಿದ್ಧವಾಯಿತು.

ಲಿ ತಾಲೂಕಿನೊಳಗೆ ತೀರ್ವೆ ಕೊಡದಿರುವ ಸತ್ಯಾಗ್ರಹಕ್ಕೆ ಎಲ್ಲ ಸಿದ್ಧತೆಯಾಗಿದ್ದು ಸತ್ಯಾಗ್ರಹದ ಚಳವಳವನ್ನು ನಡಿಸಲಿಕ್ಕೆ ಬರಬೇಕೆಂದು ಮಹಾತ್ಮಾಜಿಯವರಿಗೆ ನಿಮಂತ್ರಣವಾಗಿದೆ.

— ಮದ್ರಾಸದಲ್ಲಿ ರಾಜಪುತ್ರರ ಆಗಮನದ ದಿವಸ ಆದ ಗಡಬಡಿಗೆ ಅಲ್ಲಿ ಸರಕಾರಿ ಪಕ್ಷಗಳ ಕೆಳಗೆ ಸೇರಿಯಾದ “ಆದಿ ದ್ರಾವಿಡರ” ಪಥಕವೇ ಕಾರಣವಾಯಿತು, ಎಂದು ತಿಳಿಯುತ್ತದೆ. ಗಡಬಡಿಯನ್ನು ಶಾಂತ ಮಾಡಲಿಕ್ಕೆ ಕಾಂಗ್ರೆಸ ಸ್ವಯಂಸೇವಕರ ಚಲೋ ಉಪಯೋಗವಾಯಿತೆಂದು “ಡೇಲಿ ಎಕ್ಸಪ್ರೆಸ” ಎಂಬ ಎಂಗ್ಲೋ ಇಂಡಿಯನ್ ಪತ್ರವೇ ಹೇಳುತ್ತದೆ.

— ಕೆಲವು ದಿವಸಗಳ ಹಿಂದೆ ಮದ್ರಾಸದ ದಿವಾನರೊಬ್ಬರು ರಾಜಮಹೇಂದ್ರಿಯ ಮುನಿಸಿಪಲ ದವಾಖಾನೆಗೆ ಅಲ್ಲಿಯ ಅಧಿಕಾರಿಗಳಿಗೆ ಮುಂಚಿತವಾಗಿ ತಿಳಿಸದೆ, ಭೆಟ್ಟಿ ಕೊಟ್ಟು, ಕೆಲ ಓಣಿಗಳಲ್ಲಿ ಹಾದಿಯ ನಿಂದೆಯನ್ನು ಮಾಡಿ (ಅಸಹಕಾರವಾದಿ) ಮುನಿಸಿಪಲ ಕೌನ್ಸಿಲರರ ಮೇಲೆ ಕುತ್ಸಿತ ಟೀಕೆ ಮಾಡಿದರಂತೆ! ಈಗಂತೂ ಮ್ಯುನಿಸಿಪಾಲಿಟಿಯ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ೬ ಕೌನ್ಸಿಲರರಿಗೆ ಕೈದ ಮಾಡಿದ್ದಾರೆ.

— ಗುಂಟೂರ ಜಿಲ್ಲೆಯಲ್ಲಿ ಜನವರಿ ತಿಂಗಳ ಕಿಸ್ತಿಗೆ ಪ್ರತಿ ವರ್ಷದ ೩ ಲಕ್ಷ ರೂಪಾಯಿ ತೀರ್ವೆ ಹಣ ವಸೂಲಾಗುವಲ್ಲಿ ಈ ಸಾರೆ ಕೇವಲ ೩೦೦ ರೂಪಾಯಿ ವಸೂಲಾಗಿರುತ್ತದೆ. ನೂರಾರು ಗ್ರಾಮಸ್ಥರು ರಾಜೀನಾಮೆಯನ್ನು ಕೊಟ್ಟಿದ್ದಾರೆ. ಮಾಮಲೇದಾರರ ಕಚ್ಚೇರಿಗಳಿಗೆ ಕಾವಲು ಇಲ್ಲ! ಈಗ ಅಲ್ಲಿ ಸೈನ್ಯವನ್ನು ಕೂಡಿಟ್ಟಿದ್ದಾರೆ. ಈ ಸಂಬಂಧದಲ್ಲಿ ಅಲ್ಲಿಯ ಸ್ಥಾನಿಕ ಸರಕಾರವು ಹೊಸ ಕಾಯಿದೆಯನ್ನು ಮಾಡುವ ವಿಚಾರದಲ್ಲಿದೆ. ತೀರ್ವೆ ಹಣವನ್ನು ಕೊಡದಿದ್ದರೆ ಜಮೀನುಗಳನ್ನು ಸರಕಾರ ಜಪ್ತ ಮಾಡಿ ಅಸ್ಪೃಶ್ಯ ಜಾತಿಗಳ ಜನರಿಗೆ ಕೊಡುತ್ತೇವೆಂದು ಸರಕಾರವು ಜಾಹೀರ ಮಾಡಿದೆ. ಗ್ರಾಮಸ್ಥರ ರಾಜೀನಾಮೆಗಳನ್ನು ತೆಗೊಳ್ಳದೆ ಅವರನ್ನು ಬಡತರ್ಫ ಮಾಡುತ್ತಾರಂತೆ!

हिंदुस्थानांतील रहिवाशास ज्याप्रमाणे हिंदुस्थानची हवा त्याप्रमाणेंच हे औषध हिंदुस्थानांतील लोकास ज्यास्त फायदेशीर आहे.

द्राक्षासव- { दीड रत्तलची किंमत २ रुपये,

रामबाण औषध

सर्दि घालविणारे,
भूक वाढविणारे
शौच्यास साफ करणार,
झोप आणणार,
शक्ति देणारें,
तेजस्वीपणा आणणारें,

पित्यास रुचिकर

क्याटलाग मागवा,

झंडु फार्मास्युटिकल वर्क्स लिमिटेड.
मुंबई न. १३

ಭಾರತೀ ಔಷಧಾಲಯ ಹೊನ್ನಾವರ.

ಹಿಮಸಾಗರತೈಲ:— ಇದನ್ನು ಅನೇಕ ವನೌಷಧಿಗಳ ರಸ, ಪುನುಗು, ಗೋರೋಚನಾದಿ ಅಮೌಲ್ಯ ಸುಗಂಧ ದ್ರವ್ಯಗಳಿಂದ ಸಶಾಸ್ತ್ರವಾಗಿ ತಯಾರಿಸಿದ [illegible] ನಿದ್ರಾಭಂಗ, ಸ್ಮೃತಿಭ್ರಂಶ, ಶಿರೋಭ್ರಮಣ ಮುಂತಾದ ಮಿದುಳಿನ ರೋಗಗಳಿಗೂ ಪಿತ್ತವಿಕಾರ, ದೃಷ್ಟಿಮಾಂದ್ಯ, ನೇತ್ರದಾಹ ಮೊದಲಾದವುಗಳಿಗೂ ಅಪ್ರತಿಮ ಗುಣಕಾರಿ. ಇದಲ್ಲದೇ ಕೇಶಪೋಷಕ, ಕೇಶವರ್ಧಕ, ಶೀತಲ ಉತ್ತೇಜಕ, ಪರ ಸಾಮಾಸಿಕ ಮನೋಲ್ಹಾಸಕ, ಅತ್ಯಂತ ಸುಖದಾಯಕ ವಕೀಲ, ವಿದ್ಯಾರ್ಥಿ ಮೊದಲಾಗಿ ಮಾನಸಿಕ ಶ್ರಮ ಮಾಡುವವರಿಗೆ ಇದು ಹಿತಕರವು.
೧೦ ತೊಲೆ ಬಾಟ್ಲಿಯೊಂದರ ಕ್ರಯ ರೂ ೨ ೦-೦

ಶೀತ ಜ್ವರಾರಿ (*Antimalarial pills*,— ಚಳಿಜ್ವರ, ಪಾಳಿಜ್ವರ ಪಿತ್ತಜ್ವರ ಮೊದಲಾದವುಗಳಿಗೆ ಖಂಡಿತ ಗುಣಕಾರಿ ೧೬ ಗುಳಿಗೆಯು ೧ ಬಾಟ್ಲಿಗೆ ೧೨ ಆಣೆ ಸೋಲ ಏಜಂಟ್ಸ—ದಿ ನ್ಯೂ ಎಂಪೋರಿಯಮ್
ಹೊನ್ನಾವರ (ಕೆನರಾ)

ಸ್ವದೇಶಿ ಶಾಬಣಗಳು.

ನಮ್ಮ ಕಾರಖಾನೆಯಲ್ಲಿ ಮೈಗೆ ಹಾಕುವ ಉತ್ತಮತರದ ಸ್ವದೇಶಿ ಶಾಬಣಗಳು ತಯಾರ ಮಾಡಲ್ಪಡುತ್ತವೆ ನಮ್ಮ ಶಾಬಣಗಳು ಬಹಳೇ ಖರ್ಚಾಗುತ್ತವೆ ಬೇಕಾದವರು ತರಿಸಿಕೊಳ್ಳಬಹುದು ಚರ್ಬಿ ಮಿಶ್ರಣ ಇಲ್ಲ ಚರ್ಬಿಯನ್ನು ತೋರಿಸಿಕೊಟ್ಟವರಿಗೆ ೫೦ ರೂಪಾಯಿ ಬಕ್ಷೀಸ ಕೊಡುವೆವು (ನ್ಯೂ ಬಾಥ ಸೋಪ ೪ ಡಜನದ ಪೆಟ್ಟಿಗೆ ೧ಕ್ಕೆ ೨ ೧೨ ೦) (ಬ್ರೌನ ವಿಂಡ್ಸರ ಸೋಪ ೪ ಡಜನದ ಪೆಟ್ಟಿಗೆ ೧ಕ್ಕೆ ೨ ೦ ೦) (ನಾರಂಗೀ ಸೋಪ ೪ ಡಜನದ ಪೆಟ್ಟಿಗೆ ೧ಕ್ಕೆ ೧ ೪ ೦) ಪೋಸ್ಟೇಜ ಬೇರೆ

ಪತ್ತೆ— ಎಸ್. ಜಿ ಪ್ರಭು.
ಮೇನೇಜರ ಸ್ವದೇಶೀ ಸೋಪ ವರ್ಕ್ಸ,
ಬಸ್ತಿಪೇಟೆ, ಕುಮಟಾ (ಎನ್. ಕೆನರಾ.

तापावर पाटणकर एग्यूमिक्श्चर

ಜ್ವರದ ಮೇಲೆ ಪಾಟಣಕರ ಎಗ್ಯು ಮಿಕ್ಸ್ಚರ

ಮಲಶುದ್ಧಿಯಾಗುತ್ತದೆ, ಬೆವರು ಬಂದು ಜ್ವರವು ಬಿಡುತ್ತದೆ ಕ್ರಯ ೦-೧೨-೦ ರೋಕ ವ್ಯಾಪಾರಸ್ಥರಿಗೆ ಲಗ್ಗ

ಪಾಟಣಕರ ಮಾಯದೇವ ಕಂಪನಿ
ಮುಂಬಯಿ ೪

ಸ್ವದೇಶಿಯೇ ಹಿಂದುಸ್ಥಾನದ ಪ್ರಾಣವು.

ಅದರಿಂದಲೇ ನಮ್ಮ ದೇಶದ ಭಾಗ್ಯೋದಯವಾಗುವದು.

ಉತ್ತಮ ತರದ ರಹಾಟ (ಚರಕ) ಟಿಕಾವು ಶುದ್ಧ ಸ್ವದೇಶಿ ಖಾದಿ, ರಾಷ್ಟ್ರಗೀತ, ಮಹಾತ್ಮಾ ಗಾಂಧಿ, ಲಾಲಾ ಲಜಪತರಾಯ ಸಿ ಆರ್ ದಾಸ ಮೊದಲಾದ ದೇಶಭಕ್ತರ ಫೋಟೊ ವ ಲೋಕೆಟ್ಸಗಳು ಮತ್ತು ಬೇರೆ ಎಲ್ಲಾ ತರದ ಸ್ವದೇಶಿ ವಸ್ತುಗಳು ಮಾಫಕ ದರದಿಂದ ಸಿಗುವದೊಂದೇ ಸ್ಥಳ

ಕುಡ್ಲ ವಾಸುದೇವ ಪಾಂಡುರಂಗ ಶ್ಯಾನಭಾಗ, ಮತ್ತು ಬ್ರದರ್ಸ.
ಹೊನ್ನಾವರ ಜಿ ಕಾರವಾರ.

FREE. FREE.

Purchasers of 36 tins of our well-renowned Ringworm Ointment, price As 4 per tin, or of 12 Phials of Otto Mushk hina, Price As 12 per tube will be sent

A WRIST WATCH FREE

**King George
Coronation Co.,
BOMBAY No. 4.**

ಸ್ಪೆಶಲ್ ಮೋಟರ ಬಂಡಿಗಳು ನಮ್ಮಲ್ಲಿ ಬಾಡಿಗೆಗೆ ಸಿಗುವವು.

ಬೇಕಾದವರು ಕೆಳಗಿನ ಪತ್ತೆಯ ಮೇಲೆ ವಿಚಾರಿಸಬಹುದು. ಸವಲತ್ತಿಯ ದರಗಳು ಇಟ್ಟಿರುವೆವು ನಮ್ಮ ಪತ್ತೆ.—

ಗ್ಯಾತೋಂಡೇ ಬ್ರದರ್ಸ,
ಮೋಟರ ಡೀಲರ್ಸ, ಆಪರೇಟರ್ಸ.
ಕಾರವಾರ.

ಅನುಭವಸಿದ್ಧವಾದ ಔಷಧಗಳು!!!
ನಿಸ್ಪೃಹಸ್ಯ ತೃಣಂ ಜಗತ್॥

ರಕ್ತಶುದ್ಧಿ, ಧಾತುವೃದ್ಧಿಯಮೇಲೆ ಅತಿ ಉತ್ತ
ಪ್ರವಾಳ, ಕೇಶರ, ಅಮರಸತ್ವ, ಶಿಲಾಜಿತು,
ಮತ್ತು ವನಸ್ಪತಿ ಮಿಶ್ರಿತ

ಧಾತುಪೌಷ್ಟಿಕ ಗುಳಿ

ಇದರಿಂದ ಕ್ಷೀಣತೆ ದುರ್ಬಲತೆ, ನಪುಂಸ ಸ್ವಪ್ನಾವಸ್ಥೆ, ರಕ್ತದೂಷಿತರೋಗ, ಮೇಂದುವಿ ನರಗಳ ಅಶಕ್ತತೆ, ಅಂಗನಿಸ್ತೇಜತ್ವ, ಧಾತುಜ ವದು, ತಲೆತಿರುಗುವದು, ಜೀರ್ಣಜ್ವರ, ಅಗ್ನಿಮಾ ಉಪದಂಶವಿಕಾರ ಮುಸ್ತಕಶೂಲಿ, ಮುಂತಾದ, ಅ ವಿಕಾರಗಳು, ಶೀಘ್ರದಿಂದ ಗುಣವಾಗಿ, ಶರೀರಕ್ಕೆ ತ್ವವೂ, ಕಾಂತಿಯೂ, ಸ್ಮರಣಶಕ್ತಿಯೂ, ಕೂಡ ಯಾಗಿ ರತಿಸುಖಕ್ಕೆ ಕಾಯಂ ಶಕ್ತಿಯನ್ನು ಕೊಡು ಉತ್ತಮ ಗುಣಕ್ಕೆ ೪೨ ದಿವಸ ಬೇಕು ಗುಳಿಗೆ ರೂ ೪-೦-೦

(೧) ಬಾಲಾಮೃತಗುಟಿಕಾ — ಚಿಕ್ಕ ಮಕ್ಕಳ ರೋಗಗಳಮೇಲೆ ಅತಿ ಉತ್ತಮವಾದ್ದು ಗುಳಿಗೆ ೩೦ ರೂ ೧-೦-೦ (೨) ಸ್ವಪ್ನಾವಸ್ಥೆಮೇಲೆ ಚೂರ್ಣ ೧೪ ದಿವಸದ ಔಷಧಕ್ಕೆ ರೂ ೨-೦-೦ (೩) ಗಜ ನಾಶಕ ಮಲಮು — ಡಬ್ಬಿಗೆ ಆಣೆ ೦-೮-೦. ಮೂಲವ್ಯಾಧಿ ನಾಶಕಗುಳಿಗೆ — ಎಲ್ಲ ಬಗೆಯ ಮ ವ್ಯಾಧಿಗೆ ಗುಳಿಗೆ ೩೦ಕ್ಕೆ ರೂ ೨-೦-೦

ಅನುಪಾನಪತ್ರ ಔಷಧಿಯ ಸಂಗಡ ಅಂಚೆ ಬೇರೆ!

ವಿಳಾಸ.— **ವೈದ್ಯ ವ್ಹಿ. ಎಸ್ ಮೋಡ
ಮತ್ತು ಕಂಪನಿ, ಪೋಸ ಸಿರ**
ಜಿಲ್ಲಾ ಉತ್ತರಕಾನಡಾ

ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ, ರಾಮಬಾಣದಂತಾಗಿರುವದು ಕಳೆದ ೨೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತ್ತದೆ ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು ಇದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯು ನೀವು ಇದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು ಕಿಮ್ಮತು ೧೦ ಆಣೆ ವ್ಹಿ ಪಿ ಖರ್ಚು ಬೇರೆ

**ಅಮೃತಾಂಜನ ಡಿಪೋ, ಫೋರ್ಟ,
ಮುಂಬಯಿ**

Printed and published by Krishnarao Keshav Shenvi at his Star of Kanara Press, Kumta

Reg No B. 127C.

ವರ್ಷ ೬.

ಕಾನಡಾವೃತ್ತ.

ಸಂಚಿಕೆ ೧೬.

THE KANARA NEWS

ಪತ್ರದ ವರ್ಗಣಿ:-
ಕುಮಟೆಯಲ್ಲಿ ಆಗಾವೂ ರೂಪಾಯಿ 2-4-0
ಮನಿಆರ್ಡರಿಯಿಂದ ರೂ. 3-0-0.
ವ್ಹಿ. ಪಿ.-ಅಂಚೆವೆಚ್ಚ ಸೇರಿ ರೂಪಾಯಿ 3-2-0
ಬಿಡಿ ಸಂಚಿಕೆಗೆ 0-1-0.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ:-
ಕನ್ನಡ, ಇಂಗ್ಲಿಷ ಸ್ಮಾಲ್ ಪೈಕಾ(೧೨ ಪಾಯಿಂಟ) ೫ ಸಾಲುಗಳ ವರೆಗೆ ರೂ. 1-0-0
ಅನಂತರ ಪ್ರತಿ ಸಾಲಿಗೆ 0-2-0.
ಹೆಚ್ಚಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಪ್ರಮಾಣದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.
ಖಾಸ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು

[ಕುಮಟಾ— ಕಾನಡಾವೃತ್ತ ಗುರುವಾರ, ತಾ॥ ೨ ನೇ ಫೆಬ್ರುವರಿ ಸನ್ ೧೯೨೨ ನೇ ಇಸವಿ]

ಹಲ್ಲಿನ ಡಾಕ್ಟರ ಕೃಷ್ಣರಾವ ಅನಂತ.



ಚಿನ್ನದ ವಜ್ರಮುಕುಟದ ಫಳ್ಳಿ ಮತ್ತು ಸಂಕರದ ಕೆಲಸದಲ್ಲಿ ಪಾರಂಗತರಾದ ನಾವು ಸುಧಾರಿಸಿದ ಹೊಸ ಪದ್ಧತಿಯಿಂದ ಹಲ್ಲುಗಳನ್ನು ತೆಗೆದು ಹಾಕುವೆವು. ಇದೇ ಹಲ್ಲು ಕಡ್ಡಿ ಖರ್ಚ ಮಾಡಿ ಚಿನ್ನ, ಬೆಳ್ಳಿಯಿಂದ ತುಂಬಿ ಕೊಡಬಹುದು, ಯಂತ್ರದಿಂದ ಹಲ್ಲುಗಳ ಮೇಲಿನ ಪೊಳಕನ್ನು ಕಳೆದು ಅವುಗಳನ್ನು ಸ್ವಚ್ಛ ಹೊಳೆಯುವ ಹಾಗೆ ಮಾಡಿಕೊಡುವೆವು. ಹಲ್ಲುಕಡ್ಡಿಗಳನ್ನು ಬಿಡದಹಾಗೆ ನೋಯಿಸದೆ ತೆಗೆದುಕೊಡುವೆವು. ಬಿತ್ತಿಹೋದ ಹಲ್ಲುಗಳ ಕಡ್ಡಿಯನ್ನು ದುರುಸ್ತ ಮಾಡಿ ಖರೆಯಾಗಿ ಕೂಡಿಸಿಕೊಡುವೆವು. ಪ್ರತಿ ಕೆಲಸವು ನಿಶ್ಚಯದಿಂದ ಮತ್ತು ಅಗ್ಗವಾಗಿ ಮಾಡಲ್ಪಡುತ್ತದೆ.

Javeri Mansion
near Marwadi Vidyalaya,
Sandhurst Road.
BOMBAY No 4

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

ಬೇಕಾದವರು ಭಾಡಿಗೆಯ ದರವಾರ ವಗೈರೆ ಹು॥ ೬೩ ಕೆಳಗಿನ ಪತ್ತೆಗೆ ಮುಕಾಮ ಕಿಶ್ಚಿ ತಿಳಕೊಳ್ಳಬಹುದು

ಪುರುಷೋತ್ತಮ ಲಕ್ಷ್ಮಣಯ್ಯ ಕ್ಯಾನಭಾಗ
ಹೆಗಡೇಕರ, ದುಕಾನ, ಕುಮಟಾ.

ಕಾರ್ಡಸೈಜ ಫೋಟೋ.

ಮಹಾತ್ಮಾ ಗಾಂಧೀ, ಕೈ। ಲೋ। ಟಿಳಕ ಮೌಲಾನಾ ಶೌಕತ ಅಲ್ಲಿ, ದೇ। ಲಾಲಾ ಲಜಪತರಾಯ ಇವರ ಉತ್ತಮ ಕಾರ್ಡ ಸೈಜಿನ ಫೋಟೋಗಳು ನಮ್ಮಲ್ಲಿ ಸಿಗುವವು

ಕ್ರಯ — ೧ಕ್ಕೆ ೬ಪೈ, ೧ ಡಜನ ಬೇಕಾದವರು ೫ ಆಣೆ ಸ್ಟ್ಯಾಂಪುಗಳು ಮತ್ತು ೧೦೦ ಬೇಕಾದವರು ೧-೧೨-೦ ಮನಿಆರ್ಡರದ್ವಾರಾ ಹಣವು ಕಳುಹಿಸಬೇಕು. ನಮೂನೆಗಳು ಬೇಕಾದರೆ, ೨। ಆಣೆಯ ಸ್ಟ್ಯಾಂಪುಗಳು ಕಳುಹಿಸಬೇಕು.

ಪತ್ತೆ— ಸ್ಟಾರ ಓಫ್ ಕೆನರಾ ಪ್ರೆಸ್ಸ್,
ಕುಮಟಾ (ಎನ್. ಕೆನರಾ,)

ಮೋಟಾರ.

ಹಾವೇರಿಯಿಂದ— ಸಿರಸಿಗೆ ಮತ್ತು ಸಿರಸಿಯಿಂದ ಹಾವೇರಿಗೆ, ಪ್ರತಿ **ಆದಿತ್ಯವಾರ-ಮಂಗಳವಾರ - ಗುರುವಾರ** ಮೋಟಾರ ನಡೆಸುವ ವ್ಯವಸ್ಥೆ ಇಟ್ಟಿದೆ. ಹಾವೇರಿಯಿಂದ ಬೆಳಿಗ್ಗೆ ೯ ಘಂಟೆಗೆ ಮತ್ತು ಸಿರಸಿಯಿಂದ ಮಧ್ಯಾಹ್ನ ೩ ಘಂಟೆ ಹೊರಡುವದು. ಹಾವೇರಿಯಲ್ಲಿ ಅಥವಾ ಸಿರಸಿಯಲ್ಲಿ ಐದಕ್ಕಿಂತ ಹೆಚ್ಚು ಜನರು ಸಿಕ್ಕಲ್ಲಿ ಬೇರೆ ದಿವಸಗಳಲ್ಲಿ ಸಹ ನಡೆಸುವೆವು

ಟಿಕೇಟುಗಳು ಸಿರಸಿಯಲ್ಲಿ ಶಿವಗಿರಿಯವ ಧಾಕಪ್ಪನವರ ಇವರ ಅಂಗಡಿಯಲ್ಲಿ ಮತ್ತು ಹಾವೇರಿಯಲ್ಲಿ ಸ್ಟೇಶನದ ಹತ್ತರ ಕೇಳಕರರ ಬಂಗ್ಲೆಯಲ್ಲಿ ಸಿಗುವವು

ಎಸ್. ಎಲ್. ಧಾಕಪ್ಪಾ.

ಅಗ್ಗ] [ಅಗ್ಗ

ಮಳೆಗಾಲ ಮತ್ತು ಬಿಸಿಲು ದೆಸೆಯಿಂದ ಬೇಕಾಗುವ ಎಲ್ಲ ತರದ ಹೊಸ ಛತ್ರಿಗಳು, ಜ್ವರ, ಕೆಮ್ಮು, ಜಂತು, ಹೆಂಗಸರ ಗರ್ಭಾಶಯದ ವಿಕಾರ, ಪರಮಾ, ಅಶಕ್ತತೆ ವಗೈರೆ ವಿಕಾರದ ಮೇಲೆ ಖಾತ್ರಿದಾಯಕ ಪೇಟಂಟು ಔಷಧಗಳೂ, ಸ್ಟೇಶನರಿ, ಪರಫ್ಯೂಮರಿ ವಗೈರೆ ಸಾಮಾನುಗಳೂ, ಮಹಾತ್ಮಾ ಗಾಂಧಿಯವರ ಬಿಳೇ ಖಾದೀ ಟೊಪ್ಪಿಗೆಗಳೂ ಕಾಬೂಲೀ ಟೊಪ್ಪಿಗೆಗಳೂ ಅಗದೀ ಕಡಿಮೆ ದರಕ್ಕೆ ಕೊಡಲಾಗುವದು

ಎಸ್. ಎಲ್. ಧಾಕಪ್ಪ ಮತ್ತು ಬಂಧು
ಶಿರಸಿ.

ಭಡತೀ ಭ್ರಾತೃಸಂಘದ

ಅನುಭವಸಿದ್ಧವಾದ

ಜಳದ ಗುಳಿಗೆಗಳು ಕ್ರಯ — ೨೫ಕ್ಕೆ ೦-೧೦-೦.

ಉತ್ತಮ ನೀಲಗಿರಿ ಎಣ್ಣೆ, ಹಿತ್ತಾಳಿ ಸಿಟ್ಟ, ಗುಂಟೆ ಕಾಬೂಲೀ ಹಿಂಗು, ಇಡ್ಲಿಪದ, ಗೋಕರ್ಣ ಮಹಾಬಲೇಶ್ವರ ದೇವರ ಫೋಟೋಗಳೂ, ಶ್ರೀ ಮಂದಿರದ ಫೋಟೋಗಳೂ, ಉಪಯೋಗಿ ಪುಸ್ತಕಗಳೂ, ಸ್ಟೇಶನರಿ ಸಾಮಾನುಗಳೂ ಯೋಗ್ಯ ಬೆಲೆಗೆ ದೊರೆಯುತ್ತವೆ.

ಪತ್ತೆ— ಭಡತೀ ಭ್ರಾತೃಸಂಘ,
ಗೋಕರ್ಣ.

Khilafat & National Leaders' badges.

ನಮ್ಮಲ್ಲಿ ಖಿಲಾಫತ ಮತ್ತು ಮಹಾತ್ಮಾ ಗಾಂಧಿ, ಲೋ. ಟಿಳಕ, ಶೌಕತ ಅಲ್ಲಿ, ಮಹಮ್ಮದ ಅಲ್ಲಿಯವರ ಸುಂದರವಾದ ಬೇಜುಗಳು ದೊರೆಯುತ್ತವೆ ಕೋಟಿಗೆ ಮತ್ತು ಟೊಪ್ಪಿಗೆಗೆ ಹಚ್ಚಲಿಕ್ಕೆ ಯೋಗ್ಯವಾದಂಥವು ಡಜನ ೧ಕ್ಕೆ ೩-೦-೦ ಟಪಾಲ ಖರ್ಚು ಬೇರೆ

ಪತ್ತೆ:— **ಬಿ. ಎ. ಪೈ ಹೊನ್ನಾವರ**
(ಉತ್ತರ ಕಾನಡಾ)

ಅಪೂರ್ವ ಸಂಧಿ!

ನಮ್ಮ ಕಂಪನಿಯಲ್ಲಿ ಥೋಕ ಗ್ರಾಹಕರ ಸಲುವಾಗಿ ಈ ಕೆಳಗಿನ ಜಿನಸುಗಳ ಜಂಗಿ ಸಂಗ್ರಹ ಇಟ್ಟಿದೆ.

I ಅಸ್ಸಲ ಜಂಗೋಜಾ ಜಾತಿಯ ಕಾಬೂಲಿ ಹಿಂಗ
II ಶುದ್ಧ ನೀಲಗಿರಿ ಎಣ್ಣೆ (Eucalyptus Oil)
III ಹುಳದ ಬೀಜ (Worm Seed)

ದರಗಳ ಬಗ್ಗೆ ಪತ್ರದ್ವಾರ ತಿಳಕೊಳ್ಳಬೇಕು. ವ್ಯಾಪಾರಿಗಳಿಗೆ ಯೋಗ್ಯ ಸವಲತಿಯಿತ್ತ ವಸ್ತುಗಳು ಪೂರೈಸಲಾಗುವದು., ಕಮಿಶನ್ ಭರಪೂರ.,

ದಿ. ನ್ಯೂ ಎಂಪೋರಿಯಮ್,
ಜನರಲ್ ಮರ್ಚಂಟ್ಸ್. ಹೊನ್ನಾವರ.

फक्त पोष्टखर्चासाठी ६३ आण्याची टिकिटे पाठविणारास नवीन वर्षाचे

फुकट] कॅलेंडर [फुकट

सुंदर गुलाबी आर्टपेपरावर महात्मा गांधींचा फोटो आणून ३ रंगात छापलेले, हिंदुचे सण वगैरे असलेले मोफत पाठवूं.

कृतांत डेपो मुंबई नं. ११.

ಸತ್ಯಮೇವ ಜಯತೇ.
(ಗುಣ ಬಾರದಿದ್ದರೆ ಹಣ ಪರತು.)
ಧಾತುಪೌಷ್ಟಿಕ ಕಾಮೋತ್ತೇಜಕ ಇಂದ್ರಿಯ
ಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ ವೀರ್ಯವರ್ಧಕ ರಕ್ತಶೋಧಕ, ಕಾಮೋತ್ತೇಜಕ ಮನೋಲ್ಲಾಸಕ ಇಂದ್ರಿಯಸ್ತಂಭಕ ಗರ್ಮಿ, (ಪ್ರಮೇಹ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲತರದ ಬಕ್ಕೆಗಳು ಹುಣ್ಣುಗಳು ಪಿತ್ತದ ಬಾಧೆಗಳು ತಟಕೂಲೆ ನಾಶಹೊಂದಿ ಮುಂಬಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಟ ಖ ಬೇರೆ ಅನುಮಾನಪತ್ರಿಕೆ ಔಷಧದ ಸಂಗಡ.

ವಿಳಾಸ— **ಜಿ. ಎಲ್. ಜೋಶಿ ಕಂಪನಿ.**
ಪೋಸ್ಟ— ಸಿರಸಿ ಉತ್ತರ ಕಾನಡಾ.

ನಾವೇ ತಪ್ಪುಗಾರರು!

ಅಸಹಯೋಗಿಗಳೇ, ಅಂತಃಶುದ್ಧಿಯನ್ನು ಸಾಧಿಸಿರಿ.

ಮಹಾತ್ಮರ ಮನಃಪೂರ್ವಕ ಉಪದೇಶ

[ಕಳೆದ ತಾ ೨೬-೧-೨೨ ನೇ 'ಯಂಗ ಇಂಡಿಯಾ' ಪಲ್ಲಿ 'ಆಂಗ್ಲಸ್ತ್ರೀಯ ಆಶೀರ್ವಾದಗಳು' ಎಂಬ ಶಿರೋನಾಮೆಯಲ್ಲಿ ಮಹಾತ್ಮರು ಒಂದು ಆತ್ಮನಿರೀಕ್ಷಣಾತ್ಮಕ ಆತ್ಮ [illegible]ಕಾತ್ಮಕ ಲೇಖವನ್ನು ಬರೆದಿರುವರು. ಅವರಲ್ಲಿ ಅಸಹಯೋಗಿಗಳ ಅಹಿಂಸಾತತ್ತ್ವದ ಮೇಲಿನ ಅಶ್ರದ್ಧೆಯೂ ಅವರ ಸಂಖ್ಯಾಬಲವೂ ನಮ್ಮ ಇಷ್ಟಫಲ ಪ್ರಾಪ್ತಿಯನ್ನು ಅಡ್ಡಗಟ್ಟುತ್ತವೆಂದು ಕಂಡು ಹಿಡಿದಿರುವರು. ಕಾರ್ಯಸಿದ್ಧಿಯನ್ನು ಬಯಸುವ ಪ್ರತಿಯೊಬ್ಬ ಅಸಹಯೋಗಿಯು ಇದನ್ನು ಮನನಮಾಡಿ, ತನ್ನ ಅಂತಃಕರಣದೊಳಗಿರುವ ಕಶ್ಮಲವನ್ನು ಅಚ್ಚತೊಳೆಯಲು ಅಂತಃಕರಣ ಪೂರ್ವಕವಾಗಿ ಯತ್ನಿಸಿ, ಮಹಾತ್ಮರ ಆಶೀರ್ವಾದವನ್ನೂ, ಸ್ವರಾಜ್ಯ ಪ್ರಾಪ್ತಿಯನ್ನೂ ಸಾಧಿಸಬೇಕೆಂದು ನಮ್ಮ ನಮ್ರ ವಿನಂತಿಯಿದೆ.]

ಕಲಕತ್ತೆಯಿಂದ 'ಒಬ್ಬ ಆಂಗ್ಲ ಸ್ತ್ರೀಯು' ಒಂದು ಪತ್ರವನ್ನು ಬರೆದಿರುವಳು. ಅವಳು ತನ್ನ ಪತ್ತೆಯನ್ನೂ ಹೆಸರನ್ನೂ ಪ್ರಕಟಿಸಿರುವಳು. ಆ ಪತ್ರದಲ್ಲಿ ಅವಳು ಬರೆದಿರುವದೇನಂದರೆ—

'ಶ್ರೀ ಗಾಂಧಿಯವರು ನಮಗೆ ಸತ್ಯವನ್ನು ತೋರಿಸುವ ನಮೂನೆಯೂ ಕುಲೀನವೆಂದು ಹೇಳಿಸಿಕೊಳ್ಳುವ ಸರಕಾರವು ಅವರಿಗೆ [illegible] ಅಘೋರಕೃತ್ಯಗಳನ್ನು ತೋರಗೊಡುವ ಪ್ರಕಾರವೂ ನಿಜವಾಗಿ ಪ್ರಶಂಸನೀಯವು. ಇದನ್ನು ನೋಡಿ, ನನ್ನ ಮನಸ್ಸು ಸುಪ್ರಸನ್ನವಾಗುತ್ತದೆ. ಆಂಗ್ಲ ನಿ[illegible]ಸಿಯು, (ಪಾರ್ಸಿ) ಬರೆದ ಪತ್ರವೂ ಪ್ರಶಂಸನೀಯವು. ಅವಳಂಥವರು ಇನ್ನೂ ಅನೇಕರಿರಬೇಕೆಂದು ನನ್ನ ಭಾವನೆಯಿದೆ. ಆದರೆ, ಶ್ರೀಗಾಂಧಿಯವರು ಸಾಗಿಸುವ ಪವಿತ್ರ ಕಾರ್ಯವನ್ನು ಎಲ್ಲರೊಂದು ಒಪ್ಪುವಷ್ಟು ಅವರು ನಮ್ರರಾಗಿರುವದಿಲ್ಲ. ಶ್ರೀಗಾಂಧಿಯವರ ಸಹನಶೀಲತೆಯೂ, ಕಾರ್ಯವ್ಯಾಪ್ತಿಯೂ ಅಗಾಧವಿರುವವು. ಜಗತ್ತಿನಲ್ಲಿ ಹೇಳಲಿ ಅವರಿಗೆ ಪರಮಾತ್ಮನು ಕಲ್ಪನಾತೀತವಾಗಿ ಯಶಸ್ಸನ್ನು ದಯಪಾಲಿಸುವನು. ಗದ್ದಲ ಮಾಡದೆ ಕಾರ್ಯ ಜರುಗಿಸುವವರೇ ವಿಜಯಶಾಲಿಗಳಾಗುವರು. ಕೋಟ್ಯವಧಿ ಜನರು ಶ್ರೀ ಗಾಂಧಿಯವರ ಕಾರ್ಯದ ಕಡೆಗೆ ಲಕ್ಷ್ಯವಿಟ್ಟು ನೋಡುತ್ತಿರುವರು. ಅಂತರಿಕ್ಷದೊಳಗಿಂದ ಪರಮಾತ್ಮನೂ ಅವರು (ಅಸಹಯೋಗ ಮಂಡಲಿ) ನಡಿಸುವ ಕಾರ್ಯವನ್ನು ಸೂಕ್ಷ್ಮರೀತಿಯಿಂದ ವೀಕ್ಷಿಸುತ್ತಿರುವನು. ಅವರ ಶಾಸನಗಳೂ, ಕಾದಾಟಗಳೂ ಮುಗಿದ ಮೇಲೆ, ಅವರು ನೆರವೇರಿಸಿದ ಕಾರ್ಯವೂ, ಸಂಪಾದಿಸಿದ ಕೀರ್ತಿಯೂ ಚಿರಕಾಲ ಬಾಳುವವು. ಅವರ ಕಷ್ಟದಿಂದ ಸಂಪಾದಿಸಿದ ಸ್ವಾತಂತ್ರ್ಯವನ್ನು ಉಪಭೋಗಿಸುವ ಕೋಟ್ಯವಧಿ ಜನರು ಅವರನ್ನು ಭಕ್ತಿಪೂರ್ವಕವಾಗಿ ಪೂಜಿಸುವರು. ಪರಮಾತ್ಮನು ಅವರಿಗೂ, ಅವರ ಪ್ರಿಯ ಸಹಚರರಿಗೂ ಆಶೀರ್ವದಿಸಲಿ, ಮತ್ತು [illegible] ಯುದ್ಧವು ಸಮಾಪ್ತಿಯಾಗುವ ವರೆಗೆ — ಇದೇನು [illegible] ನಡೆಸಲಿಕ್ಕಿಲ್ಲ— ಅವರಿಗೆ [illegible] ವನ್ನೀಯಲಿ '

ಈ ಪತ್ರವನ್ನು ಓದುಗರ ಮುಂದಿಡುವಾಗ ನನ್ನ ಮನಸ್ಸು [illegible] ಹಿಂಜರಿಯುತ್ತದೆ. ಈ ಪತ್ರವು ವ್ಯಕ್ತಿಯನ್ನುದ್ದೇಶಿಸಿ ಬರೆಯದಿದ್ದರೂ, ತೀರ ವ್ಯಕ್ತಿ ವಿಷಯಕವಿದೆ. ಆದರೆ ನಾನು ಅಹಂಭಾವದಿಂದ ಪ್ರೇರಿತನಾಗಿಲ್ಲೆಂದು ನನಗೆ ಜೋರ ಶ್ರದ್ಧೆ. ನನ್ನ ನ್ಯೂನತೆಗಳ ಅರಿವು ನನಗುಂಟೆಂದು ನಾನು ತಿಳಿಯುತ್ತೇನೆ. ಪರಮೇಶ್ವರನು ಸರ್ವಶಕ್ತಿವಾನನೂ, ಸಕಲ ಪ್ರೇರಕನೂ [illegible] ನನ್ನ ಅಚಲ ಶ್ರದ್ಧೆಯಿರುವದು. ನಾನು ಪರಮಾತ್ಮನ ಕುಂಬಾರನ ಕೈಯೊಳಗಿನ ಮಣ್ಣು. ಈ [illegible] ಭಗವದ್ಗೀತೆಯ ವಚನಗಳನ್ನನುಸರಿಸಿ ಅವನ ಚರಣಗಳಿಗೆ ಸಮರ್ಪಿಸುವೆನು. ಇಂಥ ಆಶೀರ್ವಾದಗಳು ನಿಜವಾಗಿ ಸ್ಫೂರ್ತಿದಾಯಕವಿರುವವು. ಆದರೆ ಈ ಪತ್ರ ಪ್ರಕಟಣೆಯ ಕಾರಣವು ಬೇರೆ ಇದೆ. ಇದನ್ನು ಓದಿ ಅಹಿಂಸಾ ಮಾರ್ಗವನ್ನು ಆಕ್ರಮಿಸುವ ಪ್ರತಿಯೊಬ್ಬ ಅಸಹಯೋಗಿಯು ಉತ್ತೇಜನ ಹೊಂದಲಿ [illegible] ಕ— ಅಸಹಯೋಗಿಗಳ ತಪ್ಪು [illegible] ಕ್ಷದಿಂದಾಗಿ, ದುರ್ಮಾರ್ಗವನ್ನು [illegible] ಕೇವಲ ಸ್ವಾರ್ಥದ ಕಾರಣವು [illegible] ಪ್ರೇರಿತರು [illegible] ಧೋರಣದಲ್ಲಿ ಈ ಚಳವಳಿಯ [illegible] ಲಂಕ ಪ್ರೇರಣೆ [illegible] ರಗಳ ಸಂಗಡ [illegible] ವನಸ್ಸಾಗಲೀ, ನಾನು [illegible] ದ್ವೇಷಬುದ್ಧಿಯನ್ನು ತಳೆದಿದ್ದರೆ [illegible] ಹೊಡೆಯುವಷ್ಟು ನಾನು [illegible] ಪರಮಾತ್ಮನಲ್ಲಿಯೂ [illegible] ಯೂ, ಎಳ್ಳಷ್ಟು ಶ್ರದ್ಧೆಯಿರದವರು [illegible] ಷಿಸಲಾರರು. ನಮ್ಮ [illegible] ತುಂಬಾ [illegible] ಅಪ್ಪಗಳನ್ನು [illegible] ನಾವು ಇಚ್ಛಿಸುತ್ತಿರುವ [illegible] ದೊಡ್ಡ ನಾವು [illegible] ಇಂಗ್ಲಿಷರ ಹತ್ತರ — ಏಕೆಂದರೆ ಇದೀ ಜಗತ್ತಿನ [illegible] ತನ ಬಳಸುವಿಕೆಂದು ಈ ಯುದ್ಧವು ಪ್ರಾರಂಭವಾಯಿತು [illegible] ಗಳತನವು [illegible] ಸ್ತುತಿಪಾಠಗಳಿಂದ ಸೂಚಿಸಿದ [illegible] ದಕ್ಕಾಗಿ ನಾವು ಪರತಂತ್ರದೊಳಗಿನ ಇಂಗ್ಲೀಷರಿಗೆ ಅವರ ನ್ಯೂನತೆಗಳನ್ನು ತೋರಿಸಿಕೊಟ್ಟು, ಅವು ದೂರವಾಗುವ ವರೆಗೆ, ನಾವು ಅವರ ಹತ್ತರ ಸಹಕಾರ ಮಾಡಲಿಕ್ಕಿಲ್ಲೆಂದು ಸ್ಪಷ್ಟವಾಗಿ ಸಾರಿ ಹೇಳು [illegible]. ಈ [illegible] ಪರಮಾತ್ಮನು ನಮ್ಮನ್ನು ಪ್ರೇರಿಸುವನು, ಯಾಕಂದರೆ, ಸತ್ಯ ಯಾವ ಕಡೆಗೆ [illegible] ಇಲ್ಲ ಮತ್ತು ಕೊಟ್ಟ ವಚನವನ್ನು [illegible] ತಪ್ಪದೆ ನಮ್ಮ ಮಾರ್ಗವು [illegible] ಸನ್ಮಾರ್ಗವಿದೆಂದು ನಾನೀಗ [illegible] ಇದು ಸತ್ಯವಿದೆಂದು ನನಗೆ ಖಾತ್ರಿಯಿದೆ— ನಮ್ಮ ಆತ್ಮಶೋಧಕ್ಕೆ ಈ ಆಂಗ್ಲ ಸ್ತ್ರೀಯು ಕಣ್ಣು ತೆರೆದಂತೆ, ಉತ್ತರದ [illegible] ಇವಳೊಬ್ಬಳಿಗೇ ಹೀಗೆ ತೋರುತ್ತಿದೆಂತಲ್ಲ. ನನ್ನ ಪ್ರವಾಸದಲ್ಲಿ ಅನೇಕ ಇಂಗ್ಲಿಷರು [illegible] ಅವರ ಗುರುತು ನನಗಿಲ್ಲ. ಆದರೂ ಅವರು ನನ್ನನ್ನು ಮನಃಪೂರ್ವಕವಾಗಿ ಅಭಿನಂದಿಸಿ ವಿಜಯ ಪ್ರಾಪ್ತಿಯಾಗಲೆಂದು ಬಯಸಿ, ತಪ್ಪು ಹಾದಿ ಹಿಡಿ [illegible] ನನಗೆ ಆಶೀರ್ವದಿಸುವವರು ಕೆಲವರಿದ್ದರೆ, [illegible] ಮುಂದೆ ನನ್ನನ್ನು [illegible] ಈ ಕಾಪಗಳ [illegible] ನಾನು ಶ್ರೀ ದೇವರ ಚರಣಗಳಿಗೇ ಅರ್ಪಿಸುವೆನು. ಈ [illegible] ಗಳ ಮೂಲವು [illegible] ಅನೇಕ ಇಂಗ್ಲಿಷರು, ಕೆಲ ಭಾರತೀಯರೂ ನನ್ನನ್ನೂ ನನ್ನ ಚಳುವಳಿಯನ್ನೂ ಕೇವಲ ತುಂಟತನವೆಂದು ತಿಳಿಯುತ್ತಾರೆ. ಅಸಹಯೋಗಿಗಳು ಇವೆಲ್ಲವುಗಳನ್ನೂ ಸಹಿಸಬೇಕು. ವಿಶಾರದರಾಗಿ, ಸೇಡು ತೀರಿಸಿಕೊಂಡರೆ, ನಾವು ಸೋತು ಹೋಗುವೆವು. ಆದರೆ, ಆತ್ಮದಂಡನೆಯನ್ನು ಸಹಿಸಿದರೆ ಫಲಪ್ರಾಪ್ತಿಯು ತಪ್ಪದೆ ಶೀಘ್ರವಾಗಿ ನಮ್ಮ ಕೈಸೇರುವದು. ಯಶಃಸಾಧನೆಗೆ ಇಷ್ಟೆಲ್ಲ ಅವಕಾಶ ಉಂಟಾಗಲಿಕ್ಕೆ ನಮ್ಮ ನ್ಯೂನತೆಗಳೇ ಕಾರಣವೆಂದು ನಾನು ಮನಗಂಡಿರುವೆನು. ನಾವು ಸದಾ ಸರ್ವದಾ ಶಾಂತತೆಯಿಂದ ವರ್ತಿಸಲಿಲ್ಲ. ನಮ್ಮ ಪ್ರತಿಜ್ಞೆಯನ್ನು ಉಲ್ಲಂಘಿಸಿ, ನಾವು ಕೆಡಕು ಬಯಸಿದೆವು. ನಮ್ಮ ವಿರೋಧಕರಾದ ಇಂಗ್ಲಿಷ ಅಧಿಕಾರಿಗಳೂ, ಅವರ ಸಹಕಾರಿಗಳೂ, ತಾಲೂಕದಾರರೂ, ಜಮೀನದಾರರೂ, ನಮ್ಮ ಮಾತನ್ನು ನಂಬುವದಿಲ್ಲ. ಅವರು ನಮಗೆ ಬೆದರುತ್ತಾರೆ. ಅವರನ್ನು ಸಂಪೂರ್ಣವಾಗಿ ಸುರಕ್ಷಿತನಿಡಲಿಕ್ಕೆ ನಮ್ಮ ಪ್ರತಿಜ್ಞೆಯಂತೆ ನಾವು ಬದ್ಧರಿದ್ದೇವೆ. ಬಡಬಗ್ಗರನ್ನಾಗಲೀ, ದುರ್ಬಲರನ್ನಾಗಲಿ, ಸುಲಿಯುವ ಕೆಲಸದಲ್ಲಿ ನಾವು ಅವರಿಗೆ ಸಹಾಯ ಮಾಡಕೂಡದೆಂಬುದು ನಿಜವು. ಆದರೆ ಅವರಿಗೆ ಯಾವದೇ ರೀತಿಯಿಂದ ಅಪಾಯ ಮಾಡಕೂಡದು. ಅವರು ಅಲ್ಪ ಸಂಖ್ಯಾಕರಿದ್ದರೂ ಶಸ್ತ್ರಾಸ್ತ್ರಗಳಿಂದ ತಮ್ಮ ಸಂರಕ್ಷಣ ಮಾಡಿಕೊಳ್ಳುವದಕ್ಕಿಂತ ನಮ್ಮೊಳಗ (ನಿಶ್ಶಸ್ತ್ರರಾಗಿ) ಇರುವದೇ ಹೆಚ್ಚು ಸುರಕ್ಷಿತವೆಂದು ಅವರು ಭಾವಿಸಬೇಕು. ಅವರು ಅಲ್ಪ ಸಂಖ್ಯಾಕರಿದ್ದರೂ, ನಮ್ಮ ಕಾರ್ಯನಿ[illegible] ನಾಗ [illegible]. ಮತ್ತು ಈ ಮೊದಲೇ ನಮ್ಮ ದು[illegible] ಅವಿಶ್ವಾಸವನ್ನು ಸಿದ್ಧಪಡಿಸುತ್ತಿದ್ದೇವೆ. ನಿಜವಾಗಿ ಹೇಳಬೇಕಾದರೆ ನಮ್ಮ ಸಂಖ್ಯಾಬಲವೇ ನಮ್ಮ ಪ್ರಗತಿಯನ್ನು ಕುಂಠಿಸುತ್ತದೆ. ನಮ್ಮದ ರಾಜ್ಯ ಕಾರಭಾರದ ವಿಷಯದಲ್ಲಿ ಸರ್ವರೂ ಅನವಧಾನ ಪಡೆದಿರುವರು. ಆದರೆ [illegible]ರಿಗೆ ಅಹಿಂಸಾತತ್ವದಲ್ಲಿ ಶ್ರದ್ಧೆಯಿರುವದಿಲ್ಲ. ಮು[illegible] ಪ್ರಸಂಗದಲ್ಲಿ ಸಂಭವಿಸಿದ ಲೂಟಿ [illegible] ಪ್ರಕಾರಗಳು ಅಶಕ್ಯವಾದ ಹೊರತು ನಾವು ಸುಮ್ಮನಿರ [illegible] ದು [illegible]ಗಳನ್ನು ಬಾಯಿಯಿಂದ ಉಚ್ಚರಿಸಿ, ಕೋರ್ಟಗಳೊಳಗಿನ ನಾವು ಮೊಕದ್ದಮೆಗಳನ್ನು ಪ್ರತಿಬಂಧಿಸದೆ [illegible] ಬಾರಿ ನಾವು ಕಾರಾಗೃಹವಾಸವನ್ನು ಸಂತೋಷದಿಂದ ಸ್ವೀಕರಿಸಬೇಕು, ಇಲ್ಲವೆ, ಬಿಡುಗಡೆ [illegible] ಬೇಕಾದ ಹಾಗೆ ಸರಕಾರಕ್ಕೆ ತಿಳಿಸು [illegible] ಒಪ್ಪಿಗೊಡಬೇಕು. ಅಹಿಂಸಾ ತತ್ವದ [illegible] ಗಳನ್ನು ತಿಳಕೊಂಡು [illegible] ಗಳಂತೆ ವರ್ತಿಸಲಿಕ್ಕೆ ನಾವು ಸಮರ್ಥರಾದರೆ ಇಷ್ಟಪ್ರಾಪ್ತಿಯು ಮುಂದರಿವದು.

ಪ್ರವಾಸಿಕರಿಗೆ ನೋಡಿರಿ!

ಮೋಟಾರ—ಸರ್ವೀಸ.

[illegible]ಯಿಂದ—ಕಾರವಾರ [illegible] — ಶಿರಸಿ ಪ್ರತಿದಿವಸ ಮೋಟಾರ ಬಿಡಲ್ಪಡುವದು. ಕುಮಟೆಯಿಂದ ಬೆಳಗ್ಗೆ ೮ ಗಂಟೆಗೆ [illegible]ಯಿಂದ ಮಧ್ಯಾಹ್ನ ೨ ಘಂಟೆಗೆ ಹೊರಡುವದು. **ಟಿಕೇಟುಗಳು.** ಶಿರಸಿಯಲ್ಲಿ **ಸುಬ್ರಾವ ನಾಗಪ್ಪ ಕಾಗಾಲ** ಇವರಲ್ಲಿ ಕುಮಟೆಯಲ್ಲಿ **ಗೋಪಾಲ ಅನಂತ ಪೈ ಕಾಗಾಲ** ಇವರಲ್ಲಿ ಸಿಗುವವು.

ಈ ಮೋಟಾರು ಗೋಕರ್ಣ, ಸಿದ್ದಾಪುರ, ಜೋಗ ಯಲ್ಲಾಪುರ, ಹುಬ್ಬಳ್ಳಿ, ಹಾವೇರಿ ವಗೈರೆ ಕಡೆಗೆ [illegible] ಸ್ಪೆಶಲ್ ಭಾಡಿಗೆಗೆ ಬೇಕಾದಲ್ಲಿ ಕೆಳಗೆ ಬರೆದ ಮಾಲೀಕರಿಗೆ ಕೇಳಿದಲ್ಲಿ ಸೋಯಿಮಾಡಿ ಕೊಡುವರು. [illegible] ೧೦-೨-೨೨ ರಿಂದ [illegible] ಮಾಡಲ್ಪಡುವದು.

ವಿಳಾಸ:— ಡಿ. ಪಿ. ಆಲೂರ

ಮಾಲಕ ಮೋಟಾರ ಸರ್ವೀಸ, ಪೋಸ್ಟ ಶಿರಸಿ ಉ. ಕಾನಡಾ.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸ ೧೮೬೦ ನೇ ಇಸ್ವಿಯ ೨೧ ನೇ ಆಕ್ಟಿನಂತೆ ರಜಿಸ್ಟರ ಮಾಡಲ್ಪಟ್ಟ

ಅರ್ಕಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ ೧೦-೮-೧೯೦೮ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರೆಗೆ ಮೂವತ್ತು ಲಕ್ಷದ ಬಾಟ್ಲಿಗಳು ಖರ್ಚಾದವು. ವಿಶೇಷ ಸನ್ ೧೯೧೮ ನೇ ಇಸ್ವಿಯ ಆಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು [illegible] ಬಾಟ್ಲಿಗಳು ಖರ್ಚಾದವು ಅಂತು ಈವತ್ತಿನವರೆಗೆ [illegible] ರೂ ಕ್ಷ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟ್ಲಿಗಳು ಖರ್ಚಾದವು. ಅಂದ ಮೇಲೆ ಈ ಔಷಧವು ಎಷ್ಟು ಮೌಲ್ಯವಾನ ಇದೆ ಇದು ಯಾವತ್ತರು ತಾವೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲಿ ಇಟ್ಟುಕೊಂಡು ಅವಶ್ಯವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಕರ್ನಾಟಕ ದೇಶದ್ದಲ್ಲ. ದೇಶಿ ರೋಗಿಗಳು ಈ ಅರ್ಕಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಬಿದ್ದ ಪ್ರಯುಕ್ತ ಎಷ್ಟೋ, ಇನ್ನಾವು ಸರ್ಟಿಫಿಕೇಟುಗಳು ಬಂದಿರುತ್ತವೆ. ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬುತ್ತೇ[illegible] ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು

ಕ್ಷಯರೋಗ, ಹೃದಯರೋಗ, ಪಾಂಡುರೋಗ, ಗುಲ್ಮರೋಗ, ಮೂಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯಂಜಾಜ್ವರ, ಅನೇಕಪ್ರಕಾರದಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಬನಸು, ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ, ಮತ್ತು ಕಣ್ಣುನೋವು, ಕೆಮ್ಮು, ದಮ್ಮು, ಶ್ವಾಸ, ಅಗ್ನಿಮಾಂದ್ಯ, ಅದ್ದಲಿಪಿ, ಅಜೀರ್ಣ, ಹೊಟ್ಟೆಶೂಲಿ, ಪ್ರಸೂತಿ, ಅರೆತಲೆಶೂಲಿ, ನರಶೂಲಿ, ವಾತಶೂಲಿ, ರಕ್ತಪಿತ್ತ, ಗುದ್ದ ವ್ಯಸನಬೇನೆ, ಮುರುಕುಕಜ್ಜಿ, ಗಜಕರ್ಣ, ಇಸಬು, ಕಜ್ಜಿ, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಿನ ಶೂಲಿ, ಹೃದಯನಂಜು, ಸಣ್ಣ ಕೂಸುಗಳ ಬಾಲಗ್ರಹ, ಕರವಿ, ಮುಟ್ಟುದೋಷ, ಹೊಟ್ಟೆ ಪೊತ್ತ ದಾಗೋಣ, ಮೈ ಬೊಬ್ಬೆಯೇಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಇಂಥ ಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲೆ ಬಾಟ್ಲಿ ಒಂದಕ್ಕೆ ಎರಡುರೂಪಾಯಿ. ನಮೂನೆ ಉದ್ದಕ್ಕೆ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟು ಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟ್ಲಿಗಳು ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತೇವೆ. ಅದಕ್ಕೆ ಒಂಬತ್ತು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದವರೆ ಬಾಟ್ಲಿಯವರೆಗೆ ಕಮಿಶನ್ ಇಲ್ಲ. ಅದಕ್ಕೆ, ಆರು ಆಣೆ ಖರ್ಚು ಬರುವದು. ಒಂದು ಕಾಲು ತೊಲೆ ಬಾಟ್ಲಿ ವ ಐದು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಶನ್ ಕೊಡುತ್ತೇವೆ. ಅದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಖೋಟಿ ಹೊರಟರೆ ವರತಕ ತಕ್ಕೊಳ್ಳುತ್ತೇವೆ ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ ತಿಕೀಟ ಲಗತ ಇಡದೆ, ದೊರೆಯಲಿಕ್ಕಿಲ್ಲ. ಅನುಪಾನದ ಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟ್ಲಿಯು ಸೋಟಿಕ ಸಿಗುವದು ನಿಮ್ಮ ವಿಳಾಸ ಇಂಗ್ಲಿಷ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ ಬಗ್ಗೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಡಾ. ಎ. ಮುಲ್ಲಾ, ಸಂಪಾದಕ ಅರ್ಕಶಫಾ,
ಹೆಡ್ ಆಫೀಸು ಶಹಾಪೂರ, ಬೆಳಗಾಂವ

ಖ್ಯಾತಿಯಿಂದ ಗುಣಪಡಿಸುವ

ಔಷಧಗಳು.

1 ಮಹಾಮದನ ಕಾಮೇಶ್ವರಿ ಲೇಹ — ಬಹಳ ಶ್ರಮಪಟ್ಟು ಕೆಲಸ ಮಾಡುವ ಲೇಖಕರೂ, ಮತ್ತು ಇಂದ್ರಿಯ ದೌರ್ಬಲ್ಯ, ಅಜೀರ್ಣ, ಎದೆನೋವು, ಮಲಬದ್ಧತೆ, ಶರೀರಗಳ ಘಳಕದಿಂದ ಅಶಕ್ತಿ ಹೊಂದಿದ ಪ್ರಕೃತಿಯುಳ್ಳವರೂ ಇದನ್ನು ಸೇವಿಸಿದ್ದಲ್ಲಿ ರಕ್ತಶುದ್ಧಿ, ಧಾತುಪುಷ್ಟಿ ಮತ್ತು ಮನಸ್ಸಿನಲ್ಲಿ ಶಾಂತಿಗೊಳಿಸುವದು. ೪೦ ಸಲ ಸೇವಿಸುವ ಲೇಹ. ಡಬ್ಬಿ 1ಕ್ಕೆ 1-12-0 3 ಡಬ್ಬಿಗಳಿಗೆ 4-12-0

2. ಮಹಾಜ್ವರಾಂಕುಶ — (ಖಾತ್ರಿ ಗುಣ)— ಇನ್‌ಫ್ಲುಯಂಜಾ, ನಿಮೋನಿಯಾ, ದಿವಸಕ್ಕೊಮ್ಮೆ, ದ್ವಿತೀಯ ತೃತೀಯ, ಚಾತುರ್ಥಿಕ ಜ್ವರಗಳ [illegible] ಬಾಟ್ಲಿ 1 ಕ್ಕೆ 0-8-0

3. ಬಾಲಗ್ರಹ ಗುಟಿಕೆ — ಕೂಸು ವ ಮಕ್ಕಳ ಅವಸ್ಥಾರಕ್ಕೆ ರಾಮಬಾಣ ಬಾಟ್ಲಿ 1 ಕ್ಕೆ 0 10-0

4. ಶಾಂಕಟಾರ ಗುಟಿಕೆ . ಇದು ಪಾಸಕ್ಕೆ ಸಿದ್ಧ ಔಷಧಿ. ಒಂದೇ ಗುಟಿಕೆಯಿಂದ ಕಫ, ಉಬ್ಬಸ ಕೆಮ್ಮು ಉತ್ತಮ ಗುಣ ಬಾಟ್ಲಿ 1 ಕ್ಕೆ 0-10-0

5 ಇಚ್ಛಾಭೇದಿ — ಆಯಾಸವನ್ನು ಉಂಟುಮಾಡದ ಮಲವಿರೇಚಕ. ಬಾಟ್ಲಿ 1 ಕ್ಕೆ 0 12-0

ಎಮ್. ಗಣಪಯ್ಯಾ ಎಂಡ ಸನ್ಸ್
ನೆಟಿವ್ ಡಾಕ್ಟರ್ಸ್ ರಥಬೀದಿ.
ಮಂಗಳೂರ ದ. ಕ.

ಸ್ಟಾರ ಎಗ್ಯೂ ಮಿಕ್ಸ್ಚರ.

ಇದು ಚಳಿಜ್ವರ, ಇನ್‌ಫ್ಲುಯಂಜಾ ವಗೈರೆ ಎಲ್ಲ ಪ್ರಕಾರದ ಜ್ವರಗಳ ಮೇಲೆ ಅತ್ಯಂತ ಗುಣಕರ ಔಷಧ ಇದ್ದು ಎಷ್ಟೋ ವರ್ಷಗಳ ಅನುಭವದಿಂದ ಮತ್ತು ಶಾಸ್ತ್ರೋಕ್ತ ಪದ್ಧತಿಯಿಂದ ತಯಾರಿಸಿದ್ದಿರುತ್ತದೆ. ಇದರಲ್ಲಿ ಯಾವತರದ ಮಾದಕ ಅಥವಾ ಶರೀರಕ್ಕೆ ಅಪಾಯಕಾರಕ ದ್ರವ್ಯಗಳಿಲ್ಲವೆಂದು ದೊಡ್ಡ ದೊಡ್ಡ ಡಾಕ್ಟರ, ಹಕೀಮ ಮತ್ತು ವೈದ್ಯರೂ ಕೂಡಾ ಅಭಿಪ್ರಾಯಪಟ್ಟಿರುವರು.

ಉಪಯೋಗದಾರರಿಗೆ ಒಂದೇ ಸಲದ ಅನುಭವದಿಂದ ಖಾತ್ರಿಯಾದೀತು.

ಬಾಟ್ಲಿ ಒಂದರ ಕಿಮ್ಮತ್ತು ಬರೇ ೧೨ ಆಣೆ. ಟಪಾಲ ಖರ್ಚ ಬೇರೆ. ಏಜಂಟರು ಬೇಕು.

ದಿ ಸ್ಟಾರ ಫಾರ್ಮಸಿ,
ಮುಂಬಯಿ ನಂ ೧೨

The Star Pharmacy,
Bombay No. 12.

[illegible] ಸರ್ಟಿಫಿಕೇಟು ಪಡೆದಿರುವ

ಶಕ್ತಿವರ್ಧಕ ಹಲವಾ.

ಇದರ ಸೇವನೆಯಿಂದ ರಕ್ತವೃದ್ಧಿ ಧಾತುಪುಷ್ಟಿಯಾಗಿ ಶರೀರವು ಕಾಂತಿಗೊಳಿಸುವದು. ಅಲ್ಲದೆ ಕೆಮ್ಮು ದಮ್ಮು, ಕಫ, ವಾತ, ಪಿತ್ತ, ನಿದೆ, ಅಲ್ಲಗೋಣ, ಮಲ ವಿಸರ್ಜನೆ ಸರಿಯಾಗಿ ಆಗದಿರೋಣ, ಅಜೀರ್ಣ ಜ್ವರ, ಸ್ತ್ರೀಯರ ಗರ್ಭದೋಷ, ಕೂಸುಗಳ ದೊಡ್ಡೆಯ ಎಲ್ಲಾ ಬೇನೆಗಳು ಬೇಗನೇ ಗುಣಹೊಂದುವವು ಉಪಯೋಗಿಸಿ ನೋಡಿರಿ. ೨೦ ತೊಲೆ ಡಬ್ಬಿ ೧ ಕ್ಕೆ ರೂಪಾಯಿ ೧.

ಕಿರೇಕರ ಬ್ರದರ್ಸ, ಶಕ್ತಿವರ್ಧಕ ಹಲವಾ
ಡಿಪೋ, ಕುಮಟಾ. (ಕಾನಡಾ)

अलौकिक.

व्हेजीटेबल टॉनिक सिरप— निर्दोष व शुद्ध वनस्पतींच्या सत्वांपासून बनविलेलें शक्तिवर्धक औषधी सरबत. ह्याच्या सेवनानें बद्धकोष्ठ अपचनादि विकार नष्ट होऊन साफ कोष्ठशुद्धि होते. भूक लागते व अन्नाचें पचन होऊन शुद्ध रक्त व वीर्यवृद्धि होते. किं. रु. १-८-०

फेब्रोलीन— मलेरिया, हींव, सर्दी किंवा दूषित हवेमुळें येणारे साथे, विषारी, अगर इतर ताप, इन्फ्लुएन्झा इ० वर खास गुणकारी. हे केवळ वनस्पतींचें—क्विनाईनचे दुष्परिणाम रहित—औषध घेतल्यानें अशक्तपणा न येता घाम येऊन ताप उतरतो व रोग्यास त्वरित आराम वाटतो. ३ औं० बा० किं. रु १-०-०

वंची कोलन वॉटर व कस्तुरिमिश्र लव्हेंडर— परदेशी मालाला टक्कर देणारीं हीं सुगंधी द्रव्यें आमच्या-स्वतःच्या कारखान्यांत तयार होणाऱ्या स्पिरिटमध्यें बनविलीं जात असल्यामुळें गुणांत श्रेष्ठ व किंमतींत स्वस्त आहेत. वि. मा. पत्रद्वारें.

अलौकिक केमिकल वर्क्स कं० लि०
नं. ५० प्रिन्सेस स्ट्रीट मुंबई.

ರಾಷ್ಟ್ರೀಯ ಪ್ರವೇಶ (ಮ್ಯಾಟ್ರಿಕ್ಯುಲೇಶನ) ಪರೀಕ್ಷೆಯು.

ಕರ್ನಾಟಕ ಪ್ರಾ। ಕಾಂ। ಕಮಿಟಿಯವರು ರಾಷ್ಟ್ರೀಯ ಶಿಕ್ಷಣದ ಸಲುವಾಗಿ ನೇಮಿಸಿದ ಉಪಸಮಿತಿಯವರು ಅಹಮದಾಬಾದಿನಲ್ಲಿ ೨೭ನೇ ದಿಶಂಬರ ದಿವಸ ನೆರೆದು ಕೆಳಗೆ ಬರೆದ ಇರುವ ಠರಾವುಗಳನ್ನು ಪಾಸು ಮಾಡಿದರು

(೧) ೧೫ ಅಥವಾ ಅದಕ್ಕೂ ಹೆಚ್ಚಿನ ವಯಸ್ಸಿನ ವಿದ್ಯಾರ್ಥಿಗಳಿಗೆ ಸ್ವಯಂಸೇವಕರಾಗಲಿಕ್ಕೆ ಅಪ್ಪಣೆಯನ್ನು ಕೊಟ್ಟು ಉಳಿದ ವಿದ್ಯಾರ್ಥಿಗಳ ಶಿಕ್ಷಣದ ವ್ಯವಸ್ಥೆಯನ್ನು ಅವಶ್ಯವಾಗಿ ಮಾಡಬೇಕು ಅಧ್ಯಾಪಕರು ದೊರೆಯದೆ ಅಥವಾ ಯಾವದಾದರೂ ಕಾರಣದಿಂದ ಶಿಕ್ಷಣ ಕ್ರಮವನ್ನು ಯಥಾಪ್ರಕಾರವಾಗಿ ನಡಿಸಲಿಕ್ಕೆ ಶಕ್ಯವಿರದಿದ್ದರೆ ಇದ್ದ ಒಬ್ಬಿಬ್ಬ ಅಧ್ಯಾಪಕರು ವಿದ್ಯಾರ್ಥಿಗಳೊಡನೆ ಕೇವಲ ಶಾಲೆಯ ಸೇವೆಯನ್ನು ಮಾಡುತ್ತಿರಬೇಕು

(೨) ಕರ್ನಾಟಕದ ಪರವಾಗಿ ಒಂದೇ ಪ್ರವೇಶ ಪರೀಕ್ಷೆಯು (matriculation) ಇರತಕ್ಕದ್ದು ಮತ್ತು ಅದೇ ಪರೀಕ್ಷೆಗೆ ಕರ್ನಾಟಕದ ಎಲ್ಲ ರಾಷ್ಟ್ರೀಯ ಶಾಲೆಯ ವಿದ್ಯಾರ್ಥಿಗಳು ಕೂಡುವದು ಅವರ [illegible] ಒಂದೇ ಅಭ್ಯಾಸ ಕ್ರಮವನ್ನು ಗೊತ್ತುಪಡಿಸಿ ಪರೀಕ್ಷಕರನ್ನು ನೇಮಿಸಿರುತ್ತದೆ ಪರೀಕ್ಷೆಯ ಫೀ ೧೦ ರೂ ಪರೀಕ್ಷೆಯು ಫಾಲ್ಗುಣ ವದ್ಯ ೬ (೧೯—೩—೩೨) ದಿವಸ ಪ್ರಾರಂಭವಾಗುವದು

(೩) ಕರ್ನಾಟಕ ರಾಷ್ಟ್ರೀಯ ಶಾಲೆಗಳಲ್ಲಿ ಒಂದೇ ಅಭ್ಯಾಸ ಕ್ರಮವು ಪ್ರಚಲಿತವಾಗುವದು ಅವಶ್ಯವಿದ್ದುದರಿಂದ ಬೇರೆ ಬೇರೆ ರಾಷ್ಟ್ರೀಯ ಶಾಲೆಗಳಲ್ಲಿಯ ಅಭ್ಯಾಸ ಕ್ರಮವನ್ನು ತರಿಸಿಕೊಂಡು ಉಪಮಂಡಲದ ಸಭಾಸದರ ಅಭಿಪ್ರಾಯವನ್ನು ತಿಳಿದುಕೊಂಡು ಒಂದು ಸರ್ವಸಾಧಾರಣವಾದ ಅಭ್ಯಾಸ ಕ್ರಮವನ್ನು ಗೊತ್ತುಪಡಿಸಿ ಪ್ರಸಿದ್ಧಿಸುವ ಕೆಲಸವನ್ನು ಉಪಮಂಡಲದ ಕಾರ್ಯದರ್ಶಿಗಳಾದ ಶ್ರೀ। ಸುರೇಂದ್ರರಾವ ದೇಸಾಯಿ ವ್ಯವಸ್ಥಾಪಕ ಕರ್ನಾಟಕ ರಾಷ್ಟ್ರೀಯ ವಿದ್ಯಾಲಯ ಧಾರವಾಡ ಇವರಿಗೆ ಒಪ್ಪಿಸಿರುತ್ತದೆ ಅವರು ಈ ಉಪಮಂಡಳಿಯ ವರದಿಯನ್ನು ಸಿದ್ಧಪಡಿಸಿ ಪ್ರಾಂತಿಕ ಕಾಂ। ಕಮಿಟಿಯವರ ಕಡೆಗೆ ಕಳಿಸಲಿಕ್ಕೂ ಉಪಮಂಡಳಿಯ ಪರವಾಗಿ ಪತ್ರವ್ಯವಹಾರ ನಡಿಸಲಿಕ್ಕೂ ಪ್ರವೇಶ ಪರೀಕ್ಷೆಯ ಒಟ್ಟು ವ್ಯವಸ್ಥೆಯನ್ನು ಮಾಡಲಿಕ್ಕೂ ನೇಮಿಸಿರುತ್ತದೆ

(೪) ಪ್ರಾಂತಿಕ ಭಾಷೆಯಾದ ಕನ್ನಡದ ದ್ವಾರ ಹಿಂದಿಯಲ್ಲದೆ ಎಲ್ಲ ಶಿಕ್ಷಣವನ್ನು ರಾಷ್ಟ್ರೀಯ ಶಾಲೆಗಳಲ್ಲಿ ಕೊಡತಕ್ಕದ್ದು ಅವಶ್ಯವಿದೆ

(೫) ಕರ್ನಾಟಕದ ಎಲ್ಲ ಶಾಲೆಗಳಲ್ಲಿ ವರ್ಷಾರಂಭವು ಒಂದೇ ವೇಳೆಗೆ ಆಗುವದು ಅವಶ್ಯವಿದೆ [illegible] ಪ್ರತಿಪದೆಯಿಂದ [illegible] ಬೇಸಿಗೆಯ ರಜೆಯು [illegible] ಯಿಂದ ವೈಶಾಖ ಅಮಾವಾಸ್ಯೆಯ ವರೆಗೆ ೧॥ ತಿಂಗಳ ಮತ್ತು ದೀಪಾವಳಿಯಲ್ಲಿ ೧೫ ದಿವಸ ರಜೆಯನ್ನು ಕೊಡಬಹುದು. ವರ್ಷದಲ್ಲಿ ೩೦೦ ದಿನಗಳವರೆಗಾದರೂ ಶಿಕ್ಷಣ ಕಾರ್ಯವು ನಡೆಯಲಿಕ್ಕೆ ಬೇಕು

೬) ಪರೀಕ್ಷೆಯು [illegible] ಬೇರೆ ಬೇರೆ ರಾಷ್ಟ್ರೀಯ ಶಾಲೆಗಳಲ್ಲಿ ಅಂದರೆ ಧಾರವಾಡ, ಬೆಳಗಾವಿ, [illegible], ಬಾಗಲಕೋಟ ರಾಷ್ಟ್ರೀಯ ಶಾಲೆಗಳಲ್ಲಿ ಪ್ರಾರಂಭವಾಗುವದು. ಕಾರಣ ಉಮೇದವಾರರೆಲ್ಲರೂ ತಮ್ಮ ಶಾಲೆಗಳ ಮುಖ್ಯಾಧ್ಯಾಪಕರ ಮುಖಾಂತರವಾಗಿ ಮಾಘ ಪೌರ್ಣಿಮೆಯ ಒಳಗಾಗಿ ೧೦ ಮತ್ತು ಅರ್ಜಿಯನ್ನು ಧಾರವಾಡ ಕರ್ನಾಟಕ ರಾಷ್ಟ್ರೀಯ ವಿದ್ಯಾಲಯಕ್ಕೆ ಕಳಿಸಿಕೊಡಬೇಕು

(೭) ಕಾಂಗ್ರೆಸ ಮಂಡಲದ ಸಹಾಯದಿಂದಲೂ, ಜನತೆಯ ಸಹಾಯದಿಂದಲೂ ರಾಷ್ಟ್ರೀಯ ಶಾಲೆಗಳ ವ್ಯವಸ್ಥಾಪಕರು ತಮ್ಮ ತಮ್ಮ ಶಾಲೆಗಳು ಸ್ಥಾಯಿಯಾಗುವಂತೆ ಮಾಡಿಕೊಳ್ಳಬೇಕು

(೮) ಕಾಲೇಜ ಶಿಕ್ಷಣ ವಿದ್ಯಾಲಯಗಳ ವಿಷಯಕ್ಕೆ ಹಿಂದಿನಿಂದ ವಿಚಾರ ಮಾಡಲಾಗುವದು

[ಈ ಕೆಳಗೆ ಪರೀಕ್ಷೆಯ ವಿಷಯಗಳನ್ನು ತಿಳಿಸುವೆವು [illegible] ಸ್ಥಳಗಳಲ್ಲಿ ಪರೀಕ್ಷೆಗಾಗಿ ಹೋಗಲಿಚ್ಛಿಸುವವರು [illegible] ತಿಳಿಸಬೇಕು

ವಿಷಯಗಳು.

ಕನ್ನಡ

೧ ಜೈಮಿನಿ ಭಾರತದ [illegible] ಮುಖೋದ್ಗತ, ಗ್ರಂಥ [illegible] ೧೦೦ ಗುಣಗಳು

೨ ಕೊಟ್ಟ ವಿಷಯದ ಮೇಲೆ [illegible] ವ್ಯಾಕರಣ ಜ್ಞಾನ ಕಥೆ [illegible] ಹಾರ ಇತ್ಯಾದಿ — ಬರಹ ೩ ತಾ [illegible] ೦೦ ಗುಣಗಳು

ಓದೋಣ ಪದ್ಯ [illegible] ಹೇಳುವ [illegible]) ಮತ್ತು ಇತರ [illegible] ಗಳು

ಮರಾಠಿ — [illegible] ತಕ್ಕ [illegible] ಗಳು ಉಳಿದವೆಲ್ಲ ಕನ್ನಡದಂತೆ [illegible] ಮಾತನ್ನು [illegible] ತರಹ

ಸಂಸ್ಕೃತ

೧ ರಾಮರಾಜ್ಯ ರಘುವಂಶ [illegible] ಶ್ಲೋಕ [illegible] ಗದ್ಯಭಾಗ, ಶಬ್ದರೂಪಾವಳಿ ಧಾತುರೂಪಾವಳಿ, ಸಮಾಸಚಕ್ರದಷ್ಟು ಉಪಯುಕ್ತ ವ್ಯಾಕರಣ ಜ್ಞಾನ— ಬರಹ ೩ ತಾ ೧೦೦ ಗು.

ಹಿಂದಿ

೧ ಸಾಧಾರಣ ವ್ಯವಹಾರದ ಮಾತು, ಪತ್ರವ್ಯವಹಾರ ಮಾಡಲಿಕ್ಕೆ ಸಲುವ ಶಬ್ದಗಳ ಅರ್ಥ ಹೇಳಲಿಕ್ಕೆ ಅವಶ್ಯವಿದ್ದ ಜ್ಞಾನ [illegible] ಲಿಂಗ ವ್ಯಾಕರಣ ಜ್ಞಾನ [illegible] ಬರಹ ೨ ತಾಸು ೭೫ ಗುಣಗಳು

೨ ಸಂಭಾಷಣ ಜ್ಞಾನ, ಓದೋಣ, ಉಚ್ಚಾರ ಇತ್ಯಾದಿ — [illegible] ಪರೀಕ್ಷೆ ೨೫ ಗುಣಗಳು

ಇಂಗ್ಲಿಷ

೧ Stories from Tolstoy ದಂತ ಗದ್ಯಭಾಗಗಳೂ Byron's Prisoner of Chillon ದಂತ ಪದ್ಯಭಾಗಗಳೂ, ಪತ್ರವ್ಯವಹಾರ ವ್ಯವಹಾರಿಕ ವ್ಯಾಕರಣಜ್ಞಾನ, ಕಥಾ ಲೇಖನ, ನಿಬಂಧ ಇತ್ಯಾದಿ

೧ ಬರಹ ಗುಣ ೭೫ ೨ ಓದೋಣ, ಉಚ್ಚಾರ, ಸಂಭಾಷಣ ಇತ್ಯಾದಿ ಗುಣಗಳು ೨೫

ಇತಿಹಾಸ

ಪ್ರಾಚೀನ ಹಿಂದುಸ್ಥಾನದ ಸಾಮಾನ್ಯ ಮಾಹಿತಿ (Ancient India by U N Ball) ದಷ್ಟು, ಅರ್ವಾಚೀನ ಹಿಂದುಸ್ಥಾನದ ಸ್ವಾತಂತ್ರ್ಯಯುದ್ಧದ ಮಾಹಿತಿ (How India Wrought for freedom) ದಷ್ಟು ಹಿಂದುಸ್ಥಾನದ ರಾಜ್ಯಪದ್ಧತಿಯ ಸಾಮಾನ್ಯ ಜ್ಞಾನ— ಬರಹ ೩ ತಾ ೧೦೦ ಗುಣಗಳು.

ಭೂಗೋಲ

ಹಿಂದುಸ್ಥಾನದ ವಿಶೇಷ ಜ್ಞಾನ (ಮುಗದಾಳ ಭೂಗೋಲದಷ್ಟು) ಹಿಂದುಸ್ಥಾನಕ್ಕೆ ಸಂಬಂಧಿಸಿದ ಉಳಿದ ರಾಷ್ಟ್ರಗಳ ಸಾಮಾನ್ಯ ಮಾಹಿತಿಯು — ಬರಹ ೩ ತಾ ೧೦೦ ಗುಣಗಳು

ಗಣಿತ

೧ ಅಂಕಗಣಿತ ಸಂಪೂರ್ಣ ಈಗಿನ ಪದ್ಧತಿಯಂತೆ — ಬರಹ ೩ ತಾ ೧೦೦ ಗುಣಗಳು.

೨ ಬೀಜಗಣಿತ ಭೂಮಿತಿ ಈಗಿನ ಪದ್ಧತಿಯಂತೆ — ಬರಹ ೩ ತಾ ೧೦೦ ಗುಣಗಳು

ನೂಲುವಿಕೆ.

೧೫ ನಂಬರಿನ ಒಳಗಿನ ನೂಲು ತಾಸಿಗೆ ೨ ತೋಲಿಯವರೆಗೂ ತೆಗೆಯಬೇಕು, ೧ ತಾ ೧೦೦ ಗುಣಗಳು

ಒಂದು ಮೂರಾಂಶ ಗುಣಗಳು [illegible], ಪಾಸಾ[illegible]ವದು, ಇದರಲ್ಲಿ ಎರಡೂ ಕಾಗದಗಳು [illegible] ಮೂರಾಂಶ ಗುಣಗಳು ಬಿದ್ದರೂ ಸಾ[illegible] ಸರಾಸರಿ [illegible] ಪಾಸಾಗಲಿಕ್ಕೆ ಬೇಕು

[illegible] ೧೯೩೨ ಧಾರವಾಡ

ಸುರೇಂದ್ರ ಕೇಶವರಾವ ದೇಸಾಯಿ

ವ್ಯವಸ್ಥಾಪಕ ಕ. ರಾ. ವಿದ್ಯಾಲಯ, ಧಾರವಾಡ

ಹೊನ್ನಾವರ ಶಹರ ಮುಷ್ಟಿಫಂಡು

ತಾ ೩-೮-೩೧ ನೇ ರವಿವಾರದಿಂದ ತಾ ೮-೧-೩೨ ನೇ ರವಿವಾರದ ವರೆಗೆ ೨೨ ಹಪ್ತೆಗಳ ಬಾಬತು ಜಮಾ [illegible] ತಪಶೀಲ

ಜಮಾ

ತಾ ೩-೮-೩೧ ರಿಂದ ೮-೧-೩೨ ರ ವರೆಗೆ ವಸೂಲಾದ ಶೆಟ್ಟಿಗೆ ಅಕ್ಕಿ ಮಣ ೮೦ ೧೨॥ ಶೇರಿಗೆ ಅಕ್ಕಿ ಮಣ ೩ ೧೩॥ ಸಂಗ್ರಹವಾದ [illegible] ವಿಲಂಬಿಸಿದ [illegible] ಮಾರಲಾಗಿ	೫೩೩-೯-೧೦
ನಗದಿಯಿಂದ ಬಂದದ್ದು	೫೩-೩-೦
ಒಟ್ಟು	೫೮೬-೧೨-೧೦

ಖರ್ಚು

	ರೂ ಆ ಪೈ
[illegible] ಖರ್ಚ	೬-೧೩-೫
ರೊಟ್ಟಿಗಳ ಬಾಬ್ತು	೩೦೩-೦-೦
ಶಿಲ್ಕು	೨೭೬-೧೫-೫
ಒಟ್ಟು	೫೮೬-೧೨-೧೦

ಸ್ತ್ರೀ ಫಂಡಿನಿಂದ ಮಾಡಿದ ರೊಟ್ಟಿಗಳು

[illegible]

ಜಮಾ

ರೊಟ್ಟಿಗಳು ಮಾಡಿದ್ದು	೧೨೩
ಒಟ್ಟು	೧೨೩

ಖರ್ಚು

ತಿಂಗಳಿಗೆ [illegible] ರಂತೆ [illegible] ದ ಕ್ರಮದ ಮೇಲೆ ಕೊಡುವ [illegible] ಕೊಟ್ಟ ರೊಟ್ಟಿಗಳು	೩೬
ತಿಂಗಳಿಗೆ [illegible] ರಂತೆ ೬ ತಿಂಗಳು ಕೊಡುವ [illegible] ರೊಟ್ಟಿಗಳು	೨೯
ನಗದಿಯಿಂದ ವಿಕ್ರಯವಾದ ರೊಟ್ಟಿಗಳು	೩೮
ಶಿಲ್ಕು ರೊಟ್ಟಿಗಳು	೨೦
ಒಟ್ಟು	೧೨೩

ಹೊನ್ನಾವರ } [illegible] ವೆಂಕಟೇಶ ಪ್ರಭು,
೧೨-೧-೩೨ } ಅಧ್ಯಕ್ಷ

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ

ಕಾಮಿನಿಯಾ ತೈಲ. (ರಿಜಿಸ್ಟರ್ಡ.

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾದ ಉಪಕರಣವಾದರೋ.

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ.)

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿರುವುದೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ ಈ ಆಯಿಲ್ ಹಚ್ಚಿಕೊಳ್ಳುತ್ತಲೇ ಮಸ್ತಿಷ್ಕದ ಬೇನೆಯು ಕಡಿಮೆಯಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ ಕೂದಲುಗಳು ಇದನ್ನು ಹಚ್ಚತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು, ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನು ಕಳೆದು ಹಾಳುಮಾಡಿಕೊಳ್ಳುವದಕ್ಕಿಂತ ಒಂದೇಸಲ ಬಾರಿ ಈ "ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ಮೈಸೂರು ಪ್ರದರ್ಶನದಲ್ಲಿ "ಸರ್ಟಿಫಿಕೇಟ ಆಫ್ ಮೆರಿಟ" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ

ಕ್ರಯ — ಸೀಸೆಗೆ ರೂಪಾಯಿ 1 0 0, ಸೀಸೆ 3 ಕ್ಕೆ ರೂಪಾಯಿ 2-10 0, ವಿ ಪಿ. ಖರ್ಚ C-14 0.

ಅತಿ ಮನೋಹರವಾದ ಸುರಭಿಯು !

ಒಟ್ಟೋ-ದಿಲ್ ಬಹಾರ್ !! (ರಿಜಿಸ್ಟರ್ಡ)

ಈ ಸುಗಂಧದ್ರವ್ಯವು ಪುಷ್ಪ, ಕೇಶರ, ಚಿರಸ್ಥಾಯಿ ಪತ್ರ ಅತ್ಯುತ್ತಮವೂ ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧಪಡಿಸಿದ್ದು. ಇದರಲ್ಲಿ ಮದಿರೆಯು (ಆಲ್ಕೋಹೋಲ್) ಸಂಪರ್ಕವಿಲ್ಲವು ಒಂದೇ ಒಂದು ಸಲ ನಿಮ್ಮ ಕೈ ಚಿಟ್ಟಿಯಲ್ಲಿ [illegible]ಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಚಿಮುಕಿಸಿರಿ ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿನಿಂತಂತಾಗುವುದು ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಯುತ್ತದೆ ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

ಸಣ್ಣ ಸೀಸೆ 1 ಕ್ಕೆ 0-8-0, 1 ಡ್ರಾಮಿನ (ಪಿ ಪಿಯು.) ಸೀಸೆ 1 ಕ್ಕೆ 0-12-0, ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2-0-0. ಅಂಚೆಯ ವೆಚ್ಚ ಬೇರೆ 0-4-0.

ಒಟ್ಟೋ ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0 12-0

Address.= **The Anglo Indian Drug & Chemical Co,**
16, Market, **BOMBAY. 2.**

ಖರೇ ಮಾಲು ! ತಾಜಾ ಕಲ್ಮು !! ತ್ವರೆ ಗ್ಯಾಯಿರ!!!

ಒಮ್ಮೆಗೆಲಾದರೂ ಅನುಭವ ತೆಗೆದುಕೊಳ್ಳದೆ ಬಿಡಬೇಡಿರಿ.

ತಾರುಣ್ಯ ಸಂಜೀವನಿ ಗುಳಿಗೆಗಳು.

ಶುಕ್ಲಧಾತುವನ್ನು ಬೆಳಿಸಿ, ಪುರುಷರಿಗೆ ಸ್ತ್ರೀ ವಿಷಯವಾಗಿಯೂ, ಸ್ತ್ರೀಯರಿಗೆ ಪುರುಷ ವಿಷಯವಾಗಿಯೂ ಹರ್ಷಯುಕ್ತ ಶಕ್ತಿಯನ್ನು ಉಂಟುಮಾಡಿ, ದಿನೇ ದಿನೇ ಶರೀರದ ಜಠರವನ್ನೂ ರೋಗಗಳನ್ನೂ ನಾಶಪಡಿಸಿ, ಆಯುರಾರೋಗ್ಯವನ್ನೂ, ರತಿಯಲ್ಲಿ ವೆಗ್ಗಳವಾದ ಕುತೂಹಲವನ್ನೂ ತೋರಿಸುವ ಕ್ರೀಡಾಶಕ್ತಿಯ ಉತ್ಸಾಹವನ್ನೂ, ಸಂಭೋಗದಲ್ಲಿ ತೃಪ್ತಿಯನ್ನೂ, ಸೌಖ್ಯವನ್ನೂ ಕೊಟ್ಟು, ಮನಸ್ಸಿನ ಧೃಢತೆಯನ್ನೂ ಯೌವನದ ಕಳೆಯನ್ನೂ ತೋರಿಸಿ ಮುದಿತನವನ್ನುನೀಗಿ ಬಲವನ್ನು ಉಂಟುಮಾಡುವದು ಮೃತ್ಯುವನ್ನು ನಿರಾಕರಿಸಿ, ಬಗೆಬಗೆಯ ರೋಗಗಳನ್ನು ನಾಶಮಾಡುವದು. ಜೀರ್ಣಜ್ವರ ಮಂದಾಗ್ನಿ, ಶುಕ್ಲಸ್ರಾವ, ರಮಕಂಕ ಬಿಡದೇ ಇವುಗಳನ್ನು ನಾಶಮಾಡುವದು ಇದು ಆರೋಗ್ಯಕ್ಕೆ ಅತ್ಯುತ್ತಮವಾದ ಔಷಧವಾಗಿಯೂ, ದೇಶಕಾಲಗಳಿಂದಲೂ, ಆತ್ಮಾಹಾರಗಳಿಂದಲೂ, ಸ್ತ್ರೀಯರಿಂದಲೂ, ದೇಹಪ್ರಕೃತಿಯಿಂದಲೂ ಚಿಕ್ಕವಯಸ್ಸಿನಲ್ಲಿ ನಡೆಸುವ ಬಲಾತ್ಕಾರದ ಹಸ್ತಘರ್ಷಣದಿಂದಲೂ, ಅತಿವಿಷಯೋಪಭೋಗದಿಂದಲೂ, ಇಂದ್ರಿಯ ಶಿಥಿಲವೂ, ತೆಳುವೂ, ನಿಸ್ತೇಜವೂ ಆಗಿ ಯತ್ನವಿಲ್ಲದೆ ಸ್ಖಲನವಾಗುವದು. ಒಂದೊಂದು ಸಾರಿ ಮೂತ್ರದಲ್ಲಿಯೂ, ಸ್ವಪ್ನದಲ್ಲಿಯೂ ಸಹ ಹೋಗುವದಲ್ಲದೆ, ನಪುಂಸಕತ್ವ, ಶರೀರ ಕ್ಷೀಣತೆ, ಅಶಕ್ತಿ, ಅರುಚಿ, ದೃಷ್ಟಿಮಾಂದ್ಯ ಬೆನ್ನೆಲುಬಿನಲ್ಲಿಯೂ, ತಲೆಯಲ್ಲಿಯೂ ನೋವು, ಮೈಬಿಸುವು, ನಿದ್ರೆಯಲ್ಲಿ ಭೀಕರವಾದ ಸ್ವಪ್ನ, ಅರಿವು, ಮರುಳು ಮತ್ತು ಶರೀರದ ಹಾಗೂ ಮನಸ್ಸಿನ ಚೇತನ ಕುಂದಿ ಹೋಗುವದು, ಇವೆಲ್ಲವುಗಳಮೇಲೆ ರಾಮಬಾಣದಂತಿರುವದು. ೩೦ ಗುಳಿಗೆಗಳುಳ್ಳ ಸೀಸೆ ೧ಕ್ಕೆ ರೂ ೧॥ ನಂ ೧ ನಂ ೨ ಹೀಗೆ ಎರಡು ಸೀಸೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ ಅಂತು ೬೦ ಗುಳಿಗೆಗಳುಳ್ಳ ಸೀಸೆಗಳಿಗೆ ರೂ ೩ ಪೋಸ್ಟೇಜ ಬೇರೆ

ಎನ್. ಜಿ. ಭಾಗ್ವತ್, ಆಯುರ್ವೇದಿಕ್ ಕೆಮಿಸ್ಟ,
ಕರ್ಕಿ. (ಕೆನರಾ.)

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.



೧. ರಾಗದ ಕೈಪೆಟ್ಟಿಗೆ ಕಿಂ ೩೦, ೪೦, ೬೫, ೭೦, ೬೦.
೨ ,, ಕಾಲು ಪೆಟ್ಟಿಗೆ ಕಿಂ ೬೫, ೭೫ ೧೪೦, ೧೬೦
೩ ತಬಲೆ ಜೋಡಿ ಕಿಂ ೧೩, ೧೫, ೧೮, ೨೦.
೪. ಹಾರ್ಮೋನಿಯಮ ಗ್ಯಾತ ಕಿಂ. ೧॥, ತಬಲೆ ಗ್ಯಾತ ಕಿಂ. ೧೨ ಆ.

ವಿಶೇಷ ಮಾಹಿತಿ ಬಗ್ಗೆ ನಮ್ಮ ಕ್ಯಾಟಲಾಗ ಫುಕ್ಕಟೆ ಕೊಡುವೆವು

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು

ಪತ್ತೆ - **ಗೋಪಾಳ ಸಖಾರಾಮ** ಆಣಿ
ಕಂಪನಿ, ನಂ ೨೬೨,
ಕಾಳಬಾದೇವಿ ರೋಡ, ಮುಂಬಯಿ

ಕಾನಡಾವೃತ್ತ.

ಗುರುವಾರ, ತಾರೀಖು ೨ ಮಾಹೆ ಫೆಬ್ರುವರಿ ೧೯೨೨.

ಇನ್ನೇನು ?

योगस्थ कुरु कर्माणि। भ गीता.

ಅಸಹಕಾರಿತೆಯ ತಹಕೂಬಿ ಅವಧಿಯು ಮೊನ್ನೆ ತೀರಿತು. ಮುಂಬಯಿಯೊಳಗೆ ಮಧ್ಯಸ್ಥರು ಅಸಹಕಾರಿತೆಯ ಚಳವಳಿಯ ತಡೆಗಹಾಕಿದ ನಿರ್ಬಂಧವು ಸದ್ಯಕ್ಕಷ್ಟು ನಿಷ್ಫಲವಾಯಿತು. ರಾಷ್ಟ್ರೀಯ ಚಳವಳಿಯ ರಥವು ಗಡಗಡನೆ ಮುಂದರಿಯುವಾಗ ಅದರೊಳಗೆ ಕೂತು ನೌಕರಶಾಹಿಗೆ ಗುರಿಹೊಡೆದು ಅಸಹಯೋಗಾಸ್ತ್ರಗಳನ್ನು ಒಗೆಯಲು ಹೆದೆ ಏರಿಸಿದ ಬಾಣವನ್ನು ನೋಡಿ, ದುಷ್ಯಂತನಿಗೆ ಋಷಿಕುಮಾರನು ಹೇಳಿದಂತೆ, "न खलु न खलु बाणः सन्निपात्योयमस्मिन्।" ಶ್ರೀ। ಮಾಳವೀಯರಂಥ ಮಧ್ಯಸ್ಥರು ಕೈ ಎತ್ತಿ ಕೂಗಿದ್ದರು. ದಾ ತಡೆಯಿರಿ ಎಂದು ಅವರು ಸದ್ಭಾವದಿಂದ ಮಾಡಿದ ಸಂಧಾನದ ಪ್ರಯತ್ನವು ಇನ್ನು ಸಾಧ್ಯವಾಗುವ ಸಂಭವವು ಅದೆಯೋ? ಮಧ್ಯಸ್ಥರು ನೌಕರಶಾಹಿಯು ಜಿಗದಿಯಾಗಿದೆಂದು ಭಾವಿಸಿ 'ನ ಖಲು" ಹೇಳಿಲ್ಲೆಂದು ನಾವು ಬಲ್ಲೆವು. ಅದೊಂದು ಗೋಮುಖ ವ್ಯಾಘ್ರವೆಂದು ಅಸಹಕಾರಿಗಳೇಕೆ ಮಧ್ಯಸ್ಥರು ಸಹ ಮನಗಂಡಿರುವರೆಂದು ಅವರ ನುಡಿಗಳೇ ಸಾರುವವು. ಮಧ್ಯಸ್ಥರಾದರೂ ಆಳರಸರ ವಿರೋಧಿಗಳೇ. ಅವರಿಗೂ ಸ್ವರಾಜ್ಯವು ಬೇಕು. ಆಳರಸರ ದಬ್ಬಾಳಿಕೆಯನ್ನು ಅವರೂ ಮನಃಪೂರ್ವಕವಾಗಿ ತಿರಸ್ಕರಿಸಿದ್ದಾರೆ. 'ಭಿಕ್ಷಾಂದೇಹಿ'ಯಿಂದ ಸ್ವರಾಜ್ಯ ಪಡೆಯಬೇಕೆಂಬ ಮೋಹವು ಅವರ ಮನಸ್ಸಿನೊಳಗೂ ಲುಪ್ತಪ್ರಾಯವಾಗಿದೆ. ಹೀಗಿದ್ದರೂ ಅಸಹಯೋಗದೊಳಗೆ ಸ್ವರಾಜ್ಯವಾದಿಗಳೂ ಸಹಿಸುವ ಅಸಹ್ಯ ಆತ್ಮದಂಡನೆಯನ್ನು ಲಕ್ಷಿಸಿ ತಮ್ಮ ದೇಶಬಾಂಧವರಿಗಾಗುವ ಕಷ್ಟ ಸಂಕಷ್ಟಗಳನ್ನು ಕಣ್ಣಾರೆ ನೋಡಿ ಅವರ ಗೋಳನ್ನು ತಪ್ಪಿಸುವದಕ್ಕಾಗಿ, ಅಸಹಾಯ ದೇಶಭಕ್ತರಿಂದ ಬಿಗರಿಗಳ ಬೇಟೆಯನ್ನು ಆಳರಸರು ಆಡುವದನ್ನು ತಡಿಸುವದಕ್ಕಾಗಿ ಅನ್ಯೋಕ್ತಿಯಿಂದ ಮಧ್ಯಸ್ಥರು "ನ ಖಲು ನ ಖಲು" ಎಂದು ತಡೆಹಿಡಿದ್ದರೆಂದು ಹೇಳುವದೇ ನಿಜವು. ಇಂಥ ನಿರ್ಮಲವಾದ ಕಾರಣಿಕರ ಸತ್ಪ್ರಯತ್ನಗಳೂ ಸಹ ನಿರಾಶಾಜನಕವಾಗುವವು, ನಿಷ್ಫಲವಾಗುವವು ಎಂಬುದು ಶೋಚನೀಯವು.

ಇನ್ನು ಈ ಅಸಹಯೋಗದ ಕದನವು ತೀರುವದೆಂತು ಕೆಲ ಸೋಮಾರಿಗಳಾಗಲಿ, ಅಂಜುಬುರುಕರಾಗಲಿ, ಸದ್ಬುದ್ಧಿ ಭ್ರಂಶಿತರಾದ ಶಾಂತತಾವಾದಿಗಳಾಗಲಿ, ಪ್ರಶ್ನಿಸಬಹುದು. ಅಂಥವರಿಗೆ ಅಸಹಕಾರಿತಾ ಧರ್ಮದ ಮರ್ಮವೇ ತಿಳಿಯಲಿಲ್ಲೆಂದು ನಾವು ನಮ್ರತೆಯಿಂದ ಹೇಳುವೆವು. ಅಸಹಕಾರವೆಂದರೆ ಅದೊಂದು ಹಠಯೋಗವು ಅತಿ ಕಠಿಣವಾದ ದೇಹದಂಡನೆಯನ್ನು ಸಹಿಸಿ ಆತ್ಮಶುದ್ಧಿಯನ್ನಷ್ಟೇ ಅಲ್ಲ, ಪರರ ಶುದ್ಧಿಯನ್ನು ಸಹ ಸಾಧಿಸಲಿಕ್ಕಾಗುತ್ತದೆಂದು ಅಸಹಯೋಗಿಗಳು ಮನಗಂಡಿರುವರು. ಆತ್ಮಶುದ್ಧಿಯನ್ನೂ ಪರರ ಶುದ್ಧಿಯನ್ನೂ ಸಾಧಿಸಿ ಅಸಹಕಾರದ ಶಾಂತತೆಯ ಕದನದಿಂದಲೇ ಸ್ವರಾಜ್ಯವನ್ನು ಸಂಪಾದಿಸುವೆವೆಂದೂ ಅವರ ಆ ಹಠಯೋಗದ ನಿರ್ಧಾರವಿದೆ. ಇವರ ಈ ಹಠಯೋಗದ ಸಾಮರ್ಥ್ಯವು ಎಷ್ಟಿದೆ, ಅವರನ್ನು ದಬ್ಬಾಳಿಕೆಯ ಪಶುಶಕ್ತಿಯಿಂದ ಹಣ್ಣು ಮಾಡಿ ಸೋಲಿಸಲಿಕ್ಕಾಗುವದೋ ಇಲ್ಲವೋ ಎಂಬುದು ನೋಡಲಿಕ್ಕೆ ಆಳರಸರು ದಬ್ಬಾಳಿಕೆಯ ಗದೆಯನ್ನು ಎತ್ತಿದವರು. ಅಸಹಕಾರಿಗಳು ಹಿಂಸೆಯ ಕಂದಕದೊಳಗೆ ಬಿದ್ದರೋ, ಸತ್ಯೇ ಸತ್ತಂದು ನಂಬಿದ್ದವರನ್ನು ಈ ಘೋರ ಕಂದಕದೊಳಗೆ ಯೇನಕೇನ ದೂಡುವ ಪ್ರಯತ್ನಗಳಿಗೆ ಅಸಹಕಾರಿಗಳು ಬಲಿಬೀಳುತ್ತಾರೋ ಹೇಗೋ ಎಂದು ಹಾದಿ ಕಾಯುತ್ತಿದ್ದವರೂ ಇರಬಹುದು. ಇಂದವರೆಲ್ಲರಿಗೆ ಅಸಹಕಾರಿತೆಯನ್ನು ಕೊಲ್ಲುವದು ಶಕ್ಯವಿಲ್ಲೆಂದು ಮನವರಿಕೆಯಾದ ಹೊರ್ತು ಅವರಾದರೂ ಸಂಧಾನಕ್ಕೆ ಒಪ್ಪುವರು? ಒಂದೆಡೆಗೆ ಅಸಹಕಾರಿಗಳ ಸಿದ್ಧಾಂತವು, ಮತ್ತೊಂದೆಡೆಗೆ ದಬ್ಬಾಳಿಕೆಯು. ಇವೆರಡರ ಪರಮಾವಧಿಯಾದ ಹೊರ್ತು, ಪರಾಕಾಷ್ಠೆಯಾದ ಹೊರ್ತು, ಈ ಯುದ್ಧವು ತೀರದು. ಹಿಂದುಸ್ಥಾನಕ್ಕೆ ಯಾವ ಬಗೆಯ ರಾಜ್ಯಪದ್ಧತಿಯು ಇರಬೇಕೆಂದು ಹಿಂದೀ ಜನರ ಹೊರ್ತು ಮತ್ತಾರೂ ನಿರ್ಣಯಿಸಲಾರರೆಂಬ, ಮೊಂಟೆಗ್ಯೂ ಸುಧಾರಣೆಯ ಮೂಲಭೂತ ಸಿದ್ಧಾಂತದ ತೀವ್ರ ವಿರೋಧಕ ತತ್ವವು ಪ್ರತಿಪಕ್ಷಿಗಳಿಗೆ ಮಾನ್ಯವಾಗುವ ತನಕ ಈ ಕಾದಾಟವು ನಿಲ್ಲಲಾರದು. ಇದನ್ನಷ್ಟು ಎಲ್ಲ ಸಂಕಟಗ್ರಸ್ತರೂ, ಭೀತಿಗ್ರಸ್ತರೂ ತಿಳಿದಿರಲಿ. ಕಬ್ಬಿಣವು ಕೆಂಪಗೆ ಕಾದಾಗಲೇ ಬಗ್ಗಿಕೊಂಡು ಕೊಡುವದೆಂದು ಸದ್ಯಸ್ಥಿತಿಯಿಂದಾದರೂ ಯಾರಿಗೆ ಕಾಣೇ ಕಾಣದು?

ಅಸಹಕಾರಿಗಳು ಮಾತ್ರ ತಮ್ಮ ಹಠಯೋಗದಲ್ಲಿ ಬಲು ಎಚ್ಚರಿಕೆಯಿಂದಿರಬೇಕಾಗಿದೆ. ಅಸಹಯೋಗದ ಮೂಲ ತತ್ವಗಳು ಯಾವವೆಂದು ಅವರಿಗೆ ಇನ್ನು ಹೇಳುವ ಅವಶ್ಯಕತೆ ಅದೆಯೋ? ಸತ್ಯವೂ ಅಹಿಂಸೆಯೂ ಈ ಯೋಗದ ಆದ್ಯ ತತ್ವಗಳು. ಅವೆರಡನ್ನೂ ಕಾಪಾಡಿಕೊಳ್ಳುವಾಗ ಎಷ್ಟು ದೇಹದಂಡನೆಯನ್ನು ಕೊಡುವ ಕಷ್ಟಗಳಿಗೆ ಅವರು ಹಿಂಜರಿಯಲಾಗದು. ಆಳರಸರು ಎದೆಮೆಟ್ಟಿ ನಾಲಿಗೆಯಿಂದ ಮಾತಾಡುತ್ತಿದ್ದರೆ ಅಸಹಕಾರಿಗಳು ಎದೆ ಬಿಚ್ಚಿ ನುಡಿಯಬೇಕಾಗಿದೆ. ಕಾಯಾವಾಚಾ ಮನಸ್ಸಿನಿಂದ ಅಹಿಂಸೆಯನ್ನು ಕಾಪಾಡುವಾಗ ಸ್ವರಾಜ್ಯವನ್ನು ಕಳಕೊಂಡರೂ ಅಡ್ಡಿ ಇಲ್ಲ. ಇಷ್ಟು ನಿರ್ಧಾರವು ಜನತೆಯಲ್ಲುಂಟಾಗಬೇಕು. ಯೋಗಸ್ಥನಾಗುವದೆಂಬುವದು ಇದೇ. ಫಲಲಂಗಿ ಕರ್ಮವನ್ನು ಮಾಡುವದೇ ಯೋಗವೆಂದು ಭಗವಂತನು ಗೀತೆಯಲ್ಲಿ ಉಪದೇಶಿಸಿರುವನು. ಇನ್ನೇನು ಎಂದು ಕೇಳುವವರಿಗೆ ಅಹಮದಾಬಾದ ರಾಷ್ಟ್ರೀಯ ಸಭೆಯಲ್ಲಿ ಮಾಡಿದ ನಿರ್ಣಯಗಳ ಅನುರೋಧದಿಂದ ಯೋಗಸ್ಥರಾಗಿ 'ಕುರು ಕರ್ಮಾಣಿ' ಎಂದು ಹೇಳುವೆವು. ಅಸಹಕಾರಿಗಳಿಗೆ ಲಾಭಾಲಾಭವು ಜಯಾಪಜಯವು ಈ ದ್ವಂದ್ವಗಳ ಚಿಂತೆಯೇ ಇಲ್ಲ. ಆತ್ಮಯಜ್ಞದಿಂದ ಸ್ವಾರ್ಥತ್ಯಾಗಕ್ಕೆ ಜನತೆಯು ನಿರ್ದಿಷ್ಟ ಮುದದಿಂದ ಸಿದ್ಧವಾಗಿದೆಂದು ಕಂಡುಬಂದರೆ ಪ್ರತಿಪಕ್ಷಿಗಳು ನಮ್ಮ ನೈತಿಕ ಬಲಕ್ಕೆ ಮಣಿಯದೆ ಹ್ಯಾಗಿರುವರು? ಈಗಿನ ಕಾದಾಟವು ಶಾಂತಿಮಯ ಅಸಹಕಾರದ ಸಿದ್ಧಾಂತದ ಎಂದಾದರೂ ಸಂಧಾನದಿಂದಲೇ ಅದರ ಸಮಾಪ್ತಿಯಾಗುವದು ಸಾಹಜಿಕ. ವಿದ್ದವರದ ಒಪ್ಪಾಗುವ ತನಕ ತಮ್ಮ ಹಠಯೋಗ ಸಾಧನವನ್ನು ನಡಿಸಿದ ಹೊರ್ತು ಜನಕ್ಕೆ ಗತ್ಯಂತರವಿಲ್ಲ.

* * *

ಸ್ಫುಟ ಸೂಚನೆಗಳು.

೧ ಕರ್ನಾಟಕ ಪ್ರಾಂತಿಕ ಪರಿಷತ್ತು ನಾಳಿನ ೯-೧೦ ತಾರೀಖಿಗೆ ಮಂಗಳೂರಿನಲ್ಲಿ ಶ್ರೀ। ಸರೋಜಿನೀ ನಾಯುಡು ಅವರ ಅಧ್ಯಕ್ಷತೆಯೊಳಗೆ ಜರಗುವದೆಂದು ಜಾಹೀರಾಗಿದೆ. ಮಂಗಳೂರಿನ ಉತ್ಸಾಹಿ ಮುಖಂಡರು ಉತ್ಸಾಹದಿಂದಲೇ ಪರಿಷತ್ತಿನ ಸಿದ್ಧತೆಯನ್ನು ಮಾಡುವರೆಂಬುದು ಅವರಿಗೆ ಬಹಳೇ ಭೂಷಣಾವಹವು. ಈ ಸಾರೆಯ ಅಧಿವೇಶನವು ತೀರ ಮಹತ್ವದ್ದು. ಕರ್ನಾಟಕಸ್ಥರು ತಮ್ಮ ಅಡಚಣಿಗಳನ್ನೆಲ್ಲ ಬದಿಗಿಟ್ಟು ನಮ್ಮ ಮಂಗಳೂರ ದೇಶಬಾಂಧವರ ಔತಣವನ್ನು ಭಕ್ತಿಪೂರ್ವಕವಾಗಿ ಮನ್ನಿಸುವರೆಂದು ಅತ್ಯಾಗ್ರಹದಿಂದ ಬೇಡುವೆವು. ಕರ್ನಾಟಕದ ವಿಶಿಷ್ಟವಾದ ಕೊರತೆಗಳೇನಿವೆ, ಅದರ ರಾಷ್ಟ್ರೀಯ ಕಾರ್ಯವನ್ನು ಯಶಸ್ವಿಯಾಗಿ ಕೊನೆಗಾಣಿಸಬೇಕಾದರೆ ಯಾವ ಉಪಾಯಗಳನ್ನು ಯೋಜಿಸಬೇಕು ಎಂಬುದನ್ನೆಲ್ಲ ಕನ್ನಡಿಗ ಮುಖಂಡರು ಚರ್ಚಿಸಿ ನಿರ್ಣಯಿಸಬೇಕಾಗಿದೆ. ನಮ್ಮ [illegible] ಸ್ವದೇಶಿಯು. ಮಧ್ಯಪಾನ ನಿಷೇಧವು ಅಸ್ಪೃಶ್ಯತಾ ನಿವಾರಣವು ಮತ್ತು ಅಸಹಕಾರಿತೆಯ ಶಾಂತಿಮಯ ಸಾರ್ವತ್ರಿಕ ಚಳವಳವು ನಾಲ್ಕೂ ದಿಕ್ಕಿನಿಂದ ಪುಷ್ಟಿಯನ್ನು ಹೊಂದುವಂತೆ ಅಹಮ್ಮದಾಬಾದ ಕಾಂಗ್ರೆಸಿನ ನಿರ್ಣಯಗಳ ಅನುರೋಧದಿಂದ ನಮ್ಮ ಪ್ರಾಂತಿಕ ಪರಿಷತ್ತು ಠರಾವಗಳನ್ನು ನಿರ್ಧರಿಸಬೇಕಾಗಿದೆ. ನಿಶ್ಚಿತವಾದ ವಿಧ

ಕಾರ್ಯಕ್ರಮವನ್ನು ಜನತೆಯು ಮುಂದಿನ ಕಾಂಗ್ರೆಸ್ ಪರಿಷತ್ತುಗಳ ಕಾರ್ಯಕ್ಕೆ. ಅದನ್ನೇತ್ತೂ ನಡಸಲಿರುವದೆಂದು ನಾವು ನಂಬಿದ್ದೇವೆ. ಆದರೆ ಕರ್ನಾಟಕದ ರಾಜಕಾರಣದೊಳಗ ದುರ್ದೈವದಿಂ ಬ್ರಾಹ್ಮಣೇತರ ಪಕ್ಷವು ವಿಚಿತ್ರವರ್ತನೆಯನ್ನು ತಾಳಿತೆನೆ ಇದೊಂದು ಸ್ವಲ್ಪ ಗಡಬಡಿಯ ಬಿನು ನಿಜ. ಇದನ್ನು ಸೌಜನ್ಯದಿಂದ ಉಪಶಮನಿಸಿ ಬಿಡಿಸಲು ಯತ್ನಿಸುವದೇ ಪರಿಷತ್ತಿನ ಕರ್ತವ್ಯದೊಳಗೆ ಒಳಗೊಂಡಿರುವದೆಂದು ನಾವು ಬಗೆದು ಅದಕ್ಕಾಗಿ ಕೆಲ ತಟಸ್ಥರನ್ನು ಮಧ್ಯಸ್ಥರನ್ನು ಪರಿಷತ್ತಿಗೆ ಮುಖ್ಯಾಂ ಆಮಂತ್ರಿಸಬೇಕೆಂದು ನಾವು ಸೂಚಿಸುವೆವು. ನಮ್ಮ ರಾಷ್ಟ್ರಕಾರ್ಯದ ಯಶಸ್ವಿಗೆ ಬ್ರಾಹ್ಮಣ ಬ್ರಾಹ್ಮಣೇತರ ಐಕ್ಯವು ಅತ್ಯವಶ್ಯಕವಿದೆ. ಅದಕ್ಕಾಗಿ ರಕ್ಷ್ಯವಿರುವ ಎಲ್ಲ ಪ್ರಯತ್ನಗಳನ್ನು ಕರ್ನಾಟಕಸ್ಥರು ಮಂಗಳೂರಿನಲ್ಲಿ ಮಾನಪೂರ್ವಕವಾಗಿ ನಡಿಸಬೇಕೆಂದು ತುಂಬಾ ಕೋರುವೆವು

ನಮ್ಮ ಕರ್ನಾಟಕದೊಳಗಿನ ಪ್ರೊ. [illegible]ರ ಮತ್ತು ಶ್ರೀ. ಹುಕೇರೀಕರ ಎಂಬ ಇಬ್ಬರ ದೇಶಭಕ್ತರನ್ನು ಬಯಲಾಟ ಸರ-ಕಾರವು ಸ್ವರಾಜ್ಯಾಶ್ರಮದ ಒಂದೊಂದು ವರ್ಷ ಕಠಿಣ ಸಜಾದ ಶಿಕ್ಷೆಯಿಂದ ಕಳುಹಿಸಿರುವದು. ಸರಕಾರವು ಪ್ರೊ. [illegible]ಕರರನ್ನು ೮ನೇ ತಾ.೬ನೇ ದಿವಸ ೧೨೪ ಕಲಮಿನ ಪ್ರಕಾರ ರಾಜದ್ರೋಹದ ಖಟ್ಲೆ ಮಾಡಿದ್ದನ್ನು ವಾಚಕರು ಬಲ್ಲರು. ಈ ಆರೋಪವನ್ನು ಎರಡನೇ ಕ್ಲಾಸಿನ ಮ್ಯಾಜಿಸ್ಟ್ರೇಟರಾಗಿ ತೀರ್ಮಾನಿಸುವರು. ಪ್ರೊ. ರು ಮಾತ್ರ ಆ ಖಟ್ಲೆಯೊಳಗೆ ನಿಃಶಸ್ತ್ರರಾಗಿ ೧೫-೨೦ ದಿವಸ ಕಾರಂಗದಲ್ಲಿ ಕೊಳೆಯಬೇಕಾಯಿತು. ಇದರೊಳಗಿಂದ ಮುಕ್ತರಾದರೂ ಇನ್ನೊಂದು ಖಟ್ಲೆಯು ಗಂಟುಬಿದ್ದಿತ್ತು. ಅವರ ಪ್ರಕಾರ ಚಲೋ ಸತ್ಯಾಗ್ರಹ ಬಗ್ಗೆ ಜಾಮೀನು ಕೊಡಲಿಕ್ಕೆ ಒಪ್ಪದಿದ್ದದರಿಂದ ಒಂದು ವರ್ಷದ ಸಾದಾ ಕೈದಿನ ಶಿಕ್ಷೆಯಾಗಿದೆ ಆದರೆ ಹಿಂದಕ್ಕೆ ಗೋಳೀಬಾರಿನ ಖಟ್ಲೆಯಲ್ಲಿ ಇವರನ್ನು ಸುಮಾರು ಆರು ತಿಂಗಳ, ಈಗ ಪುನಃ ೨೦ ದಿವಸ ಸೆರೆಮನೆಯ ತುರಂಗದಲ್ಲಿ ಇಟ್ಟವರ ಪಾಪಕ್ಕೆ ಹೊಣೆಗಾರರು ಯಾರು? ಒಮ್ಮೆ ನಿರ್ದೋಷಮುಕ್ತ ಮಾಡುವದು, ಇನ್ನೊಮ್ಮೆ ಆರೋಪ ಎಂಥ ಹಿಡಿಯುವದು, ಇಂಥ ಹಿಡಿಬಿಡು ಘೋರಣವನ್ನು ಸರಕಾರವು ಯಾಕೆ ಆಚರಿಸಹತ್ತಿರುವದು? ಸರಕಾರದ ಚಿತ್ತದಲ್ಲಿ ಪಳಿಘಳಿಗೆ ಬದಲು ಆಗುತ್ತದೆಂಥ ನಮ್ಮ ದೇಶದವರ ಸ್ವಭಾವವೂ ಹಾಗೆಯೇ ಎಂದು ಸರಕಾರವು ತಿಳಕೊಂಡಿರುವದೇನು? "ಮಹತಾಂ ಏಕರೂಪತಾ" ಎಂಬಂತೆ ಇವರು ಸದೈವ ಒಂದೇ ತರದಿಂದ ವರ್ತಿಸುವರು. ದೇಶಪ್ರೇಮ ದೇಶಸೇವೆ ಎಂಬುವದೇ ಬೇಕಾದರೆ ಇವರ ರಾಜದ್ರೋಹವು, ದುರ್ವರ್ತನವು. ಅಂದಮೇಲೆ ಆಪುರಾವೆಗಳಿಲ್ಲದ ಖಟ್ಲೆ ಮಾಡಿದಲ್ಲಿ ಹ್ಯಾಗಾದರೂ ಮಾಡಿ ಹೆಚ್ಚುಕಡಿಮೆ ಶಿಕ್ಷೆ ಕೊಡದೆ ಕೆಂಬ ಧೋರಣದಿಂದಲೇ ನಡಿಸಿದ ವಿಚಾರಣೆಗಳಲ್ಲ, ಆರೋಪಿಗಳು ಬಚಾವುಮಾಡುವದಾದರೂ ಹೇಗ, ಯಾತಕ್ಕೆ? ಆದದರಿಂದಲೇ ರಾಷ್ಟ್ರೀಯ ಪಕ್ಷದವರು ಅಸಹಕಾರಿತಾವಾದಿಗಳು ಕೋರ್ಟುಗಳಲ್ಲಿ ಬಚಾವು ಎಂದೂ ಮಾಡಿಕೊಳ್ಳಬಾರದು ಎಂತಲೇ ಆಜ್ಞಾಪಿಸಿರುವದು. ಅಂತಮೇಲೆ ಇವರಿಗಾಗುವ ಶಿಕ್ಷೆಗಳು ಹ್ಯಾಗೆ ಖಳತಫೀ ಪುರಾವೆಗಳಿಂದ ಕೂಡಿರುವವು ಎಂಬದು ಸ್ಪಷ್ಟ ಕಂಡು ಬರುವದು. ಇರಲಿ. ಮಹಾತ್ಮರು ಹೇಳಿದಂತೆ ಜೇಲಗಳೇ ನಮಗೆ ಸ್ವರಾಜ್ಯವನ್ನು ಕೊಡತಕ್ಕವು. ದೇಶಭಕ್ತರಂತೂ "ಪಕ್ಷಸ್ಯ ಸುಖ್ಯ ಸಮಾವದಂ ತಂ ತಾವತ್ತ್ರೈಲೋಕ್ಯಂ ಸಮುಪಸ್ಥಿತಂ" ಎಂಥ ಯಾತನೆಗಳೂ ಆನಂದದಿಂದ ಒಗ್ಗುತ್ತವೆ! ನಾವಂತೂ ಈ ಇಬ್ಬರೂ ದೇಶಭಕ್ತರನ್ನು ಅವರ ಭಾಗ್ಯೋದಯಕ್ಕಾಗಿ ಹೃತ್ಪೂರ್ವಕವಾಗಿ ಅಭಿನಂದಿಸುವೆವು

---

೭. ಇಲ್ಲಿ ಕೆಲ ಕಾಲ ಇಂಗ್ಲಿಷ ಹೆಡ್‌ಮಾಸ್ತರರಾಗಿದ್ದ ಮತ್ತು ಮಾಜಿ ಖನಕ್ಕೆ ಕ್ತರ ಮಾತ್ರ ಈಗ ಪೆನಶನದಾರರಾಗಿ ನಿರಂತರ ದೇಶಸೇವೆ ಮಾಡುತ್ತಿರುವ ನಮ್ಮ ಪ್ರಾಂ ಕಾಂ. ಕಮಿಟಿಯ ವ್ಹಾ. ಪ್ರೆಸಿಡೆಂಟರಾಗಿರುವ ಶ್ರೀ ಜೋಶಿಯವರ ಪೆನಶನ್ನು ಸರಕಾರವು ಬಂದ ಮಾಡಿರುವದೆಂಬ ವಾರ್ತೆಯು ಬಂದಿದೆ ಇದರ ಸ್ಪಷ್ಟ ಕಾರಣವೇನೆಂಬುದು ಮಾತ್ರ ನಮಗೆ ತಿಳಿಯಲಿಲ್ಲ ಪೆನಶನ ಕೊಡುವದು ಯಾತಕ್ಕೆ ಪೆನಶನ ಅಂದರೇನ? ಅನೇಕ ವರ್ಷಗಳ ಪರಿಶ್ರಮ ಸರ್ವಿಸ ಆದ ನಂತರ ಅವರು ಹಿಂದೆ ಮಾಡಿದ ಸರ್ವಿಸನ್ನೇ ಲಕ್ಷಕ್ಕೆ ತಂದು ಅವರಿಗ ಕೊಡುವ ವೇತನವೇ ಪೆನಶನವು. ಒಂದು ವೇಳೆ ಸರ್ವಿಸದಲ್ಲಿ ವೈಗುಣ್ಯ ಕಂಡುಬಂದರೆ ಪೆನಶನಕ್ಕೆ ದಕ್ಕೆ ಬರುವದು ನಮಗೆ ಗೊತ್ತಿದೆ ಇದು ಕಾರಣವೆಂಬಂಥ ಮಾತ ಹೇಳುವದೆ ಸಂಭವನೀಯವಲ್ಲ ಯಾಕಂದರೆ ಶ್ರೀ ಜೋಶಿಯವರ ಹಿಂದಿನ ಸರ್ವೀಸಿನ ಬಗ್ಗೆ ಮನ್ನಣೆಪಟ್ಟ ಸರ್ವಿಸಿನ ರಿಕಾರ್ಡವೆ ಸಾರಿ ಹೇಳುತ್ತದೆ ಅಸಹಕಾರದ ಚಳವಳಿಯಲ್ಲಿ ಬಿದ್ದದ್ದು ಇದು ಕಾರಣವಿರಬಹುದೋ, ಅದು ಶಕ್ಯವಲ್ಲ ಕಾರಣ ಸರಕಾರವು ಅವರಮೇಲೆ ಇನ್ನೂ ಯಾವ ತರದ ಆರೋಪವನ್ನು ಇಟ್ಟಿಲ್ಲ ಇವರನ್ನಾದರೂ ಈಗಿನ ಶಾಸಕ ಮಾಡದೆ ನಡೂ ಗಸ್ತಿಯ ಖಟ್ಲೆ ಯಾ ಶಿಕ್ಷೆ ಮಾಡಿಲ್ಲ ಒಂದು ವೇಳೆ ಎರಡನೇ ಕಾರಣವೇ ಯೋಗ್ಯವೆಂದು ಹೇಳಿದರೆ, ಹಿಂದಿನ ಸರ್ವಿಸದ ಬಗ್ಗೆ ಸಿಗುವ ಪೆನಶನಕ್ಕೆ ಯಾಕೆ ಮತ್ತು ಹ್ಯಾಗೆ ಧಕ್ಕೆ ಬರುತ್ತದೆಂಬುದು ನಮಗಂತೂ ತಿಳಿಯದು ಕಾರಣ ಸರ್ವಿಸಿನಲ್ಲಿ ಸಹ ವೈಗುಣ್ಯ ಘಟಿಸಿದ ಪಂಜಾಬದ ಡಾಯರರಂಥ ವೀರರ ಪೆನಶನವು ಅವ್ಯಾಹತವಾಗಿ ನಡೆದದ್ದೇ ಇದೆ! ಅಂದಮೇಲೆ ಒಮ್ಮಿಂದೊಮ್ಮೆ ಶ್ರೀ ಜೋಶಿಯವರ ಪೆನಶನ ತಿಸಕೊಳ್ಳುವ ಕಾರಣವೇನು? ಇದು ಯಾವ ನ್ಯಾಯವು, ಬಿಳಿ ಜನರಿಗೆ ಒಂದು, ಕಪ್ಪು ಜನರಿಗೆ ಒಂದು ಹೀಗೆ ನ್ಯಾಯದಲ್ಲಿ ಪಕ್ಷಪಾತವಿದೆಯೋ? ಈ ಕೃತ್ಯವಂತೂ ತೀರ ಅನ್ಯಾಯದ್ದೆಂತಲೇ ಎಂಬ ನಮ್ಮ ಪ್ರಾಮಾಣಿಕ ಮತವು. ಇಂಥ ಬೇಕಾಬಿಟ್ಟೀ ಹೀನ ಕೃತ್ಯಗಳು ಸರಕಾರದ ಸ್ವಕೃತಿಗೂ ಘನತೆಗೂ ಅಶ್ಲಾಘ್ಯವಾಗಿದ್ದು ಜನತೆಯು ಅವರಮೇಲಿನ ಆದರವೂ, ವಿಶ್ವಾಸವೂ ಉಡುಗಿ ಹೋಗುವದಕ್ಕೆ ಕಾರಣವಾಗುತ್ತವೆ. ಇರಲಿ ಜನತೆಯು ಈಗ ಇಂಥ ಕ್ಷುಲ್ಲಕ ಆಪತ್ತುಗಳಿಗೆ ಅಲ್ಲ, ಎಲ್ಲಾ ತರದ ಸಂಕಟಗಳಿಗೂ ಸ್ವಾರ್ಥತ್ಯಾಗಕ್ಕೂ, ಪ್ರಸಂಗ ಬಿದ್ದರೆ ತಮ್ಮ ಧ್ಯೇಯ ಗಳಿಸುವದಕ್ಕಾಗಿ ಗಲ್ಲಿಗೆ ಹಾಕಿಕೊಳ್ಳುವ ಸಹ ತಯಾರಿಯನ್ನು ಮಾಡಿರುವರು. ಅವರು ಸರಕಾರದ ದಬ್ಬಾಳಿಕೆಯಿಂದ ಎಳ್ಳಷ್ಟು ಹಿಂಜರಿಯಲಿಕ್ಕಿಲ್ಲ ಎಂತ ಸರಕಾರವು ಇನ್ನು ಅರಿಯಲ್ಲೇನು?

---

೪ ಈ ವರ್ಷದ ಕೇಂದ್ರೀ ಶರಾಬ ಮತ್ತೆ ಲಿಲಾವಿನ ಹಂಗಾಮವು ಸಮೀಪಿಸಿದೆ. ಮದ್ಯಪಾನ ನಿಷೇಧದ ರಾಷ್ಟ್ರೀಯ-ಸಭೆಯ ನಿರ್ಣಯದಂತೆ ಎಲ್ಲ ಕಡೆಯಲ್ಲಿ ಕುಂದಾಳುಗಳು ತಮ್ಮ ಕರ್ತವ್ಯವನ್ನು ಮಾಡಲಿಕ್ಕೆ ಈಗಿನಿಂದಲೇ ಸಿದ್ಧರಾಗಿರುವರೆಂದು ನಂಬುತ್ತೇವೆ ಸುರಾಪಾನವು ಎಲ್ಲ ಧರ್ಮಗಳಲ್ಲಿ ಅತಿ ನಿಂದ್ಯವೂ ಬಾಲಹತ್ಯೆಯಷ್ಟು ಪಾಪಿಷ್ಟವೂ ಎಂದು ಎಣಿಸಲ್ಪಟ್ಟಿದೆ. ನಮ್ಮ ಸರಕಾರಕ್ಕೂ ಜನರೊಳಗೆ ಸರೆಕುಡುಕನ ಸಂಖ್ಯೆ ತಗ್ಗಿಸಬೇಕೆಂದು ಮನಃಪೂರ್ವಕ ಅಭಿಲಾಷೆ ಇದೆಂದು ಮೇಲಿಂದಮೇಲಾದ ಸರಕಾರೀ ಠರಾವುಗಳೇ ಸಾರುತ್ತಿವೆ. ಇಷ್ಟು ಇದ್ದರೂ ಸಾಧ್ಯವಾಗ ಬೇಕಾದರೆ ಗುತ್ತಿದಾರರು ಮತ್ತೆ ಮಾಡಬಾರದು, ಕೇಂದ್ರೀ ಕೊಡಬಾರದು, ಕೊಳ್ಳಬಾರದು, ಸುರೆಗಳ ಮಾಲೀಕರು ಮನೆಗಳನ್ನು ಕಟ್ಟಿಗೊಡಬಾರದು, ಅಂತಲೆ ತಿಳಿಯುವರು ಹೊಡಿಸುವರೆಷ್ಟು? ನಮ್ಮ ಲೆಕ್ಕಕ್ಕೆ ಸೆರೆ ಕುಡುಕರೂ, ಗುತ್ತೆದಾರರೂ, ಕೊಡುವವರೂ, ಮನೆಕಟ್ಟಿಗೊಡುವವರೂ ಇನ್ನು ಮುಂದೆ ಧರ್ಮಶಃ ನಿಜವಾದ ಅಸ್ಪೃಶ್ಯರು. ಅವರ ಸ್ಪರ್ಶವಾದರೆ ಸ್ನಾನ ಮಾಡುವದು ನಮ್ಮ ಧರ್ಮದೃಷ್ಟಿಯಿಂದ ಪ್ರಾಪ್ತವಿದೆ ಈ ವ್ಯಸನವು ಇಷ್ಟು ನಿಂದ್ಯವೂ ಮತ್ತು ಅಧರ್ಮದ ವ್ಯಸನಕ್ಕೆ ಮುಕ್ತದಾರಿಯಿಂದ, ಕ್ರಯವಿಕ್ರಯದಿಂದ, ಕುಡುಕತನದಿಂದ, ಹೀಗೆ ಪ್ರತ್ಯಕ್ಷ ಸಂಬಂಧವಿದ್ದ ಪತಿತರಿಗೆ ಏನೂ ನೋಯಿಸದೆ ಅವರ ಸ್ಪರ್ಶವಾದರೆ ನಮ್ಮನ್ನಷ್ಟಕ್ಕೆ ನಾವು ಒಳಕ ಮಾಡುವದೇ ದೊಡ್ಡ ಆತ್ಮಶುದ್ಧಿಯ ಕರ್ತವ್ಯವೆಂದು ಜನರು ಎಣಿಸಿದ ಹೊರತು ಗತ್ಯಂತರವಿಲ್ಲ. ಈಗಿನ ಕಾಲಮಾನದಲ್ಲಿ ಇಂಥ ಅಸ್ಪೃಶ್ಯತೆಯು ಧರ್ಮವಿಪ್ರಸ್ತವಾದರೂ ಅದು ಸಹ ಇದನ್ನು ಬೇಗ ಜಾಗ್ರತವಾಗ ಬೇಕೆಂಬುದೇ ನಮ್ಮ ಅಭಿಲಾಷೆಯು. ಈಗಿನ ಲೋಕಮತವನ್ನರಿತು ಮಕ್ತೇದಾರರೂ, ಕುಡುಕರೂ, ಎಲ್ಲರೂ ಆತ್ಮಶುದ್ಧಿಯನ್ನು ಮಾಡಿ ಈ ಸುರಾಪಾನದ ಪಾಪವನ್ನೂ, ಕಳಂಕವನ್ನೂ ಪೂರ್ಣತೊಳೆದು ಬಿಡುವರೆಂದು ತುಂಬಾ ಕೋರುವೆವು ಅವರೆಲ್ಲರೂ ಮುಂಜಾಗ್ರತರಾಗಬೇಕೆಂಬುದರಿಂದಲೇ ನಾವು ಈ ಸೂಚನೆಯನ್ನು ಅವರ ಮುಂದಿಟ್ಟಿದ್ದೇವೆ.

ಸ್ಥಾನಿಕ ವೃತ್ತಾಂತ.

ಕಾವಟಾ— ಚಳಿಯು ಬೀಳುತ್ತಲಿದೆ ಜ್ವರ, ಸಿತಬು, ಮನಗೆ ರೋಗ ಇತ್ಯಾದಿಗಳು ಅಲ್ಪ ಸ್ವಲ್ಪ ಉಂಟು. ಧಾನ್ಯದ ವಸ್ತುಗಳ ಧಾರಣೆಯು ಇಳಿಯಹತ್ತಿದೆ.

ನಿನ್ನೆ ಸಂಜೆ ಹೊಸ್ಮಾವರದಿಂದ ಮೊಗಲರ ಒಂದು ಟೋಳಿಯು ಇಲ್ಲಿ ಬಂದಿರುವದು ಇಲ್ಲಿಯ ರಥೋತ್ಸವವು ಇದೇ ಬರುವ ಶನಿವಾರ ದಿವಸ ಆಗುವದಿದೆ. ಹೊಸ್ಮಾವರದಂತೆ, ಇಲ್ಲಿಯೂ ಪುನಃ ಮೊಗಲರ ಗಡಗಡ ಆಟ ನಡೆಯುವದಾದರೆ ಹಣ ಕಳಕೊಳ್ಳಲಿಚ್ಛಿಸುವವರಿಗೆ ಇದೊಂದು ಬಂಗಾರದಂಥ ಸುಸಂಧಿಯು ಪ್ರಾಪ್ತವಾಗುವದು. ಸೋತ್ತಿಯು ಬರೀ ಜಾಹೀರಾತನ್ನು ಪ್ರಸಿದ್ಧಿಸಿದನ್ನು ಸಹಿಸಲಾರದೆ ನಮ್ಮ ಸರಕಾರಕ್ಕೆ, ಗಡಗಡ ಆಟದಂಥ ಒಂದು ಪ್ರಕಾರದ ಜೂಗಾರವು ಮಾತ್ರ ಪ್ರಿಯವಾದರೆ, ಆ ದಿಂದ ಸರಕಾರದ ನ್ಯಾಯ-ನೀತಿಯು ಚಲೋ ಬಕೆ ಇಲ್ಲಿಗೆ ಹಚ್ಚಿದಂತಾಗುವದು.

ಕಳೆದ ರವಿವಾರ ಠರಾಯಿಸಲ್ಪಟ್ಟಿದ್ದ ತಾಲೂಕಾ ಕಾಂಗ್ರೆಸ ಕಮಿಟಿಯ ಸಭೆಗೆ ಬಹುಜನರು ಬೇರೆ ಊರಿನಿಂದ ಬರುವರೆಂದು ಬಾರದಿದ್ದರಿಂದ, ಅದು ಇದೇ ಬರುವ ರವಿವಾರ ೫ ನೇ ದಿವಸ ಮಧ್ಯಾಹ್ನ ೩ ಘಂಟೆಗೆ ಶ್ರೀ ಸೀತಾರಾಮ ಗಣಪತ ಭಾಗವತ ಬಿಲಾಲ ಇವರ ಮನೆಯ ಮಾಳಿಗೆಯ ಮೇಲೆ ಕೂಡಬೇಕೆಂದು ನಿಶ್ಚಯಿಸಿರುತ್ತಾರೆ. ಈ ಸಭೆಯಲ್ಲಿ ಹೊಸ ವರ್ಷದ ಹೊಸ ಕಾರ್ಯಕಾರಿ ಮಂಡಳವು

ನಿಮಿಸುವದು, ಸ್ವಯಂಸೇವಕರ ಸಂಘಗಳನ್ನು ತಯಾರಿಸುವ ಯೋಜನೆ ಮಾಡುವದು, ಇದೇ ತಾ ೯-೧೦ ನೇಗೆ ಮಂಗಳೂರಲ್ಲಿ ಕೂಡುವ ಅಖಿಲ ಕರ್ನಾಟಕ ಪ್ರಾಂತಿಕ ಪರಿಷತ್ತಿಗೆ ಈ ತಾಲೂಕ ಪ್ರತಿನಿಧಿಗಳನ್ನು ಆರಿಸುವದು ಮೊದಲಾದ ಮಹತ್ವದ ವಿಷಯಗಳು ಚರ್ಚೆಯು ಆಗತಕ್ಕದ್ದಿರುತ್ತವೆ.

ಸಿದ್ದಾಪುರ— ೨೯ಯಲ್ಲಿ ಕೂಡಿದ ಡಿಸ್ಟ್ರಿಕ್ಟ ಕಾಂಗ್ರೆಸ ಸಭೆಗೆ ಇಲ್ಲಿಂದ ಪ್ರತಿನಿಧಿಗಳು ಹೋಗಿದ್ದರು. ಮತ್ತು ಹುಬ್ಬಳ್ಳಿಯಲ್ಲಿ ಕೂಡುವ ಪ್ರಾಂತಿಕ ಕಾಂಗ್ರೆಸ ಸಭೆಗೆ ಶ್ರೀ॥ ಆರ್. ದಾಸರವರನ್ನು ಪ್ರತಿನಿಧಿಗಳಾಗಿ ಕಳಿಸಿರುವರು. ಈ ತಾಲೂಕಿನ ಕೆಲವು ಬಂದೂಕು ಲೈಸನ್ ದಾರರೆ ಲೈಸನ್ ರದ್ದು ಮಾಡಿದ್ದಾರಾಗಿ ತಿಳಿಯುತ್ತದೆ.

ಹೊನ್ನಾವರ— ತಾ ೨೯ ನೇ ದಿವಸ ತಾಲೂಕಾ ಕಮೀಟಿಯ ಸಭೆಯು ಹೊನ್ನಾವರ ಟಿಪ್ಪರ ಹೊಲಿನಲ್ಲಿ ಕೂಡಿತು. ಹಳ್ಳಿಗಳಿಂದ ಸುಮಾರು ೩೦ ಪ್ರತಿನಿಧಿಗಳು ಬಂದಿದ್ದರು. ಸಭೆ ಕೆಲಸ ತಾಲೂಕಾ ಕಮೀಟೀ ಅಧ್ಯಕ್ಷ ಬಳ್ಕೂರ ಇವರ ಅಧ್ಯಕ್ಷತೆಯಲ್ಲಿ ಶುರುವಾಗಿ ದೇ॥ ಭ॥ ಕರ್ಕಿಯವರ ಅಮದಾಬಾದ ಕಾಂಗ್ರೆಸ್ ಠರಾವ ಪ್ರಕಾರ ನಮ್ಮ ಮುಂದಿನ ಕರ್ತವ್ಯವೇನೆಂಬ ಬಗ್ಗೆ ಮುಖ್ಯ ಭಾಷಣವಾಯಿತು. ನಂತರ ಹೊಸ ತಾಲೂಕಾ ಕಮೀಟಿ ಸ್ಥಾಪಿಸಲ್ಪಟ್ಟಿತು. ಅಧ್ಯಕ್ಷ-ಉಪಾಧ್ಯಕ್ಷ-ಕಾರ್ಯದರ್ಶಿ ಇವರು ಮೊದಲಿನವರೇ ಆರಿಸಲ್ಪಟ್ಟರು.

ಫೇಬ್ರುವರಿ ಆಖೈರ ಒಳಗೆ ಶೇಕಡಾ ೧ ರಂತೆ ಸ್ವಯಂಸೇವಕರು ಆಗಬೇಕೆಂತ ಠರಾಯಿಸಿತು.

ಜಿಲ್ಲಾ ಕಮೀಟಿಗೆ ೧೦ ಜನ ಪ್ರತಿನಿಧಿಗಳನ್ನು ಆರಿಸಿದರು. ಇದೇ ತಾ.೯ಕ್ಕೆ ಮಂಗಳೂರಲ್ಲಿ ಕೂಡುವ ಅಖಿಲ ಕರ್ನಾಟಕ ಪರಿಷತ್ತಿಗೆ ಇಲ್ಲಿಂದ ೨೦ ಜನ ಪ್ರತಿನಿಧಿಗಳನ್ನು ಕಳಿಸಿದರು.

ಇಲ್ಲಿಯ ಪ್ರಮುಖ ೬ ಜನರು ಹೊರಡಿಸಿದ ಜಾಹೀರ ವಿಜ್ಞಾಪನೆಯಂತೆ ಸದ್ಯದಲ್ಲಿ ಪಿಕೆಟಿಂಗ ಚಾಲು ಮಾಡುವದರಲ್ಲಿ ಬಂದೀತಾಗಿ ಜನರು, ಕಲೆಕ್ಟರ ಸಾಹೇಬರು ಕರ್ಕಿಯವರಿಗೆ ಒಂದು ಪತ್ರ ಬರೆದು ಎಚ್ಚರಿಕೆ ಕೊಟ್ಟಿರುತ್ತಾರಂತೆ. ಈ ಜಿಲ್ಲೆಯಲ್ಲಿ ಪಿಕೆಟಿಂಗ ಮಾಡಲಿಕ್ಕೆ ಅವು ಪರವಾನಗಿ ಕೊಡುವದಿಲ್ಲವಾಗಿಯೂ, ಮಾಡಿದರೆ ಯೋಗ್ಯ ಇಲಾಜ ಮಾಡುವದರಲ್ಲಿ ಬಂದೀತಾಗಿಯೂ ಬರೆದಿದ್ದರಂತೆ. ಮುಂದೇನಾಗುತ್ತದೋ ನೋಡಬೇಕು. ಜನರು ಪಿಕೆಟಿಂಗ ಮಾಡಲಿಕ್ಕೆ ಉತ್ಸುಕರಾಗಿರುತ್ತಾರೆ.

ಹಳಿಯಾಳ— ಹವಾಮಾನವು ನೆಟ್ಟಗಿದೆ. ವರಕು ಧಾನ್ಯಗಳ ಬೆಳೆಯು ಸಾಧಾರಣ ಆದೆ. ಭೂಮಿಯ ತೆರಿಗೆಯಲ್ಲಿ ಸೂಟ ಕೊಡುವ ವಿಚಾರವು ತೋರುವದಿಲ್ಲ.

ಇಲ್ಲಿ ದೇ॥ ಭ॥ ಛತ್ರಿ ಪಾಟೀಲ ಇವರ ಅಧ್ಯಕ್ಷತೆಯಲ್ಲಿ ಒಂದು ಪ್ರಚಂಡ ಜಾಹೀರ ಸಭೆಯು ಕೂಡಿತ್ತು. ಮದ್ಯಪಾನ ನಿಷೇಧ ಸ್ವದೇಶಿ, ಸ್ವಧರ್ಮ ಈ ವಿಷಯಗಳ ಹಾಸ್ಯ ಮತ್ತು ಸ್ಫೂರ್ತಿದಾಯಕ ಪದ್ಯಗಳು ಹಾಡಿದ ಬಳಿಕ, ಬೆಳಗಾಂವದಿಂದ ಬಂದ ಶ್ರೀ॥ ಮುದ್ಗೇಶ್ವರ ಇವರು ಐಕ್ಯದ ಮಹತ್ವ, ಈಗಿನ ನಮ್ಮ ಕರ್ತವ್ಯದ ಕುರಿತು ಬಹಳ ಬೋಧಪ್ರದ ಮತ್ತು ಆವೇಶಯುಕ್ತ ಭಾಷಣ ಮಾಡಿದರು. ಅಧ್ಯಕ್ಷರ ಸಮಯೋಚಿತ ಉಪಸಂಹಾರವಾದ ಮೇಲೆ "ವಂದೇ ಮಾತರಮ್"ದ ಘೋಷದೊಡನೆ ಸಭೆಯು ವಿಸರ್ಜನವಾಯಿತು. ಸಭೆಗೆ ಎಲ್ಲ ಜಾತಿಯ ಮತ್ತು ದರ್ಜೆಯ ಸುಮಾರು ೩೦೦—೪೦೦ ಜನರು ಕೂಡಿದ್ದರು.

ಮಿ॥ ಶೇಖ ಉಮರ ಅಬ್ದುಲ ಲತೀಫಸಾಹೇಬ ಎಂಬ ಒಬ್ಬ ಪೋಲೀಸನು ತನ್ನ ನೌಕರಿಗೆ ಶರಣು ಹೊಡೆದು ಮಾತೃಭೂಮಿಯ ಸೇವೆಗೆ ಸಿದ್ಧನಾಗಿರುವನು.

ಕೈಮಾಟ ಕೈಮಗ್ಗಗಳ ಪ್ರಸಾರವು ಹೆಚ್ಚಲಿದೆ

ಇಲ್ಲಿಯ ಮುನ್ಸಿಪಾಲಿಟಿಯ ಚೇರಮನ ಇಲೆಕ್ಷನ, ತಾ ೧೦-೨-೩೦ ವರೆಗೆ ಇಟ್ಟಿರುತ್ತದೆ.

ಎಡೋಗಾ ಎಂಬಲ್ಲಿ ಸರಾಯಿಯ ವಿಕ್ರಿಯು ಇಲ್ಲದ್ದರಿಂದ, ಅಲ್ಲಿಯ ಮುಕ್ತೇದಾರನು ತನ್ನ ಸರಾಯಿ ಅಂಗಡಿಯನ್ನು ಬಂದ ಇಟ್ಟಿರುತ್ತಾನೆ. ಇದು ಎಡೋಗಾದೊಳಗಿನ ರಹಿವಾಸಿಗಳಿಗೆ ಬಹಳೇ ಅಭಿನಂದನೀಯವು. ಇದರಿಂದ ಇತರ ಹಳ್ಳಿಹಳ್ಳಿಗಳು ಹೆಚ್ಚು ಕರ್ತವ್ಯದಕ್ಷರಾಗಲಿ.

ಖಾಮುಡೊಳ್ಳಿ ಎಂಬಲ್ಲಿ ದರೋಡೆಯಾಗಿದೆ. ಆರೋಪಿಯರು ಇನ್ನು ಸಿಗಲಿಲ್ಲ.

ವಿವಿಧದ ವರ್ತಮಾನ

— ೩೩ ವರ್ಷಗಳ ವರೆಗೆ ಸರಕಾರದ ಏಕನಿಷ್ಠೆಯಿಂದ ನೌಕರಿ ಮಾಡಿದ ಮಾಜೀ — ಎಜ್ಯುಕೇಶನಲ ಇನ್ಸ್‌ಪೇಕ್ಟರ ಶ್ರೀಯುತ (ರಾವ ಬಹಾದ್ದೂರ) ವಿನಾಯಕರಾವ ಜೋಶಿ, ಧಾರವಾಡ, ಇವರ ಪೆನಶನ ಸರಕಾರವು ರದ್ದು ಮಾಡಿದೆ. ನಾಯರ, ಬಹಾದ್ದೂರ ಇವರ ಪೆನಶನ್ ರದ್ದು ಮಾಡುವದು "ಬೇಕಾಯದೇಶೀರ" ಮತ್ತು "ಅನ್ಯಾಯ್ಯ"ವೆಂದು ಸಾರುವ ಮುಂಬಯಿಯ ಟೈಮ್ಸ್"ಕಾರರು ಈ ಬಗ್ಗೆ ಏನು ಹೇಳುತ್ತಾರೆ?

— ಕರ್ಮವೀರ ಪತ್ರದ ಸಂಪಾದಕ, ಶ್ರೀಯುತ ದಿವಾಕರ ಮತ್ತು ಶ್ರೀ॥ ಹುಕ್ಕೇರಿಕರ ಇವರಿಗೆ ಒಂದೊಂದು ವರುಷ "ಸ್ವರಾಜ್ಯಾಶ್ರಮ"ದಲ್ಲಿ ಉಳಿಯಲಿಕ್ಕೆ ಪರವಾನಗಿ ದೊರೆಯಿತು!

— ಕರ್ನಾಟಕ ಪ್ರಾಂತಿಕ ಪರಿಷತ್ತು ಬರುವ ತಾ ೧೦, ೧೧ ಕ್ಕೆ ಸೌ॥ ಸರೋಜಿನೀ ನಾಯಡು ಇವರ ಅಧ್ಯಕ್ಷತೆಯಲ್ಲಿ ಮಂಗಳೂರಲ್ಲಿ ಕೂಡುವದು. ತಾ. ೯ ಕ್ಕೆ ವಿಷಯ ನಿಯಾಮಕ ಕಮೀಟಿಯ ಸಭೆಯಾಗುವದು.

— ಪುಣೆಯಲ್ಲಿ ಪಿಕೆಟಿಂಗದ ಕೆಲಸವು ಎಂದಿನಂತೆ ನಡೆದದೆ. ಹೋದ ಸಪ್ತಾಹದಲ್ಲಿ ಜಿಲ್ಲಾ ಕಲೆಕ್ಟರರ ಸಲ್ಲಾಗಾರ ಮಂಡಳವು ಕೂಡಿತ್ತು. ಕಲೆಕ್ಟರರೂ ಪೋಲಿಸ ಸುಪರಿಂಟೆಂಡೆಂಟರೂ ಹಾಜರಿದ್ದರು. ಮಂಡಳವು (೧) ಪುಣೆ ಲಷ್ಕರದೊಳಗಿನ ಕೆಂದಿ ದುಕಾನುಗಳನ್ನು ಬಂದ ಮಾಡಬೇಕು, (೨) ಪುಣೆ ಶಹರದೊಳಗಿನ ೬ ದುಕಾನಗಳಲ್ಲಿ ೪ ದುಕಾನಗಳನ್ನು ಬಂದ ಮಾಡಬೇಕು, (೩) ಈ ಅಂಗಡಿಗಳನ್ನು ಸಹ ಸಂಜೆಗೆ ೪ ರಿಂದ ೩॥ ಘಂಟೆಗೆ ಮಾತ್ರ ತೆರೆಯಬೇಕು (೪) ಸರಾಯಿಯನ್ನು ಅಂಗಡಿಯಲ್ಲೇ ಕುಡಿಯಬೇಕು ಮನೆಗೆ ಒಯ್ಯಕೂಡದು, ಮುಂತಾದ ಠರಾವುಗಳನ್ನು ಮಾಡಿ ಸರಕಾರಕ್ಕೆ ಕಳುಹಿಸಿದೆ. ಇದು ಪುಣೆಯ ನಾಗರಿಕರ ಸತ್ಯಾಗ್ರಹದ ವಿಜಯವೇ ಸರಿ !

— ಭೋರ ಸಂಸ್ಥಾನದಲ್ಲಿ ಸರಕಾರಿ ಹುಕುಮನ್ನು ಮುರಿದು ವ್ಯಾಖ್ಯಾನ ಮಾಡಿದ ಬಗ್ಗೆ ಶ್ರೀ॥ ಕೇಳಕರ ಮೊದಲಾದವರ ಮೇಲಾದ ಖಟ್ಲೆಯಲ್ಲಿ ಅವರು ದೋಷಮುಕ್ತರಾದರು ! ನಿರಂಕುಶ ಸತ್ತೆಗೆ ಸತ್ಯಾಗ್ರಹವೇ ಮದ್ದು.

— ಸದ್ಯಕ್ಕೆ ಬಾರಡೋಲಿಯಲ್ಲಿ, ಮಹಾತ್ಮಾ ಗಾಂಧಿಗಳಿಗೆ ಕಾಯದೆಭಂಗದ ಚಳವಳವನ್ನು ಕೈಕೊಳ್ಳುವದಕ್ಕೋಸ್ಕರ ವಿನಂತಿ ಮಾಡುವದೆ, ಶ್ರೀ॥ ವಿಠ್ಠಲಭಾಯಿ ಪಟೇಲ ಇವರ ಅಧ್ಯಕ್ಷತೆಯ ಕೆಳಗೆ ತಾಲೂಕಾ ಪರಿಷದೆಯು ಕೂಡುವದಿತ್ತು.

— ಜೇಲಿನೊಳಗಿನ ಅಸಹಯೋಗಿಗಳ ಉದಾತ್ತ ವರ್ತನದಿಂದ ಮನಸ್ಸಿನ ಮೇಲೆ ಪರಿಣಾಮವಾಗಿ ಬಾಂಕಿಪೂರ (ಬಿಹಾರ)ದ ಆ ಜೈಲರನೂ ಒಬ್ಬ ವಾರ್ಡರನೂ ಮತ್ತೊಬ್ಬ ಸಿಪಾಯಿಯೂ ರಾಜೀನಾಮೆಯನ್ನು ಕೊಟ್ಟಿರುತ್ತಾರೆ

— ಪಾಟಣಾದಲ್ಲಿ "ಮಾದರಲೆಂಡ" ಪತ್ರದ ಕಚೇರಿಯಿಂದ ರೂ ೧೦೦೦ ದ ಜಾಮೀನು ಕೇಳಿದ್ದರು. ಜಾಮೀನು ಕೊಡದೆ ಪತ್ರವು ಹಸ್ತಲಿಖಿತ ರೂಪದಲ್ಲಿ ಹೊರಡುತ್ತಿದೆ !

— ದೇಶಬಂಧು ದಾಸರವರ ಖಟ್ಲೆಯು ಇನ್ನೂ ತೀರುವದಿಲ್ಲ, ಪುನಃ ಫೆಬ್ರುವರಿ ತಾ. ೩ ಕ್ಕೆ ಮುಂದೊತ್ತಿದ್ದಾರೆ.

— ಕಲಕತ್ತೆಯಲ್ಲಿ ಸರಕಾರೀ ಹುಕುಮನ್ನು ಮುರಿದು ದಿನಾಲು ದೊಡ್ಡ ದೊಡ್ಡ ಸಭೆಗಳು ಕೂಡುತ್ತವೆ. ಪೋಲೀಸರು ಅವುಗಳನ್ನು ಮುರಿದು ಸಭಿಕರಲ್ಲನೇಕರನ್ನು ಗಿರಫದಾರ ಮಾಡುತ್ತಾರೆ. ತಾ. ೨೬ ಕ್ಕೆ ಒಂದೇ ದಿನ ೫೦೦ರಕ್ಕಿಂತ ಹೆಚ್ಚು ಜನರು ಗಿರಫದಾರ ಮಾಡಲ್ಪಟ್ಟರು.

— ದೇಶಬಂಧುಗಳ ಖಟ್ಲೆಯು ತಾ. ೨೧ ಕ್ಕೆ ವಿಚಾರಣೆಗೆ ಹೊರಟಾಗ ಹೈಕೋರ್ಟಿನ ೭-೮ ಬ್ಯಾರಿಸ್ಟರರು ನೋಡಲಿಕ್ಕೆಂದು ಕೋರ್ಟಿಗೆ ಹೋಗುವಾಗ ಕೋರ್ಟ ಆವಾರದ ನೆಬ್ಬಾಗಿಲದ ಹತ್ತರ ಒಬ್ಬ ಪೋಲಿಸ ಅಧಿಕಾರಿಯು ಅವರನ್ನು ಅಡ್ಡಗಟ್ಟಿದನು. "ಹೀಗೆಯಾಕೆ ಮಾಡುತ್ತೀ?" ಎಂದು ಕೇಳಿದರೆ "ಕೋರ್ಟ ಹುಕುಮು" ಎಂದು ಉತ್ತರ ಕೊಟ್ಟನು. ಇದು ನಿಜವೇನೆಂದು ಅವರು ಒಂದು ಚೀಟಿಯನ್ನು ಬರೆದು ಕೇಳಿದ್ದಕ್ಕೆ ಮೆಜಿಸ್ಟ್ರೇಟರು ಉತ್ತರ ಕೊಡಲಿಲ್ಲ ! ಬ್ಯಾರಿಸ್ಟರರು ತಮ್ಮ ಹಕ್ಕಿನ ರಕ್ಷಣೆಗಾಗಿ ಪೋಲಿಸ ಅಧಿಕಾರಿಯ ಮೇಲೆ ಬೇಕಾಯದೇಶೀರ ಪ್ರತಿಬಂಧದ ಬಗ್ಗೆ ಫಿರ್ಯಾದಿಯನ್ನು ಕೊಡಲಾಗಿ, ದೇಶಬಂಧುಗಳ ತನಖಿಯನ್ನು ನಡಿಸುವ ಚೀಫ ಮೆಜಿಸ್ಟ್ರೇಟರು, ತಾವು ಹೊರಗಿನ ಜನರನ್ನು ಒಳಗೆ ಬಿಡಬೇಡಿರಿ ಎಂದು ಹೇಳಿದ್ದು ಹೌದು, ಇನ್ನು ಮುಂದೆ ಎಲ್ಲ ಖಟ್ಲೆಗಳನ್ನು ಜಾಹೀರ ರೀತಿಯಿಂದ ವಿಚಾರಿಸುತ್ತೇನೆಂದು ಜಾಹೀರು ಮಾಡಿರುತ್ತಾರೆ !

— ಬಿಹಾರ ಪ್ರಾಂತದ ಕಾಯದೇ ಕೌನ್ಸಿಲದಲ್ಲಿ ಸರಕಾರವು ಸಭಾಬಂದಿ ಕಾಯದೆ ಮತ್ತು ಸಮಿತಿ ಕಾಯದೆಗಳ ಪ್ರಕಾರ ತೆಗೆದ ನೋಟಿಫಿಕೇಶನ್‌ಗಳನ್ನು ರದ್ದು ಮಾಡಬೇಕೆಂದೂ ಆ ಕಾಯದೆಗಳ ಕೆಳಗೆ ಶಿಕ್ಷೆ ಹೊಂದಿದ ಅಥವಾ ಗಿರಫದಾರ ಮಾಡಲ್ಪಟ್ಟ ಎಲ್ಲಾ ಜನರನ್ನು ಬಿನ್‌ಶರ್ತ ಮುಕ್ತ ಮಾಡಬೇಕೆಂದೂ ಬಿನ್ ಸರಕಾರಿ ಕೌನ್ಸಿಲರರ ಐಕ್ಯಮತ್ಯದಿಂದ ಠರಾವು ಪಾಸಾಯಿತು! ಈಗ ನೋಡಬೇಕು ಸರಕಾರವು ಏನು ಮಾಡುತ್ತದೆಂತ !

—ಇದೇ ಅರ್ಥದ ಒಂದು ಠರಾವು ಸಂಯುಕ್ತ ಪ್ರಾಂತಗಳ ಕೌನ್ಸಿಲದಲ್ಲೂ ಬಂದಿತ್ತು. ಅದು ನಾಪಾಸಾಯಿತು! [illegible] ನಡೆದ ಚರ್ಚೆಯನ್ನು ನೋಡಿ ಬೇಸರಪಟ್ಟು [illegible] ಕೌನ್ಸಿಲದಲ್ಲಿ ಇದ್ದು ಫಾಸಲ ಇಲ್ಲವೆಂದು ಪಂಡಿತ ರಾಧಾಕಾಂತ ಮಾಲವೀಯ (ಪಂಡಿತ ಮದನ ಮೋಹನ ಮಾಲವೀಯರ ನೇಮಸ್ತ ಪಕ್ಷಕ್ಕೆ ಸೇರಿದ ಹಿರೇ ಮಗ) ಮೆಂಬರಶಿಗೆ ರಾಜೀನಾಮೆಯನ್ನಿತ್ತರು !

— ಆದರೆ ಈಗ ಇಲ್ಲಿಯ ಸರಕಾರವು ಆ ನೋಟಿಫಿಕೇಶನಗಳನ್ನು ತಿರುಗಿಸುವ ವಿಚಾರದಲ್ಲಿಯದೆ ಎಂತ ಜಾಹೀರಾಗಿದೆ.

— ಅಸಹಯೋಗದ ಮೂಲಕ ಬ್ಯಾರಿಸ್ಟರಿಯನ್ನು ಬಿಟ್ಟ ಮತ್ತು ಈಗ ಕಾರಾಗೃಹದಲ್ಲಿ ಇದ್ದ ಬ್ಯಾ॥ ಶಿವಮೂರ್ತಿಯವರ ಸನದನ್ನು ಹೈಕೋರ್ಟಿನವರು ರದ್ದು ಮಾಡಿದರು !

— ಸಂಯುಕ್ತ ಪ್ರಾಂತಗಳ ಜಿಲ್ಲೆಗಳಲ್ಲಿ ಒಟ್ಟು ಗೂಡಿ ೯೦ ಸಾವಿರ ಜನರು ಸ್ವಯಂಸೇವಕರು ಆಗಿದ್ದಾರೆ.

— ಅಲಹಾಬಾದದಲ್ಲೂ ಲಖನೌದಲ್ಲೂ ಸರಕಾರಿ ಹುಕುಮಿನ ಎದುರು ಸಭೆಗಳು ಕೂಡಹತ್ತಿದ್ದಾವೆ. ಸಭೆಯ ಚಾಲಕತ್ವವನ್ನು ಶ್ರೀಮತೀ ಸ್ವರೂಪರಾಣಿ ನೆಹರು, ಕಮಲಾದೇವಿ ನೆಹರು ಮತ್ತು ಕೃಷ್ಣಾ ಬಾಯಿ ನೆಹರು ಇವರು ತಮ್ಮ ಕಡೆಗೆ ತಕ್ಕೊಂಡಿದ್ದಾರೆ.

— ಅಲಹಾಬಾದದಲ್ಲಿ ಕಾಂಗ್ರೆಸ-ಆಫೀಸು ಇದ್ದ ಮನೆಗೆ ಸರಕಾರವು ಬೀಗ ಹಾಕಿದೆ

— [illegible]ದಲ್ಲಿ ಪಿಕೆಟಿಂಗ ಮಾಡುವವರ [illegible] ಮಾಡಲಿಕ್ಕೆಂದು ಒಂದು ಹೊಸ ಕಟ್ಟಳೆಯು ದಿಲ್ಲಿಯಲ್ಲಿ ಜನ್ಮಕ್ಕೆ ಬರುವದಂತೆ!

— ಮಹಾತ್ಮರ ತಾ ೩೧ ಸಮೀಪ ಬಂದರೂ ವ್ಯಾಸರಾಯ ಲಾರ್ಡ ಇರ್ವಿನರು ಬಾಯನ್ನೇ ತೆರೆಯುವದಿಲ್ಲ! ಕಲಕತ್ತೆಯಲ್ಲಿ ನಾಲ್ಕೆಂಟು ದಿವಸ ಭಾಷಣದ ಮೇಲೆ ಭಾಷಣ ಮಾಡಿ ಶ್ರಮವಾಗಿದ್ದು ಕಂಠಶೋಷವಾಗಿರುತ್ತದೋ ಏನು ?

— ಪಂಜಾಬದಲ್ಲಿ ಸರಾಯಿ ಅಂಗಡಿ ಮತ್ತು ವಿದೇಶೀ ಅರಿವೆ ಇವುಗಳ ಪಿಕೆಟಿಂಗದ ಕೆಲಸವು ಭರದಿಂದ ನಡೆದದೆ. ಪಿಕೆಟಿಂಗದ ಧುರೀಣತ್ವದ ಬಗ್ಗೆ ಲಾಲಾ ಧನಿಚಂದ ಎಂಬವರಿಗೆ ೬ ತಿಂಗಳ ಸಜೆಯಾಯಿತು!

ಪಂಜಾಬದಲ್ಲಿ ಕಾಂಗ್ರೆಸ ಕಾರ್ಯವಾಹಕರು ಒಬ್ಬರ ಹಿಂದೊಬ್ಬರು ಸೆರೆಮನೆಗೆ ಹೋಗುತ್ತಾರೆ. ಈಗಲೇ ಬಿಡುಗಡೆ ಹೊಂದಿದ ೧೨ ಮುಂದಾಳುಗಳು ಅವರ ಜಾಗೆಗಳನ್ನು ತುಂಬುತ್ತಾರೆ! ಅಧಿಕಾರಿಗಳ ದುರ್ದೈವ !!

— ಪಂಡಿತ ಮಾಲವೀಯರು ಲಾಹೋರಕ್ಕೆ ಹೋಗಿದ್ದರು; ಲಾಲಾ ಲಜಪತರಾಯರ ಭೆಟ್ಟಿಯನ್ನು ತಕ್ಕೊಂಡರು.. ಅಲ್ಲಿಯ ಮುಂದಾಳುಗಳ ಕೂಡ ಮಾತಾಡುವಾಗ ಸಂಧಿ ಪರಿಷತ್ತಿನ ಬಗ್ಗೆ ಇಷ್ಟು ಏಕೆ ಎಂದು ಕೇಳಿದರಂತೆ !

ಯಾಗಿ ಶಾಂತಿಕಾರಕತ್ವಕ್ಕೆ ಎದುರುಗೊಂಡ ಕ್ರೂರ ಸ್ವರೂಪವು ಇನ್ನೂ ಈ ಧರ್ಮಾಂಧರಿಗೆ ತಿಳಿಯು ದಿರುವದು ಆಶ್ಚರ್ಯಕರವೇ!

ಡೀರ್ ಕೊಳಾದರ ಸತ್ಯಾಗ್ರಹಕ್ಕೆ ಗುಂಟೂರ ಜಿ ಯು ಇನ್ನೂ ತಯಾರು ಆಗಲಿಲ್ಲವೆಂದು ಮಹಾತ್ಮರ ವಾಗಿರುತ್ತದೆ. ಅಲ್ಲಿಂದ ೮೦ ಸಾವಿರ ರೈತರು ಸತ್ಯಾ ತಯಾರ ಆಗಿದ್ದಾರಂತೆ! ಹೀಗಾಗಿ ಮುಂದೇನು ಟಣೆ ವಿಚಾರ ಮಾಡಲು ಜಿಲ್ಹಾ ಪರಿಷದೆಯು ವದದೆ.

* * *

ಗ್ರೆಸದಲ್ಲಿ ಪಾಸಾದ ಕಾಯದೆಭಂಗದ ವಿಗನುಸರಿಸಿ ಹುಬ್ಬಳ್ಳಿಯ ಕರ್ನಾಟಕ ಂತೀಯ ಕಾಂಗ್ರೆಸ ಕಮಿಟಿಯವರು ಪಾಸಾಗಿದ **ಮಹತ್ವದ ಠರಾವು:—**

೧) ಕರ್ನಾಟಕ ಪ್ರಾಂತದಲ್ಲಿರುವ ವಿಶಿಷ್ಟ ಸ್ಥಿತಿ ಬದರ ಪರಿಸ್ಥಿತಿಯನ್ನು ಲಕ್ಷ್ಯಕ್ಕೆ ತಂದು ಈ . ನಿರ್ಣಯಿಸುವದೇನಂದರೆ— ಸವಿನಯ ಕಾ ಭಂಗದ ಸಂದರ್ಭದಲ್ಲಿ ಈ ಸಭೆಯು ನಿರ್ಣಯ ಕೊಟ್ಟಿದೆ. ರಾಷ್ಟ್ರೀಯ ಸಭೆಯು ಅಹ ಧಿವೇಶನದಲ್ಲಿಯೂ, ಅಖಿಲ ಭಾರತೀಯ ಕಾ ಮಂಡಳದಲ್ಲಿಯೂ, ಅದರಂತೆ ಕಾರ್ಯ ಮಂಡಳದಲ್ಲಿಯೂ ಪಾಸಾದ ಠರಾವು ನಿರ್ದಿಷ್ಟವಾದ ಕಾರ್ಯಕ್ರಮಗಳಲ್ಲಿ ಸವಿನಯ ಯದೆಭಂಗವನ್ನು ಬಿಟ್ಟು ಉಳಿದವುಗಳನ್ನು ಪ್ರಾ ಪ್ತವರಲ್ಲಿ ಇಳಗೆ ಬರೆದ ಸಂಗತಿಗಳ ಬಗ್ಗೆ ವಿಶೇ ಗಿ ಲಕ್ಷ್ಯಕೊಡತಕ್ಕದ್ದು.

) ಈ ಪ್ರಾಂತದಲ್ಲಿರುವ ಬೇರೆ ಬೇರೆ ಜಾತಿ ಮತ್ತು ಸಮಾಜದಲ್ಲಿ ಐಕ್ಯವನ್ನುಂಟುಮಾಡು ದ.

) ಕೈನೂಲಿನ ಹಾಗೂ ಕೈನೇಕಾರಿಕೆಯನ್ನು ಗಿ ಪ್ರಚಾರ ಮಾಡುವದು.

) ಸ್ವಯಂಸೇವಕ ಪಥಕದಲ್ಲಿ ಸೇರಿಸಿಕೊಳ್ಳು

) ಸದ್ಯಕ್ಕೆ ಈಗ ಕರ್ನಾಟಕ ಪ್ರಾಂತದಲ್ಲಿ ಸಾಮುದಾಯಿಕ ಸವಿನಯ ಕಾಯದೆಭಂಗವನ್ನು ಭಿಸುವದು ಅಪ್ರಶಸ್ತವೆಂದು ಅಭಿಪ್ರಾಯ ಪ ನೈಸರ್ಗಿಕ ಹಕ್ಕುಗಳಾದ ವಾಕ್‌ಸ್ವಾತಂ ಖ್ಯ ಸಂಘ ಸ್ವಾತಂತ್ರ್ಯ ಇವುಗಳಿಗೆ ಬಾಧೆ ತ ದ ಸರಕಾರೀ ಹು.ಕು.ಮು.ಗಳಾಗಲೀ, ಜಾಹೀರ ಗಳಾಗಲೀ ಹೊರಟರೆ ಅವುಗಳ ವಿರುದ್ಧವಾಗಿ ಕ ಸ್ವರೂಪದ ವೈಯಕ್ತಿಕ ಸವಿನಯ ಕಾಯ ಗವನ್ನು ಕೈಕೊಳ್ಳಬೇಕೆಂದೇ ಪ್ರಾಂತದಲ್ಲಿಯ ರಿಗಳಿಗೆ ಈ ಸಭೆಯು ಬಿನ್ನೈಸುತ್ತದೆ. ಮ ತ್ತು ಅಸಹಕಾರಿಗಳಿಗೆ ಈ ಸಭೆಯ ಆಗ್ರಹದ ದೆ. ಮಾತ್ರ ಈ ಮೇರೆಗೆ ಆಜ್ಞಾಭಂಗ ಯುಕ್ತನಾದ ಪ್ರತಿಯೊಬ್ಬನು ಅಹಮ್ಮದಾ ಕಾಂಗ್ರೆಸದಲ್ಲಿ ಪಾಸಾದ ಸ್ವಯಂಸೇವಕರ ಪ್ರ ಲ್ಲಿ ನಮೂದೇಪಾದ ಎಲ್ಲ ನಿಯಮಗಳನ್ನು ಮಾಡಲಿಕ್ಕೆ ಬೇಕು.

* * *

ಜಾಹೀರನಾಮೆ.

ದರ ಮೂಲಕ ಯಾವತ್ತು ಸಿದ್ದಾಪುರ ತಾಲೂ ಕಿನ ಲ್ಯಾಸನ್ನುದಾರರಿಗೆ ತಿಳಿಸುವದೇನಂ ದರೆ ಸಿದ್ದಾಪುರ ತಾಲೂಕಿನಲ್ಲಿ ಒಂದೂ ಲ್ಯಾಸ ಸಿದವರಲ್ಲಿ ಏಲಿಕವಿಗೆ ಸದ್ರಿ ಲ್ಯಾಸನ್ನು ರ ದವರು ಯಾವ ಕಾರಣದಿಂದ ಕಾಲೂಕದಿಂದ ಪಡಿಸಿದರೆಂಬದರ ಬಗ್ಗೆ ನಿಮ್ಮ ಲೇಖಿಯಿಂದ ಕಾಗಿ ವಿನಂತಿ ಅದೆ. ವೀರಭದ್ರಪತಿ ಗುಪ್ತ,

ಸಿ॥ ತಾ॥ ಕಾಂಗ್ರೆಸ ಕ॥ ಸೆಕ್ರೆಟರಿ.

ಶಿರ್ಶಿ ಶ್ರೀ ಮಾರೆಮ್ಮನ ಜಾತ್ರೆ.

ಮಹಾತ್ಮರ ಸಂದೇಶ.

ಭಕ್ತಿವಂತರಾದ ಯಾವತ್ತೂ ಬಂಧು ಭಗಿನಿಯರಿಗೆ ಇದರ ಮೂಲಕ ಜಾಹೀರ ಪಡಿಸುವದೇನಂದರೆ—ನಮ್ಮಲ್ಲಿಯ ಶ್ರೀ ಮಾರೆಮ್ಮನ ಜಾತ್ರೆಯು ಇದೇ ಫೇಬ್ರುವರಿ ತಿಂಗಳ ೨೮ ನೇ ತಾರೀಖಿಗೆ ಪ್ರಾರಂಭಿಸುವದು ನಿಶ್ಚಯಿಸಲ್ಪಟ್ಟಿದೆ. ಸದ್ರಿ ಜಾತ್ರೆಯನ್ನು ಕುರಿತು ನಮ್ಮಲ್ಲಿಗೆ ಮಹಾತ್ಮಾ ಗಾಂಧಿಯವರು ತಮ್ಮದೊಂದು ಮಾರ್ಮಿಕವಾದ ಸಂದೇಶವನ್ನು ಕಳಿಸಿರುತ್ತಾರೆ. ಅದೇನಂದರೆ—

“ಶಿರಸಿಯಲ್ಲಿ ೩ ವರ್ಷಕ್ಕೊಮ್ಮೆ ಜಾತ್ರೆಯಾಗುತ್ತದೆಂತಲೂ ಅದರಲ್ಲಿ ಸಾವಿರಾರು ನಿರಪರಾಧಿ ಕುರಿಕೋಳಿಗಳ ಸಂಹಾರವಾಗುತ್ತದೆಂತಲೂ ನನ್ನ ತಿಳುವಳಿಕೆಗೆ ಬಂದಿರುತ್ತದೆ. ಮತ್ತು ಇಂಥ ಜಾತ್ರೆಯು ಈ ವರ್ಷವಾದರೂ ಸ್ವಲ್ಪ ದಿವಸಗಳಲ್ಲಿಯೇ ಆಗುವದಾಗಿ ನಾನು ಕೇಳುತ್ತೇನೆ.

ಯಾವದೇ ಕಾರಣದಿಂದ ಒಂದೇ ಒಂದು ಪ್ರಾಣಿಯ ಸಂಹಾರವಾದರೂ ಕೂಡ, ಅದರಿಂದ ನನ್ನ ಅಂತಃಕರಣಕ್ಕೆ ಬಹಳ ವೇದನೆಯಾಗುತ್ತದೆ. ಆದರೆ ಧರ್ಮದ ಹೆಸರಿನಲ್ಲಾಗುವ ಪ್ರಾಣಿಗಳ ಸಂಹಾರವು ಅಗದೀ ಅಸಹ್ಯವಾಗಿರುತ್ತದೆ. ಇಂಥ ಸಂಪ್ರದಾಯವು ಹಿಂದೂ ಜನರಲ್ಲಿ ಬಹುಕಾಲದಿಂದ ರೂಢವಾಗಿರುವದಾದದನ್ನು ನಾನು ಬಲ್ಲೆನು. ಆದರೆ ಇಂಥ ಪ್ರಾಣಿವಧೆಯು ಧಾರ್ಮಿಕವಾಗಿರದೆ, ಅಧರ್ಮಮಯವಾಗಿರುತ್ತದೆಂಬುದನ್ನು ನನ್ನ ಹಿಂದೂ ಹೃದಯವು ನನಗೆ ಹೇಳುತ್ತದೆ. ಈ ನನ್ನ ಹೇಳಿಕೆಯ ಪರಿಣಾಮದಿಂದ ಒಬ್ಬ ಹಿಂದೂವಾದರೂ ಇಂಥ ಪಾಪಮಯವಾದ ಆಚರಣೆಯಿಂದ ನಿವೃತ್ತನಾದರೆ ನನಗೆ ಅಷ್ಟೇ ಆನಂದವೆನಿಸೀತು.”

ಆದ್ದರಿಂದ ಮಹಾನುಭಾವರಾದ ಭಕ್ತಿಜನರೇ, ಇನ್ನಾದರೂ ನೀವು ಹಿಂಸಾಯುಕ್ತ ಚರಿತೆಗಳನ್ನು ಯಥಾಶಕ್ತಿ ಕಾಡಿಕೆಯಲ್ಲಿ ರೂಪಾಂತರಿಸಿ ಮಹಾತ್ಮರ ಮಾತುಗಳನ್ನು ಮನ್ನಿಸಬೇಕಾಗಿ ಅತ್ಯಾಗ್ರಹದ ವಿನಂತಿ ಅದೆ.

ಶಿರ್ಶಿ
೧-೨-೨೨ } **ವಿ ಅ ಹೊದ್ಕೆ.**

* * *

ಮುಂಬಯಿಯಲ್ಲಿ ಸ್ವ॥ ಸೇ॥ ಸಂಘ.

ಮುಂಬಯಿಯಲ್ಲಿ ಕಾಯದೆ ಭಂಗಕ್ಕಾಗಿ ಹೊಸ ಪ್ರಚಂಡ ಸ್ವಯಂಸೇವಕ ಸಂಘವು ತಯಾರಾಗುತ್ತಲಿದೆ. ಶ್ರೀಮತಿ ಸರೋಜಿನಿ ನಾಯಡು, ಶೇಟ ಮಿಯಾನ ಮಹಮದ ಛೋಟಾನಿ, ಉಮರ ಸೋಬಾನಿ, ಜಮನಲಾಲ ಬಜಾಜ, ಶಂಕರಲಾಲ ಬೇಂಕರ, ಡಾ॥ ಸಾವಕಾರ, ಪೇಟಕರ, ರಾಮರಾವ ಪಡಬಿದ್ರಿ, ಮೊದಲಾದ ದೇಶಭಕ್ತರು ಸ್ವಯಂಸೇವಕರಾಗಿರುವರು. ಹೊರತು ಮಿಸ್ ಪೇರಿನ್‌ನವರೋಜಿ, ಶ್ರೀಮತಿ ರತನಬಾಯಿ ಲಕ್ಷ್ಮೀದಾಸ ಮೆಹತಾ, ಶ್ರೀ॥ ಸೀತಾಬಾಯಿ ರಾಮರಾವ ಪಡಬಿದ್ರಿ, ಮೊದಲಾದ ೬ ಅರು ಸ್ತ್ರೀಯರೂ ತಮ್ಮ ಹೆಸರುಗಳನ್ನು ನೋಂದಿಸಿರುವರು.

ದೇ॥ ಭ॥ ಲಾಲಾ ಲಜಪತರಾಯ.

ಪಂಜಾಬದಲ್ಲಿ ಸಭಾಬಂದಿ ಹುಕುಮು ಮುರಿದರೆಂಬ ಆರೋಪದಿಂದ ಶಿಕ್ಷೆ ಹೊಂದಿ ಈಗ ಸ್ವರಾಜ್ಯಾಶ್ರಮದಲ್ಲಿ ತಪಶ್ಚರಣ ಮಾಡುತ್ತಿದ್ದ ದೇ॥ ಭ॥ ಲಾಲಾ ಲಜಪತರಾಯ, ಡಾ॥ ಸಂತಾನಮ್, ಮಿ॥ ಗೋಪಿಚಂದ ಮತ್ತು ಮಿ॥ ಲಾಲಖಾನ ಇವರನ್ನು ಸರಕಾರವು ಬೇಗನೇ ಬಿಟ್ಟು ಕೊಡುವವರಿದ್ದಾರೆಂಬ ಖಾತ್ರಿಲಾಯಕ ವರ್ತಮಾನವು ಪಂಜಾಬದ “ಟ್ರಿಬ್ಯೂನ” ಪತ್ರಕ್ಕೆ ಬಂದಿರುವದಂತೆ.

ಪರೀಕ್ಷೆಯ ಫೀ ದರ ಏರಿತು.

ಕಳೆದ ಶನಿವಾರ ತಾ. ೨೮ ಕ್ಕೆ ನಡೆದ ಮುಂಬಯಿ ವಿಶ್ವವಿದ್ಯಾಲಯದ ಸಿನೇಟ ಸಭೆಯಲ್ಲಿ ವರ್ಷಕ್ಕೆ ಬರುವ ೫೦ ಸಾವಿರ ರೂಪಾಯಿ ಕೊರತೆಯನ್ನು ತುಂಬಿ ತರುವರೆ, ಪರೀಕ್ಷೆ ಫೀ ರಕಮುಗಳ ಸುಧಾರಣೆಯಾಯಿತು. ಸ್ಕೂಲ ಲೀವಿಂಗ (ಮೆಟ್ರಿಕ್ಯುಲೇಶನ ಮತ್ತು ಸರಕಾರೀ ನೌಕರಿ) ಪರೀಕ್ಷೆಯ ಫೀಯು ರೂಪಾಯಿ ೧೨ ರಿಂದ ೧೫ ಕ್ಕೆ ಏರಿಸಲ್ಪಟ್ಟಿತು; ಬಿ.ಎ.,ಎಸ್.ಸಿ ಮುಂತಾದ ಪದವಿಗಳು ಮೊದಲು ಕಾಸು ಖರ್ಚಿಲ್ಲದೆ ಸಿಗುತ್ತಿದ್ದವು, ಈಗ ೧೦ ರೂಪಾಯಿ ಕೊಡಬೇಕೆಂದು ನಿರ್ಣಯವಾಗಿದೆ. ಈ ಎರಡು ಸುಧಾರಣೆಗಳಿಂದ ೩೦ ಸಾವಿರ ರೂಪಾಯಿ ಉತ್ಪನ್ನವಾದೀತೆಂದು ಅಂದಾಜಿದೆ. ಈ ಠರಾವು ಮುಂದಿನ ಜುಲೈ ೧ ನೇ ತಾರೀಖಿಗೆ ಅಮಲಿನಲ್ಲಿ ಬರುವದು.

ಪ್ರಸಿದ್ಧಿಪತ್ರಿಕೆ.

ಶ್ರೀ ಶಿರಸಿ ಮಾರೆಮ್ಮದೇವರು.

ತವಿರುವ ಶ್ರೀ ಮಾರೆಮ್ಮದೇವರ ಪ್ರೀತ್ಯರ್ಥವಾಗಿ ೨ ವರ್ಷದಂತೆ ರಥೋತ್ಸವ ಮತ್ತು ಜಾತ್ರೆ ಸಮಾರಂಭಕ್ಕೆ ಕೂಡಾ ಬರುವ ಫಾಲ್ಗುಣ ಶುದ್ಧ ೩ ಮಂಗಳವಾರ ತಾ ೨೮-೨-೨೨ ನೇ ದಿನ ಪ್ರಾರಂಭವಾಗಿ ಆ ಮಹೋತ್ಸವ ನಡೆಯುವದು. ಕಾರಣ ಶ್ರೀ ದೇವರ ಭಕ್ತರು ಮತ್ತು ವ್ಯಾಪಾರಸ್ಥರು ಕೂಡಾ ಈ ಉತ್ಸವಕ್ಕಾಗಿ ಹಾಜರಾಗಿ ಬರಬೇಕೆಂದು ವಿನಂತಿ ಉಂಟು. ತಾರೀಖು ೨-೧-೨೨ನೇ ಇಸ್ವಿ.

ಸಹಿ, ಮೊಕ್ತೇಸರ.
ಎಸ್. ಎನ್. ಕೇಶವೈನವರ.
ವ್ಹಿ. ಎಸ್. ಇಸಳೂರಕರ
ಆರ್. ವ್ಹಿ. ಧಾಕ್ಟೆನವರ.
ಜಿ. ಎ. ನಾಡಿಗ.

“ಆತ್ಮೋದ್ಧಾರ”

ಹೊಸ ಮಾಸ ಪತ್ರಿಕೆ.

ಕಾನಡಾ ಜಿಲ್ಲೆಯಲ್ಲಿ ಮೊದಲನೇಯದು. ಧಾರ್ಮಿಕ, ರಾಜಕೀಯ, ವಿದ್ಯಾವಿಷಯಗಳನ್ನು ಕುರಿತದ್ದು. ಇದೇ ಫೇಬ್ರುವರಿ ತಿಂಗಳಲ್ಲಿ ಹೊರಡುವದು. ವರ್ಗಣಿದಾರರಾಗಲಿಚ್ಛಿಸುವವರು ಕೂಡಲೇ ಹೆಸರು ಕಳಿಸಬೇಕು. ವ್ಹಿ. ಪಿ. ಯಿಂದ ವರ್ಗಣಿ ೧ ವರ್ಷಕ್ಕೆ ೨-೧-೦ ಮಾತ್ರ.

ವಿಳಾಸ— ವಾ. ಅ. ಹೊದ್ಕೆ,
ರಾಷ್ಟ್ರೀಯ ಅಧ್ಯಾಪಕ ಶಿರ್. (ಜಿ. ಉತ್ತರ ಕಾನಡಾ)

ಪುಣೆ ಕೊಪ್ಪರಿಗೆಗಳಿಗಿಂತ ಉತ್ತಮ ಕೊಪ್ಪರಿಗೆಗಳು.

ನಮ್ಮಲ್ಲಿ ಪುಣೆ ಕೊಪ್ಪರಿಗೆಗಳಿಂತ ಉತ್ತಮ ಕೊಪ್ಪರಿಗೆಗಳನ್ನು ತಯಾರ ಮಾಡುತ್ತೇವೆ. ಸಂಶಯ ಇದ್ದವರು ಕುಮಟಾ ಎಗ್ರಿಕಲ್ಚರಲ್ ಫಾರ್ಮಿನಲ್ಲಿ ಎಡವಾನ್ಸ ರೂಪಾಯಿ ೨೦-೦-೦ ಕಟ್ಟಿ ಫಾರ್ಮ ಸುಪರಿಂಟೆಂಡೆಂಟರವರ ವಿದ್ಯಮಾನ ಪಡಿಸಿ ಕೊಳ್ಳಬಹುದು.

ರಾಮಾ ಪುಟ್ಟ ನ್ಯಾಕ, ಕಾರ್ಪೆಂಟರ್.
ಕುಮಟಾ, (ನ್ವ. ಕೆನರಾ.)

हिंदुस्थानांतील रहिवाशास ज्याप्रमाणे हिंदुस्थानची हवा त्याप्रमाणेंच हें औषध हिंदुस्थानांतील लोकास ज्यास्त फायदेशीर आहे.

द्राक्षासव— { दीड रत्तलची किंमत २ रुपये,

रामबाण औषध

सर्दि घालविणारें,
भूक वाढविणारें,
शौच्यास साफ करणार,
झोप आणणार,
शक्ति देणार,
तेजस्वीपणा आणणारें.

पिण्यास रुचिकर

कॅटलाग मागवा,

झंडु फार्मास्युटिकल वर्क्स लिमिटेड,
मुंबई न. १३

ಭಾರತೀ ಔಷಧಾಲಯ
ಹೊನ್ನಾವರ.

ನಾವು ಸ್ವರಾಜ್ಯಕ್ಕೆ ಪಾತ್ರರಾಗಬೇಕಾದರೆ, ನಮ್ಮಲ್ಲಿ ತಕ್ಕ ಪಾತ್ರತೆಯೂ, ಶಕ್ತಿಯೂ ಇರಬೇಕು. ಇವೆಲ್ಲವು ನಮ್ಮಲ್ಲಿ ಬರುವ ಬಗೆ ಹೇಗೆ? ನಾವು ಕೆಳಗೆ ತೋರಿಸಿದಂತೆ ನಡೆದರೆ, ಅವು ಸಹಜವಾಗಿಯೇ ನಮ್ಮ ದೇಹಗಳಲ್ಲಿ ಪ್ರಾದುರ್ಭೂತವಾಗುವವು. ಯಾವನಿಗೆ ಆ ಪ್ರಕಾರ ಆಗಬೇಕೆಂಬ ಸದ್ಹೇತು ಇದೆಯೋ, ಅವನು

೧. ಅವಶ್ಯವಾಗಿಯೇ ಇಂಗ್ಲೀಷ ಭಾಷೆಯ ಉಪಯೋಗವನ್ನು ಮಾಡತಕ್ಕದ್ದು,

೨. ವಕೀಲನಿದ್ದರೆ, ತನ್ನ ಧಂದೆಯನ್ನು ಬಿಟ್ಟುಕೊಟ್ಟು, ಕೈಮಗ್ಗವನ್ನು ಉಪಯೋಗಿಸತಕ್ಕದ್ದು,

೩. ವಕೀಲನಿದ್ದರೆ, ತನ್ನ ಜ್ಞಾನವನ್ನು ತನ್ನ ದೇಶಬಾಂಧವರಿಗೂ ಇಂಗ್ಲಿಷರಿಗೂ ಉಪದೇಶಿಸಲಿಕ್ಕೆ ಅರ್ಪಿಸಬೇಕು,

೪. ವಕೀಲನಿದ್ದರೆ, ಪಕ್ಷಕಾರರ ತಂಟೆಗಳ ಗೊಡವೆಗೆ ಹೋಗದೆ ಕೋರ್ಟುಗಳನ್ನು ಬಿಟ್ಟುಕೊಡಬೇಕು. ಮತ್ತು ಇತರರಿಗೂ [illegible] ಸ್ವಂತ ಅನುಭವದಿಂದ ಹಾಗೆ ಮಾಡಲು ಮನ [illegible]ಬೇಕು.

೫. ವಕೀಲನಿದ್ದರೆ, ಧಂದೆಯನ್ನು ಬಿಟ್ಟುಕೊಟ್ಟದ್ದರಿಂದ ಬಡವನಾಗಲಿಕ್ಕೆ ಕಬೂಲಿ ಕೊಡಲಿಕ್ಕೆಬೇಕು.

೬. ಡಾಕ್ಟರನಿದ್ದರೆ, ಔಷಧ ಕೊಡುವದನ್ನು ಬಂದ ಮಾಡಿ, (ನಶ್ವರ) ಶರೀರಗಳನ್ನು ನೆಟ್ಟಗೆ ಮಾಡುವದಕ್ಕಿಂತ (ಅನಶ್ವರ) ಆತ್ಮಗಳನ್ನೇ ಸುಧಾರಿಸುವದು ಹೆಚ್ಚು ಒಳ್ಳೇದು ಎಂದು ತಿಳಿಯತಕ್ಕದ್ದು,

೭. ಡಾಕ್ಟರನಿದ್ದರೆ, ಅವನು ಯಾವ ಧರ್ಮದವನೂ ಆಗಲಿ, ಯುರೋಪಿಯನ ವೈದ್ಯಶಾಸ್ತ್ರಗಳಲ್ಲಿ ಪ್ರಚಾರದಲ್ಲಿರುವ ಬಹುಮಟ್ಟು ಜೀವಂತ ಇರುವಾಗ ಕತ್ತರಿಸುವ ಉಪಾಯದಿಂದ ಶರೀರವನ್ನು ಗುಣಪಡಿಸುವದಕ್ಕಿಂತ ಅದು ಹಾಗೆಯೇ ಇರುವದೇ ಲೇಸು ಎಂತ ಪೂರ್ಣ ಮನವರಿಕೆ ಮಾಡಿಕೊಳ್ಳತಕ್ಕದ್ದು,

೮. ಡಾಕ್ಟರನಿದ್ದರೆ, ಕೈಮಗ್ಗವನ್ನು ಉಪಯೋಗಿಸುವನು ಮತ್ತು ರೋಗಿಗಳು ಅವನೆಡೆಗೆ ಬಂದರೆ ಅವರ ರೋಗಗಳ ಕಾರಣವನ್ನು ಹೇಳಿ, ಅವರಿಗೆ ನಿರುಪಯೋಗಿ ಔಷಧಗಳನ್ನು ಕೊಡುವ ಗೊಡವೆಗೆ ಹೋಗದೆ, ಅವುಗಳ ಮೂಲ ಕಾರಣವನ್ನೇ ತೆಗೆದು ಬಿಡಬೇಕೆಂತ ಅವರಿಗೆ ಉಪದೇಶಿಸುವನು; ಔಷಧಗಳನ್ನು ತಕ್ಕೊಳ್ಳದೆ, ಮೇಲಿನಂತೆ ಅವರು [illegible], ಅವರು ಒಂದುವೇಳೆ ಸತ್ತರೂ, ಜಗತ್ತಿಗೇನೂ [illegible], ತಾನು ಅವರಿಗೆ ನಿಜವಾಗಿ ದಯೆ ತೋರಿಸಿದ್ದೇನೆ ಎಂತ ಮನಗಾಣಬೇಕು,

೯. ಶ್ರೀಮಂತನಿದ್ದರೆ, ತನ್ನ ಹಣವನ್ನು ಲಕ್ಷಿಸದೆ, ತನಗೆ ಕಂಡದ್ದನ್ನಾಡುವನು ಮತ್ತು ಯಾರಿಗೂ ಅಂಜಲಿಕ್ಕಿಲ್ಲ,

೧೦. ಶ್ರೀಮಂತನಿದ್ದರೆ, ಕೈಮಗ್ಗಗಳನ್ನು ತಾನು ಸ್ವತಃ ಸ್ಥಾಪಿಸಿ, ಸ್ವತಃ ಕೈಯಿಂದ ಮಾಡಿದ ವಸ್ತ್ರಗಳನ್ನು ಧರಿಸಿ ಇತರರಿಗೂ ಹಾಗೆ ಮಾಡಲು ಹುರಿದುಂಬಿಸಬೇಕು.

೧೧. ಪ್ರತಿ ಹಿಂದವಾಸಿಯಂತೆ, ಈಗಿನ ಕಾಲವು ಪಶ್ಚಾತ್ತಾಪದ, ಪ್ರಾಯಶ್ಚಿತ್ತದ ಹಾಗೂ ಮರುಗುವದಾಗಿರುತ್ತದೆಂತ ತಿಳಿಯತಕ್ಕದ್ದು,

೧೨. ಪ್ರತಿ ಹಿಂದವಾಸಿಯಂತೆ, ಇಂಗ್ಲಿಷರಿಗೆ ದೂಷಿಸುವದು ನಿರರ್ಥಕವೆಂತಲೂ, ಅವರು ನಮ್ಮ (ವರ್ಷವರೆಲ್ಲ ಜಗಳಾಡುವ ಪದ್ಧತಿ) ದುರ್ಗುಣದ ಕಾರಣದಿಂದಲೇ ಬಂದರೆಂತಲೂ, ಅದೇ ಕಾರಣದಿಂದ ಅವರು ಇನ್ನೂ ಇಲ್ಲಿ ಇರುತ್ತಾರೆಂತಲೂ, ನಾವು ಪೂರ್ಣ ಆತ್ಮಶುದ್ಧರಾಗಿ ಸುಧಾರಿಸಿದ ಕ್ಷಣವೇ ಅವರು ಹೋಗುವರು ಇಲ್ಲವೆ ತಮ್ಮ ಸ್ವಭಾವವನ್ನು ಸುಧಾರಿಸುವರೆಂತಲೂ ತಿಳಿಯುವನು.

೧೩. ಮರುಗುವ ಕಾಲಕ್ಕೆ ಸುಖೋಪಭೋಗವು ಇರಬಾರದೆಂತಲೂ, ನಮ್ಮ ಪತನ ಸ್ಥಿತಿಯಲ್ಲಿ ಜೇಲಿನಲ್ಲಿ ಇರುವದು ಇಲ್ಲವೆ ಹದ್ದುಪಾರಿನಲ್ಲಿ ಇರುವದು ಅತ್ಯುತ್ತಮವೆಂತಲೂ, ಇತರರಂತೆ ಅವನೂ ತಿಳಿಯತಕ್ಕದ್ದು,

೧೪. ಇತರರಂತೆ, ಬೇರೆಯವರ ಸೇವೆ ಮಾಡಲಿಕ್ಕೆ ಆಗಬೇಕೆಂತ ನಾವು ಕೈದು ಮಾಡಲ್ಪಡುವದನ್ನು ತಪ್ಪಿಸಿಕೊಳ್ಳುವದೇ ಅತ್ಯವಶ್ಯವೆಂತ ತಿಳಿಯುವದು ತಪ್ಪು ಕಲ್ಪನೆಯಾಗಿರುತ್ತದೆಂತ ತಿಳಿಯುವನು,

೧೫. ಇತರರಂತೆ, ಆಡಿ ತೋರಿಸುವದಕ್ಕಿಂತ ಮಾಡಿ ತೋರಿಸುವದೇ ಹೆಚ್ಚು ಒಳ್ಳೇದು ಎಂತ ತಿಳಿಯುವನು; ನಮಗೆ ಕಂಡದ್ದನ್ನು ಅಕ್ಷರಶಃ ಹೇಳುವದು ಮತ್ತು ಅದರ ಪರಿಣಾಮಕ್ಕೆ ಎದುರಾಗುವದು, ನಮ್ಮ ಕರ್ತವ್ಯವೆಂತಲೂ, ಹೀಗೆ ಮಾಡಿದರೇನೆ ನಾವು ನಮ್ಮ ಭಾಷಣದಿಂದ ಯಾರ ಮೇಲಾದರೂ ತಕ್ಕ ಪರಿಣಾಮ ಉಂಟುಮಾಡಲಿಕ್ಕೆ ಸಮರ್ಥರಾಗುವೆವೆಂತಲೂ ತಿಳಿಯುವನು,

೧೬. ಮೇಲಿನವರಂತೆ, ಕಷ್ಟ-ಸಂಕಷ್ಟಗಳನ್ನು ಸಹಿಸಿಯೇ ನಾವು ಸ್ವತಂತ್ರರಾಗುವೆವೆಂದು ತಿಳಿಯತಕ್ಕದ್ದು.

೧೭. ಇತರರಂತೆ, ಅಂಡಮಾನದ ಹೆಚ್ಚು ಶಿಕ್ಷೆಯು ಹಾಕುವ ಪರಿಣಾಮದಿಂದ [illegible] ಯಾವ ಸುಧಾರಣೆಗೆ ಉತ್ತೇಜನ [illegible] ತಕ್ಕ ಪ್ರಾಯಶ್ಚಿತ್ತವಲ್ಲವೆಂತ ತಿಳಿಯತಕ್ಕದ್ದು,

೧೮. ಮೇಲಿನವರಂತೆ, ಯಾವ ಜನಾಂಗವು ತಾಪತ್ರಯಗಳ ಹೊರತು ಉತ್ಕರ್ಷಸ್ಥಿತಿಗೆ ಬರಲಿಲ್ಲವೆಂತ ತಿಳಿಯುವನು. ಶಾರೀರಿಕ ಯುದ್ಧದಲ್ಲಿ ಸಹ ಕಷ್ಟಗಳನ್ನು ಶಾಂತರೀತಿಯಿಂದ ಸಹಿಸುವದೇ, ಹೊರತು ಬೇರೆಯವರನ್ನು ಕೊಲ್ಲುವದಲ್ಲ, ತಕ್ಕ ಒರೆಗಲ್ಲು ಆಗಿದ್ದರೆ, ಸತ್ಯಾಗ್ರಹದಲ್ಲಿ ಅದರ ಮಹತ್ವವು ಬಹಳೇ ಹೆಚ್ಚು ಎಂತ ಭಾವಿಸಬೇಕಾಗುವದು,

೧೯. ಇತರರಂತೆ, ಯಾವದೊಂದು ಸಂಗತಿಯನ್ನು ಬೇರೆಯವರು ಅದನ್ನು ಮಾಡುತ್ತಿದ್ದಾಗ ನಾವು ಮಾಡತೊಡಗುವೆವು ಎಂತ ಹೇಳುವದು ಸ್ವಾರ್ಥವಾದ ನೆವವೆಂತಲೂ ಬೇರೆಯವರಿಗೆ ಯೋಗ್ಯ ಕಂಡಾಗ ಅವರು ಮಾಡುವರು, ನಮಗೆ ಕಂಡಾಗ ನಾವು ಮಾಡಬೇಕೆಂತಲೂ ತಿಳಿಯಬೇಕು; ಯಾಕಂದರೆ ಒಂದು ಪಕ್ವಾನ್ನವನ್ನು ತಿಂದು ನೋಡುವ ಮನಸ್ಸು ನನಗಾದರೆ, ಬೇರೆಯವರು ಅದರ ರುಚಿನೋಡುವವರೆಗೆ ನಾನು ಹಾದಿ ನೋಡುವದಿಲ್ಲ. ಒತ್ತಾಯದಿಂದ ಮಾಡಿದ ಯಾವ ರಾಷ್ಟ್ರೀಯ ಪ್ರಯತ್ನವೂ, ಕಷ್ಟಗಳನ್ನು ಸಹಿಸುವದೂ ಖರೇ ಪ್ರಯತ್ನ ಮತ್ತು ದುಃಖ ಸಹನವೆಂತ ಹೇಳಲ್ಪಡಲಿಕ್ಕಿಲ್ಲ ಎಂತ ತಿಳಿಕೊಳ್ಳುವನು.

೨೦. ಹಿಂದೂ ಆಗಿದ್ದರೆ, ಹಿಂದೂ ಧರ್ಮದ ಮೇಲೆ ದೊಡ್ಡ ಕಲಂಕವಾಗಿರುವ 'ಅಸ್ಪೃಶ್ಯತೆ'ಯನ್ನು ಪೂರ್ಣ ನಿರ್ಮೂಲ ಮಾಡಿ ಹಿಂದುಸ್ಥಾನದಲ್ಲಿ ಜನಸಂಖ್ಯೆಯನ್ನು ಸಾರ್ವಜನಿಕ, ಆರ್ಥಿಕ ಹಾಗೂ ನೈತಿಕ ಅಧೋಗತಿಯಿಂದ ಆದಷ್ಟು ಬೇಗ ಉದ್ಧಾರ ಮಾಡಲಿಕ್ಕೆ ಪ್ರಯತ್ನ ಮಾಡತಕ್ಕದ್ದು.

ಸಂಕ್ಷೇಪದಲ್ಲಿ ಇದನ್ನೆಲ್ಲ ಹೇಳಬೇಕಾದರೆ ಹೀಗೆ ಹೇಳಬಹುದು:—

(ಅ) ಖರೇ 'ಹೋಮ ರೂಲು' ಅಂದರೆ ಸ್ವ—ರಾಜ್ಯ ಇಲ್ಲವೆ ಆತ್ಮಸಂಯಮನವು.

(ಆ) ಇದನ್ನು ದೊರಕಿಸುವ ಬಗೆ ಎಂದರೆ ಸತ್ಯಾಗ್ರಹವು, ಆತ್ಮಬಲವು, ಪ್ರೀತಿಬಲವು.

(ಇ) ಈ ಶಕ್ತಿಯನ್ನು ಉಪಯೋಗಿಸಲಿಕ್ಕೆ ಎಲ್ಲ ಪರಿಯಿಂದಲೂ ಸ್ವದೇಶಿಯು ಅತ್ಯವಶ್ಯಕವು.

(ಈ) ನಾವು ಮಾಡಬೇಕಾದದ್ದನ್ನು ಮಾಡಿಬಿಡಲೇಬೇಕು. ಇದನ್ನು ನಾವು ಮಾಡುವದು ನಮಗೆ ಇಂಗ್ಲಿಷರು ಬೇಡ ಎಂತ ಅಲ್ಲ, ಮುಯ್ಯಿಗೆ ಮುಯ್ಯಿ ತೀರಿಸಲಿಕ್ಕಂತಲ್ಲ, ಆದರೆ, ಬರೇ ಅದು ನಮ್ಮ ಕರ್ತವ್ಯವಾಗಿರುತ್ತದೆಂತಲೇ. ಉದಾಹರಣಾರ್ಥವಾಗಿ, ಇಂಗ್ಲಿಷರು ಉಪ್ಪು ತೆರಿಗೆಯನ್ನು ತೆಗೆದರೂ, ನಮ್ಮ ಹಣವನ್ನು ತಿರುಗಿ ನಮಗೆ ಕೊಟ್ಟರೂ, ಹಿಂದೀಯರಿಗೆ ಅತಿ ಶ್ರೇಷ್ಠ ಹುದ್ದೆಗಳ ಮಾನವನ್ನು ಅರ್ಪಿಸಿದರೂ, ತಮ್ಮ ಇಂಗ್ಲಿಷ ಸೈನಿಕರನ್ನು ತೆಗೆದುಕೊಂಡು ಹೋದರೂ, ನಾವು ಅವರ ಯಂತ್ರಗಳಿಂದ ಮಾಡಿದ ಸರಕುಗಳನ್ನು ಉಪಯೋಗಿಸಬಾರದು. ಇಂಗ್ಲಿಷ ಭಾಷೆಗೆ ಇಲ್ಲವೆ ಅವರ ಅನೇಕ ಉದ್ಯೋಗಗಳಿಗೆ ಇಂಬುಗೊಡಬಾರದು. ಈ ಸಂಗತಿಗಳು ನಿಸರ್ಗತಃ ಹಾನಿಕರ, ಅದ್ದರಿಂದಲೇ ನಮಗೆ ಅವು ಬೇಡ. ನಮಗೆ ಇಂಗ್ಲಿಷ ಜನರ ಮೇಲೆ ಏನೂ ದ್ವೇಷ ಇಲ್ಲ. ದ್ವೇಷವೆಂಬುವದು ಅವರ ಸುಧಾರಣೆಯಮೇಲೆ.

ಮೇಲಿನ ಪ್ರಕಾರ ನಡೆದಲ್ಲಿ ನಮ್ಮಲ್ಲಿ ಆತ್ಮಶಕ್ತಿಯೂ, ಆತ್ಮವಿಶ್ವಾಸವೂ ಬರುವವು. ನಾವು ಸ್ವರಾಜ್ಯಕ್ಕೆ ಪಾತ್ರರಾಗುವೆವು. ಬರೇ ಬೇಡಿದ್ದರಲ್ಲಿ, ನಮಗೆ ಏನೂ ಸಿಗದು. ನಾವು ಅದನ್ನು ಗಳಿಸಬೇಕಾಗುವದು. ಯಾರು ಪರಾವಲಂಬಿಗಳಾಗದೆ, ಸ್ವಾವಲಂಬಿಗಳಾಗಿ ತಮ್ಮ ಧ್ಯೇಯ್ಯಗಳಿಸಲಿಕ್ಕೆ ಬೇಕಾದ ತಾಪತ್ರಯಗಳನ್ನು ಅನುಭವಿಸಲಿಕ್ಕೆ ಸದೈವ ತಯಾರಿರುತ್ತಾರೋ, ಅವರಿಗೆ ದಯಾಘನ ಪರಮಾತ್ಮನು ಸಹಾಯವನ್ನೂ ತನ್ನ ಪ್ರಸಾದವನ್ನೂ ಅನುಗ್ರಹಿಸುತ್ತಾನೆ.

ಕುಮಟೆ ಪೇಟೆ ಧಾರಣೆ.

ಜಿನಸು	ದರ.
ದಂಗೂರ ಬೆ. ಗೋಣಿ ೧ಕ್ಕೆ	೧೧॥—೧೨
ಕುಚ್ಚಿಗೆ ಅಕ್ಕಿ ಮೂಡಿಗೆ "	೫॥।—೬
ರಾಗಿ ನಿಡಕ್ಕೆ	೮—೮॥
ಗೋದಿ ಗೋಣಿ ೧ಕ್ಕೆ	೧೮—೨೩
ಮೆಣಸಿನ ಕಾಯಿ ಮಣ	೩॥—೫
ಕೊಬ್ರಿ ಎಣ್ಣೆ ಮಣ	2
ಕೊತ್ತಂಬರಿ ಗೋಣಿ	೧೧—೧೧॥
ಉಪ್ಪು ಗೋಣಿ "	೩-೧೪-೦
ಕೆರೆಸಿನ ಸೂರ್ಯ "	೪-೫-೬
ಹಂಸ "	೨-೧೦-೬
ಬೆಲ್ಲ ಖಂಡಿ ೧ಕ್ಕೆ	೫೦—೬೫
ಗಾಂವಟಿ ಬೆಲ್ಲ "	೧೪೦—೧೪೨
" ಗೋಟು "	೯೫—೧೦೦
" ಚಾಲಿ "	೯೫—೧೦೦
" ಚಿಕಣಿ "	೧೪೦—೧೫೦
ಯಾಲಕ್ಕಿ "	೪೨—೪೮
ಯಲ್ಲಾಪೂರ ರಾಶಿ "	೧೬೦—೧೬೫
ಶಿರ್ಶಿ ರಾಶಿ "	೧೬೫—೧೭೦
ಸಿದ್ದಾಪೂರ ರಾಶಿ "	೧೭೦—೧೭೫
ಕೇರೂರ ರಾಶಿ "	೧೪೫—೧೫೦
ಕಾಳಮೆಣಸು "	೧೩೮—೧೪೦

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ.

ಕಾಮಿನಿಯಾ ತೈಲ (ರಿಜಿಸ್ಟರ್ಡ

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶರಾಶಿಯನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಅಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾದರೋ,

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ.)

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿರುವದೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅತ್ಯಾವಶ್ಯಕವಾದ ಸಹಾಯಕವಾಗಿರುತ್ತದೆ. ಈ ಆಯಿಲ್ ಹಚ್ಚಿಕೊಳ್ಳುತ್ತಲೇ ಮಸ್ತಿಷ್ಕದ ಬೇನೆಯು ತಗ್ಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಅದನ್ನು ಕೊಡೆಯ ಕೊನೆಗಿದ್ದ ಒಳಿತು ಎಂದಿಗೂ ಉದುರಿ ಬಿದ್ದು ಹೋಗಲಾರವು, ಅದರ, ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವದು.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನು ಕಳೆಯುವದಕ್ಕಿಂತ ಒಂದೇ ಒಂದು ಬಾರಿ ಈ "ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯು ಶ್ರೇಷ್ಠತೆಯ ದೆಸೆಯಿಂದ ಮೈಸೂರ ಪ್ರದರ್ಶನದಲ್ಲಿ "ಸರ್ಟಿಫಿಕೇಟ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವು, ಇದಲ್ಲದೆ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಕ್ರಯ:— ಶೀಸೆಗೆ ರೂಪಾಯಿ 1-0-0, ಶೀಸೆ 3ಕ್ಕೆ ರೂಪಾಯಿ 2-10-0, ವ್ಹಿ.ಪಿ. ಖರ್ಚು 0-14 0.

ಅತಿ ಮನೋಹರವಾದ ಸುರಭಿಯು!

ಒಟ್ಟೋ-ದಿಲ್ ಬಹಾರ್!! (ರಿಜಿಸ್ಟರ್ಡ.)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಅತ್ಯುತ್ತಮವಾದ್ದು. ಜಾಗ್ರತೆಯಿಂದ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧಮಾಡಿದ್ದು. ಇದರಲ್ಲಿ ಮದಿರೆಯು (ಆಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈ ವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಚಿಮುಕಿಸಿದರೆ ನಿಮ್ಮ ಸುತ್ತಲು ಸ್ವರ್ಗೀಯ ನಂದನವೆಂದು ಪುಷ್ಪವಾಟಿಕೆಯು ಅರಳಿದಂತಾಗುವದು. ಬೇರೆ ಯಾವ ಬಗೆಯ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋ-ದಿಲ್ ಬಹಾರದ ಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವದು. [illegible] ಒಂದು ಶೀಸೆಯನ್ನು ತರಿಸಿಕೊಳ್ಳಿರಿ.

ಸಣ್ಣ ಶೀಸೆ 1 ಕ್ಕೆ 0-8-0; 1 ಡ್ರಾಮಿನ (ಮಧ್ಯಮ) ಶೀಸೆ [illegible]-0; ½ ಔನ್ಸಿನ ದೊಡ್ಡ ಶೀಸೆ 1 ಕ್ಕೆ 2-0-0. ಅಂಚೆಯ ವೆಚ್ಚ ಬೇರೆ 0-4-0

ಒಟ್ಟೋ-ದಿಲ್ ಬಹಾರ ಸೆಂಟೆಡ್ ಕಾರ್ಡುಗಳು ಡಜನ್ 1 ಕ್ಕೆ 0-12-0.

Address:- **The Anglo Indian Drug & Chemical Co,**
16, Market, **BOMBAY. 2.**

ಖರೇ ನಷ್ಟಿಲ್ಲ! [illegible] ಕಲ್ಲು!! ಶ್ಯುರ ಗ್ಯಾರಂಟೀ!!!

ಒಮ್ಮೆಗೆಲಾದರೂ ಅನುಭವ ತೆಗೆದುಕೊಳ್ಳದೆ ಬಿಡಬೇಡಿರಿ.

ತಾರುಣ್ಯ ಸಂಜೀವನಿ ಗುಳಿಗೆಗಳು.

ಉತ್ಸಾಹತೆಯನ್ನು ಬೆಳಸಿ, ಪುರುಷರಿಗೆ ಸ್ತ್ರೀ ವಿಷಯವಾಗಿಯೂ, ಸ್ತ್ರೀಯರಿಗೆ ಪುರುಷ ವಿಷಯವಾಗಿಯೂ ಹರ್ಷವುಳ್ಳ ಪ್ರೀತಿಯನ್ನು ಉಂಟುಮಾಡಿ, ದಿನೇ ದಿನೇ ಶರೀರದ ಪತನವನ್ನು ರೋಗಗಳನ್ನು ದೂರಪಡಿಸಿ, ಆಯುರಾರೋಗ್ಯವನ್ನು, ರತಿಯಲ್ಲಿ ವೇಗಳಿಕ್ಕಾದ [illegible] ತಾಳುವ ಶಕ್ತಿಯ ಉತ್ಸಾಹವನ್ನು, ಸಂಭೋಗದಲ್ಲಿ ತೃಪ್ತಿಯನ್ನು, ಸೌಖ್ಯವನ್ನು ಕೊಟ್ಟು, ಮನಸ್ಸಿನ ದೃಢತೆಯನ್ನು ಯೌವ್ವನದ ಕಳೆಯನ್ನು ದೊರಕಿಸಿ ಮುದಿತನವನ್ನು ನೀಗಿ ಬಲವನ್ನು ಉಂಟುಮಾಡುವದು. ನಪುಂಸಕತ್ವವನ್ನು ನಿವಾರಿಸಿ, ಬಗಬಗೆಯ ರೋಗಗಳನ್ನು ನಾಶಮಾಡುವದು. ಜೀರ್ಣಜ್ವರ, ಮಂದಾಗ್ನಿ, ಶುಕ್ಲಸ್ರಾವ, ಆಮಶಂಕೆ ಮೊದಲಾದ ಉಪದ್ರವಗಳನ್ನು ನಾಶಮಾಡುವದು. ಇದು ಆರೋಗ್ಯಕ್ಕೆ ಅತ್ಯುತ್ತಮವಾದ ಔಷಧವಾಗಿಯೂ, ದೇಶಕಾಲಗಳಿಂದಲೂ, ಚಿಂತೆಗಳಿಂದಲೂ, ಸ್ತ್ರೀಯರಿಂದಲೂ, ದೇಹಪ್ರಕೃತಿಯಿಂದಲೂ, ಚಿಕ್ಕವಯಸ್ಸಿನಲ್ಲಿ ನಡೆಸುವ ಬಲತ್ಕಾರದ ಹಸ್ತಮೈಥುನದಿಂದಲೂ, ಅತಿವಿಷಯೋಪಭೋಗದಿಂದಲೂ, ಇಂದ್ರಿಯ ಶಿಥಿಲವೂ, ತೆಳುವೂ, ನಿಸ್ತೇಜವೂ ಆಗಿ ಯತ್ನವಿಲ್ಲದ ಸ್ಖಲನವಾಗುವದು. ಒಂದೊಂದು ಸಾರಿ ಮೂತ್ರದಲ್ಲಿಯೂ, ಸ್ವಪ್ನದಲ್ಲಿಯೂ ಸಹ ಹೋಗುವದಲ್ಲದೆ, ನಪುಂಸಕತ್ವ, ಶರೀರ ಕ್ಷೀಣತೆ, ಅಶಕ್ತಿ, ಆಯಾಸ, ದೃಷ್ಟಿಮಾಂದ್ಯ, ಹಸಿವಿಲ್ಲದಿರುವಿಕೆಯೂ, ತಲೆಯಲ್ಲಿಯೂ ನೋವು, ಮೈಬಿಸುಪು, ನಿದ್ರೆಯಲ್ಲಿ ಭಯಂಕರವಾದ ಸ್ವಪ್ನ, ಅರುಚಿ, ಮರವು ಮತ್ತು ಶರೀರದ ಹಾಗೂ ಮನಸ್ಸಿನ ಚೇತನ ಕುಂದಿ ಹೋಗುವದು, ಇವೆಲ್ಲವುಗಳ ಮೇಲೆ ರಾಮಬಾಣವಾಗಿರುವದು. ೩೦ ಗುಳಿಗೆಗಳುಳ್ಳ ಶೀಸೆ ೧ಕ್ಕೆ ರೂ. ೧||| ಸಂ ೧. ಸಂ ೨. ಹೀಗೆ ಎರಡು ಶೀಸೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಅಂಥಾ ೬೦ ಗುಳಿಗೆಗಳುಳ್ಳ ಶೀಸೆಗೆ ರೂ. ೩. ಪೋಸ್ಟೇಜ ಬೇರೆ.

ಎಸ್. ಜಿ. ಭಾಗ್ವತ್, ಆಯುರ್ವೇದಿಕ್ ಕೆಮಿಸ್ಟ್,
ಕರ್ಕಿ. (ಕೆನರಾ.)

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.

೧. ರಾಗದ ಪೆಟ್ಟಿಗೆ ಕಿಂ. ೩೦, ೪೦, ೫೦, ೬೦, ೭೦
೨. ಕಾಲು ಪೆಟ್ಟಿಗೆ ಕಿಂ. ೮೫, ೭೫, ೧೫೦, ೧೭೦.
೩. ತಬಲೆ ಜೋಡಿ ಕಿಂ. ೧೩, ೧೫, ೧೮, ೨೦.
೪. ಹಾರ್ಮೋನಿಯಮ್ ಗೈಡ ಕಿಂ. ೧, ತಬಲೆ ಗೈಡ ಕಿಂ. ೧೨ ಆ.

ವಿಶೇಷ ಮಾಹಿತಿ ಬಗ್ಗೆ ನಮ್ಮ ಕ್ಯಾಟಲಾಗ ಪುಕ್ಕಟೆ ಕೊಡುವೆವು.

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು.

ಪತ್ತೆ:— **ಗೋವಿಂದರಾವ ಸಿತಾರಾಮ** ಮತ್ತು
ಕಂಪನಿ, ನಂ ೨೩೩,
ಕಾಳಬಾದೇವಿ ರೋಡ, ಮುಂಬಯಿ.

ಕಾನಡಾವೃತ್ತ.

ಗುರುವಾರ, ತಾರೀಖು ೧೬ ಮಾಹೆ ಮಾರ್ಚ ೧೯೨೨

ಮಹಾತ್ಮರಿಗೆ ಹಿಡಿದರು.

संपत्तौ च विपत्तौ च महतामेकरूपता ।

* * *

ರಾಜನೀತಿಯು ಹ್ಯಾಗಿರುತ್ತದೆ, ಅದರ ಸ್ವರೂಪವೇನು, ಎಂದು ಕೇಳುವವರಿಗೆ ಅನುಭವಶಾಲಿಗಳಾದ ಕವಿಗಳು ಉತ್ತರಕೊಟ್ಟಿರುವರು. ರಾಜನೀತಿಯು ವಾರಾಂಗನೆಯಂತೆ ಅನೇಕ ರೂಪದವಳೆಂದು ಅವರು ಹೇಳಿರುವರು. ರಾಜನೀತಿಗೆ ಒಂದೇ ರೂಪವಿರುವದಿಲ್ಲ. ಪ್ರಸಂಗವು ಬಂದಂತೆ, ಪರಿಸ್ಥಿತಿಯು ಉಂಟಾದಂತೆ, ಅವಶ್ಯಕತೆಯು ಬಿದ್ದಂತೆ ಅದಕ್ಕೆ ಬೇಕು ಬೇಕಾದ ರೂಪವನ್ನು ಧರಿಸಬೇಕಾಗುತ್ತದೆಂದು ಅನಂತ ಉದಾಹರಣೆಗಳಿಂದ ತೋರಿಸಲಿಕ್ಕಾಗುವದು. ಇಂಥ ಬಹುರೂಪಿಯಾದ ರಾಜನೀತಿಗೆ ಸತ್ಯದ ಏಕರೂಪವಾದ ಮಹಾತ್ಮರ ಗಂಟುಬೀಳುವದು ಇತಿಹಾಸದೊಳಗೆ ಅಪರೂಪವಾದ ಯೋಗಾಯೋಗವು. ಕಪ್ಪು ಮತ್ತು ಬಿಳೇ ಬಣ್ಣಗಳೊಳಗಿನ ಸ್ಪಷ್ಟವಾದ ಭೇದವು ಅವೆರಡೂ ಬಣ್ಣಗಳನ್ನು ಒತ್ತಟ್ಟಿಗಿಟ್ಟು ನೋಡಿದಾಗ ಕಾಣಬರುತ್ತದಲ್ಲವೇ ? ಅದರಂತೆ ಬಹುರೂಪತೆಯು, ಏಕರೂಪತೆಯು ಎದುರು ಬದುರಾಗಿ [illegible] ಎಷ್ಟು ಭಿನ್ನವಿರುತ್ತವೆಂದು ನೋಡುವ ಪ್ರಸಂಗವು ಈಗ ಬಂದಿದೆ. ಅನೇಕ ರೂಪವಾದ ರಾಜನೀತಿಯು [illegible] ಯಾದಂತೆ [illegible] ಮಹಾತ್ಮರಿಗೆ, ಮಹಾತ್ಮಾ ಗಾಂಧಿಯವರಿಗೆ, ಕಳೆದ ಶುಕ್ರವಾರ ಸೆರೆಹಿಡಿದಿರುವರು. ಇಷ್ಟು ದಿವಸ ಬರೇ ಸುದ್ದಿಯಾಗಿದ್ದ ಸಂಗತಿಯು ಕಟ್ಟಕಡೆಗೆ ನಿಜವಾಯಿತು. ಮಹಾತ್ಮರ ನಿರ್ಬಂಧದಾರಿಯು ಅವರಾಗಿ ನಿರ್ಮಿಸಿದ ಶಾಂತತೆಯು ವಾತಾವರಣದಲ್ಲಿ ಜನಂಗೆಲ್ಲರಿಗೆ ಪೂರ್ಣ ಶಾಂತತೆಯನ್ನು ಅಸಹಕಾರಿತೆಯು ಧರ್ಮದಂತೆ ಪಾಲಿಸಲು ಅಜ್ಞಾಪಿಸುತ್ತದೆ. ಆಜ್ಞೆಯನ್ನು ಶಿರಸಾ ವಹಿಸಿ ವಿಧೇಯತನದಿಂದ ಪಾಲಿಸುವಾಗ ನಮಗಿಂದಿಗೆ ಹೆಚ್ಚಿಗೇನು ಬರೆಯುವದು ಸಾಧ್ಯವಿಲ್ಲ. ದೊಡ್ಡ ಲೇಖವನ್ನು ಬರೆಯುವ ಇಚ್ಛೆಯೂ ನಮಗಿಲ್ಲ. ಬರೇ ಕರ್ತವ್ಯಕ್ಕೆಂದು ನಾಲ್ಕು ಮಾತುಗಳನ್ನು ನಮಗೆ ನಿವೇದಿಸಬೇಕಾಗಿದ್ದು ಅದನ್ನು ನಾವು ನಿರುಪಾಯವಾಗಿ ಮಾಡಬೇಕಾಗಿದೆ. ಅದನ್ನು ಮಹಾತ್ಮರು ಕ್ಷಮಿಸುವರೆಂದು ಕೋರುವೆವು.

ಮಹಾತ್ಮರ ಮೇಲೆ ಆರೋಪವೇನಿದೆ, ಅದರ ಮೇಲೆ ಪಿನಲ ಕೋಡಿನ ೧೨೪ನೇ (ಅ) ಕಲಮಿನ ಆರೋಪವನ್ನಿಟ್ಟಿದ್ದಾರೆ. ಅವರು ರಾಜದ್ರೋಹ ಮಾಡಿರಬಹುದೆಂಬ ತೋಹಮತು ಅವರ ಮೇಲೆ ಬಂದಿದೆ. ಪ್ರಚಲಿತ ರಾಜ್ಯಪದ್ಧತಿಯು ಸೌಕರ್ಯಕ್ಕಾಗಿ, ಸುವ್ಯವಸ್ಥೆಗಾಗಿ, ಸ್ವರಾಜ್ಯಕ್ಕಾಗಿ ವಿಧಿಸಲ್ಪಟ್ಟ ಕಾಯಿದೆಗಳ ತತ್ವಗಳಂತೆ ಹೊರಿಸಿದ ಆರೋಪವು ಅವೇ ಕಾಯಿದೆಗಳ ದೃಷ್ಟಿಯಿಂದ, ಕಾಯಿದೆಯಿಂದ ಸ್ಥಾಪಿತವಾದ ಕೋರ್ಟಿನಿಂದ ವಿಚಾರಿಸಲ್ಪಡುವದು. ಕಾಯಿದೆ ಕೋರ್ಟಿನಲ್ಲಿ ಮಹಾತ್ಮರ ಆರೋಪದ ತನಖಿಯು ನಡೆದು, ನ್ಯಾಯಾಧೀಶರು ಕೋರ್ಟಿನ ತೀರ್ಪು ಕೊಡುವರು. ಈ ವಿಷಯವಾಗಿ ನಮಗೇನೂ ಬರೆಯುವ ಇಚ್ಛೆ ಇಲ್ಲ. ಆದರೆ, ಇಡೀ ಹಿಂದುಸ್ಥಾನದಲ್ಲಿ ಜನತೆಯನ್ನು ಚಿಂತಾಕುಲರಾಗಿ ಮಾಡುವ, ಚಿರಕಾಲ ಇತಿಹಾಸಿಕವಾಗಿ ಬಾಳುವ ಈ ರಾಜಕೀಯ ಖಟ್ಲೆಯನ್ನು ಈಗ ನಡಿಸುವ ಸರಕಾರೀ ಧೋರಣವು ಸಮಂಜಸವೋ, ಹಿತಕರವೋ, [illegible]ವೋ ಎಂಬುದೇ ಈಗಿನ ಪ್ರಶ್ನೆಯು. ಅದರ ಉತ್ತರವನ್ನು ನಾವಾಗಿ ಕೊಡುವದಕ್ಕಿಂತ, ಹಿಂದೀ ರಾಜಕಾರಣದ ಭವಿತವ್ಯತೆಯು ಕರ್ತರೇ ಕೊಡುವರು. ಸಮಂಜಸತನದ, ಜಾಣತನದ, ನ್ಯಾಯದ ಇಲ್ಲದೆ ನೀತಿಯು ಉಪದೇಶವನ್ನು ಮಾಡುವವರಿಗೆ ನಂಬುವವರು ತೀರ ಕಡಿಮೆ ಎಂದು ಮಹಾತ್ಮರ ಚಳವಳಿಯು ಚರಿತ್ರವು. ಅದರಿಂದ ಅವರ ಪ್ರತಿಪಕ್ಷಿಗಳ ಮೇಲಾದ ವಿಪರೀತ ಪರಿಣಾಮವು ಸಾರಿಸಾರಿ ಹೇಳುತ್ತದೆ. ಇದ ಕಾರಣ, ಯಾವದೇ ರಾಜಕೀಯ ಧೋರಣಕ್ಕೆ ಅದರ ಪ್ರವರ್ತಕರು ಜವಾಬದಾರರು. ಮಹಾತ್ಮರ ಧೋರಣಕ್ಕೆ ಮಹಾತ್ಮರ ಪಕ್ಷವು, ನ್ಯಾಯ್ಯವಾಗಿ, ಪ್ರಮಾಣಿಕತನದಿಂದ ಜವಾಬದಾರಿಯನ್ನು ಹೊತ್ತುಕೊಂಡಂತೆ ಸರಕಾರದ ಧೋರಣಕ್ಕೆ ಸರಕಾರವು ಜವಾಬದಾರರಾಗಿದ್ದು ಹೊರತು ಗತ್ಯಂತರವಿಲ್ಲ. ಈ ವಿಷಯವಾಗಿ ಇಂದಿಗೆ ಹೇಳುವದಿಷ್ಟೇ.

ಇನ್ನು ಮಹಾತ್ಮರ ಧೋರಣವು ಸತ್ಯ ಮತ್ತು ಅಹಿಂಸೆಯ ಮೇಲೆ ಸ್ಥಾಪಿತವಾದ್ದರಿಂದ, ಅದು ಸತ್ಯದ ಏಕರೂಪವಾಗಿದೆ. ಅದರೊಳಗೆ ಎಂದೂ ಭಿನ್ನ ರೂಪವಾದದ್ದು ಕಂಡು ಬರುವದಿಲ್ಲ. ಇನ್ನು ಮಹಾತ್ಮರ ಮೇಲಿನ ಆರೋಪದ ತನಖಿಯೊಳಗೂ ಅವರ ಅಸಹಯೋಗ ಧರ್ಮದ ಒಂದೇ ರೂಪವು ಬಾಳುವದೆಂದು ಜಗತ್ತಿಗೆಲ್ಲ ಕಾಣುವದು. ತಮ್ಮ ತತ್ವಗಳಂತೆ ಆರೋಪಿತ ಮಹಾತ್ಮರು ಪುರಾವೆ-ಗಿರಾವೆಯನ್ನು ಹಾಜರಪಡಿಸಲಿಕ್ಕಿಲ್ಲ. ಇಷ್ಟೇ ಅಲ್ಲ, ಕಾಯಿದೆಯ ಆರೋಪವನ್ನು ಸಹ ಅವರೆಂದೂ ಅಲ್ಲಗ

ಯಲಿಕ್ಕಿಲ್ಲ; ಅಲ್ಲಗಳೆದಿದ್ದಿಲ್ಲ. ಈ ವಿಷಯ ಗಿ ತಮ್ಮ ಸ್ಪಷ್ಟ ಅಭಿಪ್ರಾಯಗಳನ್ನು ನ ನಂತರ ತಮ್ಮ ಲೇಖಗಳಲ್ಲಿಯೂ, ವ್ಯಾಖ್ಯಾನ ಗಳಲ್ಲಿಯೂ ಮಹಾತ್ಮರು ಪ್ರಕಟಿಸಿರುವರು. ಅವರ ಸಿದ್ಧಾಂತಗಳೊಳಗೆ ಅನೇಕರೂಪತೆಯು ಎಂದೂ ಆಗಿಲ್ಲ, ಈಗಲೂ ಸಂಭವಿಸದು, ಮುಂದೆಯೂ ಸಂಭವಿಸಲಿಕ್ಕಿಲ್ಲ. ಅವರ ಇಡೀ ವ್ಯವಹಾರದಲ್ಲಿ, ಅವರ ಇಡೀ ಚರಿತ್ರದಲ್ಲಿ ಪ್ರಾರಂಭದಿಂದ ಈಗಿನ ತನಕ ನಿರ್ಮಲವಾದ ಏಕರೂಪತೆಯು ಜಗತ್ತಿಗೆಲ್ಲ ಸ್ಫೂರ್ತಿದಾಯಕವಾಗಿ ಕಂಗೊಳಿಸುತ್ತಿರುವದು. ಇಂಥ ಅತ್ಯಂತ ಶುದ್ಧವಾದ ದಿವ್ಯವಾದ ಏಕರೂಪತೆಯ ಅತಿಶಯ ಪ್ರಕಾಶವಾನ ಕಿರಣವು ಬಂದು ಈ ತನಬಿಯೊಳಗೆ ಹೊಳೆಯುವದು. ಅಸತ್ಯದ ಕತ್ತಲೆಯು ಲೇಶವು ಸಹ ಅವರ ಆಚರಣೆಯೊಳಗೆ ಕಂಡುಬರಲಿಕ್ಕಿಲ್ಲೆಂದು ಹೇಳುವದೇ ತಾತ್ಪರ್ಯವು.

ಇನ್ನು ರಾಜನೀತಿಯು ಧೋರಣವು ಮಹಾತ್ಮರ ಪರವಾಗಿ ಬಹುರೂಪಿಯಾಗಿದೆಂಬದಕ್ಕೆ ಪ್ರಮಾಣಗಳು ಹೊಳೆಯುತ್ತವೆ. ಗಾಂಧಿಯವರು [illegible], ಅವರು ಉತ್ತಮಶೀಲದವರಿದ್ದಾರೆ, ಅವರು ಸಜ್ಜನಸ್ಥರಿದ್ದಾರೆ ಎಂದು ಭಾರತ ಮಂತ್ರಿಗಳು ಪಾರ್ಲಮೆಂಟಿನಲ್ಲಿ ತಾವಾಗಿ ನುಡಿದಿದ್ದರು. ರೀಡಿಂಗ ದೊರೆಗಳು ಅವರ ಶೀಲವನ್ನು ಹೊಗಳಿದ್ದರು. ಆಗಿನ ಮಹಾತ್ಮರೊಳಗೂ ಈಗಿನ ಮಹಾತ್ಮರೊಳಗೂ ಮುತ್ಸದ್ದಿಗಳ ದೃಷ್ಟಿಯೊಳಗೆ ಭೇದಭಾವನೆಯನ್ನು ಉಂಟು ಮಾಡಿದ ರಾಜನೀತಿಯು ಬಹುರೂಪಿ ಅಲ್ಲದೆ ಮತ್ತೇನು? ಮಹಾತ್ಮರು ಮೊದಲಿದ್ದಂತೆ, ಈಗಲೂ ಸತ್ಯಾಗ್ರಹಿಗಳಿದ್ದಾರೆ. ಸತ್ಯಪ್ರತಿಷ್ಠರಿದ್ದಾರೆ, ಸತ್ಯಕ್ಕಾಗಿ ಲೋಕನಿಂದೆಯನ್ನೂ ಕಾಯಿದೆಯ ಯಾತನೆಗಳನ್ನೂ ಆನಂದದಿಂದ ಸಹಿಸುವ ಸತ್ಯನಿರ್ಧಾರದವರಿದ್ದಾರೆ. ಅವರ ಲ್ಲಿ, ಅವರ ಶೀಲದಲ್ಲಿ, ಅವರ ತತ್ವಗಳಲ್ಲಿ ಭೇದವೇನೂ ಉಂಟಾದದ್ದಿಲ್ಲ. ಅವರ ಅಸಹಕಾರಿತೆಯು ತನ್ನಿಂದ ತಾನೇ ಸಾಯುವದು, ಅದರ ಗೊಡವೆ ನಮಗೇಕೆ ಎಂದು ಹೇಳಿದ ರಾಜನೀತಿಯು ಈಗ ಮತ್ತೊಂದು ರೂಪವನ್ನು ಧರಿಸಿ, ಅದರ ಆದ್ಯಪ್ರವರ್ತಕರನ್ನು ಆರೋಪಿಸಿದೆ. ವಾರಾಂಗನೆಯ ರೂಪವನ್ನು ಯಥಾರ್ಥವಾಗಿ ಸಮರ್ಥಿಸಿ ರಾಜನೀತಿಯು ಇಂದಿಗೆ ಧನ್ಯವೆನಿಸಿ ಕೊಂಡಿತು.

ತಮಗೆ ಸೆರೆಹಿಡಿಯುತ್ತಾರೆಂದು ಬಾತ್ಮಿ [illegible]ವಾಗಿ ಅರಿತು, ಮಹಾತ್ಮರು ಜನರಿಗೆ ತಮ್ಮ 'ಯಂಗ್ ಇಂಡಿಯಾ' ಪತ್ರಿಕೆಯೊಳಗೆ ಆಜ್ಞಾಪಿಸಿರುವದೇನೆಂದರೆ, ಜನರು ಹರತಾಳಗಳನ್ನು ಆಚರಿಸಕೂಡದು. ಸಭೆಗೂಡಿಸಕೂಡದು. ಮೆರವಣಿಗೆಗಳನ್ನು ಹೊರಡಿಸಬಾರದು, ಯಾವದೇ ವಿಧದ ಪ್ರಕ್ಷುಬ್ಧತೆಯ ಪ್ರದರ್ಶನವನ್ನು ಮಾಡಕೂಡದು. ಆದರೆ, ಅಹಿಂಸೆಯ ತತ್ವದಂತೆ ಪೂರ್ಣ ಶಾಂತತೆಯನ್ನು ಪಾಲಿಸತಕ್ಕದ್ದು. ಅಸ್ಪೃಶ್ಯತೆಯನ್ನು ಪೂರ್ಣ ಕಿತ್ತೊಗೆಯಿರಿ, ಐಕ್ಯವನ್ನು ಉಂಟು ಮಾಡಿರಿ, ಸ್ವದೇಶಿಯನ್ನು ಸರ್ವತ್ರ ಪ್ರಚಾರಿಸಿರಿ. ತಮಗೆ ಸೆರೆಹಿಡಿದದ್ದರ ವಾರ್ತೆ ಕೇಳಿದ ಕೂಡಲೆ ಮೈಮೇಲಿನ ವಿದೇಶೀ ಬಟ್ಟೆಗಳನ್ನು ಅಗ್ನಿಗೆ ಅರ್ಪಣ ಮಾಡಿರಿ. ಇದೇ ಆಜ್ಞೆಯನ್ನು ಎಲ್ಲ ದೇಶಬಾಂಧವರು ವಿಧೇಯತನದಿಂದ ಪಾಲಿಸುವರೆಂದು ನಂಬುವೆವು.

◆

ಸ್ಫುಟ ಸೂಚನೆಗಳು.

೧. ಫೋರೆಸ್ಟ ಸೆಟ್ಲಮೆಂಟ ಆಫಿಸರ ಮಿ॥ ಕೊಲಿನ್ಸ ಸಾಹೇಬರ ಸ್ವಾರಿಯು ಬೆಟ್ಟಕ್ಕಾಗಿ ಕೊಡುವ ದೆಸೆಯಿಂದ ವನ್ನಳ್ಳಿ, ಗುದ್ದಗಾಡು ತಪಾಸ ಮಾಡುತ್ತ, ಮಾಡುತ್ತ ಹೊಲಸಗದ್ದೆ ಗ್ರಾಮಕ್ಕೆ ಮುಟ್ಟಿ, ಅಲ್ಲಿಯ ಪಟೇಲರಿಂದ ವಾಲಿಕೀ ಜಮೀನಿಗೆ ಆಗಿ ಕೊಡುಕೆ ಬಗ್ಗೆಂತ ೩೪ ಫೂಟಿನಷ್ಟು ಫೂಟುಗಳ, ಮತ್ತು ಅಷ್ಟು ಆವಶ್ಯಕ ಸಂಗತಿಗಳಲ್ಲಿ ೧೦೦ ಫೂಟುಗಳ ಪರ್ಯಂತ ಕೊಡಬಹುದೆಂತಿದ್ದ ಪಟ್ಟೆಗಳ ಬದಲಾಗಿ, ವಾಲಕೀ ಜಮೀನಿಗೆ ಆಗಿ, ಕೊಟ್ಟ ಹಾಡೀ ಮೇಲೆ, ಪಟೇಲ ಶಾನಭೋಗರು ಅಧಿಕಾರ ದುರುಪಯೋಗದಿಂದ ಮಾಲಕೀ ಮತ್ತು ಹಾಡೀ ಜಮೀನು ಜೆಟ್ಟಿನಡುವೆ ಇರುವ ರಾಜರಸ್ತೆಯನ್ನು ಉಲ್ಲಂಘಿಸಿ, ಸಾರ್ವಜನಿಕ ಗೋಚರಾವೀ ಜಂಗಲಿನಿಂದ ಕೆಲಕೆಲವು ದಾಲೀಕರಿಗೆ ಮನವಸಾನೆ ದೊಡ್ಡ ದೊಡ್ಡ ಕ್ಷೇತ್ರಗಳನ್ನು ಅಳತೆಮಾಡಿಕೊಟ್ಟು ನೂರಿನ್ನೂರು ರೂಪಾಯಿ ವೆಚ್ಚಮಾಡಿ ಕಂಪೌಂಡು ಮಾಡಿದ [illegible] ಸ್ಥಳಗಳು ಸಾಹೇಬರ [illegible]ದ್ದವಂತೆ! ಆ ಸಂಬಂಧದ [illegible] ಬೈಲಿಗೆ ಬಂದ ಸಂಗತಿಗಳ ಮೇಲಿಂದ ಸಾಹೇಬರು ತಪ್ಪುರಾದದ್ದು ತಿಳಿಯುತ್ತದೆ. ಇದರಿಂದ ಇಂಥ ಗೈರಕಾಯಿದೆ ಅನ್ಯಾಯದ ಕೆಲಸಗಳು ನಮ್ಮ ತಾಲೂಕಿನ ಜಂಗಲು ಮತ್ತು ರೆವಿನ್ಯೂ ಸರ್ಕೀಟ ಅಮಲದಾರರ ಲಕ್ಷಕ್ಕೆ ಈ ಮೊದಲು ಯಾಕೆ ಬಂದಿಲ್ಲವೆಂಬುದು ಒಂದು ಆಶ್ಚರ್ಯಕರ ಸಂಗತಿಯು. ಜಿಲ್ಲೆಗೆ ಸಾರ್ವಜನಿಕ ಗೋಚರಾವೀ ಜಂಗಲು ಇಂಥ ದುಷ್ಕೃತ್ಯಗಳಿಂದ ದಿನೇ ದಿನೇ ಕುಗ್ಗುತ್ತ ಕುಗ್ಗುತ್ತ ನಡೆವದು. ಇಷ್ಟೇ ಅಲ್ಲ, ರೈತರ ಜನ-ಜಾನುವಾರುಗಳ ಸಂಖ್ಯೆಯು ಸಮೃದ್ಧಿಯಾಗುತ್ತ ನಡೆದದೆಂಬುದು ವ್ಯಸನಕರವು. ಪ್ರತಿವರ್ಷ ಜಾನುವಾರುಗಳಿಗೆ ಗೋಚರಾವಿ ಕ್ಷೇತ್ರ ಕಡಿಮೆಯಾಗುತ್ತ ಹೋದರೂ, ಗೋಚರಾವು [illegible] ಬಂದ ಆಗಲೊಲ್ಲದು. ಇದರದೆಲ್ಲ ಪರಿಮಾರ್ಜನೆ, ಜೀವನದ ಒಂದೇ ಸಾಧನೆಯಾಗಿರುವ, ಶೇತಕಿಯ ಮೇಲೆ ಅವಲಂಬಿಸಿರುವ, ಬಡರೈತರ ಮೇಲೆ ಸರಕಾರದ ಕೃಪಾದೃಷ್ಟಿಯಿಂದಲೇ ಆಗಬೇಕಲ್ಲದೆ, ಬೇರೆ ಗತಿಯಿಲ್ಲ.

೨. ಇಲ್ಲಿಯ ಗಿಬ್ಬ ಹಾಯಸ್ಕೂಲ ಸಂಸ್ಥೆಗೆ ದ್ರವ್ಯದ್ವಾರಾ ಮತ್ತು ಇತರ ರೀತಿಯಿಂದಲೂ ಸಹಾಯ ಮಾಡಿದ ಮತ್ತು ಉತ್ತರ ಕನ್ನಡಾ ಗ॰ ಸಾ. ವಿದ್ಯಾಭಿವೃದ್ಧಿ ಫಂಡಿಗೆ ರೂ. ೩೦೦ ಮತ್ತು ಅದಕ್ಕೆ ಮಿಕ್ಕಿ ಧನಸಹಾಯ ಮಾಡಿದ ಒಟ್ಟು ೫ ಪೇಟ್ರನ್ಸ್, ಮತ್ತು ಫೆಲೋಸ್‌ರಂಬ ಮೆಂಬರರೊಳಗಿಂದ ಕೆನರಾ ಎಜ್ಯುಕೇಶನ ಸೊಸಾಯಿಟಿಯ ಕಾರಭಾರ ನಡೆಸಲಿಕ್ಕೆ ೭ ಜನರನ್ನು ಆರಿಸಿಕೊಡತಕ್ಕದ್ದಾಗಿ ಆಯಾಯ ಮೆಂಬರರ ಕಡೆಗೆ ಮತ ಕೊಡುವ ಯಾದಿಯು ಕಳಿಸಲ್ಪಟ್ಟದೆಂತ ತಿಳಿಯುತ್ತದೆ. ಆ ಯಾದಿಯನ್ನು ತಮ್ಮ ಶಿಫಾರಸು ಮೇರೆಗೆ ಇದೇ ಬರುವ ತಾ. ೩೧ರ ಒಳಗಾಗಿ ಮುಟ್ಟುವಂತೆ ಕಳಿಸಬೇಕೆಂದು ಕಾರ್ಯದರ್ಶಿಗಳರ ವಿನಂತಿಯಾಗಿದೆಯಂತೆ! ಅವರ ಪೈಕಿ ಕೆಲವರ ಗಿಬ್ಬ ಹಾಯಸ್ಕೂಲ ಸಂಸ್ಥೆಗೇನೇ ಧನಸಹಾಯ ಮಾಡಿದವರಿದ್ದು, ಉಳಿದವರು ಸ್ತ್ರೀ ವಿದ್ಯಾಭಿವೃದ್ಧಿ ಫಂಡಿಗೆ ವಂತಿಗೆ ಕೊಟ್ಟವರೆಂಬುದು ಗಿಬ್ಬ ಹಾಯಸ್ಕೂಲ ಸಂಸ್ಥೆಯಿಂದ ಈ ವರೆಗೆ ಪ್ರಸಿದ್ಧ ಮಾಡಿದ ರಿಪೋರ್ಟುಗಳಿಂದ ಸಿದ್ಧವಾಗುತ್ತದೆ. ಈ ವಿದ್ಯಾಭಿವೃದ್ಧಿ ಫಂಡಿನ ಸಂಸ್ಥೆಯೆಂಬುದು, ಶಾಲೆ ಸ್ಥಾಪನೆಗಿಂತ [illegible] ಸ್ಥಾಪಿತವಾದ ತಾತ್ಪೂರ್ತಿ ಸಂಸ್ಥೆಯು. ಆ ಸಂಸ್ಥೆಯು ಇದು ವರೆಗೆ ಹಾಗೇ [illegible]. ಈ ಜಿಲ್ಲೆಯ [illegible] ಎಲ್ಲ ತಾಲೂಕುಗಳ ವಂತಿಗೆ ಹಣ ಕೂಡಿಸಲ್ಪಟ್ಟರೂ, ಅಂದಿನಿಂದ ಈಗ ೧೫-೧೬ ವರ್ಷಗಳು ಕಳೆದು ಹೋದರೂ, ಆ ಫಂಡಿನ ವ್ಯವಸ್ಥೆ ತಾತ್ಪೂರ್ತಿ ಕಮೀಟಿಯಿಂದಲೇ ನಡೆಯುತ್ತ ಬಂದರೂ, ಆ ಫಂಡಿಗೆ ವಂತಿಗೆ ಕೊಟ್ಟ ಮಾತ್ರದಿಂದ ಗಿಬ್ಬ ಹಾಯಸ್ಕೂಲ ಸಂಸ್ಥೆಗೆ ಪ್ರತಿನಿಧಿಗಳಾಗಿ ಹೋಗಿ, ಸುಧಾರಿಸಿದ ಸಮೂನೆಯಿಂದ ಕಾರಭಾರವನ್ನು ನಡಿಸುವದು ಆನಂದಕರವು. ಈ ಮೆಂಬರರಿಗೆ ತಮ್ಮ ಫಂಡಿನ ವ್ಯವಸ್ಥೆ ಮಾಡಲಿಕ್ಕೆ ಪ್ರಾತಿನಿಧಿಕ ತತ್ವದಿಂದ ರೀತಿಯಂತೆ ಮಹಾಸಭೆಯನ್ನು ಕರೆದು ಕಾರ್ಯಕಾರೀ ಕಮಿಟಿಯನ್ನು ನೇಮಿಸಿಕೊಳ್ಳುವದಕ್ಕಿಂತ, ಗಿಬ್ಬ ಹಾಯಸ್ಕೂಲ ಸಂಸ್ಥೆಯ ಕಾರಭಾರ ನಡೆಯಿಸುವದರಲ್ಲಿ ಹೆಚ್ಚಿನ ಮಹತ್ವ ಉಂಟಾಗಿದೆಂಬುದು ತಿಳಿಯದೇ ಕಾಗಿದೆ. [illegible] ವಿದ್ಯಾಭಿವೃದ್ಧಿ ಫಂಡಿನ ವ್ಯವಸ್ಥೆಯು, ಕೆನರಾ ಎಜ್ಯುಕೇಶನ ಸೊಸಾಯಿಟಿಗೆ ರೀತಿಯಂತೆ ಅಧಿಕಾರ ಕೊಡದಿದ್ದದರಿಂದಲೂ, ಈಗಿದ್ದ ಕಮೀಟಿಯು ತಾತ್ಪೂರ್ತಿಯಾಗಿ ಆ ಪೈಕಿ ಕೆಲವರು ನಿಧನ ಹೊಂದಿ ಉಳಿದವರ ಕಮೀಟಿಯು ಮೇಲಿಂದ ಮೇಲೆ ಕೂಡದೆ ಇದ್ದದರಿಂದಲೂ, 'ಯದ್ವಾ ತದ್ವಾ' ಆದದ್ದಲ್ಲವೆ, [illegible]ವಾಗಿದೆಂದು ವ್ಯಸನದಿಂದ ಹೇಳಬೇಕಾಗಿದೆ. ಕಳೆದ ಅಕ್ಟೋಬರ ತಿಂಗಳಲ್ಲಿ ಕೂಡಿದ ತಾತ್ಪೂರ್ತಿ ಕಮೀಟಿಯಿಂದ ಠರಾಯಿಸಲ್ಪಟ್ಟಂತೆ, ಜನವರೀ ತಿಂಗಳಲ್ಲಿ ಮಹಾಸಭೆಯು ಕೂಡಲಿಲ್ಲ. ಮತ್ತು ಹೊಸ ಕಾರ್ಯಕಾರೀ ಕಮೀಟಿಯು ಸಹ ಅಸ್ತಿತ್ವಕ್ಕೆ ಬರಲಿಲ್ಲ. ಹೀಗಾಗಿ, ಆ ಠರಾವು ಮೃತಪ್ರಾಯವಾಗಿದೆ. ಆದರೆ ಗಿಬ್ಬ ಹಾಯಸ್ಕೂಲ ಸಂಸ್ಥೆಯಾದರೂ, ಆ ಕಮೀಟಿಯ ಸಂಸ್ಥಾಪಕತ್ವದಿಂದಲೇ ಅಸ್ತಿತ್ವಕ್ಕೆ ಬಂದದ್ದರಿಂದ, ಅದರ ಕಾರಭಾರವಾದರೂ ಈಗಿನ ನಾಜೂಕ ಪರಿಸ್ಥಿತಿಯಲ್ಲಿ ಬಹು ಕುಶಲತೆಯಿಂದ ನಡೆಯಿಸುವದು ಅವಶ್ಯಕವಾಗಿದೆ. ಅದ್ದರಿಂದ ಈಗಿನ ಮೆಂಬರರಿಂತ ಪಕ್ಷದ ಪರಿಸ್ಥಿತಿಯಲ್ಲಿ [illegible], ಸಾರಾಸಾರವಿಚಾರದಿಂದ, ಸಂಸ್ಥೆಯ ಹಿತಾರ್ಥವಾಗಿ ಕಾರಭಾರ ನಡಿಸುವಷ್ಟು ಯೋಗ್ಯತೆಯ ಸ್ವತಂತ್ರ ಮತಗಳಿರುವ ಮೆಂಬರರೇ ಈಗ ಆರಿಸಿ ಬಂದರೆ, ಸಂಸ್ಥೆಯ ಉತ್ಕರ್ಷವು ಇನ್ನಷ್ಟು ಆಗುವದರಲ್ಲಿ ಸಂದೇಹವಿಲ್ಲ. ಅದ್ದರಿಂದ, ಎಲ್ಲ ಮೆಂಬರರು ಬಹು ಕುಶಲತೆಯಿಂದ ಸ್ವತಂತ್ರ ಮತದ ಯೋಗ್ಯ ಮೆಂಬರರನ್ನು ಆರಿಸಿ, ತಮ್ಮ ಕರ್ತವ್ಯವನ್ನು ಸುಕರವಾಗಿ ಜರಗಿಸುವರೆಂದು ಕೋರುವೆವು.

೩. ಇಲ್ಲಿ ಕೆಲ ಕಾಲ ತಾಲೂಕ ಶಿರಸ್ತೇದಾರರಾಗಿದ್ದು, ಹುಜೂರ ಆಫೀಸಿನಲ್ಲಿ ಡೆಪ್ಯುಟಿ ಚಿಟ್ನೀಸ

ರಾಗಿಯೂ [illegible] ಪಾಲಿನ ವರ್ಗದ [illegible] ಲೀಡಾರರಾಗಿಯೂ [illegible] ಧಾರವಾಡ, [illegible] ರ ವರ್ಷ ನವೆಂಬರದಲ್ಲಿ ಅಸಿಸ್ಟಂಟರಾಗಿದ್ದ ಶ್ರೀ ಘನಶ್ಯಾಮ ವಿಠ್ಠಲ ದೇಸಾಯಿಯವರು ತಮ್ಮ ತರುಣ ಪ್ರಾಯದಲ್ಲೇ ವಿಷಮಜ್ವರದಿಂದ ನಿಧನಹೊಂದಿದವರೆಂಬ [illegible] ಅತ್ಯಂತ ಖೇದವಾಗುತ್ತದೆ. ಇವರು ಹಾಗಿನ ವಿದ್ಯಾಖಾತವನ್ನೇರಿದವರಲ್ಲದಿದ್ದರೂ, ತಮ್ಮ ಬುದ್ಧಿಪ್ರಚುರತೆಯಿಂದಲೂ, ದೂರದರ್ಶಿತ್ವದಿಂದಲೂ, ವರಿಷ್ಠರ ಪ್ರೀತಿಯಿಂದಲೂ ತಾವು ವಹಿಸಿಕೊಂಡ ಕರ್ತವ್ಯಗಳನ್ನು ಮನವಿಟ್ಟು ನಿಷ್ಪಕ್ಷಪಾತದಿಂದ ಮಾಡಿ ಲೋಕಪ್ರಿಯರಾಗಿದ್ದರೆಂಬುದರಲ್ಲಿ ಸಂದೇಹವಿಲ್ಲ. ಇವರು ಓದಿನದಿಂದಲೇ ಈ ಹುದ್ದೆಗೆ ಏರಿದವರಾಗಿ ಬಹಳವಾದ ಅನುಭವವು ಪೂರ್ಣವಿದ್ದವರಿಂದ ಅವರ ಕಡೆಗೆ ಬರುವ ಎಲ್ಲ ಬಡಬಗ್ಗರ ಕೈಕಾರಿಗೆ [illegible] ದಾಕ್ಷಿಣ್ಯದಿಂದಲೇ ನಡೆಯಿಸಿ, ಅವರ [illegible]ಗೆ ಪಾತ್ರರಾಗಿದ್ದರು. ಈ ಅಕಾಲಿಕ ಮರಣದಿಂದ ಈ ಜಿಲ್ಲೆಯ [illegible], [illegible] ದಾಯಕವಾದ ಒಂದು [illegible] ದೆಂದು [illegible] ಕ್ರದ ಮಹಾತ್ಮ್ಯವೇ ತೋರಿದೆ. [illegible] ಯು? ಪ್ರಕೃತ ಮೇಲೆ ಅವಲಂಬಿಸಿದ್ದ ಅವರ ಪತ್ನಿಯೂ, ಚಿಕ್ಕ ಮಕ್ಕಳೂ ಈಗ ಅನಾಥರಾಗಿದ್ದರೂ ಕಾಲಚಕ್ರದ ಗತಿಯನ್ನು ಲಕ್ಷಿಸಿ, ತಮ್ಮ ದುಃಖವ ಮರೆತು ಸಾಂತ್ವನವನ್ನು ಹೊಂದುವದೇ ಒಂದು ಉಪಾಯವು. ಅವರ ಸಂಗತಿಯನ್ನು ಸಹತಾಪವನ್ನು ವ್ಯಕ್ತಗೊಳಿಸಿ ಮೃತರ ಆತ್ಮಕ್ಕೆ ಚಿರಶಾಂತಿ ದೊರೆಯಲೆಂದು ಜಗನ್ನಿಯಂತ್ಯನ ಕಡೆಗೆ ಬೇಡಿಕೊಳ್ಳುವೆವು.

* * *

ಸ್ಥಾನಿಕ ವೃತ್ತಾಂತ.

ಕುಮಟಾ—ಇತ್ತೀಗೆ ಸಾಧಾರಣ ಚಳಿ [illegible] ಜನರಿಗೆ [illegible] ರೋಗಗಳು ಕಾಣಿಸುತ್ತವೆ.

ಈ ವಾರದಲ್ಲಿ [illegible] ರೂ. [illegible] ಮತ್ತು ನಗದಿಯಿಂದ ರೂ. [illegible] ಒಟ್ಟು ರೂ. [illegible] ಕೂಡಿದೆ [illegible] ರೂ. [illegible] ವಸೂಲಾಗಿದೆ. ಆದರೆ ಈ ವರೆಗೆ ಎಷ್ಟು [illegible] ಗಿದೆ ಎಂಬ [illegible] ಕೊಂಗ್ರೆಸ [illegible] ಬೇಕಲ್ಲದೆ, ಅದರ ವಿನಿಯೋಗದ [illegible] ಸ್ವರೂಪವನ್ನು ಆದಷ್ಟು ಬೇಗ ಮಹಾಸಭೆ [illegible] ಪ್ರಕಟಿಸಲೇಬೇಕು. ಈ ಫಂಡಿನ ವಿನಿಯೋಗವು ಆದಷ್ಟರ ಮಟ್ಟಿಗೆ ಬಡ ಅಸಹಾಯ ಜನರ ಕಲ್ಯಾಣಕ್ಕಾಗಿ ಕೈಮಗ್ಗಗಳ [illegible] ವಿರ್ಮಾಣ ಮಾಡಿದರೆ ಅದರ ಯಥಾರ್ಥ ಉಪಯೋಗ ಮಾಡಿದಂತಾದೀತೆಂದು ಬಹುಜನರ ಅಭಿಪ್ರಾಯವಾಗಿದೆ [illegible].

[illegible] ಸೆಟ್ಲಮೆಂಟ ಆಫೀಸರ [illegible] ಸಾಹೇಬರ ಸ್ವಾರಿಯು ಇಲ್ಲೇ ಇದೆ. ಈ ತಾಲೂಕಿನ ಬೇರೆ ಬೇರೆ ಗ್ರಾಮಗಳಲ್ಲಿ ಪಟ್ಟ-ಹಾಡಿ, ಕೊಡುವ ಕೆಲಸ ಆಗುತ್ತಿದೆ.

ಇಲ್ಲಿಯ ರಾಷ್ಟ್ರೀಯ ಶಾಲೆಯಲ್ಲಿ ಒಟ್ಟಿಗೆ [illegible] ಜನ ವಿದ್ಯಾರ್ಥಿಯರು ಕಲಿಯುತ್ತಿದ್ದು, ಅವರಿಗೆ ಬರುವ ಎಪ್ರಿಲ [illegible] ರಿಂದ [illegible] ಸರ್ಕಾರಿ [illegible] ನಿಶ್ಚಯವಾಗಿದೆ.

[illegible] — [illegible] ಎಜ್ಯುಕೇಶನ [illegible] ಯು ಮುಂದಿನ [illegible] ಬಗ್ಗೆ [illegible] ಕ್ರಮದ ವ್ಯವಸ್ಥೆ ನಡೆದದೆ. ಮರಾಠೀ ಪತ್ರಿಕೆಗಳು [illegible] ನೇ ತಾರೀಖಿನ ಒಳಗೆ [illegible] ಅರ್ಜಿದಾರರು [illegible] ಕ್ಕೆ ಆಗುವದೆಂದು ಗೊತ್ತಾಗಿದೆ.

ಈ ತಾಲೂಕು [illegible] ಗಳ ವ್ಯಕ್ತಿ [illegible] ಜನರಿಗೆ— [illegible], [illegible] ೧೦ ವರ್ಷಗಳ [illegible] ಗಿ ಮೊದಲು [illegible] ಕೂಡಿದ ಪ್ರಮಾಣಗಳಿಗೇನೇ, [illegible] ನಿಮಿತ್ತದಿಂದ, [illegible].

(ಪುರವಣಿ ನೋಡಿ [illegible].)



ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ ರಾಮಬಾಣದಂತಾಗಿರುವದು ಕಳೆದ ೨೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತ್ತದೆ. ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು. [illegible] ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಗು, ಸಂಧಿವಾತ ಮೊದಲಾದ ಎಲ್ಲಾ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯದವರು ಇದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು ಕಿಮ್ಮತು ೧೦ ಆಣೆ ಟಪಾಲ ಖರ್ಚ ಬೇರೆ

ಅಮೃತಾಂಜನ ಡಿಪೋ, ಫೋರ್ಟ,
ಮುಂಬಯಿ

ಜ್ವರದ ಪ್ರಚಂಡಶತ್ರು.

ಮಲೇರಿಯಾ, ಇನ್‌ಫ್ಲುಯೆಂಝಾ, ಚಳಿಜ್ವರ ಪಾಳಿಜ್ವರ, ಪ್ಲೇಗ್‌ಜ್ವರ ಸನ್ನಿಪಾತ ಮೊದಲಾದ ಜ್ವರಗಳಮೇಲೆ

ಕೃತಾಂತ ಮಿಕ್ಶ್ಚರವನ್ನು,

ಉಪಯೋಗಿಸಿರಿ ಕೇವಲ ಮೂರು ಡೋಸಗಳಿಂದ ಗುಣ. ದೊಡ್ಡ ಬಾ. ಕಿಮ್ಮತ್ತು 1 0 0 ಸಣ್ಣ ಬಾಟ್ಲಿ ಕಿಮ್ಮತ್ತು 0—10—0

ಕೃತಾಂತ ಕಾಫ್ ಮಿಕ್ಶ್ಚರ,

[illegible] ದಮ್ಮು, ಕೆಮ್ಮು ಮತ್ತು ಕಫ ರೋಗಗಳಾದವುಗಳ ಮೇಲೆ ಬಾಟ್ಲಿ ಕಿಂ. 1—8—

ಕೃತಾಂತ ಬಾಮ

[illegible] ವಾತ, ಮೊದಲಾದವುಗಳ ಮೇಲೆ ಬಾಟ್ಲಿ ಕಿಮ್ಮತ್ತು 0—8—0

ಕೃತಾಂತ ಆಯಿಂಟಮೆಂಟ,

[illegible] ಕಜ್ಜಿ [illegible] ರೆಗಳ ಮೇಲೆ ಬಾಟ್ಲಿ ಕಿಂ 0—6—0

ಕೃತಾಂತ ಹೇರ್ ಆಯಿಲ್

[illegible] ಶಾಂತವಾಗಿ ಕೂದಲುಗಳು ವೃದ್ಧಿ ಹೊಂದುವವು ಬಾಟ್ಲಿ ಕಿಂ. 1—0—0

ಕೃತಾಂತ ಕ್ಲೋರೋಡಾಯ್ನ,

[illegible] ಬಾಟ್ಲಿ ಕಿಂ. 1—0—0

ಟಪಾಲಖರ್ಚ ಪ್ರತ್ಯೇಕ ಎಜಂಟರು ಬೇಕು

ಕೃತಾಂತ ಡಿಪೋ, ಮುಂಬಯಿ ನಂ ೧೧.

वंदेमातरम् ॐ भारतमाताकी जै.

ಭಕ್ತೀಸು ! ಭಕ್ತೀಸು !! ಭಕ್ತೀಸು !!!

ಮಹಾತ್ಮಾ ಗಾಂಧಿಯವರ ಭಾವಚಿತ್ರವು

“ವ್ಯಾಪಾರ ಸೇವಾಭುವನ.”

ದುಂದುಭಿ ಸಂವತ್ಸರದ ಚೈತ್ರ ಶುದ್ಧ ಪ್ರತಿಪದೆಯ ದಿವಸವೇ ತೆರೆಯಲ್ಪಡುವದು. ನಮ್ಮಲ್ಲಿ

ಕೈರಾಟೆಯ ಮತ್ತು ಕೈಮಗ್ಗದ

ಸೀರೆ, ಧೋತರ, ಟವೆಲ್ಸ್ [illegible]ಗಳೂ ಸ್ವದೇಶೀ “ಇಂಪಿರಿಯಲ್ ಸೋಪ” ವರ್ಕ್ಸದ ಬಾರ ಸಾಬೂನಗಳೂ, “ದಿ ಗುಜರಾಥ” ಮತ್ತು ದಿ ಲೋಟಸ” ಸೋಪ ವರ್ಕ್ಸಗಳ ಟೊಯಲೆಟ ಸಾಬೂನಗಳೂ ಮತ್ತು ಅತ್ಯುಪಯುಕ್ತವಾದ ಅನೇಕ ಸ್ವದೇಶೀ ಸಾಮಾನುಗಳೂ ಸಿಗುವವು.

Address all correspondence to **Sole Proprietor,**
V. C. MAHALE,
Honavar
(N. Kanara.)
Sole Agents :-
The Imperial Soap Works,
The Gujarat Soap Works,
The Lotus Soap Works
Sub Agents Wanted in
SIRSI ANKOLA, KARWAR, HALIYAL

ವಿಳಾಸ —
ವ್ಯಾಪಾರ ಸೇವಾಭುವನ,
ಜನರಲ್ ಮರ್ಚಂಟ್ಸ,
ಹೊನ್ನಾವರ
(ಜಿ. ಉ. ಕಾನಡಾ)
ಎಲ್ಲ ಕಾಗದ ಪತ್ರದ್ವಾರ [illegible]

ಮಹಾತ್ಮರ ಮೇಲಿನ ಖಟ್ಲೆ.

ಸೆಶನ ಕಮಿಟ ಆಯಿತು.

ಮಾರ್ಚ ೧೮ ನೇಗೆ.

ಮಹಾತ್ಮಾ ಗಾಂಧಿಯವರಿಗೆ 'ಸೆರೆಹಿಡಿಯುವರೆ', 'ಹಿಡಿಯಬಾರದೆಂದು ನಿರ್ಧರಿಸಿದ್ದಾರೆ' ಎಂಬ ಸುದ್ದಿಗಳು ಕಳೆದ ವಾರದಲ್ಲಿ ಬಿದ್ದವು. ಕಳೆದ ರವಿವಾರದಂತೂ ಮಹಾತ್ಮರಿಗೆ ಹಿಡಿದರೆಂದು ಸುದ್ದಿ ಬಿದ್ದು, ಮುಂಬಯಿ, ಸುರತ ಮುಂತಾದ ಶಹರದ ಜನರು ಗುಂಪುಗುಂಪಾಗಿ ಈ ಸಂಗತಿಯ ಚರ್ಚೆ ನಡೆಯಿಸುತ್ತಿದ್ದರು. ಅವತ್ತೆ, ಬುಧವಾರಕ್ಕೆ ಮಹಾತ್ಮರು ಅಜಮೀರದಲ್ಲಿ ಉಲೆಮಾ ಪರಿಷತ್ತಿಗೆ ಹೋದವರು ತಿರುಗಿ ಬಂದು, ಜನರ ಚಿಂತೆಯು ಸ್ವಲ್ಪ ಕಡಿಮೆಯಾಯಿತು. ಆದರೂ, ಮಹಾತ್ಮರ ಸತ್ಯಾಗ್ರಹಾಶ್ರಮ ನಿವಾಸಕ್ಕೆ ಹಾಕುವ ತಯಾರಿಯನ್ನು ಸರಕಾರ ಮುಂಬಯಿ ಗವರ್ನರರು ಮಾಡಿದ್ದಾರೆಂಬದು ತಿಳಿದು ಬಂದಿತ್ತು. ಮಹಾತ್ಮರಿಗೆ ಹಿಡಿಯಲಿಕ್ಕೆ ಅಪ್ಪಣೆ ಕಾಲಿಸದಿದ್ದರೆ, ನನ್ನ ರಾಜೀನಾಮೆಯನ್ನು ಸ್ವೀಕರಿಸಿರಿ, ಎಂದು ರೀಡಿಂಗ ದೊರೆಗಳಿಗೆ ಮುಂಬಯಿ ಗವರ್ನರರು ದಿಲ್ಲಿಗೆ ಹೋದಾಗ ಖಂಡಿತ ಹೇಳಿದರೆಂಬ ಸುದ್ದಿ ಬಿದ್ದಿತ್ತು. —

ಅಷ್ಟರೊಳಗೆ, ಕೊನೆಗೆ, ಕಳೆದ ಶುಕ್ರವಾರಕ್ಕೆ ಬಾರತ ಮಂತ್ರಿ ಮಿ|| ಮೊಂಟೆಗ್ಯೂ ಸಾಹೇಬರು ರಾಜೀನಾಮೆ ಕೊಟ್ಟ ಸುದ್ದಿ ತಿಳಿದ ಕೂಡಲೇ, ಮಹಾತ್ಮರಿಗೆ ಹಿಡಿಯುವ ಕಾಲವು ಸಮೀಪಿಸಿತೆಂದು ಹಲವರು ಊಹಿಸಿದರು. ಹೀಗೆ, ಯೋಚಿಸುವಲ್ಲಿ ಶುಕ್ರವಾರ ದಿವಸ ಬೆಳಗಾಗುವಷ್ಟರಲ್ಲಿ, ಮುಂಜಾವಿಗೆ, ಮಹಾತ್ಮರನ್ನು ಅಹಮದಾಬಾದಿನಲ್ಲಿ ರಾತ್ರಿ ೧೦|| ಕ್ಕೆ ಹಿಡಿದರೆಂಬ ವಾರ್ತೆಯು ಶನಿವಾರದ ವೃತ್ತಪತ್ರಗಳಲ್ಲಿ ಪ್ರಕಟವಾಯಿತು. ಈ ವಿಷಯ ಮಹಾತ್ಮರ ಇಚ್ಛೆಯಂತೆ ಮುಂಬಯಿಯಲ್ಲಿ ಹರತಾಳ ವಗೈರೆ ಏನೂ ಆಗಲಿಲ್ಲ.

ಕಳೆದ ಶುಕ್ರವಾರ ರಾತ್ರಿ ಸತ್ಯಾಗ್ರಹಾಶ್ರಮದಲ್ಲಿ ಸಾಧಾರಣ ಎಲ್ಲ ಜನರು ಮಲಗಲಿಕ್ಕೆ ಹೋದ ಮೇಲೆ, ಪೋಲೀಸ ಸುಪರಿಂಟೆಂಡಂಟರು ಸತ್ಯಾಗ್ರಹಾಶ್ರಮಕ್ಕೆ ಬಂದು, ಮಹಾತ್ಮರಿಗೆ ತನ್ನ 'ಬಂದಂಥ ಕಾರಣವನ್ನು' ನಿವೇದಿಸಿದರು. ಮಹಾತ್ಮರು ಎಲ್ಲ ತಯಾರಿ ಮಾಡಿ ಹೊರಗೆ ಬಂದು ವಾರಂಟು ಸ್ವೀಕರಿಸಿ ಸುಪರಿಂಟೆಂಡಂಟರ ಮೋಟಾರ ಏರಿದರು. ಅವರ ಮೇಲೆ 'ಯಂಗ ಇಂಡಿಯಾ'ದೊಳಗಿನ ಕೆಲ ಲೇಖಗಳ ಬಗ್ಗೆ ರಾಜದ್ರೋಹದ ಆರೋಪವನ್ನು ಹಾಕಿದ್ದಾರೆ. ಅದೇ ಆರೋಪದ 'ಯಂಗ ಇಂಡಿಯಾ'ನ ಪ್ರಕಾಶಕ ಶ್ರೀ|| ಶಂಕರಲಾಲ ಘೇಲಾಬಾಯಿ ಬೇಂಕರ, ಮುಂಬಯಿ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಸೆಕ್ರೆಟರಿ, ಇವರಿಗೂ ಆಗಲೇ ಹಿಡಿದರು. ಅವರಿಬ್ಬರಿಗೂ ಸತ್ಯಾಗ್ರಹಾಶ್ರಮದ ಹತ್ತಿರ ನೆರೆಯಲ್ಲಿದ್ದ ಸಾಬರಮತಿ ಜೈಲಿಗೆ ಒಯ್ದರು.

ಮಹಾತ್ಮರು ಜೈಲಿಗೆ ಹೋಗುವ ಮೊದಲು, ಆಶ್ರಮನಿವಾಸಿಗಳಿಗೆ, ರಾಷ್ಟ್ರೀಯ ಕೆಲಸಕ್ಕಾಗಿ ಅವಿಶ್ರಾಂತ ದುಡಿಯಲಿಕ್ಕೂ, ಶಾಂತಿಯನ್ನು ಕಾಪಾಡಲಿಕ್ಕೂ ಆಜ್ಞಾಪಿಸಿದರು.

ಮಹಾತ್ಮರ 'ನವಜೀವನ' ಮುದ್ರಣಾಲಯದ ಝಡತಿಯು ಅದೇ ರಾತ್ರಿ ೧೨ ಘಂಟೆಗೆ ತೆಗೆದುಕೊಳ್ಳಲಾಯಿತು; ಮತ್ತು ಮಹಾತ್ಮರ ಹಸ್ತಾಕ್ಷರದ 'ಯಂಗ ಇಂಡಿಯಾದ' ಲೇಖಗಳನ್ನು ಒಯ್ದರು.

ಮಹಾತ್ಮರ ಜೈಲುಖಾನೆಯೊಳಗಿನ ಕೋಣೆಯು ಅತಿಶಯ ಸ್ವಚ್ಛ ಇದ್ದಿಟ್ಟಿದೆ; ಮಹಾತ್ಮರಿಗಾಗಿ ಖಾದಿ ಜೋಡನ್ನು ಕೊಟ್ಟಿರುವರು, ಶ್ರೀಯುತ ಬೇಂಕರ ಇವರನ್ನೂ ಮಹಾತ್ಮರ ಕೋಣೆಯಲ್ಲಿಯೇ ಇಟ್ಟಿರುವರು.

ಮಹಾತ್ಮರ ಖಟ್ಲೆಯು ಮಿ|| ಬ್ರೌನರವರ ಮುಂದೆ ಕಳೆದ ಶನಿವಾರ ಮಧ್ಯಾಹ್ನ ೧೨ ಘಂಟೆಗೆ ಕಮಿಶನರ ಆಫೀಸಿನಲ್ಲಿ ಪ್ರಾರಂಭವಾಯಿತು. ಮಹಾತ್ಮರ ಮೇಲಿನ ರಾಜದ್ರೋಹದ ಆರೋಪವನ್ನು 'ಯಂಗ ಇಂಡಿಯಾ'ದೊಳಗಿನ, "Disaffection - a virtue, ೨೯ ನೇ ಸಪ್ಟಂಬರದಲ್ಲಿಯ 'Tampering with Loyalty, ೧೫ ನೇ ಡಿಸಂಬರದ, Puzzle and its solution, ೨೩ ನೇ ಫೇಬ್ರುವರಿಯೊಳಗಿನ, Shaking the manes ಲೇಖಗಳನ್ನು ಹಿಡಿದರು. ಮಹಾತ್ಮರೇ ಈ ಲೇಖಗಳನ್ನು ಬರೆದರೆಂಬ ಬಗ್ಗೆ ಹ್ಯಾಕೋರ್ಟ ರಿಜಿಸ್ಟ್ರಾರ, ಡಿಸ್ಟ್ರಿಕ್ಟ ಮೆಜಿಸ್ಟ್ರೇಟರವರ ಸಾಕ್ಷಿ ಕೊಟ್ಟಿರುವರು. ಖಟ್ಲೆಗಾಗಿ ಮಹಾತ್ಮರನ್ನೂ, ಶ್ರೀಯುತ ಬೇಂಕರರನ್ನೂ ಸ್ಪೇಶಲ ಟ್ರೇನಿನಮೇಲಿಂದ ತಂದರು.

ಮಹಾತ್ಮರ ಉದ್ಯೋಗ.

ಈ ಮೇಲೆ ಮೋಹನದಾಸ ಕರಮಚಂದ ಗಾಂಧಿ ವಯಸ್ಸು ೫೩, ಉದ್ಯೋಗ — ರೈತ ಹಾಗೂ ನೇಕಾರ, ನಿವಾಸ - ಸತ್ಯಾಗ್ರಹಾಶ್ರಮ ಇವರು ಅಂದದ್ದು —

"ಸರಕಾರದ ವಿರುದ್ಧ ಅಪ್ರೀತಿ ಹುಟ್ಟಿಸುವದರಲ್ಲಿ ನಾನು ಅಪರಾಧಿ ಇದ್ದಬಗ್ಗೆ ನಾನು ಯೋಗ್ಯ ಹೊತ್ತಿಗೆ ಒಪ್ಪುವೆನು. ನಾನು 'ಯಂಗ ಇಂಡಿಯಾ' ಪತ್ರದ ಸಂಪಾದಕನಿದ್ದೇನೆ. ಈಗ ಓದಿದ ಲೇಖಗಳನ್ನು ನಾನೇ ಬರೆದಿದ್ದೇನೆ, ಮತ್ತು ಪತ್ರದ ಮಾಲೀಕರು, ಹಾಗೂ ಪ್ರಕಾಶಕರು ಈ ಪತ್ರದ ದೋರಣವನ್ನು ಸಂಪೂರ್ಣವಾಗಿ ನನ್ನ ವಶಕ್ಕೆ ಕೊಟ್ಟಿರುವರು."

ಶ್ರೀಯುತ ಬೇಂಕರರು ಆರೋಪಿತ ಲೇಖಗಳನ್ನು ಪ್ರಕಟಿಸಿದ ಸಂಗತಿಯನ್ನು ಯೋಗ್ಯ ಪ್ರಸಂಗದಲ್ಲಿ ಒಪ್ಪಿಕೊಳ್ಳುವೆನೆಂದು ಹೇಳಿದರು.

ಕಡೆಗೆ ಮೆಜಿಸ್ಟ್ರೇಟರು ಆರೋಪಿಗಳ ಮೇಲೆ ಚಾರ್ಜ ಹಾಕಿ ಸೆಶನ ಕಮಿಟ ಮಾಡಿದರು.

ಸೆಶನ ಖಟ್ಲೆಯು ಬರುವ ೧೮ ನೇ ತಾರೀಖಿಗೆ ಅಹಮದಾಬಾದಿನಲ್ಲಿ ನಡೆಯುವದು.

ಮೆಜಿಸ್ಟ್ರೇಟರಿಗೆ ಖಟ್ಲೆ ನಡಿಸುವ ಜ್ಞಾನಕ್ಕಿಂತ ಅಜ್ಞಾನದ ಪ್ರದರ್ಶನವೇ ಹೆಚ್ಚಾಯಿತಂತೆ! ಪಬ್ಲಿಕ ಪ್ರಾಸಿಕ್ಯೂಟರರ ಸಹಾಯದಿಂದ, ಹಾಗೂ ಹೀಗೂ ಮಾಡಿ ಖಟ್ಲೆ ಮುಗಿಸಿದರು.

ಕೋರ್ಟಿನಲ್ಲಿ ಅಹಮ್ಮದಾಬಾದಿನೊಳಗಿನ ಅನೇಕ ಸರಕಾರಿ ಮುಖಂಡರೂ, ಸತ್ಯಾಗ್ರಹಾಶ್ರಮದ ಸಭಾಸದರೂ ಹಾಜರಿದ್ದರು. ಖಟ್ಲೆಯು ಮುಗಿಯುವ ಸ್ವರದಲ್ಲಿ ಸೌ|| ಸರೋಜಿನೀ ನಾಯಡುರವರೂ, ಮೌಲಾನಾ ಹಸರತ ಮೋಹಾನಿಯವರೂ ಬಂದು ಮುಟ್ಟಿದರು. ಖಟ್ಲೆ-ಕೇಳಾವಣಿಯು ಮುಗಿದ ಮೇಲೆ ಮಹಾತ್ಮರು ತಮ್ಮ ಅನುಯಾಯಿಗಳಿಗೆ ತಮ್ಮ ವೃತ್ತಪತ್ರಗಳನ್ನು ಮುಂದೆ ನಡಿಸಲಿಕ್ಕೆ ಆಜ್ಞಾಪಿಸಿದರು. ಹೀಗೆ ಹೇಳುವಾಗ, ಮಹಾತ್ಮರು ಮೇಜಿಸ್ಟ್ರೇಟರಿಗೆ ತಮ್ಮ ಕೆಲಸದ ಅಜ್ಞಾನವಿದ್ದಾಗ್ಯೂ, ಅವರು ಪಬ್ಲಿಕ ಪ್ರಾಸಿಕ್ಯೂಟರರ ಸಹಾಯದಿಂದ ಖಟ್ಲೆ ನಡಿಸಿದಂತೆ, ನೀವು ನನ್ನ ಗೈರಹಾಜರಿಯಲ್ಲಿ ಧೈರ್ಯ ಹಿಡಿದು ಪತ್ರಗಳನ್ನು ಮುಂದೆ ನಡಿಸಿರೆಂದು ನಗೆಮಾತಿನಿಂದ ಹೇಳಿದರು.

ಮಹಾತ್ಮರ ಆಜ್ಞೆಯಂತೆ ಅಹಮ್ಮದಾಬಾದಿನಲ್ಲಿ ಅವರಿಗೆ ಸೆರೆ ಹಿಡಿದದ್ದರಿಂದ ವಿಶೇಷ ಗಡಬಡಿಯಾಗಲಿಲ್ಲ. ಎಲ್ಲ ವ್ಯವಹಾರವು ವಾಡಿಕೆಯಂತೆ ನಡೆದಿತ್ತು.

◆

ನೋಟೀಸು

ಮ|| ರಜಿಸ್ಟ್ರಾರ ಸಾಹೇಬ ಬಹಾದ್ದೂರ ಕೋ-ಆಪರೇಟಿವ್ಹ ಸೊಸಾಯಟೀಸ ಇಲಾಖಾ ಮುಂಬಯಿ ಇವರು ೧೯೧೨ ನೇ ಇಸ್ವಿ ೧೧ ನೇ ಎಕ್ಟಿನ ಕಲಮು ೩೯ (೧) ರ ಅನ್ವಯ ತಾರೀಖು ೧೭-೮-೨೧ ಕ್ಕೆ ಕೆನರಾ ಕ್ಷತ್ರಿಯ ಅರ್ಬನ ಸಂಘ ಹಳದೀಪೂರ ಇದನ್ನು ರದ್ದು ಪಡಿಸಿ ಈ ಕೆಳಗೆ ಸಹಿ ಮಾಡುವವರನ್ನು ಲಿಕ್ವಿಡೇಟರರಾಗಿ ನೇಮಿಸಿರುತ್ತಾರೆ. ಆದ್ದರಿಂದ ಇದರ ಮೂಲಕ ತಿಳಿಸುವದೇನಂದರೆ:- ಸದರ ಸಂಘದಿಂದ ಏನಾದರೂ ಸಲ್ಲತಕ್ಕವರು ಈ ನೋಟೀಸು ಪ್ರಕಟವಾದ ಎರಡು ತಿಂಗಳೊಳಗೆ ಕೆಳಗೆ ಸಹಿ ಮಾಡುವವರ ಕಡೆಗೆ ತಮ್ಮ ಹಕ್ಕುಗಳನ್ನು ಜಾಹೀರ ಪಡಿಸತಕ್ಕದ್ದು.

ಹೆಗಡೆ,
ತಾ 2-3-1922.
G K. Hegde
ಲಿಕ್ವಿಡೇಟರ, ಹೆಗಡೆ

* * *

ಪ್ರಯಾಣಿಕರಿಗೆ ಸೋಯಿ!

ಮೋಟಾರ—ಸರ್ವಿಸ.

ಶಿರಸಿಯಿಂದ ಕುಮಟೆಗೆ ಕುಮಟೆಯಿಂದ - ಶಿರಸಿಗೆ ಪ್ರತಿದಿವಸ ಮೋಟಾರ ಬಿಡಲ್ಪಡುವದು. ಕುಮಟೆಯಿಂದ ಬೆಳಿಗ್ಗೆ ೮ ಘಂಟೆಗೆ. ಶಿರಸಿಯಿಂದ ಮಧ್ಯಾಹ್ನ ೨ ಘಂಟೆ ಹೊರಡುವದು. **ಟಿಕೇಟುಗಳು.** ಶಿರಸಿಯಲ್ಲಿ **ಸುಬ್ರಾವ ನಾಗಪ್ಪಾ ಕಾಗಾಲ**ರವರಲ್ಲಿ ಕುಮಟೆಯಲ್ಲಿ **ಗೋಪಾಲ ಅನಂತ ಪೈ ಕಾಗಾಲ** ಇವರಲ್ಲಿ ಸಿಗುವವು.

ಈ ಶಿವಾಯ ಗೋಕರ್ಣ, ಸಿದ್ಧಾಪೂರ, ಜೋಗ, ಯಲ್ಲಾಪೂರ. ಹುಬ್ಬಳ್ಳಿ, ಹಾವೇರಿ ವಗೈರೆ ಕಡೆಗೆ ಯಾವಾಗ ಸ್ಪೇಶಲ್ ಬಾಡಿಗೆಗೆ ಬೇಕಾದಲ್ಲಿ ಕೆಳಗೆ ಬರೆದ ಮಾಲೀಕರಿಗೆ ಕೇಳಿದ್ದಲ್ಲಿ ಸೋಯಿಮಾಡಿ ಕೊಡುವರು. ತಾರೀಕು ೧೦-೩-೨೨ ನೇಯಿಂದ ಮೋಟಾರಸರ್ವಿಸ ಚಾಲೂ ಮಾಡಲ್ಪಡುವದು.

ವಿಳಾಸ:— ವಿ ಪಿ. ಆಲೂರ.

ಮಾಲಕ ಮೋಟಾರ ಸರ್ವಿಸ, ಪೋಸ್ಟ-ಶಿರಸಿ ಉ|| ಕಾನಡಾ

POLICE NOTICE

Kanara District Public MOTOR SERVICES.

A printed [illegible] Maximum fares has [illegible] supplied to all [illegible] drivers who are bound [illegible] the same on demand [illegible] passenger.

2 Similarly the [illegible] of each vehicle [illegible] and the same is [illegible] prominent place [illegible]

3 Complaints [illegible] or excess [illegible] to the [illegible] the [illegible] of the [illegible] headquarters [illegible] twelve [illegible]

4 For [illegible] copies of Government [illegible] at three [illegible] will be supplied [illegible] sends cash.

A S HOLLAN[illegible]

Karwar } D[illegible]
1 3-1922 { KAN[illegible]

ನೋಟೀಸು

ಮೆ॥ ರಜಿಸ್ಟ್ರಾರ ಸಾಹೇಬ [illegible] ಇವರ ೧೯೧೨ ನೇ [illegible] ೩೯ (೧) [illegible] ಹೆಸರು ರದ್ದು ಪಡಿಸಿ [illegible] ತಿಂಗಳೊಳಗೆ [illegible] ಪಡೆಯತಕ್ಕದ್ದು.

ಶಿರಸಿ, } G K Heg[illegible]
ತಾ 2 [illegible] 1922 } [illegible]

ಪ್ರಯಾಣಿಕರಿಗೆ ಸೂಚನೆ!

ಮೋಟಾರ—ಸರ್ವಿಸ.

[illegible] ಟಿಕೇಟುಗಳು [illegible] **ಸುಬ್ರಾಯ ನಾಗಪ್ಪಾ ಕಾಗಾಲ** [illegible] ಕುಮಟೆಯಲ್ಲಿ **ಗೋಪಾಲ ಅನಂತ ಶೆಟ್ಟಿ ಕಾಗಾಲ** [illegible]

[illegible]

ವಿಳಾಸ — [illegible]

[illegible]

ಮಹಾ[illegible]

[illegible]ಗಳ [illegible]

[illegible]

[illegible] ಅಸಹಕಾರಿಯ [illegible] ಹೊರತು [illegible]

ಆರ್ಥಿಕ ಸ್ವಾತಂತ್ರ್ಯದ ಕಮೀಶನ.

(ಲೇ: ಗು. ಕ. [illegible]
ಬಿ. ಎ. ಎಲ್ ಎಲ್ ಬಿ. ಹುಬ್ಬಳ್ಳಿ)

ಅಂಕ ( )

[illegible] ಆರ್ಥಿಕ ಸ್ವಾತಂತ್ರ್ಯವನ್ನು [illegible] ಮುಂದಾಳುಗಳು [illegible] ವರ್ಷಗಳಿಂದ ನಮಗೆ ಆರ್ಥಿಕ ಸ್ವಾ[illegible] ಕೊಡಿಸುವ [illegible] ಯಾವತ್ತೂ [illegible] ಪಾರತಂತ್ರ್ಯದಿಂದಾದ [illegible] ತಂದುಕೊಟ್ಟ [illegible] ಉಪಾಯಗಳ[illegible] ತರದ ಸ್ವಾತಂತ್ರ್ಯ[illegible] ನಮಗೆ ದೊರೆಯಲಾರದು.

ಇಷ್ಟು ವರ್ಷಗಳವರೆಗೆ ಸರಕಾರದವರು [illegible] ಪರ್ಯಾಲೋಚಿಸಿದರೆ ನಮಗೆ [illegible] ಕಾಣಬರುತ್ತದೆ? ಹಿಂದಿನ ದಿವಸಗಳವರೆಗೆ [illegible] ಚಳವಳಿಯನ್ನು [illegible] ಸರಕಾರದವರು ಅದರ ಬಗ್ಗೆ ವಿಚಾರಮಾಡಿ [illegible] ಕಮೀಶನದ [illegible] ಕಮೀಶನದ ಸಭಾಸ[illegible] ಕೆಲವು ಹಿಂದೀ[illegible] ನೇಮಿಸುವ ಉಪಕ್ರಮವು ಪ್ರಾರಂಭವಾಗಿದೆ [illegible] ಫಲನಿಷ್ಪತ್ತಿಯು[illegible] ನಮಗೆ ಹಕ್ಕುಗಳು ದೊರೆಯುತ್ತವೆ[illegible] ಬರುತ್ತಿತ್ತು ಕಮೀಶನದ [illegible] ಜನರ ಚಳವಳಿಯ [illegible] ಈ ವಿಷಯಕ್ಕೆ ಜನರಲ್ಲಿ ಉಂಟಾದ [illegible] ಉತ್ಸಾಹವೂ ಇಲ್ಲದಂತಾಗುತ್ತಿದ್ದವು [illegible] ಕಮಿಶನದವರು ಪುರಾವೆ ಕೂಡಿಸುವ[illegible] ತಿಂಗಳ, ನಂತರ ವರದಿಯನ್ನು ಪ್ರಕಟ[illegible] ನಮ್ಮ ಪ್ರಜಾಹಿತಪಕ್ಷ ಸರಕಾರದವರು [illegible] ಕಳೆಯುತ್ತಿದ್ದರು ಹೀಗೆ [illegible] ಆ ವಿಷಯವು [illegible] ಇಲ್ಲದಂತಾಗುತ್ತಿತ್ತು. ಹೀಗಾಗಿ [illegible] ಚರ್ಚೆಯೇ ನಿಂತುಹೋಗುತ್ತಿತ್ತು!! [illegible] ಹಿಂದೀ[illegible] ಅನುಕೂಲವಾದ [illegible] ಪ್ರೀತಿಗೆ ಪೋಷಕವಾದ ಸೂಚನೆಗಳನ್ನು [illegible] ಹಿಂದೀ ಜನರ ಹಿತ [illegible] ಇಂಗ್ಲೆಂಡ ಮತ್ತು ಹಿಂದೀ[illegible] ಕಮೀಶ[illegible]

ಜಗಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸ. ೧೮೬೬ ನೇ ಇಸ್ವಿಯ
೨೫ ನೇ ಆಕ್ಟಿನಂತೆ ರಜಿಸ್ಟರ ಮಾಡಲ್ಪಟ್ಟ

ಅರ್ಕಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಯಾವತ್ತು ರೋಗಗಳ ನಿವಾರಣೆಯಾಗಿ ತಾ ೧೦-೮-೧೯೦೮ನೇ ಇಸ್ವಿಯಿಂದ ತಾ॥ ೧-೯-೧೯೧೮ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟ್ಲಿಗಳು ಖರ್ಚಾದವು. ಮತ್ತು ಸನ್ ೧೯೧೮ನೇ ಇಸ್ವಿಯ ಆಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟ್ಲಿಗಳು ಖರ್ಚಾದವು ಅಂತು ಈವತ್ತಿನವರೆಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟ್ಲಿಗಳು ಖರ್ಚಾದವು ಅಂದ ಮೇಲೆ ಈ ಔಷಧವು ಎಷ್ಟು ಮೌಲ್ಯವಾನ ಅದೆ ಇದು ಯಾವತ್ತರು ತಾವೇ ಅನುಭವಕ್ಕೆ ತಂದು ನೋಡಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಉಪಯೋಗ ಮಾಡುತ್ತಿರಬೇಕು ಈ ಆರೋಗ್ಯಬಿಂದು ಇಡೀ ಕರ್ನಾಟಕ ದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಅನುಭವ ಸರ್ಟಿಫಿಕೇಟುಗಳು ಸಹ ದೊರೆದಿರುತ್ತವೆ ಅವು ಬರೆಯಲಿಕ್ಕೆ ಜಾಗವು ಸಾಲದು ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬುತ್ತೇನೆ ರೋಗದ ಪರೀಕ್ಷೆಯು ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವದಿಲ್ಲ ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗ ಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು

ರೋಗದ ನಾಮಗಳು.

ಕ್ಷಯರೋಗ, ಹಡಪರೋಗ, ಪಾಂಡುರೋಗ, ಗುಲ್ಮರೋಗ ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯಂಜಾಜ್ವರ, ಅನೇಯಿಸ್ತ್ರಕಾರದಜ್ವರ, ಗಂಡಮಾಲೆ, ಶಿವಶೂಲ, ಮೂಗಿನೊಳಗಿನ ಪೀನಸಿ, ಮೊದಲಾದ ರೋಗವು, ಕಣ್ಣುನೋವು ಹೊಟ್ಟೆನೋವು, ಮತ್ತು ಕಲ್ಲುನೋವು, ಕೆಮ್ಮು, ದಮ್ಮು, ಹಸಿವೆ ಇಲ್ಲದ್ದು ಅರುಚಿ, ಅಜೀರ್ಣ, ಹೊಟ್ಟೆಶೂಲಿ, ಮೈಕೈಶೂಲಿ, ಅರ್ಧಶಿರಶೂಲಿ, ಸಂಧಿಶೂಲಿ, ವಾತಶೂಲಿ, ಚೇಳುಕಚ್ಚು, ಬದ್ಧಮ್ಮನಬೇನೆ, ತುರುಕುಕಜ್ಜಿ, ಗಜಕರ್ಣ, ಇಸಬು ಕಡ್ಡು, ಘಾಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟುಶೂಲಿ, ಹಡದನಂತರ, ಸಣ್ಣ ಕೂಸುಗಳ ಬಾಲಗ್ರಹ, ಜರದಿ, ಮುಟ್ಟುದೋಷ, ಹೊಟ್ಟೆ ದೊಡ್ಡದಾಗೋದು, ಮೂರಬೀಳೋದು, ಸಣ್ಣ ಕೂಸುಗಳಿಗೆ ಸೈದ್ರರೋಗ ಈ ಶಿವಾಯ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಇಂದು ಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಖರೀದಿ ಕೊಡುವ ಬೆಲೆ ಇಟ್ಟಿರುತ್ತದೆ. ಒಂದು ಕಾಲುಶೇರಿನ ಬಾಟ್ಲಿ ಒಂದಕ್ಕೆ ಎರಡು ರೂಪಾಯಿ. ಪಾವು ಶೇರಿನ ಅರ್ಧಕ್ಕೆ ಐದು ಆಣೆ ಕೂಡದ ಬಾಟ್ಲಿ ಒಂದಕ್ಕೆ ಎಂಟು ಆಣೆ ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟ್ಲಿಗಳು ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತೇವೆ ಅದಕ್ಕೆ ಒಂಬತ್ತು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದು ಬಾಟಲಿಯವರೆಗೆ ಕಮಿಶನ್ ಇಲ್ಲ, ಅದಕ್ಕೆ, ಆರು ಆಣೆ ಖರ್ಚು ಬರುವದು ಒಂದು ಕಾಲು ಶೇರಿನ ಬಾಟ್ಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಶನ್ ಕೊಡುತ್ತೇವೆ ಅದಕ್ಕೆ ಖರ್ಚು ಎಂಟು ಆಣೆ ಬರುವದು ನಮ್ಮ ಔಷಧವು ಮಾಟ ಹೊರಟರೆ ಪರತ ತಕ್ಕೊಳ್ಳುತ್ತೇವೆ— ಮತ್ತು ಹಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ ತಿಕೀಟು ಲಗತ ಇಲ್ಲದ ಹೊರತು ದೊರೆಯಲಿಕ್ಕಿಲ್ಲ ಅನುಪಾನದ ಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಕಂದಿ ಪ್ರಕಾರ ಬಾಟ್ಲಿಯು ಸೋಖ ಸಿಗುವದು ನಿಮ್ಮ ವಿಳಾಸ ಇಂಗ್ಲಿಷ ಅಥವಾ ಕನ್ನಡದಲ್ಲಿ ನಾವು ಮತ್ತು ಪೋಸ್ಟ ಮಗ್ಗೆರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಎಚ್. ಎಂ. ಮುಲ್ಲಾ, ಸಂಪಾದಕ ಅರ್ಕಶಫಾ,
ಹೆಡ್ ಆಫೀಸು ಶಾಹಾಪೂರ, ಬೆಳಗಾಂವ

ಬಗ್ಗೋಣ ರಾಮಾ ತಿಮ್ಮಣ್ಣ ಪಂಡಿತರಿಂದ
ಗಣಿಸಿ ಪರಿಶೋಧಿಸಲ್ಪಟ್ಟ

ದುಂದುಭಿ ಸಂವತ್ಸರದ

ಪಂಚಾಂಗಗಳು ಮಾರಾಟಕ್ಕೆ ಸಿದ್ಧವಾಗಿರುವವು.

೧೦೦ ಕ್ಕೆ ೧೩-೮-೦ ೫೦ಕ್ಕೆ ೭ ೮-೦
೨೫ ಕ್ಕೆ ೩-೮-೦. ೧ಕ್ಕೆ ೦-೩-೦,

ವಿ ಪಿ ದ್ವಾರಾ ಬೇಕಾದವರು ಹಾಸಲಿನ ಅರ್ಧ ಬಾಕಿ ಮನಿಯಾರ್ಡರಿನಿಂದ ಕಳುಹಿಸಬೇಕು

ಕೃಷ್ಣರಾವ ಕೇಶವ ಶೇಣ್ವಿ,
ಮಾಲಕ, ಸ್ಟಾರ ಆಫ್ ಕೆನರಾ ಪ್ರೆಸ್,
ಕುಮಟಾ

ಅತ್ಯುತ್ತಮ ಮಾಸಿಕ

"ಸಾಧನ"ವೆಂಬ ಮಾಸಪತ್ರಿಕೆ.

ಈ ಮಾಸಪತ್ರಿಕೆಯು ೧೯೦ ದ [illegible] ವರ್ಷಾರಂಭದಿಂದ ಸಿಕ್ಕಿದ ಕೂಡಲೆ ಹೊರಡುವ ಪ್ರವಿವಿಧ ವಿಷಯಕ ಲೇಖಗಳು, ಸರಸ ರಾಷ್ಟ್ರೀಯ ಕಾವ್ಯ ಚಿತ್ರಗಳೂ ಕೂಡಿರುತ್ತವೆ ಕಾರವಾರದ ಕಡೆಯ ಈ ಪ್ರಥಮ ಪ್ರಯತ್ನಕ್ಕೆ ದೇಶಭಾಷೆಗಳ ಅಭಿಮಾನಿಗಳು ಪ್ರೋತ್ಸಾಹನ ಕೊಡುವರೆಂದು ನಂಬಿರುತ್ತೇವೆ ವಾರ್ಷಿಕ ವರ್ಗಣಿ ಅಂಚೆ ವೆಚ್ಚಸಹಿತ ೨ ರೂ ಮಾದರಿ, ಸಂಚಿಕೆ ೨ ಆಣೆ

ಪತ್ತೆ — ಗಣಪತಿ ಶಂಕರಭಟ್ಟ ನಗರ್ಸೇಕರ
ಪ್ರೊಪ್ರೈಟರ ಕಾರವಾರ.

ಸ್ಟಾರ ಎಗ್ಯೂ ಮಿಕ್ಶ್ಚರ

ಇದು ಚಳಿಜ್ವರ, ಇನ್‌ಫ್ಲುಎಂಜಾ ಮತ್ತು ಎಲ್ಲ ಪ್ರಕಾರದ ಜ್ವರಗಳಮೇಲೆ ಅತ್ಯಂತ ಗುಣಕರ ಔಷಧವಿದ್ದು ಎಷ್ಟೋ ವರ್ಷಗಳ ಅನುಭವದಿಂದ ಮತ್ತು ಶಾಸ್ತ್ರೋಕ್ತ ಪದ್ಧತಿಯಿಂದ ತಯಾರಿಸಿದ್ದಿರುತ್ತದೆ ಇದರಲ್ಲಿ ಯಾತರದ ಮಾದಕ ಅಥವಾ ಶರೀರಕ್ಕೆ ಅಪಾಯಕಾರಕ ದ್ರವ್ಯಗಳಿಲ್ಲವೆಂದು ದೊಡ್ಡ ದೊಡ್ಡ ಡಾಕ್ಟರ, ಹಕೀಮ ಮತ್ತು ವೈದ್ಯರು ಕೂಡಾ ಅಭಿಪ್ರಾಯ ಪಟ್ಟಿರುವರು

ಅಕ್ರಯದಾತರಿಗೆ ಒಂದೇ ಸಲದ ಅನುಭವದಿಂದ ಖಾತ್ರಿಯಾದೀತು

ಬಾಟ್ಲಿ ಒಂದರ ಕಿಮ್ಮತ್ತು ೩ರೇ ೧೨ ಆಣೆ ಟಪಾಲ ಖರ್ಚ ಬೇರೆ. ಪಾಕೀಟು ಬೇಕು

ದಿ ಸ್ಟಾರ ಫಾರ್ಮಸಿ,
ಮುಂಬಯಿ ನಂ ೧೨.

The Star Pharmacy,
Bombay No 12.

ಬೇಸಿಗೆಯ ಬಗ್ಗಾಗಿಯೋ
ತಯಾರ ಮಾಡಿದ ಶುದ್ಧ ಬಿಳಿ ಸಕ್ಕರೆಯ

ತಾಜಾ ಶರಬತ್ತು.

Deshi-Sharabat

ಕ್ರಯ ೦-೧೨-೦ ಟಪಾಲ ಹಾಸಲ ಪ್ರತ್ಯೇಕ

ದೊರೆಯುವ ಸ್ಥಳ:— ಕುಮಟಾ:—
ದಿ ನ್ಯೂ ಸಪ್ಲಾಯ ಏಜನ್ಸಿ ಕುಮಟಾ

ಹೊನ್ನಾವರ:—
ದಿ ನ್ಯೂ. ಎಂಪೋರಿಯಮ್,
ಜನರಲ ಮರ್ಚಂಟ್ಸ್, ಹೊನ್ನಾವರ

[illegible]

ಛಪ್ಪನ್ನಯಾ ಸರ್ಟಿಫಿಕೇಟು ಪಡೆದಿರುವ

ಶಕ್ತಿವರ್ಧಕ ಹಲವಾ.

ಇದರ ಸೇವನೆಯಿಂದ ರಕ್ತಶುದ್ಧಿ ಧಾತುಪುಷ್ಟಿಯಾಗಿ ಶರೀರವು ಕಾಂತಿಗೊಳಿಸುವದು ಇದಲ್ಲದೆ ಕೆಮ್ಮು, ದಮ್ಮು, ಕಫ, ವಾತ, ಪಿತ್ತ, ನಿದ್ರೆ, ಇಲ್ಲಾಗೋದು, ಮಲ ವಿಸರ್ಜನೆ ಸರಿಯಾಗಿ ಆಗದಿರೋದು, ಅಜೀರ್ಣ ಜ್ವರ, ಸ್ತ್ರೀಯರ ಗರ್ಭದೋಷ, ಹುಡುಗರ ಹೊಟ್ಟೆಯ ಎಲ್ಲ ಬೇನೆಗಳು ಬೇಗನೆ ಗುಣಹೊಂದುವವು ಉಪಯೋಗಿಸಿ ನೋಡಿರಿ ೨೦ ತೊಲೆ ಡಬ್ಬಿ ೧ ಕ್ಕೆ ರೂಪಾಯಿ ೧॥.

ಕೆರೇಕರ ಬ್ರದರ್ಸ, ಶಕ್ತಿವರ್ಧಕ ಹಲವಾ
ಡಿಪೋ, ಕುಮಟಾ. (ಕಾನಡಾ)

अलेंबिक.

व्हेजीटेबल टॉनिक सिरप— निर्दोष व शुद्ध वनस्पतींच्या सत्वांकांपासून बनविलेलें शक्तिवर्धक औषधी सरबत ह्याच्या सेवनानें बद्धकोष्ठ अपचनादि विकार नष्ट होऊन साफ कोठशुद्धि होते. भूक लागते व अन्नाचें पचन होऊन शुद्ध रक्त व वीर्यवृद्धि होते. किं. रु १ ८-०

फेब्रोलीन— मलेरिया, हींव, सर्दी किंवा दूषित हवेमुळें येणारे साथे, थिथारी, अगर इतर ताप, इन्फ्लुएन्झा इ०वर खास गुणकारी. हें केवळ वनस्पतींचे -क्विनाईनचे दुष्परिणाम रहित- औषध घेतल्यानें अशक्तपणा न येतां घाम येऊन ताप उतरतो व रोग्यास त्वरित आराम वाटतो. ३ औं० बा० किं. रु १-०-०

उंची कोलन वॉटर व कस्तुरिमिश्र लव्हेंडर— परदेशी मालाला टक्कर देणारीं हीं सुगंधी द्रव्यें आमच्या स्वतःच्या कारखान्यात तयार होणाऱ्या स्पिरिटमध्यें बनविलीं जात असल्यामुळें गुणांत श्रेष्ठ व किंमतींत स्वस्त आहेत. वि. मा. पत्रद्वारें.

अलेंबिक केमिकल वर्क्स कं० लि०
नं. ५० प्रिन्सेस स्ट्रीट मुंबई.

ಹಾಗೆಯೇ ನೇಮಿಸಿದ ಪ್ರಶ್ನೆಗಳ [illegible] ಕರನ್ನು ಸ್ಥಾಪಿಸಿ ನಿರ್ಧರಿಸಿದಂತ ಕೆಲಸವನ್ನಾದರೂ [illegible] ರೀ ವಿಭಾಗವನ್ನು, ಮುಖ್ಯ [illegible]ಗಳಲ್ಲಿ ಅನೇಕ ಭಿನ್ನಾಭಿಪ್ರಾಯಪತ್ರಿಕೆಯನ್ನು ಬರೆಯುವ ಎಂದೂ ಬಿಟ್ಟಿಲ್ಲ. ಪಬ್ಲಿಕ್ ಸರ್ವಿಸ್ ಕಮೀಶನದಲ್ಲಿದ್ದ ನ್ಯಾಯಮೂರ್ತಿ ಸರ ಅಬ್ದುಲ ರಹಿಮರು, ಇಂಡಸ್ಟ್ರಿಯಲ್ (ಔದ್ಯೋಗಿಕ) ಕಮೀಶನದಲ್ಲಿದ್ದ [illegible] ಮಾಲವೀಯರು, ಕರನ್ಸಿ (ಚಲನ) ಕಮೀಶನದಲ್ಲಿದ್ದ ಮಿಸ್ಟರ [illegible] ತಮ್ಮ ಭಿನ್ನ ಮತಪತ್ರಿಕೆಗಳನ್ನು ಬರೆದಿದ್ದಾರೆ. ಕಮೀಶನದಲ್ಲಿ ಬಹು ಹಿಂದೀ ಸಭಾಸದರಿದ್ದನ್ನು ಕಂಡು [illegible] ಕಾಣುತ್ತಿರುವ ನಮ್ಮ [illegible] ಈ ಭಿನ್ನ ಮತಪತ್ರಿಕೆಗಳ ಕಟು ಅನುಭವದಿಂದ ಒಂದು ಹೆಜ್ಜೆ ಮುಂದೆ ಹೋಗಿ ಇಂಥ [illegible]ಗಳ ಅಧ್ಯಕ್ಷರ ಹಿಂದೀ[illegible] ರಬೇಕೆಂದು, ಕೆಲವು [illegible] ಕಮೀಶನಗಳಲ್ಲಿ ಬಹು [illegible] ಮತವುಳ್ಳವನ್ನು ಹಿಂದೀ ಜನರದಿರಬೇಕೆಂದು [illegible] ಪಟ್ಟಿರುತ್ತಾರೆ. ಪರರಾಷ್ಟ್ರದ ಜನರನ್ನು [illegible] ಟೊಂಕಕಟ್ಟಿದ ಆಳರಸರಿಗೆ ಇದೆಲ್ಲ [illegible] ಯವನ್ನು ಸೂಚಿಸಿದಂತಾಯಿತು. [illegible] ಳ ಅಧ್ಯಕ್ಷಸ್ಥಾನವನ್ನು ಹಿಂದೀ ಜನರಿಗೆ [illegible] ರ [illegible] ರಹಿಮತುಲ್ಲಾನವರನ್ನು [illegible] ಕಮೀಶನದ ಅಧ್ಯಕ್ಷರನ್ನಾಗಿ, ಮತ್ತು ಸರ [illegible] ಯ್ಯನವರನ್ನು ಧಂದೆ ಶಿಕ್ಷಣದ ಕಮೀಶನದ ಅಧ್ಯಕ್ಷರನ್ನಾಗಿ ನೇಮಿಸಿತು. ಆದರೆ ಇಂಥ ಕಮೀಶನಗಳ ಸಭಾಸದರನ್ನು ನಿಜವಾದ ಕಾರ್ಯಕ್ಷೇತ್ರದಲ್ಲಿ [illegible] ಸಭಾಸದರು [illegible] ಹಿಂದೀ ಜನರ ನಿಜವಾದ ಅಭಿಪ್ರಾಯಗಳು ತಿಳಿಯುವವಲ್ಲ. ಇಂಥ ಕಮೀಶನಗಳ ವಿಚಾರಕ್ಕೆ ವಿಷಯವನ್ನು ಒಪ್ಪಿಸುವ ಕಾಲಕ್ಕೆ ಸಹ ಸರಕಾರದವರು ತಮ್ಮ ಸಂಕುಚಿತ ದೃಷ್ಟಿಯನ್ನು ಬಿಟ್ಟಿರುವದಿಲ್ಲ. ಉದಾಹರಣಾರ್ಥ, ೧೯೨೬ರಲ್ಲಿ ನೇಮಿಸಿದ ಕರನ್ಸಿ (ಚಲನ) ಕಮೀಶನದ ಅಧಿಕಾರ ವ್ಯಾಪ್ತಿಯನ್ನು Terms of reference ನೋಡಿರಿ. ಹಿಂದೀ ಜನರ [illegible] ಕೆಗೆದುಕೊಳ್ಳಬೇಕೆಂದು ಅಭಿಪ್ರಾಯಪಟ್ಟ ಸುವರ್ಣ [illegible] ಪರಿವರ್ತನ ಪದ್ಧತಿ Gold exchange standard ವನ್ನು ಕಾಯಂ ಆಗುವ ಉಪಾಯವನ್ನು ಸೂಚಿಸಬೇಕೆಂದು ಈ ಕಮೀಶನದವರಿಗೆ ತಿಳಿಸಿದ್ದರಲ್ಲಿ ಹೇಳಿತ್ತು. Gold exchange standard ಸುವರ್ಣವಿನಿಮಯ ಪದ್ಧತಿಯ ದೋಷಗಳನ್ನು ತೆಗೆದುಹಾಕಬೇಕು. Gold standard ಸುವರ್ಣ ಪರಿಮಾಣ ಪದ್ಧತಿಯನ್ನು ಪ್ರಚಾರದಲ್ಲಿ ತರಬೇಕೆಂದು ಹಿಂದೀ ವ್ಯಾಪಾರಸ್ಥರು [illegible] ಹೇಳುತ್ತ ಬಂದರೂ, ಈ [illegible] ಕಮೀಶನದ [illegible] ವ್ಯಾಪ್ತಿಯನ್ನು ಸಂಕುಚಿತಮಾಡಿದುದು [illegible] ಯುವಲ್ಲವೆ? ಇಂಥ ಕಮೀಶನಗಳಲ್ಲಿ ಕೆಲವು ಕಮೀಶನಗಳು ಇಂಗ್ಲಂಡದಲ್ಲಿಯೇ [illegible] ಹಿಂದೂಸ್ಥಾನದ ಸ್ಥಿತಿಯ ಬಗ್ಗೆ ವಿಚಾರಮಾಡುವದು ಎಷ್ಟು ಆಶ್ಚರ್ಯದ ಮಾತು! ಕಮೀಶನಗಳ ವರದಿಗಳನ್ನು ಪ್ರಕಟಿಸುವದರಲ್ಲಿ ಸಹ ಸಂಕುಚಿತವೃತ್ತಿಯೇ ಕಂಡುಬರುತ್ತದೆ. ಉದಾಹರಣಾರ್ಥ, ಮುಂಬಯಿ ಸರಕಾರದವರು [illegible] ಕ್ಷೇತ್ರದ ಕಮೀಶನದ ವರದಿಯನ್ನು ಮಾತ್ರ [illegible] ಇಂಗ್ಲಿಷ ಭಾಷೆಯಲ್ಲಿ ಪ್ರಕಟಿಸಿದರು. ಕಮೀಶನ [illegible] ಸಿದವರು ಮುಂಬಯಿ ಸರಕಾರದವರು; ಕಮೀಶನದ ಖರ್ಚು ಹಿಂದೀ ಪ್ರಜೆಗಳದು; ಕಮೀಶನದ ಕಾರ್ಯಕ್ಷೇತ್ರವೂ ಹಿಂದುಸ್ಥಾನವೇ; ಕಮೀಶನದ ವಿಚಾರಕ್ಕಾಗಿ ಒಪ್ಪಿಸಿದ ವಿಷಯವೂ [illegible] ಹಿಂದೀ ಪ್ರಜೆಗಳದು, ಹೀಗಿದ್ದು ಅದರ ವರದಿಯನ್ನು ಹಿಂದೀ [illegible] ಜನರಿಗೆ ತಿಳಿಸುವ ನಿಮಿತ್ತ [illegible] ವೃತ್ತಪತ್ರದಲ್ಲಿ ಪ್ರಕಟಿಸದೆ ಇಂಗ್ಲಿಷದಲ್ಲಿ ಪ್ರಕಟಿಸಿದರೆ, ಆ ವರದಿಯು ನಮಗೆ ತಿಳಿಯುವದೆಂತು! ಇದಕ್ಕೆ [illegible] ಬ್ಯೂರೋಕ್ರಸಿಯ ಮನೋವೃತ್ತಿಯೇ [illegible] ಕಾರಣವಲ್ಲವೆ? [illegible] ಹಿಂದೀ ಜನರ ಅಭಿಪ್ರಾಯ [illegible] ಅವರನ್ನು ಆ ಪಾಲಿನಲ್ಲಿ ತರುವವರಲ್ಲಿ ಹಿರಿಯರಿಲ್ಲ. ಬಹಳ ಕೇಳುವದರ ಬದಲು ಮಾಡಿದರೆ [illegible] ಸಂಶಯ ಆ ಪ್ರಶ್ನೆಗಳಲ್ಲಿ ಬಂದಿರುವ ಮಾತ್ರ [illegible]. ಆ ಪ್ರಶ್ನೆ ಸ್ವಾತಂತ್ರ್ಯ ಮತ್ತು ಅದನ್ನು ವಿಚಾರಿಸಲು ನೇಮಿಸಿದ ಕಮೀಶನ ಇವುಗಳನ್ನು ಕುರಿತು ವಿಚಾರಿಸುವದೇ ಈ ಲೇಖಮಾಲೆಯ ಉದ್ದೇಶವಿದ್ದುದರಿಂದ ಕಮೀಶನಗಳ ಬಗ್ಗೆ ಇಷ್ಟಕ್ಕೆ ಬರೆಯಬೇಕಾಗುವದಿಲ್ಲ

[illegible] ಧಾರವಾಡ.

ಮಿ|| ಕೆಡವಾಣಿ [illegible] ಆಯ್. ಸಿ. ಎಸ್.

ಇವರ

ರಾಜೀನಾಮೆ [illegible].

[illegible] ಮಹಾತ್ಮಾ [illegible] ರಾಜೀನಾಮೆ [illegible] ಪ್ರಸಿದ್ಧ [illegible] ದೇಶಭಕ್ತರವರು [illegible] ಮಹಾತ್ಮಾ [illegible] ಗಾಂಧಿಯವರ [illegible] ಕಾರಣ [illegible] ಕೊಟ್ಟ [illegible].

ನನ್ನ ನೌಕರಿಯಲ್ಲಿರುವುದಕ್ಕಿಂತ ಹಿಂದೀಯ ಜನ್ಮವೇ ಸರಿ.

[illegible] ನನ್ನ [illegible] ನೌಕರಿಯಲ್ಲಿದ್ದು [illegible] ಸ್ವಾತಂತ್ರ್ಯ [illegible] ನನ್ನ ಸರಕಾರಿಯು ರಾಜೀನಾಮೆಯನ್ನು ಕೊಟ್ಟಿದೆನು. ಮಹಾತ್ಮಾ ಗಾಂಧಿಯವರನ್ನು ಹಿಡಿದು ಹಿಂದೂ ಜನರಿಗೆ ತಮ್ಮ ಸ್ವತಃ ಸ್ವಾತಂತ್ರ್ಯಭೂಮಿ [illegible], ಅವರ ಹಕ್ಕನ್ನು [illegible] ನನ್ನ ನೋಡಿಯೂ ಸರಕಾರಿ ನೌಕರಿಯಲ್ಲಿರುವದೆಂದರೆ ನನ್ನ ಅಂತಃಕರಣಕ್ಕೆ ಒಪ್ಪುವುದಿಲ್ಲ. ನನ್ನ ಸರಕಾರಿಯು [illegible] ವರ್ಷ ಆಗಿದ್ದು ಈಗ ನಾನು ಪೆನ್ಶನ್ ಪಡೆವ ವಯಸ್ಸಿಗೆ [illegible] ಪೆನ್ಶನ್ ಸಿಗುತ್ತಿತ್ತು. ಆದರೆ ಈ ಪೆನ್ಶನ್ ತಕ್ಕೊಳ್ಳುವದೆಂದರೂ ಕೂಡ ನನ್ನ ಮಾತೃಭೂಮಿಯ ದ್ರೋಹ ಮಾಡಿದಂತಾಗುವದೆಂದು ಅನಿಸಿದ್ದರಿಂದ ನಾನು ಅದನ್ನು ತಕ್ಕೊಳ್ಳಲಿಲ್ಲ. ಮಹಾತ್ಮಾ ಗಾಂಧಿಯವರನ್ನು ಹಿಡಿದಿದ್ದರಿಂದ ಸುಧಾರಣೆಯು ಎಷ್ಟರಮಟ್ಟಿಗೆ ನಿರುಪಯೋಗಿ ಇರುವವೆಂದು ಸಿದ್ಧವಾಗುವದು.

* * *

ವರ್ತಮಾನಸಾರ.

ಪ್ರಸಿದ್ಧ ಜ್ಞಾನಪ್ರಕಾಶಕರು ಈ ವರೆಗೆ ಮಹಾತ್ಮಾ ಗಾಂಧಿಯವರ ಕಾರ್ಯಕ್ರಮದ ಮೇಲೆ ಟೀಕೆ ಮಾಡುತ್ತಿದ್ದರು. ಆದರೆ ಸರಕಾರದವರು ಮಹಾತ್ಮಾ ಗಾಂಧಿಯವರನ್ನು ಹಿಡಿದದ್ದಕ್ಕೆ ಈಗ ಜ್ಞಾನಪ್ರಕಾಶಕರು ಅನ್ನುವದೇನಂದರೆ, ಇವರನ್ನು ಸರಕಾರದವರು ದೊಡ್ಡ ತಪ್ಪು ಮಾಡಿದರು. ಆದರೆ ಸರಕಾರದವರು ಮಹಾತ್ಮರ ಬಗ್ಗೆ ಮಾಡುವಾಗ್ಗೆ ವಿಲಾಯತಿಯಲ್ಲಿದ್ದ ಜ್ಞಾನಪ್ರಕಾಶಕಾರರ ಗುರುಗಳಾದ ನಾ| ಶಾಸ್ತ್ರಿಗಳವರ ಅಭಿಪ್ರಾಯವನ್ನು ಕೇಳಿಯೇ ಮಾಡಿರುವರೆಂಬ ಸುದ್ದಿ ಜ್ಞಾನಪ್ರಕಾಶಕರಿಗೆ ಗೊತ್ತಾಗಿರಲಿಕ್ಕಿಲ್ಲ. ಇದ್ದಿದ್ದರೆ ಈ ಗುರು-ಶಿಷ್ಯರ ಮತದಲ್ಲಿ ಹೀಗೆ ಮತಭೇದ ಬೀಳುತ್ತಿದ್ದಿಲ್ಲ. ಅಥವಾ ಶಾಸ್ತ್ರಿಗಳು ವಿಲಾಯತಿಯಲ್ಲಿದ್ದ ಮೂಲಕ ಯಾವದೊಂದು ಭೀತಿಯಿಂದ ಮಾತ್ರ ತಮ್ಮ ಒಪ್ಪಿಗೆ ಕೊಟ್ಟಿರಲಿಕ್ಕಿಲ್ಲವೇ?

ಮುಸಲ್ಮಾನರನ್ನು ಹಿಂದೂ ಜನರಿಂದ ಬೇರೆಯವರೆಂಬ ಉದ್ದೇಶದಿಂದ ಮುಸಲ್ಮಾನರ ಕೆಲವು ಮುಂದಾಳುಗಳಿಗೆ ಮಹಾತ್ಮರ ಅಸಹಕಾರಿತನವು ಅಸಹಕಾರವು ಒಪ್ಪಿಗೆ ಇಲ್ಲವೆಂತಲೂ, ಈ ಮೂಲಕ ಒಂದು ಜನಪದಕಾರಣ ಸಭೆಯಿಂದ ಹಜರತ ಮೋಹಾನಿಯವರು ತಮ್ಮ ಅನುಯಾಯಿಗಳಿಂದ ಸಹಿತವಾಗಿ ಸಭೆ ಬಿಟ್ಟು ಹೋದರೆಂತಲೂ ಒಂದು ಸುಳ್ಳು ಸುದ್ದಿಯು ಹಬ್ಬಿಸಲಾಯಿತು. ಹಾಗು ಮುಂಬೈ ಕ್ರಾನಿಕಲ್ದಲ್ಲಿ ಈ ಅರ್ಥದ ಒಂದು ಪತ್ರವೂ ಪ್ರಸಿದ್ಧವಾಗಿತ್ತು. ಆದರೆ, ಈ ಸಂಗತಿಯು ಸುಳ್ಳೆಂತಲೂ ತಾವು ಸ್ವತಃ ಮಹಾತ್ಮರ ಅನತ್ಯಾಚಾರಿ ಸಾಂಪ್ರದಾಯದವರೆನಿಸಲಿಕ್ಕೆ ಒಪ್ಪಿರುವೆನೆಂತಲೂ ಮೌ. ಹಜರತ ಮೋಹಾನಿಯವರೇ ಈಗ ಮುಂಬೈಯಲ್ಲಿ ಹೇಳುತ್ತಿರುವರು. ಹೀಗಾಗಿ ಹಿಂದೂ ಮುಸಲ್ಮಾನರಿಗೆ ಜಗಳ ಹಚ್ಚುವವರ ಬೇಳೆ ಬೇಯಲಿಲ್ಲ.

ದೇ|| ಭ|| ಕೊಂಡಾ ವೆಂಕಟಪ್ಪಯ್ಯಾ ಇವರನ್ನು ಹಿಡಿದರು.

ಆಂಧ್ರದಲ್ಲಿಯ ಜಾಗ್ರತೆಗೆ ಕಾರಣೀಭೂತರಾದವರೂ, ಪ್ರಸಿದ್ಧ ದೇಶಭಕ್ತರೂ ಆದ ಕೊಂಡಾ ವೆಂಕಟಪ್ಪಯ್ಯಾ ಇವರನ್ನು ಹಿಂದಿನ [illegible] ದಿವಸ ಅವರು ಸ್ನಾನಮಾಡುತ್ತಿರುವಾಗ್ಗೆ ಹಿಡಿದರು.

ಈ ಮೊದಲು ಕರ ಕೊಡಬಾರದೆಂಬ ಚಳವಳಿಯು ಜೋರಿನಿಂದ ನಡೆದಿತ್ತು. ಆ ಕಾಲಕ್ಕೆ ಅಲ್ಲಿಯ ದೇಶಭಕ್ತರನ್ನು ಯಾವಾಗ್ಗೆ ಹಿಡಿಯುವರೆಂಬ ಭರವಸೆಯು ಉಳಿದಿದ್ದಿಲ್ಲ. ಆದರೆ, ಬಾರಡೋಲಿಯ ಕಾಯದೇಭಂಗವು ನಿಲ್ಲಲಿಕ್ಕೆ ಕಾರಣವಾದ ಚೌರಿಚೌರಿಯ [illegible] ನಿಂದ ಇಲ್ಲಿಯ ಕಾಯದೇಭಂಗವು ನಿಂತಿತು. ಆಂಧ್ರದಲ್ಲಿ ಒಳ್ಳೇ ಜೋರಿನಿಂದ ಕಾಯದೇಭಂಗವು ನಡೆಯುವದರಿಂದ ಅಲ್ಲಿರುವವರು ಮಹಾತ್ಮರ ಹಾಗು ವರಿಂಗ ಕಮೀಟಿಯ ಆಜ್ಞೆಗೆ ಮಾನಕೊಟ್ಟದ್ದರಿಂದ ಚಳವಳಿಯು ನಿಲ್ಲಲಿಕ್ಕೆ ಮಾರ್ಗವಾಯಿತು. ಆದರೂ ಈ ಕಾಯದೇಭಂಗ ನಿಲ್ಲಿಸಿದರ ಪರಿಣಾಮವು ಸರಕಾರದವರ ಮೇಲೆ ಏನೂ ಆದಂತೆ ಕಂಡು ಬರಲಿಲ್ಲ. ಮಾಲನಾಡ ಎಂಬಲ್ಲಿ ನಡೆದ ಗೋಳೀಬಾರದ [illegible] ನಿಮಿತ್ತವಾಗಿ ದೇ. ಭ. ಕೊಂಡಾ ವೆಂಕಟಪ್ಪಯ್ಯಾ ಇವರು ಸದ್ಯದಲ್ಲಿ ಹೋಗಿ ಬಂದರು. ಇವರ [illegible] ಕಾರಣದಿಂದ ಸರಕಾರದವರು ಹಿಡಿದಿರುವರು.

— [illegible] ಧಾರವಾಡ.

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ.

ಕಾಮಿನಿಯಾ ತೈಲ. (ರಿಜಿಸ್ಟರ್

ದೃಢವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶ ದುದನ್ನು ಯಾವ ಸ್ತ್ರೀಯು ಬಯಸಲೊಲ್ಲಳು ? ಅಂತಹ ಕೇಶದಾಯಕವು ಸ್ತ್ರೀ ಆಕೆ ಒದಗಿಸಿ ಕೊಡತಕ್ಕ ಉಪಕರಣವಾದದ್ದು.

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ.)

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿರುವ ಹಾಗೆಯೇ ಮಾನಸಿಕ ಪರಿಶ್ರಮವನ್ನು ವಹಿಸುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅಷ್ ಅಗತ್ಯದ ಸಹಕಾರಿಯಾಗಿರುತ್ತದೆ. ಈ ಆಯಿಲ್ ಹಚ್ಚಿಕೊಳ್ಳುತ್ತಲೇ ಮಸ್ತಕದ ನೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದರ ಬೊಡೆಯು ತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು. ಅದರ, ಅವು ದಾ ವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕ ಆಗಿರುತ್ತದೆ.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನೂ ಕೂದಲನ್ ಹಾಳುಮಾಡಿಕೊಳ್ಳುವದಕ್ಕಿಂತ ಒಂದೇ ಒಂದು ಬಾರಿ ಈ “ಕಾಮಿನಿಯಾ ಆಯಿಲ್” ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ಮೈಸೂ ಪ್ರದರ್ಶನದಲ್ಲಿ “ಸರ್ಟಿಫಿಕೇಟ್ ಆಫ್ ಮೆರಿಟ್” ಅಥವಾ ಯೋಗ್ಯತಾಪತ್ರವೂ, ಅ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಕ್ರಯ:— ಸೀಸೆಗೆ ರೂಪಾಯಿ 1-0-0, ಸೀಸೆ 3ಕ್ಕೆ ರೂಪಾಯಿ 2-10-0, ವಿ. ಖರ್ಚ 0-14-0

ಅತಿ ಮನೋಹರವಾದ ಸುಗಂಧಿಯು !

ಒಟ್ಟೋ-ದಿಲ್ ಬಹಾರ್ !! (ರಿಜಿಸ್ಟರ್ಡ.)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧಮಾಡುವ ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈ ಪಟ್ಟಿಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಚಿಮುಕಿ ಸಿದರೆ ನಿಮ್ಮ ಸುತ್ತಲು ಸ್ವರ್ಗೀಯವಾದೊಂದು ಪುಷ್ಪವಾಟಿಕೆಯು ಆವಿರ್ಭವಿಸಿದಂತಾಗುವದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋ-ದಿಲ್ ಬಹ ದಿನ ಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ.

ಸಣ್ಣ ಸೀಸೆ 1 ಕ್ಕೆ 0-8-0; 1 ಡ್ರಾಮಿನ (ಮಿಡಿಯಂ) ಸೀಸೆ 1 ಕ್ಕೆ 0-12-0; ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2-0-0. ಅಂಚೆಯ ವೆಚ್ಚ ಬೇರೆ 0-4-

ಒಟ್ಟೋ-ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0-12-0.

Address:- **The Anglo Indian Drug & Chemical Co**

16, Market, **BOMBAY. 2**

ಖರೇ ಮಾಲು ! ತಾಜಾ ಕಲ್ಪ !! ಸ್ವಚ್ಛ ನ್ಯಾಯ!!!

ಒಮ್ಮೆಗೆಲ್ಲಾದರೂ ಅನುಭವ ತೆಗೆದುಕೊಳ್ಳದೆ ಬಿಡಬೇಡಿರಿ

ತಾರುಣ್ಯ ಸಂಜೀವನಿ ಗುಳಿಗೆಗಳು.

ಶುಕ್ಲಧಾತುವನ್ನು ಬೆಳಿಸಿ, ಪುರುಷರಿಗೆ ಸ್ತ್ರೀ ವಿಷಯವಾಗಿಯೂ, ಸ್ತ್ರೀಯರಿಗೆ ಪುರುಷ ವಿಷಯವಾಗಿಯೂ ಹರ್ಷಯುಕ್ತ ಶಕ್ತಿಯನ್ನು ಉಂಟುಮಾಡಿ, ದಿನೇ ದಿನೇ ಶರೀರದ ಜತನವನ್ನೂ ರೋಗಗಳನ್ನೂ ದೂರಪಡಿಸಿ, ಆಯುರಾರೋಗ್ಯವನ್ನೂ, ರತಿಯಲ್ಲಿ ಹೆಗ್ಗಳವಾದ ಕುತೂಹಲವನ್ನೂ ತೋರಿಸುವ ಕ್ರೀಡಾ ಶಕ್ತಿಯ ಉತ್ಸಾಹವನ್ನೂ, ಸಂಭೋಗದಲ್ಲಿ ತೃಪ್ತಿಯನ್ನೂ, ಸೌಖ್ಯವನ್ನೂ ಕೊಟ್ಟು, ಮನಸ್ಸಿನ ವ್ಯಥೆಯನ್ನೂ ಯೌವನದ ಕಳೆಯನ್ನೂ ತೋರಿಸಿ ಮುದಿತನವನ್ನು ನೀಗಿ ಬಲವನ್ನು ಉಂಟುಮಾಡುವದು. ಮೃತ್ಯುವನ್ನು ನಿರಾಕರಿಸಿ, ಒಳಗಿನ ರೋಗಗಳನ್ನು ನಾಶಮಾಡುವದು. ಜೀರ್ಣಜ್ವರ, ಮಂದಾಗ್ನಿ, ಶುಕ್ಲಸ್ರಾವ, ದಮಕಂಪ ವಗೈರೆ ಇವುಗಳನ್ನು ನಾಶಮಾಡುವದು. ಇದು ಆರೋಗ್ಯಕ್ಕೆ ಅತ್ಯುತ್ತಮವಾದ ಔಷಧವಾಗಿಯೂ, ಬಾಲ್ಯಕಾಲಗಳಿಂದಲೂ, ಅತ್ಯಾಚಾರಗಳಿಂದಲೂ, ಸ್ತ್ರೀಯರಿಂದಲೂ, ದೇಹಪ್ರಕೃತಿಯಿಂದಲೂ, ಚಿಕ್ಕವಯಸ್ಸಿನಲ್ಲಿ ನಡೆಸುವ ಬಲಾತ್ಕಾರದ ಹಸ್ತಮೈಥುನದಿಂದಲೂ, ಅತಿವಿಷಯೋಪಭೋಗದಿಂದಲೂ, ಇಂದ್ರಿಯ ಶಿಥಿಲವೂ, ತೆಳುವೂ, ನಿಸ್ತೇಜವೂ ಆಗಿ ಯತ್ನವಿಲ್ಲದೆ ಸ್ಖಲನವಾಗುವದು. ಒಂದೊಂದು ಸಾರಿ ಮೂತ್ರದಲ್ಲಿಯೂ, ಸ್ವಪ್ನದಲ್ಲಿಯೂ ಸಹ ಹೋಗುವದಲ್ಲದೆ, ನಪುಂಸಕತ್ವ, ಶರೀರ ಕ್ಷೀಣತೆ, ಅಶಕ್ತಿ, ಅರುಚಿ, ದೃಷ್ಟಿಮಾಂದ್ಯ, ಬೆನ್ನೆಲುಬಿನಲ್ಲಿಯೂ, ತಲೆಯಲ್ಲಿಯೂ ನೋವು, ಮೈ ಬಿಸುವು, ನಿದ್ರೆಯಲ್ಲಿ ಭೀಕರವಾದ ಸ್ವಪ್ನ, ಚಿಂತೆ, ಮರುವು ಮುತ್ತು ಶರೀರದ ಹಾಗೂ ಮನಸ್ಸಿನ ಜೀವನ ಕುಂದಿ ಹೋಗುವದು, ಇವೆಲ್ಲವುಗಳ ಮೇಲೆ ರಾಮಬಾಣದಂತಿರುವದು. ೩೦ ಗುಳಿಗೆಗಳುಳ್ಳ ಸೀಸೆ ೧ಕ್ಕೆ ರೂ. ೧||. ನಂ ೧. ನಂ ೨. ಹೀಗೆ ಎರಡು ಸೀಸೆಗಳನ್ನು ತೆಗೆದುಕೊಳ್ಳಬೇಕಾಗುತ್ತವೆ. ಅಂತು ೬೦ ಗುಳಿಗೆಗಳುಳ್ಳ ಸೀಸೆಗಳಿಗೆ ರೂ. ೩. ಪೋಸ್ಟೇಜ ಬೇರೆ.

ಎಮ್. ಜಿ. ಭಾಗ್ವತ್, ಆಯುರ್ವೇದಿಕ್ ಕೆಮಿಸ್ಟ,

ಕಕೀ. (ಕೆನರಾ.)

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯ

ಸಾಮಾನು.

೧. ರಾಗದ ಕೈಪೆಟ್ಟಿಗೆ ಕಿಂ. ೩೦, ೪೦, ೫೫, ೬೦,
೨. „ ಕಾಲುಪೆಟ್ಟಿಗೆ ಕಿಂ. ೩೫, ೭೫, ೧೪೦, ೧
೩. ತಬಲೆ ಜೋಡು ಕಿಂ. ೧೨, ೧೫, ೧೮, ೨೦.
೪. ಹಾರ್ಮೋನಿಯಮ ಗೈಡ ಕಿಂ. ೧|, ತಬಲೆ ಗಾ ಡ ಕಿಂ. ೧೨ ಆ.

ವಿಶೇಷ ವರ್ಣನೆಗಾಗಿ ನಮ್ಮ ಕ್ಯಾಟಲಾಗ ಫ್ರೀ ಕೊಡುವೆವು.

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇ ಗ್ರಜಿಯಿಂದ ಮಾಡಬೇಕು.

ಪತ್ತೆ:- **ಗೋಪಾಳ ಸಖಾರಾಮ**
ಕಂಪನಿ, ನಂ ೨೬೨,
ಕಾಳಬಾದೇವಿ ರೋಡ, ಮುಂಬಯಿ

ಕಾನಡಾವೃತ್ತ.

ಗುರುವಾರ, ತಾರೀಖು ೨೩ ಮಾಹೆ ಮಾರ್ಚ ೧೯೨೨

ಮಹಾತ್ಮರಿಗೆ ಏನಾಯಿತು?

೬ ವರ್ಷದ ಸಾದಾ ಕೈದು.

ಮಹಾತ್ಮಾ ಗಾಂಧಿಗಳ ಮೇಲಿನ ರಾಜದ್ರೋಹದ ಆರೋಪದ ರಾಜಕೀಯ ಖಟ್ಲೆಯು ಅಹಮದಾಬಾದ ಸೆಶನ್ಸ ಜಡ್ಜರ ಮುಂದೆ ನಡೆದು, ಮಹಾತ್ಮರಿಗೆ ಆರು ವರ್ಷದ ಸಾದಾ ಶಿಕ್ಷೆಯು ಮತ್ತು ಅವರ ಸಹಕಾರಿಗಳಾದ ದೇ। ಭ, ಬ್ಯಾಂಕರರವರಿಗೆ ೧ ವರ್ಷದ ಸಾದಾ ಶಿಕ್ಷೆಯಾಯಿತು. ಹಿಂದುಸ್ಥಾನದ ರಾಜಕೀಯ ಚಳವಳಿಯ ಇತಿಹಾಸದೊಳಗೆ ಅಜರಾಮರನಾಗಿ ಬಾಳುವ ಅಧ್ಯಾಯವು ಅಹಮದಾಬಾದ ಸೆಶನ್ಸ ಜಡ್ಜರಿಂದ ಬರೆಯಲ್ಪಟ್ಟಿತು, ಮತ್ತು ಇಡೀ ಜಗತ್ತಿನೊಳಗೆ ಮೊದಲನೇ ಪದವಿಯ ಪುರುಷರೆಂದು ಸತ್ಯಾನ್ವೇಷಿಗುಣಗ್ರಾಹಕರಿಂದ ಹೊಗಳಲ್ಪಡುವ ಅದ್ವಿತೀಯರಾದ, ಅತಿ ವಂದ್ಯರಾದ, ಮಹಾ ಯೋಗಿಗಳಾದ ಮಹಾತ್ಮಾ ಗಾಂಧಿಗಳ ಭೌತಿಕ ಶರೀರಕ್ಕೆ ಆರು ವರ್ಷದ ಬಂಧನವಾಯಿತು. ಈ ಪ್ರಸಂಗದೊಳಗೆ ಹಿಂದುಸ್ಥಾನದೊಳಗಿನ ಮತ್ತು ಹಿಂದುಸ್ಥಾನದ ಹೊರಗಿನ ಮಹಾತ್ಮರ ಅಸಂಖ್ಯ ಅನುಯಾಯಿಗಳ ಅವರ ಮನಸ್ಸಿನ ದುರ್ಬಲತೆಯಿಂದ ಸಾಧಾರಣ ಮನುಷ್ಯ ಸ್ವಭಾವದಿಂದ ಅತ ವಿಷಾದವಾಗುವದು ತಮಗೊಂದು ಡ್ಡ ಆಪತ್ತಿಯು ಸಂಭವಿಸಿದೆ, ಆಕಾಶದ ಬ್ಲಿಯು ನಮ್ಮ ಮೇಲೆ ಹರಿದು ಬಿದ್ದದೆ ನು ಅತಿ ದುರ್ಬಲರು ಹಳಹಳಿಸುತ್ತಿರೆ ಕ್ಕ ಸಾಕು. ಆದರೆ ಇದೆಲ್ಲ ನಮ್ಮ ಮನ ದುರ್ಬಲತೆಯಲ್ಲದೆ ಮತ್ತೇನಲ್ಲ. ನಿರ್ಮಲ ದೃಷ್ಟಿಯಿಂದ, ಸಾತ್ವಿಕ ಬುದ್ಧಿಯಿಂದ, ತೆಯಿಂದ, ಅತಿ ಶುದ್ಧ ಅಂತಃಕರಣದಿಂದ ವಿಚಾರ ಮಾಡಿದರೆ ಇದೇನೂ ಅನರ್ಥ ಇದು ಆಪತ್ತಿಯೂ ಅಲ್ಲ. ಇದೊಂದು ತ್ಮರ ಧರ್ಮದ ವಿಜಯವು. ಅವರ ಅಂತಃಕರಣಕ್ಕೆ ಅತ್ಯಂತ ಆನಂದವನ್ನು ಮಾಡುವ ಲೌಕಿಕ ಲಾಭವು ಎಂದು ಎಣಿಸಬೇಕು? ಅಸಹಯೋಗದ ರಾಷ್ಟ್ರಕ್ಕೆ ತೀರ ಸುಖವಾಗುವಂಥ ಪರಿಣಾಮವೇ ಮಹಾತ್ಮರ ಳ ದಂಡನೆಯು. ಆತ್ಮಸಂತೋಷದಿಂದ ಯುದ್ಧದಕ್ಕಾಗಿ ತುರಂಗದ ಹೆರಗಿದ್ದ ನ್ನು ಹಟಯೋಗದೊಳಗೆ ಹುಗಲಿರುವ ಶಾರೀರಿಕ ಕಷ್ಟಗಳನ್ನು, ವಿಧವಿಧದ ದಂಡನೆಯನ್ನು ಅವರು ಸಹಿಸುತ್ತಿದ್ದಿಲ್ಲವೇ? ಅದರ ಮುಂದೆ ಈಗಿನ ಸೆರೆಮನೆಯ ದಂಡನೆಯು ಅವರ ಪುಣ್ಯವಂತ ಶರೀರಕ್ಕೆ ಬಹಳೇ ಕಡಿಮೆ ತೋರುವದೆಂದು ಹೇಳಿದರ ಅತಿಶಯೋಕ್ತಿಯಾಗದು.

ನಮ್ಮಲ್ಲಿ ರಾಜಕೀಯ ಚಳವಳಿಯು ಶುರುವಾದಂದಿನ ಇತಿಹಾಸದೊಳಗ ರಾಷ್ಟ್ರವೀರರಿಗೆ ತುರಂಗದ ಶಿಕ್ಷೆಯು ಹತ್ತಿಪ್ಪತ್ತು ವರ್ಷಗಳ ಹಿಂದೆ ಹೆಚ್ಚು ಹೊಂದಿಗಾಗಿದ್ದಿಲ್ಲ? ೧೮೯೭ ನೇ ಇಸ್ವಿಯಲ್ಲ ಮತ್ತು ೧೯೦೮ ನೇ ಇಸ್ವಿಯಲ್ಲಿ ಲೋಕಮಾನ್ಯ ಟಿಳಕರಿಗೆ ರಾಜದ್ರೋಹ ಮಾಡಿದರೆಂದು ಆರೋಪವನ್ನು ಹೊರಿಸಿ ಅವರು ಮಾಡುತ್ತಿದ್ದ ಅತಿ ನಿಸ್ಸೀಮ ದೇಶಭಕ್ತಿಗಾಗಿ ಲೋಕಮಾನ್ಯರಿಗೆ ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿತ್ತು. ಆಗಿನ ಕಾಲಮಾನದ ಸ್ಥಿತಿಯೊ[illegible], ಈಗಿನ ಅಸಹಕಾರಿತೆಯ ವಾತಾವರಣದ ಈಗಿನ ಸ್ಥಿತಿಯೊಳಗೆ ಆ ಕಾಲ ಸಂಯಮನದ ದೃಷ್ಟಿಯಿಂದ ಲೋಕಮಾನ್ಯರಿಗ ಎಷ್ಟು ಅಸಹ [illegible] ಎಲ್ಲ ಕಡೆಯಲ್ಲಿ ಬಹಳೇ [illegible] ಕೀಯ ಜಾಗೃತಿಯು [illegible] ಈಗಿನ ದಿನಗಳಲ್ಲಿ ಮಹಾತ್ಮರ [illegible] ಖಂಡರಿಗೆ ಶಿಕ್ಷೆ ವಿಧಿಸಲ್ಪಟ್ಟು ಸರ್ವತ್ರ ಅತಿ ಶಾಂತವಾದ ವಾತಾವರಣವು ಹುಟ್ಟಿರುವದು ಮಹಾತ್ಮರ ಧರ್ಮದ ನಿಷ್ಕಲಂಕ ವಿಜಯವಲ್ಲದೆ ಮತ್ತೇನು? ಇಡೀ ರಾಷ್ಟ್ರದ ಇಂಥ ಅತ್ಯವಶತೆಯ ನಿರ್ಧಾರವು ಒಂದು [illegible]ತಿಯನ್ನು ಜಗತ್ತಿಗೆಲ್ಲ ಕೂಗಿ ಹೇಳುವದೇನೆಂದರೆ ಹಿಂದೀ ರಾಷ್ಟ್ರವು ಪೂರ್ಣವಾಗಿ ಆತ್ಮ[illegible]ನಾಗಿದೆ “ಸರ್ವ[illegible]ತ್ಮವಶಂ ಸುಖಂ” ಎಂಬ ಮುನಿವಚನದಲ್ಲಿ ಸತ್ಯಾಂಶವಿದ್ದರೆ ನಮ್ಮ ಸುಖವಾಗಲೇಬೇಕು ನಮ್ಮ ಆತ್ಮೋದ್ಧಾರವು ಅಲ್ಪ ಕಾಲದಲ್ಲಿ ಸಾಧಿಸಲೇ ಬೇಕು [illegible] ಇಂದ ನಿರ್ಧಾರ ಬುದ್ಧಿಯು ಸ್ವವಶ [illegible]ದ ಸ್ವರಾಜ್ಯವು ನಿನೂ ದೂರವಿಲ್ಲ ಮ[illegible] ಶಿಕ್ಷೆಯಿಂದಾದ ಧರ್ಮವಿಜಯದ ಸಂದೇಶವಿಷ್ಟೇ.

ಇನ್ನು ನಮ್ಮ ಸಮೀಪಿಸಿದ ಸ್ವರಾಜ್ಯವನ್ನು ಕೈಗೂಡಿಸಲಿಕ್ಕೆ ಮಹಾತ್ಮರ ಸತ್ಯಧರ್ಮದ ಆಕಾಂಕ್ಷೆಯನ್ನು, ಅವರ ಆಜ್ಞೆಯನ್ನು ವಿಧೇಯತನದಿಂದ ತೃಪ್ತಿಪಡಿಸಿದರೆ ಮಾತ್ರ, ನಾವು ಮಹಾತ್ಮರಿಗೆ ಸೆರೆಬೇಕಾದ [illegible]ತೆಯು ಸಾಲವಿಂದ ಮುಕ್ತರಾಗುವೆವು; ಇಲ್ಲದಿದ್ದರೆ, ಶರ್ತವ್ಯಸರಾಂಬ್ಯಾಳಿಕೆಯು ಮತ್ತು [illegible]ದ್ರೋಹದ ಭಯಂಕರ ಪಾತಕದ ನರಕವಾಸದೊಳಗೆ ಹೊರಳಾಡುತ್ತಿರಬೇಕಾಗುವದು. ಅಹಿಂಸಾ ಧರ್ಮವನ್ನು ಪೂರ್ಣವಾಗಿ ಅಂಗೀಕರಿಸಿ ಸಾಮಾಜಿಕ ವಿಷಮತೆಯ ಪಾಪವನ್ನು ಮಾಡಿಸಿದ ಮಾಡಿಸುತ್ತಿರುವ ಅಸ್ಪೃಶ್ಯತೆಯನ್ನು ದೃಢನಿಶ್ಚಯದಿಂದ ದೂರಪಡಿಸಿ ರಾಷ್ಟ್ರದ ಒಂದೇ ಒಂದು ತರಣೋಪಾಯವಾದ ಸ್ವದೇಶಿಯನ್ನು ನಿಶ್ಚಲ ಭಕ್ತಿಯಿಂದ ಅಂಗೀಕರಿಸಿ ಸರ್ವತ್ರ ಖಾದಿ ಪ್ರಸಾರವನ್ನು ಮಾಡಿಸಿ, ಕೊಂಗ್ರೆಸಿನ ವಿಧಾಯಕ ಕಾರ್ಯವನ್ನು ಶಾಂತತೆಯಿಂದ ಮುಂದರಿಸುತ್ತಿರುವದು ಮಾತ್ರ. ಅದನ್ನು ಮುಂದರಿಸುವಾಗ ನಮ್ಮ ಪ್ರತಿಪಕ್ಷಿಗಳಿಗೆ ಅವರ ಕಾಯ-ವಾಚ-ಮನಸ್ಸಿಗೆ ನಮ್ಮ ಕಾಯ-ವಾಚ-ಮನಸ್ಸಿನಿಂದ ಎಳ್ಳಷ್ಟು ಸಹ ನೋಯಿಸದೆ, ಅವರಿಂದ, ನಮ್ಮ ಇಂಗ್ರಜೀ ಬಾಂಧವರಿಂದ ಸಹ ನಮ್ಮ ಸದ್ವರ್ತನದ, ಸುಶೀಲತೆಯ, ಸೌಜನ್ಯದ ಪಿಪಾರಸನ್ನು ಪಡೆಯುವದು ಮಹಾತ್ಮರ ಕೊನೆಯ ಇಚ್ಛೆಯೂ, ಆಜ್ಞೆಯೂ ಆಗಿರುವದು ಅದನ್ನು ಪಾಲಿಸುವದು, ಸಿದ್ಧಿಗೊಯ್ಯುವದು ಮತ್ತು ಸ್ವಹಿತ ಪರಹಿತವನ್ನು ಸಾಧಿಸುವದು. ಸೆರೆಮನೆಯ ಹೊರಗಿದ್ದ ನಮ್ಮೆಲ್ಲರ ಕರ್ತವ್ಯವು [illegible]ರ್ಮವು “ಯತೋ ಧರ್ಮಸ್ತತೋ ಜಯಃ.”

ಶಾಂತತೆಯ ವಿಜಯ

([illegible] ಪತ್ರಿಕೆಯಿಂದ.)

